ಭಾನುವಾರ, ಜನವರಿ 18, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹದ್ದು ಹಿಡಿದು ಕವಾಯತು

ಗಣರಾಜ್ಯೋತ್ಸವಕ್ಕೆ ಪೂರ್ವಭಾವಿಯಾಗಿ ದೆಹಲಿಯಲ್ಲಿ ನಡೆದ ಮೆರವಣಿಗೆಯಲ್ಲಿ ಯೋಧರೊಬ್ಬರು ಕಪ್ಪುಹದ್ದನ್ನು ಹಿಡಿದು ಕವಾಯತು ಮಾಡಿದರು

ಸೂರ್ಯವಂಶಿ ಅರ್ಧಶತಕ

ಭಾರತದ ವೈಭವ್ ಸೂರ್ಯವಂಶಿ (72;67ಎ) ಅವರು ಯುವ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಅರ್ಧಶತಕ ದಾಖಲಿಸಿದರು. ಭಾರತ ಡಿಎಲ್‌ಎಸ್ ಆಧಾರದಲ್ಲಿ 18 ರನ್‌ಗಳಿಂದ ಗೆದ್ದಿತು

MEET OUR PW SUPERSTARS

AIR 12
MOHIT PRAVIN AGRAWAL
IIT BOMBAY
JEE ADVANCED 2025

AIR 3
MAJID MUJAHID HUSAIN
IIT BOMBAY
JEE ADVANCED 2025

AIR 48
RISHABH VIVEK IYER
IIT BOMBAY
JEE ADVANCED 2025

AIR 9
SHIVEN VIKAS TOSHNIWAL
IIT BOMBAY
MARKS IMPROVEMENT PROGRAM
JEE MAIN 2025

AIR 87
RAGHAV GOYAL
AIIMS JODHPUR
NEET (UG) 2025

AIR 100
MUSKAN
MAMC
MARKS IMPROVEMENT PROGRAM
NEET (UG) 2025

AIR 12
SAURAV
IIT KHARAGPUR
JEE MAIN 2025

PW ವಿದ್ಯಾಪೀಠ
IIT-JEE | NEET | FOUNDATION

ನಿಮ್ಮ ಸಿದ್ಧತೆಯ ವಿಶ್ವಾಸ

ADMISSIONS OPEN
2026-27
JEE | KCET | NEET | FOUNDATION

Appear for
PW SAT
PHYSICS WALLAH SCHOLARSHIP CUM ADMISSION TEST
Exam Dates: 5th to 20th January

GET UP TO 90%* SCHOLARSHIP
*T & C Apply.

For Classes 7th to 12th & Droppers

Expert Faculties
Classroom Learning
All India Test Series

BENGALURU VIDYAPEETH

VIDYAPEETH (OFFLINE CENTRES)
JP Nagar | Whitefield | Banaswadi | HSR-Haralur Road | Rajaji Nagar
Rajarajeshwari Nagar | Yelahanka
Mysore: 1st & 2nd Floor, Above Puma Showroom, Opp KFC, Udayaravi Road, Kuvempunagar

ENROLL NOW
For Classes 8th - 12th & Dropper

PATHSHALA (CENTRES)
Belagavi | Bidar | Dharwad | Hubli | Kalaburagi | Vijayapura

VP Residential Program: Bengaluru - JP Nagar

9513369983

Visit: www.pw.live
Scan the QR Code to Download PW App
App Store | Google Play
*T&C APPLY

ಡ್ರಗ್ಸ್ ಪತ್ತೆ: 'ಮಹಾ' ಪೊಲೀಸರು ಬರಬೇಕಾ?

ರಾಜ್ಯ ಪೊಲೀಸರ ಕಾರ್ಯವೈಖರಿ: ಅಸಮಾಧಾನ ಹೊರಹಾಕಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಷ್ಟ್ರದ ಪೊಲೀಸರು ಬೆಂಗಳೂರು ಹಾಗೂ ಮೈಸೂರು ನಗರಕ್ಕೆ ಬಂದು ಡ್ರಗ್ಸ್ ಕಾರ್ಖಾನೆಗಳನ್ನು ಪತ್ತೆ ಹಚ್ಚಲು ಸಾಧ್ಯ ಆಗಿದ್ದರೆ, ರಾಜ್ಯದ ಪೊಲೀಸರಿಗೇಕೆ ಆ ರೀತಿಯ ಕಾರ್ಯಾಚರಣೆ ಸಾಧ್ಯವಾಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಶನಿವಾರದಿಂದ ಆರಂಭವಾದ ಎರಡು ದಿನಗಳ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಪೊಲೀಸ್ ಅಧಿಕಾರಿಗಳನ್ನು ಮುಖ್ಯಮಂತ್ರಿ ಅವರು ಈ ರೀತಿ ತರಾಟೆಗೆ ತೆಗೆದುಕೊಂಡರು.

'ರಾಜ್ಯದ ಪೊಲೀಸರು ಡ್ರಗ್ಸ್ ಪತ್ತೆ ಹಚ್ಚುವಲ್ಲಿ ವಿಫಲರಾಗಿದ್ದಾರೆ. ಸಂಬಂಧಪಟ್ಟ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ತಹಶೀಲ್ದಾರ್ ಹಾಗೂ ಪೊಲೀಸ್ ಇನ್‌ಸ್ಪೆಕ್ಟರ್ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ, ಆ ತಾಲ್ಲೂಕಿನಲ್ಲಿ ಜನರು ನೆಮ್ಮದಿಯಿಂದ ಇರಲು ಸಾಧ್ಯವಿದೆ. ಜಿಲ್ಲಾಧಿಕಾರಿ, ಎಸ್‌ಪಿ ಮತ್ತು ಸಿಇಒ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಆ ಜಿಲ್ಲೆಯ ಜನರು ನೆಮ್ಮದಿಯಿಂದ ಇರುತ್ತಾರೆ. ಆದರೆ, ಕೆಲವು ಪೊಲೀಸ್ ಠಾಣೆಗಳಲ್ಲಿ ಕೆಲವು ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣಕ್ಕೆ ಜನರು ತೊಂದರೆ ಅನುಭವಿಸಬೇಕಾಗುತ್ತದೆ' ಎಂದು ಬೇಸರ ಹೊರಹಾಕಿದರು.

'ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರಿಗೆ ಶಿಕ್ಷೆಯನ್ನು ಖಾತ್ರಿಪಡಿಸುವಲ್ಲಿ ಪೊಲೀಸರ ಪಾತ್ರ ಮುಖ್ಯವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಯ ಪ್ರಮಾಣ ಕಳೆದ ವರ್ಷ ಶೇ 3ರಷ್ಟಿತ್ತು. ಈಗ ಶೇ 12ಕ್ಕೆ ಸುಧಾರಿಸಿದೆ. ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಇನ್ನಷ್ಟು ಕಾಳಜಿಯಿಂದ ಕೆಲಸ ಮಾಡಬೇಕು' ಎಂದು ಸೂಚನೆ ನೀಡಿದರು.

'ಕಾನೂನು ಸುವ್ಯವಸ್ಥೆ ಮತ್ತು ರಾಜ್ಯದ ಅಭಿವೃದ್ಧಿ ಪರಸ್ಪರ ಪೂರಕವಾಗಿವೆ. ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದರೆ ಮಾತ್ರ ಹೂಡಿಕೆ ಹೆಚ್ಚಾಗಿ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ' ಎಂದು ಹೇಳಿದರು.

ರಾಜೀವ್ ಗೌಡ ಬಂಧನಕ್ಕೆ ಸೂಚನೆ: ಶಿಡ್ಲಘಟ್ಟದ ಪೌರಾಯುಕ್ತರಿಗೆ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜೀವ್ ಗೌಡ ಅವರನ್ನು ಬಂಧನಕ್ಕೆ ಸೂಚಿಸಲಾಗಿದೆ. ಅವರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ತಂಡ ರಚಿಸಲಾಗಿದೆ. ಯಾವುದೇ ಪಕ್ಷದವರಾಗಲಿ, ಕಾನೂನಿಗಿಂತ ಯಾರೂ ಮೇಲಲ್ಲ ಎಂದು ಹೇಳಿದರು.

ಗೃಹ ಸಚಿವ ಜಿ.ಪರಮೇಶ್ವರ ಮಾತನಾಡಿ, ಅಪರಾಧ ಪ್ರಕರಣಗಳ ತನಿಖೆಯಲ್ಲಿ ಪ್ರಗತಿ ಸಾಧಿಸಲು ಸಮಾವೇಶದಲ್ಲಿ ಇದೇ ಮೊದಲ ಬಾರಿಗೆ ತಜ್ಞರಿಂದ ವಿಷಯ ಮಂಡನೆ ಆಯೋಜಿಸಲಾಗಿದೆ. ಸಿಬಿಐನ ಸಹಾಯಕ ನಿರ್ದೇಶಕ ಕೃಷ್ಣ ಅವರು ರಾಜ್ಯದ ಪೊಲೀಸ್ ಅಧಿಕಾರಿಗಳ ಜತೆಗೆ ಕೆಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ ಎಂದು ಹೇಳಿದರು.

'ಸೈಬರ್ ಕ್ರೈಂ ಹಾವಳಿ ಮತ್ತು ಡ್ರಗ್ಸ್ ದಂಧೆಯನ್ನು ಸಂಪೂರ್ಣವಾಗಿ ಮಟ್ಟ ಹಾಕುವ ಉದ್ದೇಶದಿಂದ ದೇಶದಲ್ಲಿಯೇ ಮೊದಲ ಬಾರಿಗೆ ಪ್ರತ್ಯೇಕ ವಿಭಾಗ ಸ್ಥಾಪಿಸಲಾಗಿದೆ. ಈ ವಿಭಾಗಗಳು ಸರ್ಕಾರದ ನಿರೀಕ್ಷೆಯ ಮಟ್ಟಕ್ಕೆ ಕೆಲಸ ಮಾಡುತ್ತಿಲ್ಲ. ಇದನ್ನು ನಿರ್ಲಕ್ಷಿಸದೇ ಪರಿಣಾಮಕಾರಿ ಆಗಿ ಕೆಲಸ ಮಾಡಬೇಕು' ಎಂದು ಸೂಚಿಸಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಉಪಸ್ಥಿತರಿದ್ದರು.

ರಾಯಚೂರಿನ ಕವಿತಾಳ ಪೊಲೀಸ್ ಠಾಣೆಯು ದೇಶದಲ್ಲಿಯೇ ಉತ್ತಮ ಪೊಲೀಸ್ ಠಾಣೆಗಳ ಸಾಲಿನಲ್ಲಿ ಮೂರನೇ ಸ್ಥಾನ ಪಡೆದಿದ್ದು, ಠಾಣೆಯ ಇನ್‌ಸ್ಪೆಕ್ಟರ್‌ಗೆ ಪ್ರಶಂಸನಾ ಪತ್ರ ವಿತರಣೆ ಮಾಡಲಾಯಿತು.

ಮುಖ್ಯಾಂಶಗಳು

- ರಾಜ್ಯದ ಪೊಲೀಸರು ಡ್ರಗ್ಸ್ ಪತ್ತೆ ಹಚ್ಚುವಲ್ಲಿ ವಿಫಲ
- ಸಂಬಂಧಪಟ್ಟ ಪೊಲೀಸರ ಮೇಲೆ ಕ್ರಮ
- ಮುಖ್ಯಮಂತ್ರಿ ಅಸಮಾಧಾನ

ಬೆಂಗಳೂರು ಸೈಬರ್ ಕ್ರೈಂ ಅಡ್ಡೆ ಯಾಗುವುದಕ್ಕೆ ಆಸ್ಪದ ನೀಡಬಾರದು. ಪೊಲೀಸ್ ಇಲಾಖೆಯು ತಾಂತ್ರಿಕವಾಗಿ ಮತ್ತಷ್ಟು ಬಲಪಡಿಸಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರವು ಎಲ್ಲ ರೀತಿಯ ಸಹಕಾರ ನೀಡಲಿದೆ

ಜಿ. ಪರಮೇಶ್ವರ, ಗೃಹ ಸಚಿವ

ಬೆಂಗಳೂರಿನಲ್ಲಿ ಇರುವ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಶನಿವಾರ ನಡೆದ ವಾರ್ಷಿಕ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು

ಮುಖ್ಯಮಂತ್ರಿ ಸೂಚನೆಗಳು...

- ದಕ್ಷತೆ ಹಾಗೂ ಎಚ್ಚರಿಕೆಯಿಂದ ಪೊಲೀಸರು ಕೆಲಸ ಮಾಡಿದರೆ ಮಾದಕ ವಸ್ತು ಮುಕ್ತ ರಾಜ್ಯವಾಗಿಸಲು ಸಾಧ್ಯವಿದೆ
- ಸೈಬರ್ ವಂಚಕರ ಪತ್ತೆಗೆ ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕು
- ಅಪರಾಧ ಪ್ರಕರಣಗಳನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಿಲ್ಲದಿದ್ದರೂ, ಉತ್ತಮವಾಗಿ ಕೆಲಸ ಮಾಡಿದರೆ ಅಪರಾಧ ಪ್ರಕರಣಗಳ ಪ್ರಮಾಣ ಕಡಿಮೆ ಮಾಡಲು ಸಾಧ್ಯವಿದೆ
- ಪಿಎಸ್‌ಐ, ಇನ್‌ಸ್ಪೆಕ್ಟರ್, ಡಿವೈಎಸ್‌ಪಿಗಳ ಮೇಲೆ ಹಿರಿಯ ಅಧಿಕಾರಿಗಳು ನಿಗಾ ಇಡಬೇಕು
- ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾನ್ ಮೈಕೆಲ್ ಕುನ್ಹ ಸಮಿತಿ ಶಿಫಾರಸು ಪಾಲಿಸಲು ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಉಪ ಸಮಿತಿ ರಚಿಸಲಾಗಿದೆ. ಅಲ್ಪಾವಧಿ ಶಿಫಾರಸುಗಳನ್ನು ತಕ್ಷಣವೇ ಜಾರಿಗೆ ತರಬೇಕು. ದೀರ್ಘಾವಧಿಯಲ್ಲಿ ಉಳಿದ ಶಿಫಾರಸು ಪಾಲಿಸಬೇಕು

'88 ಕೃತ್ಯಗಳಲ್ಲಿ ಪೊಲೀಸರೇ ಶಾಮೀಲು'

'88 ಪ್ರಕರಣಗಳಲ್ಲಿ ಪೊಲೀಸರೇ ಶಾಮೀಲಾಗಿರುವುದು ಪತ್ತೆಯಾಗಿದೆ. ಪೊಲೀಸರು ಇರುವುದು ಜನರ ರಕ್ಷಣೆಗಾಗಿ. ಬೇಲಿಯೇ ಎದ್ದು ಹೊಲ ಮೇಯುವುದು ಅಕ್ಷಮ್ಯ ಅಪರಾಧ. ಮುಂದೆ ಅಪರಾಧ ಪ್ರಕರಣದಲ್ಲಿ ಸಿಲುಕಿಕೊಳ್ಳುವ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳಿಗೆ ಕಠಿಣ ಶಿಕ್ಷೆ ಕಾದಿದೆ' ಎಂದು ಸಿದ್ದರಾಮಯ್ಯ ಎಚ್ಚರಿಸಿದರು.

'ಪೊಲೀಸ್ ಇಲಾಖೆ ಕೆಲವು ಠಾಣೆಗಳಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದೆ. ಪೊಲೀಸರು ಅಪರಾಧ ಕೃತ್ಯಗಳಲ್ಲಿ ಭಾಗಿ ಆಗುತ್ತಿರುವುದರಿಂದ ಸರ್ಕಾರ ಹಾಗೂ ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ' ಎಂದು ಹೇಳಿದರು.

ಶೀರೂರು ಶ್ರೀಗಳ ಪರ್ಯಾಯದ ಅಂಗವಾಗಿ ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಶನಿವಾರ ರಾತ್ರಿ ಅಪಾರ ಭಕ್ತರು ಸೇರಿದ್ದರು

ಶೀರೂರು ಪರ್ಯಾಯಕ್ಕೆ ಜನಸಾಗರ

ಉಡುಪಿ: ಶ್ರೀ ವಾಮನತೀರ್ಥ ಪರಂಪರೆಯ ಶೀರೂರು ಮಠಾಧೀಶ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯದ ಪ್ರಯುಕ್ತ ಉಡುಪಿಯ ಶ್ರೀಕೃಷ್ಣ ಮಠಕ್ಕೆ ಶನಿವಾರ ವಿವಿಧೆಡೆಯಿಂದ ಜನಸಾಗರ ಹರಿದುಬಂದಿದೆ.

ಬೆಳಿಗ್ಗೆಯಿಂದಲೇ ಭಾರಿ ಸಂಖ್ಯೆಯಲ್ಲಿ ಭಕ್ತರು ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದರು. ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಪಾದರ ಪರ್ಯಾಯದ ಕೊನೆಯ ದಿನವಾದ ಶನಿವಾರ ಭಕ್ತರಿಗೆ ವಿಶೇಷ ಭೋಜನ ಪ್ರಸಾದ ಏರ್ಪಡಿಸಲಾಗಿತ್ತು.

ಶ್ರೀಕೃಷ್ಣ ಮಠದ ರಾಜಾಂಗಣ, ರಥಬೀದಿಯಲ್ಲೂ ಜನ ಜಂಗುಳಿ ಇತ್ತು. ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಯಕ್ಷಗಾನ, ರಸಮಂಜರಿ ಕಾರ್ಯಕ್ರಮ, ನೃತ್ಯ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಇವುಗಳು ಪರ್ಯಾಯಕ್ಕೆ ಮೆರುಗು ನೀಡಿದವು.

ರಥಬೀದಿಯಲ್ಲಿ ಸಂಜೆ ಶೀರೂರು ಪರ್ಯಾಯ ಸ್ವಾಗತ ಸಮಿತಿ ವತಿಯಿಂದ, ಪರ್ಯಾಯ ಪೂರ್ಣಗೊಳಿಸಿದ ಪುತ್ತಿಗೆ ಮಠಾಧೀಶ ಸುಗುಣೇಂದ್ರ ಶ್ರೀಪಾದರಿಗೆ ಮತ್ತು ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರಿಗೆ ಪೌರ ಸನ್ಮಾನ ನಡೆಯಿತು.

64 ವರ್ಷದ ಸುಗುಣೇಂದ್ರ ತೀರ್ಥರು ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರೊಂದಿಗೆ ಚತುರ್ಥ ಪರ್ಯಾಯ ಪೂರೈಸಿದ್ದು, ಇದೇ 18 ರಿಂದ 20 ವರ್ಷದ ಶೀರೂರು ಮಠಾಧೀಶ ವೇದವರ್ಧನತೀರ್ಥ ಶ್ರೀಪಾದರು ಕೃಷ್ಣ ಪೂಜಾಧಿಕಾರ ಪಡೆದುಕೊಳ್ಳಲಿದ್ದಾರೆ.

ಕಾಂಗ್ರೆಸ್ ಭವನಕ್ಕೆ ಶೀರೂರು ಶ್ರೀ ಭೇಟಿ

ಉಡುಪಿ: ಪರ್ಯಾಯದ ಅಂಗವಾಗಿ ಬ್ರಹ್ಮಗಿರಿಯ ಕಾಂಗ್ರೆಸ್ ಭವನದಲ್ಲಿ ಶನಿವಾರ ದಿನವಿಡೀ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು, ಅಲ್ಲಿಗೆ ಶೀರೂರು ಮಠಾಧೀಶ ವೇದವರ್ಧನ ತೀರ್ಥ ಸ್ವಾಮೀಜಿ ಭೇಟಿ ನೀಡಿದರು.

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್, ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ಪ್ರಮುಖರಾದ ಯತೀಶ್ ಕರ್ಕೇರ, ಪ್ರಖ್ಯಾತ್ ಶೆಟ್ಟಿ ಮತ್ತಿತರರು ಶ್ರೀಗಳನ್ನು ಬರಮಾಡಿಕೊಂಡರು.

ಆಸ್ಕರ್ ಫರ್ನಾಂಡಿಸ್ ಅಭಿಮಾನಿ ಬಳಗದ ವತಿಯಿಂದ ಕುಣಿತ ಭಜನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಿ.ಎಂ ತವರು ಕ್ಷೇತ್ರದಲ್ಲಿ ಅಧಿಕಾರಿಗಳಿಗೆ ಜೀವ ಬೆದರಿಕೆ

'ಮೊದ್ಲು ನಿಮ್ಮ ಹೆಣ ಬೀಳುತ್ತೆ...'

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರದ, ವರುಣ ಹೋಬಳಿಯ ಗುಡಮಾದನಹಳ್ಳಿ ಗ್ರಾಮದಲ್ಲಿ ಜಮೀನು ಪರಿಶೀಲನೆಗೆ ತೆರಳಿದ್ದ ಗ್ರಾಮ ಆಡಳಿತಾಧಿಕಾರಿ ಹಾಗೂ ಗ್ರಾಮ ಸಹಾಯಕನಿಗೆ ವ್ಯಕ್ತಿಯೊಬ್ಬ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ.

ಡಿ.31ರಂದು ನಡೆದಿರುವ ಈ ಪ್ರಕರಣದ ವಿಡಿಯೊ ಶನಿವಾರ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ.

ವರುಣ ಹೋಬಳಿಯ ಗುಡಮಾದನಹಳ್ಳಿಯಲ್ಲಿ 'ನಿಮ್ಹಾನ್ಸ್ ಆಸ್ಪತ್ರೆ' ನಿರ್ಮಿಸಲು ಸರ್ವೆ ನಂ.8ರಲ್ಲಿ 5 ಎಕರೆ 5 ಗುಂಟೆ ಹಾಗೂ ಸರ್ವೆ ನಂ. 60ರಲ್ಲಿ 6 ಎಕರೆ 10 ಗುಂಟೆ, ಸರ್ವೆ ನಂ. 68ರಲ್ಲಿ 8 ಎಕರೆ 25 ಗುಂಟೆ ಸೇರಿ ಒಟ್ಟು 20 ಎಕರೆ ಜಾಗ ಮೀಸಲಿಡಲಾಗಿದೆ. ಈ ಜಮೀನು ಪರಿಶೀಲನೆಗೆಂದು 2025ರ ಡಿ.31ರಂದು ಬಂಡೀಪಾಳ್ಯ ವೃತ್ತದ ಗ್ರಾಮ ಆಡಳಿತಾಧಿಕಾರಿ ಜಿ.ಭವ್ಯಾ ಹಾಗೂ ಗ್ರಾಮ ಸಹಾಯಕ ನವೀನ್‌ಕುಮಾರ್ ತೆರಳಿದ್ದರು.

ಆಗ ಜಮೀನಿನಲ್ಲಿ ಅಡಿಕೆ ತೋಟ ಮಾಡಿಕೊಂಡಿರುವ ಪುಟ್ಟಸ್ವಾಮಿ, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವಾಚ್ಯವಾಗಿ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ. 'ಮೊದಲು ನಿಮ್ಮ ಹೆಣ ಬೀಳುತ್ತೆ' ಎಂದು ಜೀವ ಬೆದರಿಕೆ ಒಡ್ಡಿದ್ದಾರೆ. ಮೊಬೈಲ್ ಫೋನ್‌ನಲ್ಲಿ ವಿಡಿಯೊ ಮಾಡುತ್ತಿದ್ದ ನವೀನ್‌ಕುಮಾರ್ ಅವರಿಗೆ ಬೆದರಿಕೆ ಹಾಕಿ ಮೊಬೈಲ್ ಕಿತ್ತುಕೊಂಡಿದ್ದರು ಎಂದು ಆರೋಪಿಸಲಾಗಿದೆ. ಭವ್ಯಾ ಅವರು ನೀಡಿದ ದೂರು ಆಧರಿಸಿ ದಕ್ಷಿಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುಟ್ಟಸ್ವಾಮಿ ಅವರನ್ನು ವಶಕ್ಕೆ ಪಡೆದಿರುವ ಪೊಲೀಸರು, ನೋಟಿಸ್ ಜಾರಿಗೊಳಿಸಿದ್ದರು. ಬಳಿಕ ಅವರನ್ನು 'ಠಾಣಾ ಜಾಮೀನಿನ' ಮೇಲೆ ಬಿಡುಗಡೆ ಮಾಡಲಾಗಿದೆ. ಶುಕ್ರವಾರ ಪೊಲೀಸ್ ಬಂದೋಬಸ್ತ್‌ನಲ್ಲಿ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಪುಟ್ಟಸ್ವಾಮಿ ಅವರು ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಜೊತೆಗಿರುವ ಫೋಟೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ.

ಸಿ.ಎಂ ಕ್ಷೇತ್ರದಲ್ಲೇ ರಕ್ಷಣೆ ಇಲ್ಲ: ಕಿಡಿ

ಈ ಘಟನೆಯ ವಿಡಿಯೊ ಬಿಜೆಪಿ ರಾಜ್ಯ ಘಟಕದಿಂದ ಫೇಸ್‌ಬುಕ್ ಮೊದಲಾದ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡು, ಸರ್ಕಾರ ಹಾಗೂ ಮುಖ್ಯಮಂತ್ರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಗಿದೆ. 'ಸಿ.ಎಂ ತವರು ಕ್ಷೇತ್ರದಲ್ಲೂ ಸರ್ಕಾರಿ ಅಧಿಕಾರಿಗೆ ರಕ್ಷಣೆ ಇಲ್ಲ!' ಎಂದು ಟೀಕಿಸಲಾಗಿದೆ.

'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದ ನಂತರ ಅಧಿಕಾರಿಗಳ ಮೇಲೆ ಹಲ್ಲೆ, ಕೊಲೆ ಬೆದರಿಕೆ ಸಾಮಾನ್ಯ ಎಂಬಂತಾಗಿದೆ. ಶಿಡ್ಲಘಟ್ಟದಲ್ಲಿ ಮಹಿಳಾ ಅಧಿಕಾರಿ ಮೇಲೆ ಕಾಂಗ್ರೆಸ್ ನಾಯಕನ ದಬ್ಬಾಳಿಕೆ ಹಿಂದೆಯೇ ಮುಖ್ಯಮಂತ್ರಿ ಪ್ರತಿನಿಧಿಸುವ ವರುಣದಲ್ಲಿ ಹಲ್ಲೆ, ಕೊಲೆ ಬೆದರಿಕೆ ನಡೆದಿದೆ' ಎಂದು ಬಿಜೆಪಿ ಆರೋಪಿಸಿದೆ.

'ಗ್ರಾಮ ಆಡಳಿತಾಧಿಕಾರಿ ಭವ್ಯಾ ಮತ್ತು ಗ್ರಾಮ ಸಹಾಯಕ ನವೀನ್ ಕುಮಾರ್ ಅವರಿಗೆ ನಿಂದಿಸಿ, ಕೊಲೆ ಬೆದರಿಕೆ ಹಾಕಲಾಗಿದೆ. ಸಿ.ಎಂ ತವರಲ್ಲೇ ಮಹಿಳಾ ಅಧಿಕಾರಿಗೆ ರಕ್ಷಣೆ ಇಲ್ಲವೆಂದರೆ, ರಾಜ್ಯದ ಉಳಿದೆಡೆ ಸಾಮಾನ್ಯ ಮಹಿಳೆಯರ ಗತಿಯೇನು? ಇದೇನಾ ನಿಮ್ಮ ಮಹಿಳಾ ರಕ್ಷಕ ಆಡಳಿತ' ಎಂದೂ ಪ್ರಶ್ನಿಸಿದೆ.

ಮುಖ್ಯಾಂಶಗಳು

- ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ವಿಡಿಯೊ
- ಡಿ.31ರಂದು ನಡೆದಿರುವ ಘಟನೆ
- ದಕ್ಷಿಣ ಗ್ರಾಮಾಂತರ ಠಾಣೆಯಲ್ಲಿ ಮೊಕದ್ದಮೆ
- ಪೊಲೀಸ್ ಬಂದೋಬಸ್ತ್‌ನಲ್ಲಿ ಜಾಗ ವಶಕ್ಕೆ

'ಅಕ್ರಮ ವಲಸಿಗರೇ ಬಂಗಾಳಕ್ಕೆ ಸವಾಲು'

ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ಮೋದಿ ಸಂವಾದ; ಹೌರಾ–ಗುವಾಹಟಿ ಮಾರ್ಗದಲ್ಲಿ ರೈಲು ಸಂಚಾರ

ಮಾಲದಾ (ಪಿಟಿಐ): 'ಅಕ್ರಮ ವಲಸಿಗರ ನುಸುಳುವಿಕೆಯಿಂದಾಗಿ ಪಶ್ಚಿಮ ಬಂಗಾಳದ ಜನಸಂಖ್ಯೆಯ ಸ್ವರೂಪವೇ ಬದಲಾಗಿದೆ. ಆಡಳಿತ ಪಕ್ಷದ 'ಪೋಷಣೆ ಮತ್ತು ಸಿಂಡಿಕೇಟ್ ರಾಜ್'ನಿಂದಾಗಿ ಅಕ್ರಮ ಚಟುವಟಿಕೆಗಳು ಹೆಚ್ಚಾಗುತ್ತಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟಿಎಂಸಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಇಲ್ಲಿ ಶನಿವಾರ ಆಯೋಜಿಸಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಪ್ರಧಾನಿ, 'ಬಂಗಾಳಕ್ಕೆ ಒಳನುಸುಳುವಿಕೆಯು ದೊಡ್ಡ ಸವಾಲಾಗಿದೆ. ಜಗತ್ತಿನಾದ್ಯಂತ ಶ್ರೀಮಂತ ರಾಷ್ಟ್ರಗಳು ಸಹ ಅಕ್ರಮ ವಲಸಿಗರನ್ನು ಪತ್ತೆ ಮಾಡಿ ಗಡೀಪಾರು ಮಾಡಲು ದೃಢ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ' ಎಂದು ಪ್ರತಿಪಾದಿಸಿದರು.

'ಅಭಿವೃದ್ಧಿ ಹೊಂದಿದ ದೇಶಗಳಿಗೆ ಹಣದ ಕೊರತೆಯಿಲ್ಲ. ಆದರೂ ಅವು ಅಕ್ರಮ ವಲಸಿಗರನ್ನು ಹೊರ ಹಾಕುತ್ತಿವೆ. ಪಶ್ಚಿಮ ಬಂಗಾಳದಿಂದಲೂ ಅಕ್ರಮ ವಲಸಿಗರನ್ನು ಹೊರ ಹಾಕುವುದು ಅವಶ್ಯವಾಗಿದೆ' ಎಂದು ಹೇಳಿದರು.

'ಮಾಲದಾ ಮತ್ತು ಮುರ್ಶಿದಾಬಾದ್ ಸೇರಿದಂತೆ ವಿವಿಧೆಡೆ ಅಕ್ರಮ ವಲಸಿಗರಿಂದಾಗಿ ಗಲಭೆಗಳು ಭುಗಿಲೆದ್ದಿವೆ. ಈ ವಲಸಿಗರು ನೆಲೆಗೊಳ್ಳುವಂತೆ ಮಾಡಲು ಟಿಎಂಸಿಯ 'ಸಿಂಡಿಕೇಟ್' ವ್ಯವಸ್ಥೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಅನೇಕ ಪ್ರದೇಶಗಳಲ್ಲಿ ಜನಸಂಖ್ಯೆಯ ಬದಲಾವಣೆಗೆ ಕಾರಣವಾಗಿದೆ' ಎಂದು ಆರೋಪಿಸಿದರು.

'ಬಾಂಗ್ಲಾದೇಶದಲ್ಲಿ ಧಾರ್ಮಿಕ ಕಿರುಕುಳ ಎದುರಿಸಿ ಭಾರತಕ್ಕೆ ವಲಸೆ ಬಂದಿರುವ ಮತುವಾ ಸಮುದಾಯದವರು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಚಿಂತಿಸಬೇಕಾಗಿಲ್ಲ. ಧಾರ್ಮಿಕವಾಗಿ ಕಿರುಕುಳಕ್ಕೆ ಒಳಗಾಗಿರುವ ಎಲ್ಲ ನಿರಾಶ್ರಿತರಿಗೂ ದೇಶದಲ್ಲಿ ಆಶ್ರಯ ನೀಡಲಾಗುವುದು' ಎಂದು ಧೈರ್ಯ ತುಂಬಿದರು.

'ಟಿಎಂಸಿ ನಡೆಸುತ್ತಿರುವ ಗೂಂಡಾಗಿರಿ ಮತ್ತು ಬೆದರಿಕೆ ರಾಜಕೀಯವು ಶೀಘ್ರದಲ್ಲೇ ಕೊನೆಗೊಳ್ಳಲಿದೆ. ಉತ್ತಮ ಆಡಳಿತವನ್ನು ಖಾತರಿಪಡಿಸಿದ ಬಿಜೆಪಿ ಆಡಳಿತದ ರಾಜ್ಯಗಳಿಂದ ಬಂಗಾಳವು ಸುತ್ತುವರಿದಿದೆ. ಈಗ ಇಲ್ಲೂ ಉತ್ತಮ ಆಡಳಿತ ದೊರೆಯುವ ಸಮಯ ಬಂದಿದೆ' ಎಂದು ಹೇಳಿದರು.

ಮಾಲದಾ ನಗರ ನಿಲ್ದಾಣದಿಂದ ಹೌರಾ ಮತ್ತು ಗುವಾಹಟಿ (ಕಾಮಾಕ್ಯ) ನಡುವಿನ ವಂದೇ ಭಾರತ್ ಸ್ಲೀಪರ್ ರೈಲಿಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು –ಪಿಟಿಐ ಚಿತ್ರ

ಗುವಾಹಟಿ: ಮೋದಿ ರೋಡ್ ಶೋ

ಗುವಾಹಟಿ (ಪಿಟಿಐ): ಅಸ್ಸಾಂ ರಾಜ್ಯದ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸಂಜೆ ಗುವಾಹಟಿಯಲ್ಲಿ ವರ್ಣರಂಜಿತ ರೋಡ್ ಶೋ ನಡೆಸಿದರು. ಲೋಕಪ್ರಿಯ ಗೋಪಿನಾಥ್ ಬೋರ್ದೋಲೋಯಿ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗಿನ ರಾಷ್ಟ್ರೀಯ ಹೆದ್ದಾರಿ–17ರ ವೃತ್ತದಿಂದ ಆರಂಭವಾದ ರೋಡ್ ಶೋ ನಾಲ್ಕು ಕಿ.ಮೀ. ದೂರವನ್ನು ಕ್ರಮಿಸಿ ಅಜಾರಾದಲ್ಲಿ ಕೊನೆಗೊಂಡಿತು. ಕಪ್ಪು ಬಣ್ಣದ ಎಸ್‌ಯುವಿಯ ಮುಂಭಾಗದಲ್ಲಿ ಕುಳಿತಿದ್ದ ಮೋದಿ ಜನರತ್ತ ಕೈ ಬೀಸಿದರು. ಸರುಸಜೈನಲ್ಲಿರುವ ಅರ್ಜುನ್ ಭೋಗೇಶ್ವರ್ ಬರುವಾ ಕ್ರೀಡಾ ಸಂಕೀರ್ಣದ ಇಂದಿರಾ ಗಾಂಧಿ ಅಥ್ಲೆಟಿಕ್ ಸ್ಟೇಡಿಯಂನಲ್ಲಿ 10 ಸಾವಿರಕ್ಕೂ ಹೆಚ್ಚು ಕಲಾವಿದರಿಂದ ನಡೆದ ಬೋಡೊ ಸಮುದಾಯದ ಸಾಂಪ್ರದಾಯಿಕ ಬಾಗುರುಂಬಾ ನೃತ್ಯವನ್ನು ವೀಕ್ಷಿಸಿದರು.

ವಂದೇ ಭಾರತ್ ಸ್ಲೀಪರ್ ರೈಲಿಗೆ ಚಾಲನೆ

ಮಾಲದಾ (ಪಿಟಿಐ): ಉತ್ತರ ಬಂಗಾಳದ ಮಾಲದಾ ನಗರ ನಿಲ್ದಾಣದಿಂದ ಹೌರಾ ಮತ್ತು ಗುವಾಹಟಿ (ಕಾಮಾಕ್ಯ) ನಡುವಿನ ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದರು.

ಅಲ್ಲದೆ, ಇಲ್ಲಿಂದಲೇ ಗುವಾಹಟಿ– ಹೌರಾ ವಂದೇ ಭಾರತ್ ಸ್ಲೀಪರ್ ರೈಲಿಗೆ ವರ್ಚುವಲ್ ಆಗಿ ಹಸಿರು ನಿಶಾನೆ ತೋರಿಸಿದರು. ನಂತರ, ರೈಲಿನಲ್ಲಿ ಮಕ್ಕಳು ಮತ್ತು ಶಾಲಾ ವಿದ್ಯಾರ್ಥಿಗಳೊಂದಿಗೆ ಮೋದಿ ಅವರು ಸಂವಾದ ನಡೆಸಿದರು.

ಈ ರೈಲು ಸಂಪೂರ್ಣ ಹವಾನಿಯಂತ್ರಿತವಾಗಿದ್ದು, ಪ್ರಯಾಣಿಕರಿಗೆ ಕಡಿಮೆ ದರದಲ್ಲಿ ವಿಮಾನಯಾನದಂತಹ ಪ್ರಯಾಣದ ಅನುಭವವನ್ನು ನೀಡುತ್ತದೆ. ದೂರದ ಪ್ರಯಾಣವನ್ನು ವೇಗವಾಗಿ, ಸುರಕ್ಷಿತವಾಗಿ ಮತ್ತು ಹೆಚ್ಚು ಅನುಕೂಲಕರವಾಗಿಸುತ್ತದೆ' ಎಂದು ಪ್ರಧಾನ ಮಂತ್ರಿಯವರ ಕಚೇರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಹೌರಾ–ಗುವಾಹಟಿ ಮಾರ್ಗದಲ್ಲಿ ಪ್ರಯಾಣದ ಸಮಯವನ್ನು ಸುಮಾರು ಎರಡೂವರೆ ಗಂಟೆಯಷ್ಟು ಕಡಿಮೆ ಮಾಡಲಿದೆ. ಈ ರೈಲು ಧಾರ್ಮಿಕ ಪ್ರಯಾಣ ಮತ್ತು ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡುತ್ತದೆ ಎಂದು ಹೇಳಿದೆ.

ಮಾಲದಾದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳ ಸಂಪರ್ಕವನ್ನು ಬಲಪಡಿಸುವ ಉದ್ದೇಶ ಹೊಂದಿರುವ ₹3,250 ಕೋಟಿ ಮೊತ್ತದ ವಿವಿಧ ರೈಲ್ವೆ ಮತ್ತು ರಸ್ತೆ ಮೂಲಸೌಕರ್ಯ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿದರು.

ಪೂರ್ವ ಭಾರತಕ್ಕೆ ಎರಡು ದಿನಗಳ ಭೇಟಿಗಾಗಿ ಬಂದಿರುವ ಮೋದಿ ಅವರು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವ ಹೊತ್ತಿನಲ್ಲಿ ಮೂಲಸೌಕರ್ಯಗಳನ್ನು ಉದ್ಘಾಟಿಸಿರುವುದು ರಾಜಕೀಯವಾಗಿ ಮಹತ್ವ ಪಡೆದಿದೆ.

ಬಳ್ಳಾರಿ ಘರ್ಷಣೆಗೆ ಆಕ್ರೋಶದ ಧ್ವನಿ • ಬಿಜೆಪಿ ಸಮಾವೇಶದಲ್ಲಿ ಮುಖಂಡರ ಒಕ್ಕೊರಲ ಆಗ್ರಹ

'ಭರತ್ ಬಂಧಿಸಿ, ಸಿಬಿಐ ತನಿಖೆಗೆ ವಹಿಸಿ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಹೊಸ ವರ್ಷದಂದು ಇಲ್ಲಿನ ಅವ್ವಂಬಾವಿಯಲ್ಲಿ ನಡೆದ ಘರ್ಷಣೆ, ಕೊಲೆ ಪ್ರಕರಣದ ಸಂಬಂಧ ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಬೆಂಬಲಿಗರನ್ನು ಬಂಧಿಸಬೇಕು, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಇಲ್ಲಿ ನಡೆದ ಬಿಜೆಪಿ ಸಮಾವೇಶ ಆಗ್ರಹಪಡಿಸಿದೆ.

ಬಳ್ಳಾರಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ಶನಿವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಬಿಜೆಪಿ ನಾಯಕರು, 'ಗಲಭೆಯಲ್ಲಿ ಶಾಸಕರಿಗೆ ನೆರವಾದ ಪೊಲೀಸ್ ಅಧಿಕಾರಿಗಳನ್ನೂ ಬಂಧಿಸಬೇಕು' ಎಂದು ಒತ್ತಾಯಿಸಿದರು. ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾತನಾಡಿ, 'ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಸರ್ಕಾರದ ವಿರುದ್ಧ ಸಮಾವೇಶ ನಡೆಸಿದ್ದೇವೆ. ದೇಶದ್ರೋಹಿಗಳು, ಕೊಲೆಗಡುಕರು ಅಟ್ಟಹಾಸ ಮೆರೆಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಪಾಠ ಕಲಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, 'ಬಳ್ಳಾರಿ ಗಲಭೆ ಪ್ರಕರಣದ ತನಿಖೆಯು ಸೂಕ್ತ ರೀತಿಯಲ್ಲಿ ನಡೆಯುತ್ತಿಲ್ಲ. ಪೊಲೀಸ್ ಠಾಣೆಗಳು, ಸರ್ಕಾರಿ ಕಚೇರಿಗಳೂ ಕಾಂಗ್ರೆಸ್ ಪಕ್ಷದ ಕಚೇರಿಗಳಾಗಿವೆ. ಪೊಲೀಸರೇ ಕಳ್ಳರಾಗಿದ್ದಾರೆ' ಎಂದು ನೇರ ವಾಗ್ದಾಳಿ ನಡೆಸಿದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, 'ವಾಲ್ಮೀಕಿ ಪ್ರತಿಮೆ ಅನಾವರಣ ಕುರಿತಂತೆ ಗಲಭೆ ನಡೆದಿದೆ. ವಾಲ್ಮೀಕಿ ಸಮುದಾಯದವರ ಬಗ್ಗೆ ಮಾತನಾಡಲು ಕಾಂಗ್ರೆಸ್‌ಗೆ ನೈತಿಕತೆ ಇದೆಯೇ. ಈ ಸಮುದಾಯದ ಮೀಸಲಾತಿ ಪ್ರಮಾಣವನ್ನು ಶೇ 7ಕ್ಕೆ ಏರಿಸಿದ್ದೇ ಬಿಜೆಪಿ. ಗುಂಡಿನ ದಾಳಿಯಿಂದ ಮೃತಪಟ್ಟ ರಾಜಶೇಖರ ರೆಡ್ಡಿ ಅವರ ಸಾವಿಗೆ ನ್ಯಾಯ ಕೊಡಿಸುತ್ತೇವೆ. ದಾಳಿ ಮಾಡಿದವರಿಗೆ ಶಿಕ್ಷೆ ಕೊಡಿಸುತ್ತೇವೆ' ಎಂದರು.

ಶಾಸಕ ಜನಾರ್ದನ ರೆಡ್ಡಿ ಮಾತನಾಡಿ, 'ಗಲಭೆ ಬಳಿಕ ಹೆಚ್ಚಿನ ಭದ್ರತೆ ಕೇಳಿದರೆ 'ವಿದೇಶಗಳಿಂದ ಪಡೆಯಲಿ' ಎಂದು ಡಿ.ಕೆ ಶಿವಕುಮಾರ್ ಹೇಳುತ್ತಾನೆ. ಹಾಗಾದರೆ, ಮತ್ತಿನ್ನೇನು ಕಿಸಿಯಲು ನೀನು ಈ ರಾಜ್ಯದ ಉಪ ಮುಖ್ಯಮಂತ್ರಿಯಾಗಿದ್ದೀಯ' ಎಂದು ಏಕವಚನದಲ್ಲಿ ಮೂದಲಿಸಿದರು. ಕರ್ನಾಟಕವು ಕಾಂಗ್ರೆಸ್‌ನ ರಿಪಬ್ಲಿಕ್ ಆಗಿದೆ. 'ಕಲ್ಯಾಣ ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಬೇರು ಸಮೇತ ಕಿತ್ತು ಹಾಕುವೆ' ಎಂದರು.

ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, '2028ಕ್ಕೆ ಬಿಜೆಪಿ ಸರ್ಕಾರ ಬರಲಿದೆ. ಫೀನಿಕ್ಸ್‌ನಂತೆ ನಾನೂ ಎದ್ದು ಬರುತ್ತೇನೆ. ಪಾತಾಳದಲ್ಲಿದ್ದರೂ ಭರತ್ ರೆಡ್ಡಿಯನ್ನು ಹುಡುಕಿಸಿ ಶಿಕ್ಷಿಸುತ್ತೇವೆ. ಆಗ ರಕ್ಷಣೆಗೆ ಯಾರು ಬರುತ್ತಾರೆ ನೋಡುತ್ತೇನೆ. ದಾಳಿಗೆ ನೆರವು ನೀಡಿದ ಬಳ್ಳಾರಿ ನಗರ ಡಿವೈಎಸ್‌ಪಿ ನಂದಾರೆಡ್ಡಿ ಮತ್ತು ಎಎಸ್‌ಪಿ ರವಿಕುಮಾರ್ ಅವರನ್ನೂ ಶಿಕ್ಷಿಸುತ್ತೇವೆ' ಎಂದರು.

ಕರ್ನಾಟಕ ಬಿಜೆಪಿ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಮಾಜಿ ಸಚಿವ ಹಾಲಪ್ಪ ಆಚಾರ್, ಮಾಜಿ ಶಾಸಕರಾದ ಸೋಮಶೇಖರ ರೆಡ್ಡಿ, ಎಂ.ಪಿ ರೇಣುಕಾಚಾರ್ಯ, ಶಿವನಗೌಡ ನಾಯಕ್, ಬಸವರಾಜ ದಡೇಸುಗೂರು ಇದ್ದರು.

ಬಿಜೆಪಿ ಸಮಾವೇಶವನ್ನು ಪಕ್ಷದ ನಾಯಕರು ಡೋಲು ಬಾರಿಸಿ ಮತ್ತು ಕಹಳೆ ಊದುವ ಮೂಲಕ ಉದ್ಘಾಟಿಸಿದರು. ಬಿ.ಶ್ರೀರಾಮುಲು, ಆರ್.ಅಶೋಕ, ಬಸವರಾಜ ಬೊಮ್ಮಾಯಿ, ಬಿ.ವೈ.ವಿಜಯೇಂದ್ರ, ಜನಾರ್ದನ ರೆಡ್ಡಿ, ಗೋವಿಂದ ಕಾರಜೋಳ, ಸುಧಾಕರ ರೆಡ್ಡಿ, ಛಲವಾದಿ ನಾರಾಯಣಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು

'ಕೋಪ, ಪಾಪದ ಕೂಸು ಭರತ್ ರೆಡ್ಡಿ'

'ಬಳ್ಳಾರಿ ನಗರವು ಭಸ್ಮಾಸುರನಿಗೆ ಜನ್ಮನೀಡಿದೆ. ಇದರಲ್ಲಿ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರಿಗೂ ಒಂದು ಪಾಠವಿದೆ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

'ನಿಮ್ಮ ನಡುವಿನ ಕೋಪ ಮತ್ತು ಪಾಪದ ಕೂಸು ಭರತ್ ರೆಡ್ಡಿ. ಇಂದು ಅದು ನಿಮ್ಮ ಮೇಲೆ ಅಧಿಕಾರ ಸಾಧಿಸುತ್ತಿದೆ. ಕೋಪದಿಂದ ಏನೂ ಸಾಧಿಸಲಾಗದು. ನಿಮ್ಮ ಕೋಪ ಬಿಡಿ. ಶ್ರೀರಾಮುಲು, ಸೋಮಶೇಖರ ರೆಡ್ಡಿ, ಕರುಣಾಕರ ರೆಡ್ಡಿ, ಜನಾರ್ದನ ರೆಡ್ಡಿ ನೀವೆಲ್ಲರೂ ಒಂದಾಗಿರಿ. ಬಳ್ಳಾರಿ ಒಂದು ಕಾಲದಲ್ಲಿ ಬಿಜೆಪಿಮಯವಾಗಿತ್ತು. ನಿಮ್ಮ ಸಣ್ಣ ತಪ್ಪಿನಿಂದ ಕಾಂಗ್ರೆಸ್‌ನ ಪಾಪದ ಕೂಸುಗಳು ಹುಟ್ಟಬಂದಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

₹10 ಲಕ್ಷ ಪರಿಹಾರ

ಸಮಾವೇಶಕ್ಕೂ ಮೊದಲು, ಗಲಭೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಮನೆಗೆ ಭೇಟಿ ನೀಡಿದ ಬಿಜೆಪಿ ನಾಯಕರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ರಾಜಶೇಖರ ತಾಯಿಗೆ ಗಾಲಿ ಅರುಣಾ ಲಕ್ಷ್ಮೀ ಅವರು ₹10 ಲಕ್ಷ ಆರ್ಥಿಕ ನೆರವಿನ ಚೆಕ್ ನೀಡಿದರು.

ಬಳ್ಳಾರಿ ಘರ್ಷಣೆ ಖಂಡಿಸಿ ಪಾದಯಾತ್ರೆ ಮಾಡುವ ಬಗ್ಗೆ ಕೇಂದ್ರದ ನಾಯಕರಿಗೆ ಕೋರಲಾಗಿದೆ. ಸೂಚನೆ ನಿರೀಕ್ಷೆಯಲ್ಲಿದ್ದೇವೆ. ಪಾದಯಾತ್ರೆ ಮಾಡಲು ಗೊಂದಲ ಇಲ್ಲ.

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಸಂತ್ರಸ್ತೆ ಗುರುತು ಬಹಿರಂಗಪಡಿಸಿದ ಶ್ರೀರಾಮುಲು

ಮಾಜಿ ಸಚಿವ ಶ್ರೀರಾಮುಲು ಅವರು ಭಾಷಣದಲ್ಲಿ ಪೋಕ್ಸೊ ಸಂತ್ರಸ್ತೆಯೊಬ್ಬರ ಗುರುತು ಬಹಿರಂಗ ಪಡಿಸಿದರು. 'ಭರತ್ ರೆಡ್ಡಿ ಯುವಕರನ್ನು ಯಾವ ಹಂತಕ್ಕೆ ಮಾದಕ ವ್ಯಸನಿಗಳನ್ನಾಗಿ ಮಾಡಿದ್ದಾರೆ ಎಂದರೆ, ನಾಲ್ಕೈದು ಮಂದಿ ಡ್ರಗ್ಸ್ ತೆಗೆದುಕೊಂಡು ನಗರದ ಶಾಲೆಯೊಂದರ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮಾಡಿದ್ದಾರೆ' ಎಂದರು. ಮಾತಿನ ಭರದಲ್ಲಿ ಅವರು ವಿದ್ಯಾರ್ಥಿನಿಯ ವಿವರ ಸೇರಿ ಇತರ ವಿಷಯಗಳನ್ನು ಬಹಿರಂಗಪಡಿಸಿದರು.

'ಸಾವು: ಟ್ರಂಪ್ ನೇರ ಹೊಣೆ'

ಇರಾನ್‌ನ ಪರಮೋಚ್ಚ ನಾಯಕ ಅಲಿ ಖಮೇನಿ ಆರೋಪ

ದುಬೈ (ಎಪಿ): 'ದೇಶದಲ್ಲಿ ನಡೆದ ಪ್ರತಿಭಟನೆಗಳ ವೇಳೆ ಸಂಭವಿಸಿದ ಸಾವು–ನೋವು ಹಾಗೂ ಹಾನಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ವಿಚಾರದಲ್ಲಿ ಅವರನ್ನು 'ಅಪರಾಧಿ' ಎಂಬುದಾಗಿ ಪರಿಗಣಿಸಲಾಗುವುದು' ಎಂದು ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹೇಳಿದ್ದಾರೆ.

'ಕೆಲದಿನಗಳಿಂದ ನಡೆಯುತ್ತಿರುವ ದೇಶ ವಿರೋಧಿ ಪ್ರತಿಭಟನೆಗಳು ಬೇರೆಯೇ ಸ್ವರೂಪದ್ದಾಗಿದ್ದು, ಇವುಗಳಲ್ಲಿ ಟ್ರಂಪ್ ಪಾತ್ರ ಇದೆ' ಎಂದು ಖಮೇನಿ ಹೇಳಿದ್ದಾಗಿ ಇರಾನ್ ಮಾಧ್ಯಮಗಳು ವರದಿ ಮಾಡಿವೆ.

'ದೇಶವನ್ನು ನಾವಾಗಿಯೇ ಯುದ್ಧಕ್ಕೆ ತಳ್ಳುವುದಿಲ್ಲ. ಆದರೆ, ದೇಶದ ವಿರುದ್ಧ ಸಂಚು ನಡೆಸಿದ ದೇಶೀಯ ಅಥವಾ ಅಂತರರಾಷ್ಟ್ರೀಯ ಅಪರಾಧಿಗಳನ್ನು ಶಿಕ್ಷಿಸದೇ ಬಿಡುವುದಿಲ್ಲ' ಎಂದು ಖಮೇನಿ ಗುಡುಗಿದ್ದಾರೆ.

ಪ್ರತೀಕಾರಕ್ಕೆ ಕರೆ: 'ಶಸ್ತ್ರಸಜ್ಜಿತ ಕಪಟಿಗಳನ್ನು ಕೊಲ್ಲಬೇಕು' ಎಂದು ಇರಾನ್‌ನ ಪ್ರಮುಖ ಮುಸ್ಲಿಂ ಧಾರ್ಮಿಕ ಮುಖಂಡರಾದ ಅಯತೊಲ್ಲಾ ಅಹಮದ್ ಖತಾಮಿ ಕರೆ ನೀಡಿದ್ದಾರೆ ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ರೇಡಿಯೊ ವರದಿ ಮಾಡಿದೆ.

ಖತಾಮಿ ಅವರು ತಮ್ಮ ಮೂಲಭೂತವಾದಿ ನಿಲುವುಗಳಿಂದ ಹೆಚ್ಚು ಖ್ಯಾತಿ ಹೊಂದಿದ್ದಾರೆ.

'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೈನಿಕರ ವಿರುದ್ಧ ಸೇಡು ತೀರಿಸಿಕೊಳ್ಳಲು ಕಾಯಬೇಕು. ಅಮೆರಿಕನ್ನರು ಹಾಗೂ ಯಹೂದಿಗಳು ಶಾಂತಿ ಬಯಸುತ್ತಿಲ್ಲ' ಎಂದು ಹೇಳಿದ್ದಾರೆ.

ದೇಶದಲ್ಲಿ ತಲೆದೋರಿರುವ ಉದ್ವಿಗ್ನತೆಯನ್ನು ಕೊನೆಗಾಣಿಸಲು ಇರಾನ್ ಹಾಗೂ ಅಮೆರಿಕ ಯತ್ನಿಸುತ್ತಿರುವ ಸಂದರ್ಭದಲ್ಲಿ ಈ ಹೇಳಿಕೆ ನೀಡಿದ್ದಾರೆ.

ಹೋರಾಟ ಮುಂದುವರಿಸಿ: 'ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಮುಂದುವರಿಸಬೇಕು' ಎಂದು ದೇಶದಿಂದ ಗಡಿಪಾರುಗೊಂಡಿರುವ ರಾಜ ರೆಜಾ ಪಹ್ಲವಿ ಕರೆ ನೀಡಿದ್ದಾರೆ.

'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಲ್ಲ ರೀತಿಯ ಸಹಾಯ ಮಾಡುವ ಭರವಸೆ ನೀಡಿದ್ದಾರೆ. ಅವರು ತಮ್ಮ ಮಾತಿನ ಮೇಲೆ ನಿಲ್ಲುತ್ತಾರೆ. ಏನೇ ಆದರೂ, ಇರಾನಿಯನ್ನರು ತಮ್ಮ ಹೋರಾಟವನ್ನು ಮುಂದುವರಿಸಬೇಕು' ಎಂದು ವಾಷಿಂಗ್ಟನ್‌ನಲ್ಲಿ ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

1979ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿಯ ಬಳಿಕ ರೆಜಾ ಪಹ್ಲವಿ ದೇಶ ತೊರೆದು, ಅಮೆರಿಕದಲ್ಲಿ ನೆಲಸಿದ್ದಾರೆ.



ಇರಾನ್‌ನನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಅಮೆರಿಕ ಪಿತೂರಿ ನಡೆಸಿದೆ. ಆ ಮೂಲಕ ದೇಶದ ಸೇನೆ, ರಾಜಕೀಯ ಹಾಗೂ ಆರ್ಥಿಕತೆ ಮೇಲೆ ಹತೋಟಿ ಸಾಧಿಸುವುದು ಅದರ ಗುರಿ

ಅಯತೊಲ್ಲಾ ಅಲಿ ಖಮೇನಿ, ಇರಾನ್‌ನ ಪರಮೋಚ್ಚ ನಾಯಕ

ಮುಖ್ಯಾಂಶಗಳು

- ಸಹಜಸ್ಥಿತಿಯತ್ತ ವ್ಯಾಪಾರ– ವಹಿವಾಟು
- 8 ದಿನಗಳ ಬಳಿಕ ಇಂಟರ್‌ನೆಟ್ ಸೇವೆ ಮರುಸ್ಥಾಪನೆ

ಸ್ವದೇಶಕ್ಕೆ ಮರಳಿದ ಭಾರತೀಯರು

ನವದೆಹಲಿ (ಪಿಟಿಐ): ಕಳೆದೊಂದು ವಾರದಿಂದ ಪ್ರತಿಭಟನೆಗೆ ಸಾಕ್ಷಿಯಾಗಿದ್ದ ಇರಾನ್‌ನಲ್ಲಿ ಸಿಲುಕಿದ್ದ ಹಲವಾರು ಭಾರತೀಯರು ವಿಮಾನಗಳಲ್ಲಿ ಶುಕ್ರವಾರ ರಾತ್ರಿ ನವದೆಹಲಿಗೆ ಬಂದಿಳಿದರು. ಎಷ್ಟು ಮಂದಿ ಭಾರತಕ್ಕೆ ಬಂದಿದ್ದಾರೆ ಎಂದು ತಿಳಿದುಬಂದಿಲ್ಲ.

'3 ಸಾವಿರ ಮಂದಿ ಸಾವು'

ದುಬೈ (ರಾಯಿಟರ್ಸ್): ಇರಾನ್‌ನಲ್ಲಿ ನಡೆದ ಪ್ರತಿಭಟನೆಗಳಲ್ಲಿ 3 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಗುಂಪು ಎಚ್‌ಆರ್‌ಎಎನ್‌ಎ ಹೇಳಿದೆ.

ದೇಶದಲ್ಲಿ ಪ್ರತಿಭಟನೆ ಹತ್ತಿಕ್ಕುವ ಸಂದರ್ಭದಲ್ಲಿ 2,895 ಪ್ರತಿಭಟನಕಾರರು ಸೇರಿದಂತೆ 3,090 ಮಂದಿ ಮೃತಪಟ್ಟಿದ್ದಾರೆ ಎಂದು ಎಚ್‌ಆರ್‌ಎಎನ್‌ಎ ವರದಿ ಮಾಡಿದೆ.

ಹಗ್ಗದ ಮೇಲೆ ನಡಿಗೆ...
ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಶನಿವಾರ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಬಾಲಕಿಯೊಬ್ಬಳು ಹೊಟ್ಟೆಪಾಡಿಗಾಗಿ ಜನರಿಂದ ಹಣ ಸಂಗ್ರಹಿಸುವುದಕ್ಕಾಗಿ ಹಗ್ಗದ ಮೇಲೆ ನಡೆಯುತ್ತಿದ್ದ ದೃಶ್ಯ

ಭಾನುವಾರ, ಜನವರಿ 18, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 18 | ಪುಟ 22

● www.prajavani.net   prajavani.net   prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಅಂಗಾಂಗ ಕಸಿ ಆಸ್ಪತ್ರೆಗೆ ಒಡಂಬಡಿಕೆ 7
ಮಂಡ್ಯ: ಚಿನ್ನಕ್ಕಾಗಿ ಕೆಐಒಸಿಎಲ್ ಶೋಧ 4

cbc 35101/13/0079/2526

“ನಮ್ಮ ಶ್ರಮಕ್ಕೆ ಗೌರವ ಲಭಿಸಿದೆ
ಈ ಯೋಜನೆಯು ನಮ್ಮ ಶ್ರಮಕ್ಕೆ ಗೌರವ ನೀಡುತ್ತದೆ, ನಮ್ಮ ಊರುಗಳನ್ನು ಸ್ವಾವಲಂಬಿ ಮಾಡುತ್ತದೆ ಮತ್ತು ನಮಗೆ ಉತ್ತಮ ಭವಿಷ್ಯ ಒದಗಿಸುತ್ತದೆ.

125 ದಿನಗಳ ಗ್ರಾಮೀಣ ಉದ್ಯೋಗ ಖಾತ್ರಿ

ವಿಕಸಿತ ಭಾರತ –
ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ): ವಿಬಿ – ಜಿ ರಾಮ್ ಜಿ
(ವಿಕಸಿತ ಭಾರತ್ – ಜಿ ರಾಮ್ ಜಿ) ಕಾಯ್ದೆ, 2025

ಚಿನ್ನಸ್ವಾಮಿಯಲ್ಲಿ ಪಂದ್ಯಗಳಿಗೆ ಸರ್ಕಾರದಿಂದ ಷರತ್ತುಬದ್ಧ ಅನುಮತಿ: ಕೆಎಸ್‌ಸಿಎ

ಕ್ರಿಕೆಟ್ ಸಂಭ್ರಮಕ್ಕೆ ತೆರೆದ ಬಾಗಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಂಗಳುಗಳ ಕಾಲ ಅನಿಶ್ಚಿತ ಪರಿಸ್ಥಿತಿಯ ನಂತರ ರಾಜ್ಯದ ಗೃಹ ಇಲಾಖೆಯು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಮತ್ತು ಐಪಿಎಲ್ ಪಂದ್ಯಗಳನ್ನು ನಡೆಸುವುದಕ್ಕೆ ಶನಿವಾರ ಷರತ್ತುಬದ್ಧ ಅನುಮತಿ ನೀಡಿದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ತಿಳಿಸಿದೆ.

‘ಕ್ರಿಕೆಟ್ ಹೆಗ್ಗುರುತಾದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಮತ್ತು ಐಪಿಎಲ್ ಪಂದ್ಯಗಳನ್ನು ನಡೆಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಗೃಹ ಇಲಾಖೆ ಅನುಮತಿ ನೀಡಿದೆ ಎಂದು ತಿಳಿಸಲು ಸಂತಸವಾಗುತ್ತಿದೆ. ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳು ನಿಗದಿಪಡಿಸಿರುವ ನಿಯಮ ಮತ್ತು ಷರತ್ತುಗಳನ್ನು ಈಡೇರಿಸುವ ವಿಶ್ವಾಸವನ್ನು ಕೆಎಸ್‌ಸಿಎ ಹೊಂದಿದೆ’ ಎಂದು ಸಂಸ್ಥೆಯ ವಕ್ತಾರ ವಿನಯ್ ಮೃತ್ಯುಂಜಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣ

2025ರ ಜೂನ್ 3ರಂದು ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿಯು, ಮರುದಿನ ಹಮ್ಮಿಕೊಂಡ ಸಂಭ್ರಮಾಚರಣೆಯ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಮಂದಿ ಅಭಿಮಾನಿಗಳು ಮೃತಪಟ್ಟಿದ್ದರು. ನಂತರ ಇಲ್ಲಿ ಯಾವುದೇ ಪ್ರಮುಖ ಪಂದ್ಯ ನಡೆಸಲು ಅನುಮತಿ ಸಿಕ್ಕಿರಲಿಲ್ಲ.

‘ಷರತ್ತುಗಳಿಗೆ ಅನುಗುಣವಾಗಿ ಪಂದ್ಯಗಳನ್ನು ನಡೆಸುವುದಕ್ಕೆ ಕೈಗೊಂಡಿರುವ ಕ್ರಮಗಳಿಗೆ ಸಂಬಂಧಿಸಿ ವಿವರವಾದ ನೀಲನಕ್ಷೆಯನ್ನು ತಜ್ಞರ ಸಮಿತಿಗೆ ಸಲ್ಲಿಸಿದ್ದೇವೆ. ನಾವು ಸುರಕ್ಷತೆ, ಭದ್ರತೆ, ಜನಸಂದಣಿ ನಿರ್ವಹಣೆ ಕ್ರಮಗಳನ್ನು ಜಾರಿಗೊಳಿಸಲು ಸಂಪೂರ್ಣವಾಗಿ ಬದ್ಧರಾಗಿದ್ದೇವೆ’ ಎಂದು ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಬೀದಿ ದಾಸಯ್ಯನ ಸಿ.ಎಂ ಮಾಡಿದ್ರೂ ಒಪ್ಪುವೆವು’

ಪ್ರಜಾವಾಣಿ ವಾರ್ತೆ

ಜಮೀರ್

ಹುಬ್ಬಳ್ಳಿ: ‘ರಾಜ್ಯದಲ್ಲಿ 2028ರವರೆಗೆ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಹೈಕಮಾಂಡ್‌ನಿಂದ ಮಾತ್ರ ಬದಲಾವಣೆ ಸಾಧ್ಯ. ಒಂದು ವೇಳೆ ಹೈಕಮಾಂಡ್, ಬೀದಿ ದಾಸಯ್ಯನನ್ನು ಸಿ.ಎಂ ಮಾಡಿದರೂ ನಾವು ಒಪ್ಪುತ್ತೇವೆ’ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

‘ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಹೈಕಮಾಂಡ್ ನಿರ್ಣಯವೇ ಅಂತಿಮ. ಡಿ.ಕೆ.ಶಿವಕುಮಾರ್ ಅವರನ್ನು ಸಿ.ಎಂ ಮಾಡಿದರೂ ಸ್ವಾಗತವಿದೆ’ ಎಂದು ಇಲ್ಲಿ ಶನಿವಾರ ತಿಳಿಸಿದರು.

‘ನವೆಂಬರ್‌ಗೆ ಕ್ರಾಂತಿ ಆಗುವುದೆಂದು ಬಿಜೆಪಿಯವರು ಹೇಳಿದ್ದರು. ಈಗ ಸಂಕ್ರಾಂತಿಯೂ ಮುಗಿದಿದೆ. ಅವರು ಯುಗಾದಿ ಹಬ್ಬಕ್ಕೆ ಕಾಯುತ್ತಿದ್ದಾರೆ. ಆದರೆ, ಆಗಲೂ ಏನೂ ಆಗುವುದಿಲ್ಲ’ ಎಂದು ಹೇಳಿದರು.

8

ಸೈಬರ್ ವಂಚಕರನ್ನು ಜೈಲಿಗಟ್ಟಲು ಕಾಯ್ದೆ

ಬೆಂಗಳೂರು: ‘ಕೊಲೆ, ಕೊಲೆ ಯತ್ನ ಪ್ರಕರಣಗಳಲ್ಲಿ ಭಾಗಿಯಾದ ಅಪರಾಧಗಳಿಗೆ ವಿಧಿಸಲಾಗುತ್ತಿರುವ ಜೈಲು ಶಿಕ್ಷೆ ಪ್ರಮಾಣವನ್ನು ಸೈಬರ್ ವಂಚಕರಿಗೂ ನೀಡುವ ಕಾನೂನು ಜಾರಿಗೆ ತರುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಎರಡು ದಿನಗಳ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶಕ್ಕೆ ಶನಿವಾರ ಚಾಲನೆ ನೀಡಿದ ನಂತರ, ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ದರೋಡೆ, ಸುಲಿಗೆ, ವಾಹನ ಕಳ್ಳತನ ಪ್ರಕರಣಗಳು 2023ರ ಬಳಿಕ ತಗ್ಗಿವೆ. ಆದರೆ, ಸೈಬರ್ ಹಾಗೂ ಡ್ರಗ್ಸ್ ಪ್ರಕರಣಗಳು ಹೆಚ್ಚಳವಾಗುತ್ತಿವೆ’ ಎಂದರು.

4

ಕಾಡು ಕಾಯುವವರ ವ್ಯಥೆ

ಹಂಗಾಮಿ ನೌಕರರ ‘ಅರಣ್ಯ’ರೋದನ
● ಹೊರ ಗುತ್ತಿಗೆ ವ್ಯವಸ್ಥೆಯಲ್ಲೇ ಲೋಪ

● ಉಮೇಶಭಟ್ಟ ಪಿ.ಎಚ್.

ಒಳನೋಟ

ಬೆಂಗಳೂರು: ‘ಬೆಳಿಗ್ಗೆ 6ಕ್ಕೆ ಕಾಡಿಗೆ ಹೊರಟರೆ ವಾಪಸ್ ಬರೋದೇ ಸಂಜೆ. ಅರಣ್ಯದೊಳಗೆ ಗಸ್ತು ತಿರುಗಬೇಕು. ವನ್ಯಜೀವಿಗಳ ಭಯ ಬೇರೆ. ಹುಲಿ, ಆನೆ ದಾಳಿಗೆ ಹಲವರು ಜೀವ ಕಳೆದುಕೊಂಡಿದ್ದನ್ನೂ ನೋಡಿದ್ದೇವೆ. ಕಳ್ಳ ಬೇಟೆಗಾರರ ಜಾಡು ಪತ್ತೆ ಮಾಡಬೇಕು. ನಮಗೆ ಹೆಸರಿಗೆ ಮಾತ್ರ 8 ಗಂಟೆಯ ಕೆಲಸ. ಆದರೆ ದಿನದ 24 ಗಂಟೆಯೂ ದುಡಿಯಲೇಬೇಕು. ವನ್ಯಜೀವಿಗಳ ದಾಳಿಯ ಆತಂಕ ಬೇರೆ. ಸತತ 27 ವರ್ಷದಿಂದ ಇಲಾಖೆಯಲ್ಲಿ ಕೆಲಸ ಮಾಡಿದರೂ ಸಿಗುವ ಸಂಬಳ ಮಾತ್ರ ₹16190. ಇದರಲ್ಲೇ ಮನೆ ನಡೆಸಬೇಕು. ನಾವು ಹೇಗೆ ಬದುಕಬೇಕು ಹೇಳಿ’.

ಹೀಗೆಂದು ಒಂದೇ ಉಸಿರಿನಲ್ಲಿ ಅರಣ್ಯ ಇಲಾಖೆ ಹೊರ ಗುತ್ತಿಗೆ ನೌಕರರ ಸ್ಥಿತಿಗತಿ ಬಿಡಿಸಿಡುತ್ತಾರೆ ಬಂಡೀಪುರದ ಹೆಡಿಯಾಲ ವನ್ಯಜೀವಿ ವಿಭಾಗದ ಅಣ್ಣಯ್ಯಸ್ವಾಮಿ. ಇವರ ಮಾತಿಗೆ ದನಿಗೂಡಿಸುತ್ತಾರೆ ಗುಂಡ್ರೆ ವಲಯ ಜೀಪ್ ಚಾಲಕ ನವೀನ್.

‘ಹತ್ತು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಇಲಾಖೆಯಿಂದ ಸಿಗುವ ನಿರ್ದಿಷ್ಟ ಸಂಬಳ ಎಷ್ಟು ಎಂಬುದೇ ಗೊತ್ತಾಗಿಲ್ಲ. ಸಂಬಳ ಪಡೆದಿದ್ದಕ್ಕೆ ಎಲ್ಲಿಯೂ ಒಂದೇ ಒಂದು ಸಹಿ ಇಲ್ಲ. ಗುತ್ತಿಗೆ ಪಡೆದ ಸಂಸ್ಥೆಗೆ ಇಲಾಖೆಯು ಎಷ್ಟು ಹಣ ಕೊಡುತ್ತೆ ಎಂಬುದೂ ನಮಗೆ ತಿಳಿಯುವುದಿಲ್ಲ. ಕೊಟ್ಟಷ್ಟು ಪಡೆದುಕೊಂಡು ಕೆಲಸ ಮಾಡುತ್ತಿದ್ದೇವೆ’ ಎಂದವರು ಬೆಳಗಾವಿ ನಗರ ವಲಯದ ನೌಕರರೊಬ್ಬರು.

> **ಹೊರಗುತ್ತಿಗೆ ಬದಲಿಸುವಂತೆ ಕೋರಿದ್ದರೂ ಪೂರಕ ಸ್ಪಂದನೆ ಸಿಕ್ಕಿಲ್ಲ. ಶೀಘ್ರವೇ ಬಂಡೀಪುರದಲ್ಲಿ ಹೋರಾಟ ನಡೆಸುತ್ತೇವೆ. ಮಾರ್ಚ್ ನಂತರ ಕೆಲಸ ನಿಲ್ಲಿಸಿ ಹೋರಾಡುತ್ತೇವೆ**
> **ಎ.ಎಂ. ನಾಗರಾಜು,** ಗೌರವ ಅಧ್ಯಕ್ಷ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ, ಹೊರಗುತ್ತಿಗೆ ನೌಕರರ ಸಂಘ

ಕರ್ನಾಟಕ ಅರಣ್ಯ ಇಲಾಖೆಯ ಹುಲಿ ಸಂರಕ್ಷಿತಧಾಮ, ವನ್ಯಜೀವಿಧಾಮ, ಸಾಮಾಜಿಕ ಅರಣ್ಯ ಸಹಿತ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಹೊರ ಗುತ್ತಿಗೆ ನೌಕರರ ನೋವಿನ ಕಥೆ ಒಂದೊಂದು ಕಡೆ ಒಂದು ರೀತಿ ಇದೆ. ಆದರೆ ಸಂಕಷ್ಟದ ಸ್ವರೂಪ ಮಾತ್ರ ಒಂದೇ ತೆರನಾದದ್ದು. ಸಂಬಳ ಕಡಿಮೆ ಇದೆ. ಕೆಲವೆಡೆ ತಿಂಗಳ ಸಂಬಳ ಇನ್ನಾವುದೇ ತಿಂಗಳಲ್ಲಿ ಕೊಡಲಾಗುತ್ತದೆ. ಸೌಲಭ್ಯದ ಹೆಸರಿನ ಕಡಿತದ ಮಾಹಿತಿಯೇ ಇಲ್ಲ. ಕೊಟ್ಟಷ್ಟು ಸಂಬಳ ಪಡೆದು ಸುಮ್ಮನೇ ದುಡಿಯುವುದಷ್ಟೇ ಆಗಿದೆ ಎನ್ನುವ ಸ್ಥಿತಿಯಿದೆ. 20 ವರ್ಷಕ್ಕೂ ಹೆಚ್ಚು ಕಾಲ ದಿನಗೂಲಿ ಆಧಾರದಲ್ಲಿ ಕೆಲಸ ಮಾಡಿದ ಬಳಿಕ ಹೊರಗುತ್ತಿಗೆ ವ್ಯಾಪ್ತಿಗೆ ಬಂದಿರುವ ನೌಕರರು ಬೆಂಕಿಯಿಂದ ಬಾಣಲೆಗೆ ಬಿದ್ದ ಸನ್ನಿವೇಶ ಎದುರಿಸುತ್ತಿದ್ದಾರೆ. ಅರಣ್ಯ ಇಲಾಖೆಯೇ ಸಂಬಳ ನೀಡಿ ನಮ್ಮನ್ನು ನೋಡಿಕೊಳ್ಳುವ ಹಿಂದಿನ ಸ್ವರೂಪವೇ ಇದ್ದರೆ ಸಾಕೆಂದು ಹೇಳುತ್ತಾರೆ.

6

ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘದ ಸದಸ್ಯರು ದಿನಗೂಲಿ ನೌಕರರನ್ನು ಹೊರಗುತ್ತಿಗೆಗೆ ಬದಲಾಯಿಸುವುದನ್ನು ಖಂಡಿಸಿ ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು

ಬೇಡಿಕೆಗಳೇನು

- ದಿನಗೂಲಿಯಲ್ಲೇ ಮುಂದುವರಿಸಿ 10 ವರ್ಷ ಮುಗಿಸಿದವರನ್ನು ಕ್ಷೇಮಾಭಿವೃದ್ಧಿ ಅಧಿನಿಯಮಕ್ಕೆ ಒಳಪಡಿಸಬೇಕು
- ಏಜೆನ್ಸಿಗೆ ಬದಲಾಗಿ ಹಿಂದೆ ಇದ್ದಂತೆ ಇಲಾಖೆ ಮೂಲಕವೇ ವೇತನ ನೀಡಬೇಕು
- ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಬೇಕು
- ಚಾಲಕರಿಗೂ ಕಷ್ಟ ಪರಿಹಾರ ಭತ್ಯೆ ನೀಡಬೇಕು
- ಕಚೇರಿ ಸಿಬ್ಬಂದಿಯನ್ನು ಅವರ ಶಿಕ್ಷಣಕ್ಕೆ ಅನುಗುಣವಾಗಿ ಕಾಯಂಗೊಳಿಸಬೇಕು
- ವನ್ಯಜೀವಿ ವಿಭಾಗದವರಿಗೆ ಹಿಂದೆ ಇದ್ದಂತೆ 30 ದಿನಗಳ ಮಾಸಿಕ ಸಂಬಳ, ಭತ್ಯೆ ನೀಡಬೇಕು

KALINGA INSTITUTE OF INDUSTRIAL TECHNOLOGY (KIIT)
Deemed to be University
(Established U/S 3 of UGC Act 1956), Bhubaneswar, Odisha, India

A++ Grade Accredited by NAAC
THE World University Rankings 2026: 501+Cohort Globally, 5th India Rank
QS World University Rankings 2026: 1st in Odisha, 9th in India among pvt. universities
nirf 2025: 17th Among Indian Universities
NBA: Tier 1 Re-accredited by NBA
ABET: ABET (US) Accreditation
IET Accredited Programme: The Institute of Engineering and Technology
Special Consultative Status by the UN-ECOSOC
Partnership with UN Volunteers

KIITEE 2026
APPLY NOW
through KIIT Websites
www.kiitee.ac.in / www.kiit.ac.in
No Examination Fee (Computer-Based Test)

Scan to Apply

ACADEMIC PROGRAMMES AVAILABLE

UG (3 years/4 years)/Integrated (5 years) Programmes
[All 4 years Programmes are with Honors/Research]

B.Tech Programmes
- Civil
- Construction Technology
- Electrical
- Electrical & Computer Science
- Mechanical
- Mechanical (Automobile)
- Aerospace
- Mechatronics
- Electronics & Telecommunication
- Electronics & Computer Science
- Electronics & Electrical
- Electronics (VLSI Design & Technology)
- Chemical
- Computer Science & Engineering (CSE)
- CSE (Artificial Intelligence & Machine Learning)
- CSE (Artificial Intelligence)
- CSE (Cyber Security)
- CSE (Data Science)
- CSE (Internet of Things & Cyber Security including Block Chain Technology)
- CSE (Internet of Things)
- Information Technology
- Computer Science & System
- Computer Science & Communication
- Biotechnology

UG Programmes in other Disciplines
- B.Design (Automobile/ Graphic/Product)
- B.Design (Fashion / Textile)
- Integrated M.Tech Biotechnology (5yrs)
- B.Tech (Lateral Entry)
- B.Arch
- BCA
- BBA
- B.Sc (Hospitality & Tourism)
- Bachelor of Film & Television Production
- Bachelor of Communication & Journalism
- Bachelor of Physical Education & Sports
- BA Economics
- BA Sociology
- BA English
- BA Psychology
- BA French
- BA Spanish
- BA Japanese
- BA German
- B.Com
- B.Sc (Economics & Data Analytics)
- B.Sc Computer Science
- B.Sc Nursing
- B.Pharma
- D.Pharma
- B.Sc.(Fintech & Business Analytics)
- B.Sc.(Statistics & Data Analytics)

PG (1 year/2 years)/Integrated (5 years) Programmes
- M.Tech
- LLM (1yr)
- MCA
- M.Sc Biotechnology
- M.Sc Applied Microbiology
- M.Arch
- MBA-IEV (Innovation, Entrepreneurship and Venture Development)
- Master of Communication & Journalism
- Master in Urban & Regional Planning
- Master in Yoga & Naturopathy
- Master of Hospital Administration
- Master of Public Health
- MA in Fashion Management
- M. Design (Interior)
- M.Sc Computer Science
- MA Economics
- MA Sociology
- MA English
- MA Psychology
- Master in Public Policy
- M.Com
- M.Sc Physics
- M.Sc Chemistry
- M.Sc Mathematics & Data Science
- Master in Library & Information Sciences
- Master in Physical Education & Sports
- M.Sc Nursing
- Integrated M.Tech & Ph.D
- Ph.D

2025 Placement Highlights
750+ Companies
6000+ Job Offers
₹53 LPA Highest Salary Offered
₹8.50 LPA Average CTC
1500+ Paid Internships

Director Admissions, Admission Cell (Koel Campus), KIIT DU, Bhubaneswar, Odisha, India-751024
admission@kiit.ac.in   kiitee.ac.in   8080 735 735

KIIT (Deemed to be University) has only one permanent campus in Bhubaneswar, Odisha. It has no other campus / off campus anywhere else in the country and globe.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದ್ದು, ಚಳಿಯ ಅನುಭವ ಆಗಲಿದೆ

ಡೆಪಾ ತೈಲ ಖರೀದಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗನ ಕಾಯಿಲೆ (ಕ್ಯಾಸನೂರು ಫಾರೆಸ್ಟ್ ಡಿಸೀಸ್) ನಿಯಂತ್ರಣಕ್ಕೆ ಅಗತ್ಯವಿರುವ ಡೆಪಾ ತೈಲ ಖರೀದಿಗೆ ಆರೋಗ್ಯ ಇಲಾಖೆ ಅನುಮೋದನೆ ನೀಡಿದೆ.

ಕೆಎಫ್‌ಡಿ ಸೋಂಕನ್ನು ತಡೆಗಟ್ಟಲು ಯಾವುದೇ ಲಸಿಕೆ ಲಭ್ಯವಿಲ್ಲ. ಸೋಂಕಿನ ಅಪಾಯ ಕಡಿಮೆ ಮಾಡಲು ಡೆಪಾ ತೈಲ ಸಹಕಾರಿ.

ಸದ್ಯ 2.78 ಲಕ್ಷ ಡೆಪಾ ತೈಲದ ಬಾಟಲಿಗಳು ಲಭ್ಯವಿದೆ. ಈ ದಾಸ್ತಾನು ಫೆಬ್ರುವರಿ ಎರಡನೇ ವಾರದವರೆಗೆ ವಿತರಿಸಬಹುದಾಗಿದೆ.

ಮಾರ್ಚ್‌ನಿಂದ ಜೂನ್‌ವರೆಗೆ ವಿತರಿಸಲು 5.74 ಲಕ್ಷ ಡೆಪಾ ತೈಲದ ಬಾಟಲಿಗಳು ಅಗತ್ಯವಿದ್ದು, ಅಷ್ಟು ಪ್ರಮಾಣದಲ್ಲಿ ತೈಲದ ಖರೀದಿಗೆ ಅನುಮೋದನೆ ನೀಡಲಾಗಿದೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ರೇಷ್ಮೆ ಇಲಾಖೆ
ರೇಷ್ಮೆ ಕೃಷಿ ಉಪ ನಿರ್ದೇಶಕರ ಕಛೇರಿ
ಬಿತ್ತನೆ ವಲಯ ಮಾಗಡಿ, ಬೆಂಗಳೂರು ದಕ್ಷಿಣ ಜಿಲ್ಲೆ
ಇ–ಮೇಲ್: dds.mgd@gmail.com

ಸಂ.: ರೇಉನಿಮಾ/ಬಿವ/ರೇಕೃಕ್ಷೇ/ಸಲ/ಖರೀ/02/2025–26 ದಿನಾಂಕ: 17.01.2026

ಪ್ರಕಟಣೆ

ರೇಷ್ಮೆ ಕೃಷಿ ಉಪ ನಿರ್ದೇಶಕರು, ಬಿತ್ತನೆ ವಲಯ ಮಾಗಡಿ ಇವರ ವ್ಯಾಪ್ತಿಯಲ್ಲಿ ಬರುವ ರೇಷ್ಮೆ ಕೃಷಿ ಕ್ಷೇತ್ರಗಳ ಉಪಯೋಗಕ್ಕಾಗಿ ರೂಂ ಹೀಟರ್ ಮತ್ತು ಹ್ಯೂಮಿಡಿಫೈಯರ್, ಪವರ್ ಸ್ಪ್ರೇಯರ್ ಮತ್ತು ಪವರ್ ವೀಡರ್/ಟಿಲ್ಲರ್ ಹಾಗೂ ಬಿಡಿಭಾಗಗಳು ಖರೀದಿಸಲು ದಿನಾಂಕ: **17.1.2026** ರಂದು ದರಪಟ್ಟಿಗಳನ್ನು ಆಹ್ವಾನಿಸಲಾಗಿರುವ ಟೆಂಡರ್ ಪ್ರಕಟಣೆ. ಆಸಕ್ತಿವುಳ್ಳ ಸಂಸ್ಥೆಯವರು ದರಪಟ್ಟಿಗಳನ್ನು ಸಲ್ಲಿಸಲು ಕೋರಿದೆ. 1) ದರಪಟ್ಟಿಗಳನ್ನು ದಿನಾಂಕ: **28.01.2026ರ ಸಾಯಂಕಾಲ 4:00** ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸುವುದು. 2) ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಸಂಪರ್ಕಿಸಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು.

ಸಹಿ/–
ರೇಷ್ಮೆ ಕೃಷಿ ಉಪ ನಿರ್ದೇಶಕರು
ಬಿತ್ತನೆ ವಲಯ, ಮಾಗಡಿ.

DIPR/BSD/577/SA/2025-26

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್/ಡಬ್ಲ್ಯು/ಟಿಎಸ್/ಯುಎಸ್‌ಎಫ್‌ಡಿ/2026/01/ಇ ದಿನಾಂಕ : 09–01–2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗದ ಲೂಪ್ ಲೈನ್‌ಗಳಲ್ಲಿ ಎಟಿ ವೆಲ್ಡ್‌ಗಳ ಅಲ್ಟ್ರಾಸೋನಿಕ್ ಟೆಸ್ಟಿಂಗ್ (ಇ–ಟೆಂಡರ್ ಸಂ. ಎಸ್‌ಡಬ್ಲ್ಯುಆರ್–ಎಂವೈಎಸ್–ಯುಎಸ್‌ಎಫ್‌ಡಿ–ಎಟಿಡಬ್ಲ್ಯು–202601)	ರೂ. 15,36,480/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10–02–2026 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್/ಕೇಂದ್ರ ಕಛೇರಿ/ಹುಬ್ಬಳ್ಳಿ
ಪಿಯುಬಿ/819/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR SWRRLY @SWRAILWAYHQ @sw_railways

ಈಶಾನ್ಯ ರೈಲ್ವೆ
ಇಮೇಲ್: dycmmcon@ner.railnet.gov.in
ಇಂಟರ್‌ನೆಟ್: www.ireps.gov.in
ಟೆಂಡರ್ ಪ್ರಕಟಣೆ ಸಂ. 02, ದಿನಾಂಕ 16–01–2026
ಇ–ಪ್ರೊಕ್ಯೂರ್‌ಮೆಂಟ್ ಸಿಸ್ಟಮ್ ಮುಖಾಂತರ ಟೆಂಡರ್‌ಗಳ ಆಹ್ವಾನ

ಭಾರತದ ರಾಷ್ಟ್ರಪತಿಗಳ ಪರವಾಗಿ ಡೆ. ಚೀಫ್ ಮಟೇರಿಯಲ್ ಮ್ಯಾನೇಜರ್/ನಿರ್ಮಾಣ, ಈಶಾನ್ಯ ರೈಲ್ವೆ/ಗೋರಖ್‌ಪುರ ಇವರು, ಕೆಳಕಂಡ ಪದಾರ್ಥಗಳ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಿಸ್ಟಮ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಪದಾರ್ಥಗಳ ಸಂಪೂರ್ಣ ವಿವರ ಮತ್ತು ಇತರ ಷರತ್ತುಗಳು www.ireps.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಕ್ರ. ಸಂ. 1, ಟೆಂಡರ್ ನಂ. & ಕೊನೆಯ ದಿನಾಂಕ: 16255041, **ದಿನಾಂಕ:** 11–02–2026, **ವಿವರ:** ಕಂಟಿನ್ಯೂಯಸ್ ಕಾಸ್ಟ್ ಕಾಪರ್ ವೈರ್ ರಾಡ್ ಮುಂತಾದವುಗಳಿಂದ ತಯಾರಿಸಲ್ಪಟ್ಟ 107 ಚ.ಮಿ.ಮೀ. ಗಾತ್ರದ ಜಾಯಿಂಟ್‌ಲೆಸ್ ಗ್ರೂವ್ಡ್ ಕಾಪರ್ ವೈರ್. **ಆರ್‌ಡಿಎಸ್‌ಒ:** ಇವರಿಂದ ಖರೀದಿಸಲು ಮೀಸಲಾಗಿದೆ, **ಅಗತ್ಯ ಪ್ರಮಾಣ:** 178.89, **ಭದ್ರತಾ ಠೇವಣಿ:** ರೂ. 20,00,000/–, **ಕ್ರ.ಸಂ. 2, ಟೆಂಡರ್ ನಂ. ಮತ್ತು ಕೊನೆಯ ದಿನಾಂಕ:** 16255043, **ದಿನಾಂಕ:** 17–02–2026, **ವಿವರ:** ಆರ್‌ಡಿಎಸ್‌ಒ ಮೇರೆಗಿನ 65 ಚ.ಮಿ.ಮೀ. (19/2.10 ಎಂಎಂ) ಗಾತ್ರದ ಯುಎನ್–ಇನ್ಸುಲೇಟೆಡ್ ಕ್ಯಾಡ್ಮಿಯಂ ಕಾಪರ್ ಕ್ಯಾಟೆನರಿ ವೈರ್. **ಆರ್‌ಡಿಎಸ್‌ಒ:** ಇವರಿಂದ ಖರೀದಿಸಲು ಮೀಸಲಾಗಿದೆ, **ಅಗತ್ಯ ಪ್ರಮಾಣ:** 112.71, **ಭದ್ರತಾ ಠೇವಣಿ:** ರೂ. 20,00,000/–.

ಡೆ. ಚೀಫ್ ಮಟೇರಿಯಲ್ ಮ್ಯಾನೇಜರ್/ನಿರ್ಮಾಣ, ಗೋರಖ್‌ಪುರ
CPRO/S-75
ಛಾವಣಿ ಮತ್ತು ಮೆಟ್ಟಿಲುಗಳ ಮೇಲೆ ಪ್ರಯಾಣಿಸಬೇಡಿ

ನಂದಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧನಾ ಆಸ್ಪತ್ರೆ, ಚಿಕ್ಕಬಳ್ಳಾಪುರ
E-mail: cimschikkaballapura@gmail.com,
ಫೋನ್ ಮತ್ತು ಫ್ಯಾಕ್ಸ್: 08156-272388
ಸಂಖ್ಯೆ:ಎನ್‌ಎಂಸಿ&ಆರ್‌ಐ/ಸಿಕೆಬಿ/ಇ–ಟೆಂಡರ್/04/2025–26 ದಿನಾಂಕ:13.01.2026

ಟೆಂಡರ್ ಪ್ರಕಟಣೆ

ನಂದಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ನೂತನ ಕಾಲೇಜು ಕಟ್ಟಡ ಚಿಕ್ಕಬಳ್ಳಾಪುರ ಬೋಧನಾ ಆಸ್ಪತ್ರೆ (ಜಿಲ್ಲಾ ಆಸ್ಪತ್ರೆ ಆವರಣ) ಚಿಕ್ಕಬಳ್ಳಾಪುರ ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳು ಕೆಳಕಂಡಂತಿವೆ. (1) Tisssue Processor ಉಪಕರಣಗಳು (Call-2) (2) ಮೈಕ್ರೊಸ್ಕೋಪ್‌ಗಳು (Call-2) (3) Lenin ಪರಿಕರಗಳು (Call-2) (4) GYM ಪರಿಕರಗಳು (5) CCTV and Computer ಗಳ ವಾರ್ಷಿಕ ನಿರ್ವಹಣೆ (6) ಹವಾನಿಯಂತ್ರಣ ಉಪಕರಣಗಳ ವಾರ್ಷಿಕ ನಿರ್ವಹಣೆ (7) Lader ಪರಿಕರ/ವಸ್ತುಗಳು ಟೆಂಡರ್‌ಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್‌ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು. **ಸೂಚನೆ:** ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ **(further information and announcements)** ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ ತಾಣ **https://cimschikkaballapura.karnataka.gov.in** ದಲ್ಲಿ ವೀಕ್ಷಿಸಬಹುದು.

ಸಹಿ/– ನಿರ್ದೇಶಕರು, ಎನ್‌ಎಂಸಿ&ಆರ್‌ಐ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:368/ಕೆಎಸ್‌ಎಂಸಿಎ/2025–26

ಗಾಯಾಳು ಆರೈಕೆಗೆ ಬೇಕು ಮೃತರ ಚರ್ಮ

ದಾನಿಗಳಿಗಾಗಿ ಎದುರು ನೋಡುತ್ತಿದೆ ಸರ್ಕಾರಿ ಸ್ಕಿನ್ ಬ್ಯಾಂಕ್

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಏಕೈಕ ಸರ್ಕಾರಿ ಸ್ಕಿನ್ ಬ್ಯಾಂಕ್‌ನಲ್ಲಿರುವ ಚರ್ಮಕ್ಕೆ ಭಾರಿ ಬೇಡಿಕೆಯಿದ್ದು, ಚರ್ಮ ದಾಸ್ತಾನು ಸೀಮಿತವಾಗಿದೆ. ಹೀಗಾಗಿ, ಬೆಂಕಿ ಅವಘಡ ಸೇರಿ ವಿವಿಧ ಸಂದರ್ಭದಲ್ಲಿ ಗಾಯಾಳುಗಳಿಗೆ ಚರ್ಮ ಒದಗಿಸುವುದು ಸವಾಲಾಗಿದೆ.

ಜಾಗೃತಿಯ ಕೊರತೆ, ಕುಟುಂಬಸ್ಥರು ಮಾಹಿತಿ ಒದಗಿಸದಿರುವುದು ಸೇರಿ ವಿವಿಧ ಕಾರಣಗಳಿಂದ ಚರ್ಮ ಸಂಗ್ರಹಕ್ಕೆ ಹಿನ್ನಡೆಯಾಗಿದೆ. ಹೀಗಾಗಿ, ಬೇಡಿಕೆ ಮತ್ತು ಪೂರೈಕೆ ನಡುವೆ ಶೇ 90ರಷ್ಟು ವ್ಯತ್ಯಾಸ ಉಂಟಾಗಿದೆ.

ಸದ್ಯ ಈ ಬ್ಯಾಂಕ್‌ನಲ್ಲಿ 2 ಸಾವಿರ ಚದರ ಸೆಂ.ಮೀ. ಚರ್ಮ ಮಾತ್ರ ದಾಸ್ತಾನಿದ್ದು, ಗಾಯದ ಪ್ರಮಾಣ ಆಧರಿಸಿ ಒಬ್ಬರಿಂದ ಇಬ್ಬರಿಗೆ ಮಾತ್ರ ನೀಡಲು ಸಾಧ್ಯವಾಗಲಿದೆ. ಇನ್ನೊಂದೆಡೆ ರಾಜ್ಯದ ವಿವಿಧೆಡೆ ಹೆಚ್ಚುತ್ತಿರುವ ರಸ್ತೆ ಅಪಘಾತ, ಬೆಂಕಿ ಅವಘಡ ಸೇರಿ ವಿವಿಧ ಸಂದರ್ಭದಲ್ಲಿ ಚರ್ಮಕ್ಕೆ ಭಾರಿ ಪ್ರಮಾಣದಲ್ಲಿ ಹಾನಿ ಮಾಡಿಕೊಂಡವರಿಗೆ, ಚರ್ಮ ಕಸಿ ನಡೆಸಲು ಆಸ್ಪತ್ರೆಗಳು ಈ ಬ್ಯಾಂಕ್‌ಗೆ ಚರ್ಮಕ್ಕಾಗಿ ಬೇಡಿಕೆ ಸಲ್ಲಿಸುತ್ತಿವೆ.

ಚರ್ಮ ದಾನ ಕೂಡ ಅಂಗಾಂಗ ದಾನದಂತೆ ಸರಳ ಪ್ರಕ್ರಿಯೆ. ಜನರು ಚರ್ಮದ ದಾನಕ್ಕೆ ಮುಂದಾಗುವ ಮೂಲಕ ಇನ್ನಷ್ಟು ಜೀವಕ್ಕೆ ನೆರವಾಗಬೇಕು

ಡಾ. ಯೋಗೀಶ್ವರಪ್ಪ ಸಿ.ಎನ್., ಸ್ಕಿನ್ ಬ್ಯಾಂಕ್ ಮುಖ್ಯಸ್ಥ

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು (ಬಿಎಂಸಿಆರ್‌ಐ), ರೋಟರಿ ಮತ್ತು ಆಶೀರ್ವಾದ್ ಸಂಸ್ಥೆಯ ಸಹಯೋಗದಲ್ಲಿ 2016ರಲ್ಲಿ ಈ ಸ್ಕಿನ್ ಬ್ಯಾಂಕ್ ಸ್ಥಾಪಿಸಿದೆ. ಬಿಎಂಸಿಆರ್‌ಐ ಅಡಿ ಇರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈ ಬ್ಯಾಂಕ್ ಕಾರ್ಯನಿರ್ವಹಿಸುತ್ತಿದೆ. ಅಂಗಾಂಗ ದಾನದ ಮಾದರಿಯಲ್ಲಿಯೇ ಮೃತರ ಚರ್ಮವನ್ನು ಇಲ್ಲಿ ದಾನವಾಗಿ ಪಡೆದು ದಾಸ್ತಾನು ಮಾಡಲಾಗುತ್ತದೆ.

ಈವರೆಗೆ 280 ಮೃತರಿಂದ ಚರ್ಮವನ್ನು ದಾನವಾಗಿ ಪಡೆದು, 326 ಮಂದಿಗೆ ಅಗತ್ಯಕ್ಕೆ ಅನುಸಾರ ಚರ್ಮವನ್ನು ಉಚಿತವಾಗಿ ಒದಗಿಸಲಾಗಿದೆ.

ಚಿಕಿತ್ಸಾ ಕೇಂದ್ರ: ವಿಕ್ಟೋರಿಯಾ ಆಸ್ಪತ್ರೆ ಮಹಾಬೋಧಿ ಸುಟ್ಟಗಾಯಗಳ ಚಿಕಿತ್ಸಾ ಕೇಂದ್ರದಲ್ಲಿ 50 ಹಾಸಿಗೆಗಳಿವೆ. ಚರ್ಮಕ್ಕೆ ಗಂಭೀರ ಹಾನಿ ಪ್ರಕರಣಗಳಲ್ಲಿ ಇಲ್ಲಿ ಚಿಕಿತ್ಸೆ ಒದಗಿಸಿ, ಅಗತ್ಯವಿದ್ದಲ್ಲಿ ಸ್ಕಿನ್ ಬ್ಯಾಂಕ್‌ನಿಂದ ಚರ್ಮವನ್ನು. ದಾಖಲಾದ ಗಾಯಾಳುಗಳಿಗೆ ಆದ್ಯತೆ ಮೇರೆಗೆ ಒದಗಿಸಲಾಗುತ್ತದೆ.

ರಸ್ತೆ ಅಪಘಾತ ಹಾಗೂ ಬೆಂಕಿ ಅವಘಡಗಳು ಹೆಚ್ಚುತ್ತಿರುವ ಪರಿಣಾಮ, ಚರ್ಮಕ್ಕೆ ತಿಂಗಳಿಗೆ ಸರಾಸರಿ 15 ರಿಂದ 20 ಕಡೆಗಳಿಂದ ಬೇಡಿಕೆ ಬರುತ್ತಿದೆ. 8ರಿಂದ 10 ಮಂದಿಗೆ ಒದಗಿಸಲಷ್ಟೇ ಸಾಧ್ಯವಾಗುತ್ತಿದೆ.

‘18ರಿಂದ 70 ವರ್ಷದೊಳಗಿನವರು ಮೃತಪಟ್ಟ 6ರಿಂದ 8 ಗಂಟೆಯೊಳಗೆ ಅವರ ಚರ್ಮವನ್ನು ಪಡೆದು, ಐದು ಹಂತದಲ್ಲಿ ಸಂಸ್ಕರಿಸುತ್ತೇವೆ. ಬೇಡಿಕೆ ಮತ್ತು ಪೂರೈಕೆ ನಡುವೆ ಹೊಂದಾಣಿಕೆಯಾಗುತ್ತಿಲ್ಲ’ ಎಂದು ಬಿಎಂಸಿಆರ್‌ಐ ಪ್ಲಾಸ್ಟಿಕ್ ಸರ್ಜರಿ ಮತ್ತು ಸುಟ್ಟಗಾಯಗಳ ವಿಭಾಗ ಹಾಗೂ ಸ್ಕಿನ್ ಬ್ಯಾಂಕ್ ಮುಖ್ಯಸ್ಥ ಡಾ. ಯೋಗೀಶ್ವರಪ್ಪ ಸಿ.ಎನ್. ತಿಳಿಸಿದರು.

ಸಹಾಯವಾಣಿ

ಚರ್ಮದಾನದ ಬಗ್ಗೆ ಪ್ರತಿಜ್ಞೆ ಕೈಗೊಳ್ಳುವವರು ಹಾಗೂ ದಾನಕ್ಕೆ ಸಂಬಂಧಿಸಿದಂತೆ ಸಹಾಯವಾಣಿ ಸಂಖ್ಯೆ 080 26703633 ಅಥವಾ 24x7 ಸಹಾಯವಾಣಿ 8277576147ಕ್ಕೆ ಸಂಪರ್ಕಿಸಬಹುದಾಗಿದೆ. ಚರ್ಮದಾನಕ್ಕೆ ಸಂಬಂಧಿಸಿದಂತೆ ದಾನಿಗಳ ಕುಟುಂಬಕ್ಕೆ ಪ್ರಮಾಣಪತ್ರವನ್ನೂ ನೀಡಲಾಗುತ್ತದೆ

ಐದು ವರ್ಷದವರೆಗೂ ಶೇಖರಣೆ

ಸ್ಕಿನ್ ಬ್ಯಾಂಕ್‌ನಲ್ಲಿರುವ ಚರ್ಮದ ದಾಸ್ತಾನನ್ನು ಸಿಬ್ಬಂದಿ ಪರಿಶೀಲಿಸಿದರು
ಪ್ರಜಾವಾಣಿ ಚಿತ್ರ; ರಂಜು ಪಿ.

‘18 ವರ್ಷ ಮೇಲ್ಪಟ್ಟ ಮೃತರ ಕಾಲು ಹಾಗೂ ತೊಡೆಯ ಭಾಗದ ಚರ್ಮದ ಮೇಲ್ಪದರವನ್ನು ದಾನವಾಗಿ ಪಡೆಯಲಾಗುತ್ತದೆ. ಈ ಪ್ರಕ್ರಿಯೆಗೂ ಮೊದಲು ಕುಟುಂಬದ ಸದಸ್ಯರ ಒಪ್ಪಿಗೆ ಪಡೆಯಲಾಗುತ್ತದೆ. ದಾನಿಯು ಎಚ್‌ಐವಿ, ಎಚ್‌ಸಿವಿ, ಚರ್ಮದ ಕ್ಯಾನ್ಸರ್ ಪೀಡಿತರಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಪಡೆದ ಚರ್ಮವನ್ನು ಅಗತ್ಯ ಇರುವವರಿಗೆ ನೀಡಲಾಗುತ್ತದೆ. ವೈದ್ಯಕೀಯ ಉಪಕರಣದ ಸಹಾಯದಿಂದ ರಕ್ತಸ್ರಾವ ಆಗದ ರೀತಿಯಲ್ಲಿ ಚರ್ಮದ ಮೇಲ್ಪದರವನ್ನು ಮಾತ್ರ ತೆಗೆದು, ಬ್ಯಾಂಡೇಜ್ ಮಾಡಲಾಗುತ್ತದೆ. ಸಂಸ್ಕರಿಸಿದ ಚರ್ಮವನ್ನು 5 ವರ್ಷದವರೆಗೂ ಶೇಖರಿಸಬಹುದು’ ಎಂದು ಚರ್ಮ ಬ್ಯಾಂಕಿನ ತಾಂತ್ರಿಕ ಸಿಬ್ಬಂದಿ ಕೆ.ಆರ್. ಲೋಹಿತಾಶ್ವ ವಿವರಿಸಿದರು.

‘ಜನರು ನೇತ್ರದಾನ, ಇತರ ಅಂಗಾಂಗಗಳ ದಾನಕ್ಕೆ ಸಿದ್ಧರಿದ್ದಾರೆ. ಆದರೆ, ಚರ್ಮದಾನ ಮಾಡಿದರೆ ದೇಹ ವಿರೂಪಗೊಳ್ಳುತ್ತದೆ ಎಂಬ ತಪ್ಪು ಕಲ್ಪನೆಯಿಂದ ಹಿಂಜರಿಯುತ್ತಾರೆ. ದಾನಿಗಳಿಂದ ದೇಹದ ಎಲ್ಲ ಚರ್ಮ ಪಡೆಯುವುದಿಲ್ಲ. ತೊಡೆಗಳು ಮತ್ತು ಕಾಲುಗಳಿಂದ (1,000ದಿಂದ 1,500 ಚದರ ಸೆಂ.ಮೀ) ಚರ್ಮದ ಹೊರ ಪದರವನ್ನು ಮಾತ್ರ ಪಡೆಯಲಾಗುತ್ತದೆ’ ಎಂದರು.

ಲಾರಿಗೆ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಹೆಬ್ಬಾಳ ಸಂಚಾರ ಠಾಣೆ ವ್ಯಾಪ್ತಿಯ ಮೇಲ್ಸೇತುವೆ ಮೇಲೆ ಕೆಟ್ಟು ನಿಂತಿದ್ದ ಲಾರಿಗೆ, ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಸವಾರ ಮೃತಪಟ್ಟಿದ್ದಾರೆ.

ವೈಯಾಲಿಕಾವಲ್ ನಿವಾಸಿ ಹರ್ಷ (31) ಮೃತ ಸವಾರ. ಇವರು ವೃತ್ತಿಯಲ್ಲಿ ಕಾರು ಡೀಲರ್ ಆಗಿದ್ದರು. ಹರ್ಷ ಅವರು ದ್ವಿಚಕ್ರ ವಾಹನದಲ್ಲಿ ಶನಿವಾರ ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಕೊಡಿಗೇಹಳ್ಳಿ ಮೇಲ್ಸೇತುವೆ ಮೇಲೆ ಹೋಗುತ್ತಿದ್ದರು. ಕೆಟ್ಟು ನಿಂತಿದ್ದ ಲಾರಿ ಗಮನಕ್ಕೆ ಬಾರದೆ ಡಿಕ್ಕಿ ಹೊಡೆದಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದರು. ಮಾರ್ಗಮಧ್ಯೆ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದರು.

ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಕಬಳಿಸಿದ ಆರೋಪ

ಆರು ಜನರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಮಾಜಿ ಸಂಸದರಾದ ತೇಜಸ್ವಿನಿಗೌಡ ಅವರ ಸಹೋದರ ನಂಜೇಗೌಡ ಅವರ ನಿವೇಶನ ಕಬಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ಆರು ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಬಿ.ಎಲ್. ಶ್ರೀರಮೇಶ್ ಅವರ ದೂರಿನ ಮೇರೆಗೆ ಆರ್.ಎಂ.ವಿ. ಎರಡನೇ ಹಂತ ನಾಗಶೆಟ್ಟಿಹಳ್ಳಿಯ ನಿವಾಸಿ ಎಂ.ನಾರಾಯಣಸ್ವಾಮಿ, ಎಂ. ಮುನಿರಾಜು, ಎಂ.ಮುನಿಸ್ವಾಮಿ, ಎಂ.ಮಮತಾ, ಎಸ್. ಸಂತೋಷ್ ಹಾಗೂ ಶ್ರೀಕಾಂತ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಆರೋಪಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಆರ್.ಎಂ.ವಿ ಎರಡನೇ ಹಂತ, ನಾಗಶೆಟ್ಟಿಹಳ್ಳಿಯ ಬಸವೇಶ್ವರ ಬಡಾವಣೆಯಲ್ಲಿ ಎ ಖಾತೆ ಹೊಂದಿರುವ ನಿವೇಶನವನ್ನು 2014ರಂದು ಪತ್ನಿ ತೇಜಸ್ವಿನಿಗೌಡ ಅವರಿಗೆ ದಾನವಾಗಿ ನೀಡಿದೆ. ನಂತರ ನನ್ನ ಪತ್ನಿ, ಅವರ ಸಹೋದರ ಎಂ.ನಂಜೇಗೌಡ ಅವರಿಗೆ ದಾನ ಪತ್ರದ ಮೂಲಕ ವರ್ಗಾಯಿಸಿದ್ದರು. ಅಂದಿನಿಂದ ಇಂದಿನವರೆಗೂ ನಿವೇಶನ ನನ್ನ ಕುಟುಂಬದವರ ಸ್ವಾಧೀನಾನುಭವದಲ್ಲಿದ್ದು, ಸಂಬಂಧಪಟ್ಟ ಪಾಲಿಕೆಗೆ ಕಂದಾಯ ಪಾವತಿ ಮಾಡಿಕೊಂಡು ಬಂದಿದ್ದೇವೆ’ ಎಂದು ರಮೇಶ್ ದೂರಿನಲ್ಲಿ ತಿಳಿಸಿದ್ದಾರೆ.

‘ಈ ನಿವೇಶನವನ್ನು ಕಬಳಿಸುವ ಉದ್ದೇಶದಿಂದ ನಾಗಶೆಟ್ಟಿಹಳ್ಳಿಯ ನಾರಾಯಣಸ್ವಾಮಿ, ಮುನಿರಾಜು, ಮುನಿಸ್ವಾಮಿ, ಮಮತಾ, ಸಂತೋಷ್, ಶ್ರೀಕಾಂತ್ ಅವರು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಗಂಗಾನಗರ ಉಪನೋಂದಣಾಧಿಕಾರಿ ಅವರು ಕಂದಾಯ ದಾಖಲೆ, ಆಧಾರ್ ಕಾರ್ಡ್, ವಂಶವೃಕ್ಷ ಮತ್ತು ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು, ವಿಭಾಗ ಪತ್ರವನ್ನು ಪಡೆಯದೆ ಸ್ವತ್ತನ್ನು 2025ರ ಜುಲೈ 9ರಂದು ನೋಂದಣಿ ಮಾಡಿಕೊಟ್ಟಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಚೇರಿ ಬೀಗ ಮುರಿದು ₹10 ಲಕ್ಷ ಕಳವು

ರಿಯಲ್ ಎಸ್ಟೇಟ್ ಕಚೇರಿಯ ಬೀಗ ಮುರಿದು ₹10 ಲಕ್ಷ ನಗದು ಕಳ್ಳತನ ಮಾಡಿದ್ದ ಆರೋಪಿ ಅಶೋಕ್ ಅವರನ್ನು ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಲಹಂಕ ಉಪನಗರದಲ್ಲಿ ರಾಮಚಂದ್ರಾಚಾರಿ ಎಂಬುವರು ಶ್ರೀ ಲಕ್ಷ್ಮೀ ವೆಂಕಟೇಶ್ವರ ರಿಯಲ್ ಎಸ್ಟೇಟ್ ಕಚೇರಿ ಹೊಂದಿದ್ದರು. ಜನವರಿ 3ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಕಚೇರಿಯ ರೋಲಿಂಗ್ ಶೆಟರ್ ಎಳೆದು ಬೀಗ ಹಾಕಿಕೊಂಡು ಹೋಗಿದ್ದರು. ಸಂಜೆ 4 ಗಂಟೆಗೆ ವಾಪಸ್ ಕಚೇರಿಗೆ ಬಂದು ಟೇಬಲ್‌ನ ಡ್ರಾಯರ್ ನೋಡಿದಾಗ ₹10 ಲಕ್ಷ ನಗದು ಕಳ್ಳತನ ಆಗಿರುವುದು ಗೊತ್ತಾಯಿತು. ಈ ಹಣವನ್ನು ಜಮೀನು ಖರೀದಿಗಾಗಿ ಮುಂಗಡ ನೀಡಲು ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಸಿ.ಸಿ.ಟಿ.ವಿ ಕ್ಯಾಮೆರಾ ಮತ್ತು ಬಾತ್ಮಿದಾರರ ಮಾಹಿತಿ ಆಧರಿಸಿ ಆರೋಪಿ ಬಂಧಿಸಿದರು.

‘ರಾಮಚಂದ್ರಾಚಾರಿ ಅವರ ಕಚೇರಿ ಬಳಿ ನಿತ್ಯ ಗೋಬಿ ತಿನ್ನಲು ಬರುತ್ತಿದ್ದ ಆರೋಪಿ, ಕಚೇರಿಯ ಬೀಗದ ಕೀ ಇಡುತ್ತಿದ್ದನ್ನು ಗಮನಿಸಿ ಕೃತ್ಯ ಎಸಗಿದ್ದಾನೆ. ಕದ್ದ ಹತ್ತು ಲಕ್ಷ ರೂಪಾಯಿ ಅನ್ನು ತನ್ನ ಅಣ್ಣನ ಆಸ್ಪತ್ರೆಗೆ ಬಳಸಿಕೊಂಡಿರುವುದಾಗಿ ಆರೋಪಿ ತಿಳಿಸಿದ್ದು, ಈತ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ತಪ್ಪಿಸಿಕೊಂಡಿದ್ದ ಮಗು ಪೋಷಕರ ಮಡಿಲಿಗೆ

ಬೆಂಗಳೂರು: ಒಂಟಿಯಾಗಿ ಓಡಾಡುತ್ತಿದ್ದ ಎರಡು ವರ್ಷದ ಮಗುವನ್ನು ಹೊಯ್ಸಳ ಪೊಲೀಸರು ರಕ್ಷಿಸಿ, ಸುರಕ್ಷಿತವಾಗಿ ಪೋಷಕರಿಗೆ ಒಪ್ಪಿಸಿದ್ದಾರೆ.

ಜನವರಿ 14ರಂದು ಬೆಳಿಗ್ಗೆ 10.50ರ ಸುಮಾರಿಗೆ ಗಿರಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ಅತ್ತಿಗುಪ್ಪೆ ಹೊಸಕೆರೆಹಳ್ಳಿ ಮೇಲ್ಸೇತುವೆ ಸಮೀಪದ ರಸ್ತೆಯಲ್ಲಿ ಎರಡು ವರ್ಷದ ಮಗು ಒಂಟಿಯಾಗಿ ಹೋಗುತ್ತಿತ್ತು. ಮಗುವನ್ನು ಗಮನಿಸಿದ ಸಾರ್ವಜನಿಕರೊಬ್ಬರು ತಕ್ಷಣ ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ಕಾರ್ಯಪ್ರವೃತ್ತರಾದ ಸಹಾಯವಾಣಿ ಸಿಬ್ಬಂದಿ, ಗಿರಿನಗರ ಪೊಲೀಸ್ ಠಾಣೆಯ ಹೊಯ್ಸಳ ಕರ್ತವ್ಯದಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಮಾರುತಿ ಹಾಗೂ ತಂಡದವರಿಗೆ ಮಾಹಿತಿ ರವಾನಿಸಿದರು. ನಾಲ್ಕು ನಿಮಿಷದೊಳಗೆ ಸ್ಥಳಕ್ಕೆ ಹೋಗಿ ಮಗುವನ್ನು ರಕ್ಷಿಸಿದರು. ನಂತರ ಮಗುವಿನ ಪೋಷಕರನ್ನು ಪತ್ತೆ ಮಾಡಿ ಸುರಕ್ಷಿತವಾಗಿ ಒಪ್ಪಿಸಿದರು.

ಶಂಕಿತ ಬಾಂಗ್ಲಾ ವಲಸಿಗರ ಮನೆಗಳ ಮೇಲೆ ದಾಳಿ

ಪುನೀತ್ ಕೆರೆಹಳ್ಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಆನೇಕಲ್: ಶಂಕಿತ ಬಾಂಗ್ಲಾ ಅಕ್ರಮ ವಲಸಿಗರ ಮೇಲೆ ದಾಳಿ ನಡೆಸಿದ ಆರೋಪದಡಿ ಬಂಧಿಸಲಾಗಿದ್ದ ಹಿಂದುತ್ವ ಪರ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಹಾಗೂ ಡಾ.ನಾಗೇಂದ್ರಪ್ಪ ಅವರಿಗೆ ಆನೇಕಲ್ ನ್ಯಾಯಾಲಯ ಶನಿವಾರ ಷರತ್ತುಬದ್ಧ ಜಾಮೀನು ನೀಡಿದೆ.

ಶಂಕಿತ ಬಾಂಗ್ಲಾ ವಲಸಿಗರಿಗೆ ಮನೆ ಬಾಡಿಗೆ ನೀಡಿದ್ದ ದೊಡ್ಡತೋಗೂರು ನಿವಾಸಿ ಸಿದ್ದೇಶ್ ಅವರನ್ನು ನಿಂದಿಸಿ, ಬೆದರಿಕೆಯೊಡ್ಡಿದ ಆರೋಪದ ಮೇಲೆ ಬನ್ನೇರುಘಟ್ಟ ಪೊಲೀಸರು ಈ ಇಬ್ಬರನ್ನೂ ಬಂಧಿಸಿದ್ದರು.

ಇಬ್ಬರ ವಿರುದ್ಧ ಸಿದ್ದೇಶ್ ಶುಕ್ರವಾರ ಬನ್ನೇರುಘಟ್ಟ ಠಾಣೆಯಲ್ಲಿ ದೂರು ನೀಡಿದ್ದರು. ಪೊಲೀಸರು ಇಬ್ಬರನ್ನೂ ಬಂಧಿಸಿ ಶನಿವಾರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು.

₹10 ಸಾವಿರ ಜಾಮೀನು ಹಾಗೂ ವೈಯಕ್ತಿಕ ಬಾಂಡ್ ಮೇಲೆ ನ್ಯಾಯಾಲಯ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ. ಈ ಇಬ್ಬರ ಪರ ವಕೀಲ ವೈ.ಪ್ರಕಾಶ್ ವಾದ ಮಂಡಿಸಿದ್ದರು.

ಜಾಮೀನು ದೊರೆಯುತ್ತಿದ್ದಂತೆಯೇ ನ್ಯಾಯಾಲಯದ ಮುಂಭಾಗದಲ್ಲಿ ಜಮಾಯಿಸಿದ್ದ ಹಿಂದೂತ್ವ ಪರ ಕಾರ್ಯಕರ್ತರು ಈ ಇಬ್ಬರನ್ನೂ ಹಾರ ಹಾಕಿ ಬರಮಾಡಿಕೊಂಡು, ಪಟಾಕಿ ಸಿಡಿಸಿದರು.

‘ಅಕ್ರಮ ವಲಸಿಗರ ಪರ ಸರ್ಕಾರ’

ನೋಟಿಸ್ ನೀಡದೆ ಬಂಧಿಸಲಾಗಿದೆ. ಠಾಣೆಯಲ್ಲಿ ಜಾಮೀನು ಪಡೆಯಬಹುದಾದ ಸೆಕ್ಷನ್‌ಗಳಿದ್ದೂ ಏಕಾಏಕಿ ಬಂಧಿಸಲಾಗಿದೆ. ನ್ಯಾಯಾಂಗ ವ್ಯವಸ್ಥೆ ಸತ್ಯದ ಪರ ನಿಂತಿದೆ. ಬಾಂಗ್ಲಾ ವಲಸಿಗರ ವಿರುದ್ಧ ಹೋರಾಟ ಆರಂಭಿಸಲಾಗಿದೆ. ಹೋರಾಟ ನಿಲ್ಲಲ್ಲ. ನಿರಂತರವಾಗಿ ನಡೆಯಲಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಬಾಂಗ್ಲಾ ವಲಸಿಗರ ಪರವಾಗಿದೆ ಎಂದು ಪುನೀತ್ ಕೆರಹಳ್ಳಿ ಅವರು ಆರೋಪಿಸಿದರು.

ಟಿಪ್ಪರ್–ಬೈಕ್ ಡಿಕ್ಕಿ: ಮೂವರು ಯುವಕರು ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ದೇವನಹಳ್ಳಿ: ತಾಲ್ಲೂಕಿನ ಅಗಲಕೋಟೆ ಬಳಿ ರಾಜ್ಯ ಹೆದ್ದಾರಿಯಲ್ಲಿ ಶನಿವಾರ ಸಂಭವಿಸಿದ ಅಪಘಾತದಲ್ಲಿ ಬೈಕ್‌ನಲ್ಲಿದ್ದ ಮೂವರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹೆದ್ದಾರಿಯಲ್ಲಿ ಹೊರಟಿದ್ದ ಟಿಪ್ಪರ್ ಹಾಗೂ ದೇವನಹಳ್ಳಿಯಿಂದ ಬೂದಿಗೆರೆ ಕಡೆಗೆ ಹೊರಟಿದ್ದ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಚಿಕ್ಕಜಾಲದ ವಿದ್ಯಾರ್ಥಿ ತೌಸೀಫ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಬೈಕ್‌ನಲ್ಲಿದ್ದ ಉಳಿದ ಇಬ್ಬರು ಯುವಕರ ಗುರುತು ಪತ್ತೆಯಾಗಿಲ್ಲ.

ಅಪಘಾತದ ಬಳಿಕ ಚಾಲಕ ಟಿಪ್ಪರ್ ಸಮೇತ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ಮಾಹಿತಿ ಪಡೆದ ಕೂಡಲೇ ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಾರಿಯಾದ ಚಾಲಕನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟಿಕೆಟ್ ರಹಿತ ಪ್ರಯಾಣ: 4,353 ಜನರಿಗೆ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಡಿಸೆಂಬರ್‌ನಲ್ಲಿ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 4,353 ಪ್ರಯಾಣಿಕರಿಂದ ₹8.08 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು 43,553 ಬಸ್‌ಗಳನ್ನು ತಪಾಸಣೆ ನಡೆಸಿದ್ದರು. ನಿಗಮದ ಆದಾಯದಲ್ಲಿ ₹1.14 ಲಕ್ಷ ಸೋರಿಕೆ ಪತ್ತೆ ಹಚ್ಚಿದ್ದರು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ. ಪ್ರಯಾಣಿಕರು ಟಿಕೆಟ್ ಪಡೆದು ಪ್ರಯಾಣಿಸಬೇಕು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ತಿಳಿಸಿದ್ದಾರೆ.

ಆನೇಕಲ್ ಯೋಜನಾ ಪ್ರಾಧಿಕಾರ
“ಅಣ್ಣ” ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560099.
ದೂರವಾಣಿ: 080–27835122 ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in
ಸಂಖ್ಯೆ: ಆಯೋಪ್ರಾ/ಭೂ.ಬ/92/2025–26 ದಿನಾಂಕ: 14–01–2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀಮತಿ ಸಿ. ಅರುಣ ಕೇಶವ ರೆಡ್ಡಿ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ: ಭವಿಷಾ ಪ್ರಾಪರ್ಟೀಸ್ ಪರವಾಗಿ ಪ್ರೊಪ್ರೈಟರ್ ಶ್ರೀ ಪ್ರಸಾದ್ ನಾಯ್ಡು	ಆನೇಕಲ್	ಸರ್ಜಾಪುರ	ವಳಗೆರೆ ಕಲ್ಲಹಳ್ಳಿ	136/39	1-00	ಕೈಗಾರಿಕೆ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ತುಂಬಾ ಅನುಕೂಲವಾಗುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ವಸತಿ ರಹಿತ ಸಾರ್ವಜನಿಕರಿಗೆ ಕಾನೂನುಬದ್ಧ ನಿವೇಶನ ಒದಗಿಸುತ್ತೇವೆ. ನಾಗರೀಕ ಸೌಲಭ್ಯಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **“ಕೈಗಾರಿಕಾ”** ವಲಯದಿಂದ **“ವಸತಿ”** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.
ವಾಸಾಸಂಇ/ವಾ.ಪ್ರ/5087/ಅಡ್ವರ್ಟೋರ್/2025–26

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

MATRIMONIAL

Brides Wanted

Tamil

BRIDE WANTED
Vadakalai Iyengar - Bharadwaja - Swathi - Thula; Sep' 1995 – Normal Complexion - 172 cm; PG in AI&ML from BITS & BE (ECE) – Working as Lead Data Analyst in MNC, Bangalore; Seeking a Bride who is working in Bangalore or willing to relocate.
+91-94814-06236
+91-97316-33361
krishrang1962@gmail.com

PERSONAL

Change of Name

I, SIDDAMMA resident of No.82, GF-01, Sudarshan Apartment, 2nd Cross, 3rd Main, Amar Jyothi Layout, Cholanagar, R.T.Nagar Post, Bengaluru-560032 have changed my name to SIDDAMMA HULLUR vide affidavit dated 17/01/2026 sworn before notary K.G.Rajpal, Registration No.348 Bengaluru

Lost

DOCUMENT LOST
I, **Basheer Ahamed,** Residing at No. 173, Shikaripalya, Jigani, Bangalore-560105, have lost the **Original Site Registration, Document / Identification No.: BK 1 BNG BMH 3759/2014-15, Site No. 291 Katha No. 154/1, Subhash Nagar, Begur Hobli, Bangalore South.** while in transit. If found please **Contact No: 9036772871.**

BUSINESS

Business Offers

Finance

WE ARRANGE Loan against Commerical/ Residential Building/School Building/ Hospital Building Convention Hall/ Bar & Restaurant Property and Business loan from Schedule Banks. Call Mrs Jyothi 8971132289, 9380509779

MORE **Classifieds** IN SUPPLEMENT

JOB OPPORTUNITIES

Multiple Vacancy

A LEADING Integrated Service Provider with more than Two Decade of market presence is looking for following personnels: (1) FACILITY MANAGER: A well Experience Candidate is Required to work in an Establishment Located at Kasturba Road, Bangalore. (2) BUSINESS DEVELOPMENT EXECUTIVES: A well Experienced Candidate in Facility Management Services to work in corporate office at BTM Layout. (3) BUSINESS DEVELOPMENT EXECUTIVES: A well Experience Candidate in Physical Security Industries to work in corporate office at BTM Layout. (4) FIELD OFFICERS: A well Experience Candidate in Physical Security Industries to work in Bangalore South, East & West Regions Candidates should have valid Driving Licenses with two-wheeler. ESI, PF & Conveyance apart from decent take home salary. Contact or forward your CV to: 9740033923 8147002652 9900596738 or info@networkda.com

Accounts & Finance

Teju READY MIX MASALA
REQUIRED ACCOUNTANT Experiences
Bangalore
Contact: **J.S. Masala Company**
#61/7, etechannappa Industrial Estate, Magadi Main Road, Kamakshipalya, Bangalore - 79.
E- mail : tejumasala@yahoo.com
70226 09502

Teachers/ Professors

|| Jai Gurudev ||
Sri Sri Academy
Bengaluru North, Yelahanka
Broaden the Vision ... Deepen the Roots
WE ARE GROWING!!!
Qualified Candidates with Experience Required
FRONT OFFICE EXECUTIVE
ACCOUNTANT
SPECIAL EDUCATOR
PRE - PRIMARY (NTT & MTT Trained teacher)
PRT (All Subjects, B.Ed mandatory)
TGT (All Subjects, B.Ed mandatory)
LIBRARIAN
ART & CRAFT TEACHER
OFFICE EXECUTIVE & ASSISTANT
ADMISSION COUNSELLOR
DANCE & MUSIC TEACHER
SANSKRIT TEACHER
SECURITY, GARDNER
Interested candidates can walk in on any day (Mon - Sat)
Time : 9 am to 1 pm, or send your CV at Email: bangalore.ssabn@ssrvm.org
Note :
For All posts- Experience of 2- 3 years in reputed school is desirable
Mastery of English & basic computer Knowledge is compulsory for all teaching position
kindly carry a hard copy of your resume
47/5, Honnenahalli, Yelahanka Hobli, Singanayakanahalli, Bengaluru - 560 064
Call us at : Mob No : 74831 36256

SRI AYYAPPAN NURSERY PRIMARY AND HIGH SCHOOL, BENSON TOWN, BANGALORE-46 MOBILE 9986155417 9113062970 WE ARE HIRING GRADUATES WITH B.ED, PUC WITH NTT/MONTESSORI GRADUATE CLERK, sriayyappaninstitutions@gmail.com

Swamy Vivekananda Rural Education Society®1963
Chandapura, Anekal Taluk,Bengaluru-560099
www.svres.org | email: hrsvres1963@gmail.com
Mob : 9606009890/ 91/ 92/ 94/ 95/ 96
INVITES APPLICATIONS FOR RECRUITMENT TO THE FOLLOWING POSTS
SV SCHOOL (ICSE)
PRINCIPAL:- M.A/M.Sc, B.Ed, with atleast five years of teaching experience
ASSISTANT TEACHERS:- 1) English:- M.A/B.A, B.Ed
SVR ENGLISH MEDIUM SCHOOL
ASSISTANT TEACHERS:
1) English/ Kannada :- M.A/ B.A, B.Ed
2) Mathematics & Science :- M.Sc/B.Sc, B.Ed
3) Computer Science :- MCA/M.Sc/BE in Computer Science
4) Montessori :- MTT
5) Physical Education :- M.PEd /B.PEd
6) Librarian :- M.Lib/B.Lib
SVR KANNADA MEDIUM SCHOOL(UN-AIDED POSTS)
1) Mathematics :- M.Sc/B.Sc, B.Ed
2) Social Science :- M.A/B.A, B.Ed(Candidates must be in a position to teach the subject in Kannada only)
SVR PRE-UNIVERSITY COLLEGE
LECTURER
1) Commerce: M.Com, B.Ed,
2) Hindi: M.A in Hindi, B.Ed
3) Statistics: M.Sc in Statistics, B.Ed
SVR FIRST GRADE COLLEGE
LECTURER
1) Commerce :- M.Com
2) Computer Science :- MCA/M.Sc/M.Tech in Computer Science
3) Kannada/English/Hindi/Tamil:- M.A
4) Mathematics/ Chemistry/ Physics:- M.Sc
Note: NET / SLET/ Ph.D qualified candidates will be preferred
NON-TEACHING POSTS
1) Front Office :- Any degree with good communication
2) Lab Attender :- PUC, 3) House Keeping :- Minimum 7th Std
4) Supervisor :- Any Degree, 5) Driver :- Having HMV (Heavy Motor Vehicle License) & experience of running school buses
6) Cleaners :- Minimum 7th Std, 7) Security :- Minimum 10th Std
NOTE : Applicants should mention the post and school applied for. Interested and eligible candidates with relevant experience are requested to send Bio Data addressed to the Secretary, SVRES with copies of relevant documents through mail or whatsapp to reach us on or before 24/01/2026. Attractive salary offered
Sd/- Secretary

Sacred Heart Girls' High School
Museum Road, Bangalore-560025
Ph: 080-41278742, Mob: 8970711094
Teachers Wanted for ICSE & ISC
Post Graduate, Graduate, Trained and experienced TEACHERS for the following Subjects.
English, Chemistry, History & Civics, Computer Science, Robotics & A.I., Librarian.
Send your resumes to the e-mail ID: office@shghs.edu.in on or before 27-01-2026
ROUNAQH

Wanted

BE(CIVIL) GRADUATE 5 YEARS Experience Ready Mix Concrete QA/QC/MARKETING Athani Associates Shivamogga 9886721202

Cook

REQUIREMENT: VEGETARIAN CookMinimum 3 years' experience requiredGood knowledge of home-style Indian cookingResponsible for daily meals & kitchen cleanlinessLocation: BasavanagudiSalary: NegotiableContact: 8904298011

General

WANTED COMPUTER Typists Kannada/ English Ladies Only. Contact :Sapthagiri Typing Center Kumar park. Phone :9036360366

ಮ್ಯಾಪಿಂಗ್: 3 ವಾರ ವಿಸ್ತರಣೆ

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪೂರ್ವಭಾವಿ ತಯಾರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪೂರ್ವಭಾವಿ ತಯಾರಿ ಮುಂದುವರೆದಿದ್ದು, 2002ರ ಮತದಾರರ ಪಟ್ಟಿಯನ್ನು 2025ರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡುವ ಚಟುವಟಿಕೆಯನ್ನು ಜ.13ರಿಂದ ಮೂರು ವಾರಗಳಿಗೆ ವಿಸ್ತರಣೆ ಮಾಡಲಾಗಿದೆ.

ಮತದಾರರ ಪಟ್ಟಿಯೊಂದಿಗೆ ತಾಳೆ ಆಗದೇ ಇರುವ ಮತದಾರರ ಮನೆಗಳಿಗೆ ಬೂತ್ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಮಾಹಿತಿ ಪಡೆದು ಮ್ಯಾಪಿಂಗ್ ಪೂರ್ಣಗೊಳಿಸಲಿದ್ದಾರೆ ಎಂದು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ.

ಮತದಾರರ ಪಟ್ಟಿಯಲ್ಲಿ ಮತದಾರರ ಭಾವಚಿತ್ರ ಮಸುಕು ಆಗಿರುವ, ಅತೀ ಸಣ್ಣ ಫೋಟೊ ಅಥವಾ ಭಾವಚಿತ್ರ ಸರಿಯಾಗಿ ಕಾಣದಿರುವುದು, ಮತದಾರರ ಹೆಸರು, ಲಿಂಗ ಹಾಗೂ ವಿಳಾಸದಲ್ಲಿ ಆಗಿರುವ ಲೋಪದೋಷ ಪತ್ತೆ ಹಚ್ಚಿ ಬಿಎಲ್‌ಎ, ಆ್ಯಪ್ ಮುಖಾಂತರ ಅಥವಾ ಮತದಾರರಿಂದ ನಮೂನೆ-8ರಲ್ಲಿ ಅರ್ಜಿ ಪಡೆಯುವ ಪ್ರಕ್ರಿಯೆ ಮುಂದುವರಿಸಿದ್ದಾರೆ ಎಂದು ಹೇಳಿದ್ದಾರೆ.

ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮನೆಗಳಿಗೆ ಬಿಎಲ್‌ಒಗಳು ಭೇಟಿ ನೀಡಿದ ಸಂದರ್ಭದಲ್ಲಿ ಅಗತ್ಯ ಮಾಹಿತಿ ಒದಗಿಸಿ ಪರಿಷ್ಕರಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಮತದಾರರ ಪಟ್ಟಿಯಲ್ಲಿರುವಂತಹ ದೋಷಗಳನ್ನು ಸರಿಪಡಿಸಿಕೊಳ್ಳಲು ಮತದಾರರು ಭಾರತ ಚುನಾವಣಾ ಆಯೋಗದ ಪೋರ್ಟಲ್ https://voters.eci.gov.in/ ಇದರಲ್ಲಿ ನಮೂನೆ-8ನ್ನು ಸಲ್ಲಿಸಿ ಸರಿಪಡಿಸಿಕೊಳ್ಳಬಹುದಾಗಿದೆ ಎಂದಿದ್ದಾರೆ.

ಮತಪಟ್ಟಿ: ಅಪೀಲು ಅಧಿಕಾರಿ ನೇಮಕ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಆಯಾ ನಗರ ಪಾಲಿಕೆಗಳ ಆಯುಕ್ತರನ್ನು ಅಪೀಲು ಅಧಿಕಾರಿಯನ್ನಾಗಿ ನೇಮಿಸಿ ರಾಜ್ಯ ಚುನಾವಣಾ ಆಯೋಗ ಅಧಿಸೂಚಿಸಿದೆ.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕಂದಾಯ ಅಧಿಕಾರಿಗಳನ್ನು ಮತದಾರರ ನೋಂದಣಿ ಅಧಿಕಾರಿ ಹಾಗೂ ಸಹಾಯಕ ಕಂದಾಯ ಅಧಿಕಾರಿಗಳನ್ನು ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಮತದಾರರ ನೋಂದಣಿ ಅಧಿಕಾರಿ ತೆಗೆದುಕೊಳ್ಳುವ ತೀರ್ಮಾನದಿಂದ ಬಾಧಿತರಾದ ಮತದಾರರು ಅಪೀಲು ಸಲ್ಲಿಸಬಹುದಾಗಿದೆ.

ವಾರ್ಡ್‌ವಾರು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಕ್ಲೇಮು ಮತ್ತು ಆಕ್ಷೇಪಗಳನ್ನು ನಿರ್ಧರಿಸಲು ಅಪೀಲು ಅಧಿಕಾರಿಗಳನ್ನು ಗೊತ್ತುಪಡಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಬಂಡುಕೋರರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ವಿವಿಧ ಸಂಘಟನೆಗಳಿಗೆ ಸೇರಿದ ನಾಲ್ವರು ಬಂಡುಕೋರರನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ, ಕಾಂಗ್‌ಪೋಕ್ಪಿ ಮತ್ತು ಚುರಾಚಾಂದ್‌ಪುರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಸುಮಾರು 65 ಎಕರೆಯಲ್ಲಿ ಅಕ್ರಮವಾಗಿ ಬೆಳೆದಿದ್ದ ಗಸಗಸೆಯನ್ನು ನಾಶಪಡಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯ ತೇರಾ ಲೌಕ್ರಕ್ಪಮ್ ಪ್ರದೇಶದಲ್ಲಿ ನಿಷೇಧಿತ ಪೀಪಲ್ಸ್ ಲಿಬರೇಶನ್ ಆರ್ಮಿಯ ಕಾರ್ಯಕರ್ತೆಯನ್ನು ಶುಕ್ರವಾರ ಬಂಧಿಸಲಾಗಿದ್ದು, ಅವರಿಂದ ₹1 ಲಕ್ಷ 'ಸುಲಿಗೆ ಹಣ'ವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

16.23 ಎಕರೆ ಒತ್ತುವರಿ ತೆರವು

₹80.90 ಕೋಟಿ ಅಂದಾಜು ಮೌಲ್ಯದ ಭೂಮಿ ವಶಕ್ಕೆ

ಮುಖ್ಯಾಂಶ

- ಕೆರೆ, ಗೋಮಾಳ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ₹80.90 ಕೋಟಿ ಅಂದಾಜು ಮೌಲ್ಯದ 16.23 ಎಕರೆ ಸರ್ಕಾರಿ ಜಮೀನನ್ನು ಶನಿವಾರ ತೆರವುಗೊಳಿಸಿ, ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ. ವಿವಿಧ ತಾಲ್ಲೂಕುಗಳ ತಹಶೀಲ್ದಾರ್ ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಸ್ಮಶಾನ, ಗುಂಡುತೋಪು, ಚರಂಡಿ, ರಾಜಕಾಲುವೆ, ಸರ್ಕಾರಿ ಕೆರೆ, ಗೋಮಾಳ ಮತ್ತು ಹಿಡುವಳಿ ಜಾಗಗಳ ತೆರವು ಕಾರ್ಯಾಚರಣೆ ಕೈಗೊಂಡರು.

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೊಪ್ಪ ಗ್ರಾಮದಲ್ಲಿ 7.21 ಎಕರೆ ಗೋಮಾಳ, ಕಸಬಾ ಹೋಬಳಿಯ ಮರಸೂರು ಗ್ರಾಮದಲ್ಲಿ 1.02 ಗುಂಟೆ ಚರಂಡಿ ಜಾಗ, ಅತ್ತಿಬೆಲೆ ಹೋಬಳಿಯ ಇಂಡಬೆಲೆ ಗ್ರಾಮದಲ್ಲಿ 30 ಗುಂಟೆ ರಾಜಕಾಲುವೆ, ಯಡವನಹಳ್ಳಿ ಗ್ರಾಮದಲ್ಲಿ 0.06 ಗುಂಟೆ ಸರ್ಕಾರಿ ಜಾಗದಲ್ಲಿನ ಒತ್ತುವರಿ ತೆರವುಗೊಳಿಸಲಾಗಿದೆ.

ಸರ್ಜಾಪುರ ಹೋಬಳಿ ದೊಮ್ಮಸಂದ್ರ ತಿಗಳಚೌಡೇನಹಳ್ಳಿಯಲ್ಲಿ 10 ಗುಂಟೆ ರಾಜಕಾಲುವೆ, ಅಡಿಗಾರಕಲ್ಲಹಳ್ಳಿಯಲ್ಲಿ 20 ಗುಂಟೆ ಕೆರೆ, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಬೆಟ್ಟಹಳ್ಳಿ ಗ್ರಾಮದಲ್ಲಿ 5.10 ಎಕರೆ ಸರ್ಕಾರಿ ಗೋಮಾಳದ ಒತ್ತುವರಿಯನ್ನು ತೆರವು ಮಾಡಲಾಗಿದೆ.

ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ರಾಂಪುರದಲ್ಲಿ 10 ಗುಂಟೆ ಸ್ಮಶಾನ, ಬಿದರಹಳ್ಳಿ ಹೋಬಳಿ ಹಿರಂಡಹಳ್ಳಿಯಲ್ಲಿ 0.05 ಗುಂಟೆ ಗುಂಡುತೋಪು, ದಕ್ಷಿಣ ತಾಲ್ಲೂಕಿನ ದೊಡ್ಡಮಾರನಹಳ್ಳಿಯಲ್ಲಿ 14 ಗುಂಟೆ ಗೋಮಾಳ, ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿ ಬಿಳಿಜಾಜಿಯಲ್ಲಿ 15 ಗುಂಟೆ ಹಿಡುವಳಿ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಪಕ್ಷ ಸಂಘಟನೆಗೆ ಮನೆಮನೆಗೆ ಭೇಟಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ನಗರ ಪಾಲಿಕೆ ಚುನಾವಣೆಯಲ್ಲೂ ಪಕ್ಷ ಬಲವರ್ಧನೆಗೆ ಹೆಚ್ಚು ಕಾರ್ಯ ಪ್ರವೃತ್ತರಾಗಬೇಕು' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಎಸ್. ಮುನಿರಾಜು ಅವರೊಂದಿಗೆ ಬಿಜೆಪಿ ಕಾರ್ಯಕರ್ತರ ಮನೆಮನೆಗೆ ಭೇಟಿ ನೀಡಿ ಮಾತನಾಡಿದರು.

'ಲೋಕಸಭೆ ಚುನಾವಣೆಯಲ್ಲಿ ನನಗೆ ಹೆಚ್ಚು ಮತ ಕೊಟ್ಟಿದ್ದೀರಿ. ಹಾಗೆಯೇ ನಗರ ಪಾಲಿಕೆ ಚುನಾವಣೆಯಲ್ಲೂ ಎಲ್ಲರೂ ಕೆಲಸ ನಿರ್ವಹಿಸಿ ಹೆಚ್ಚು ಮತಗಳನ್ನು ನೀಡಿ ಪಕ್ಷ ಗೆಲ್ಲುವಂತೆ ಮಾಡಬೇಕು' ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ, 'ನಮ್ಮ ಕ್ಷೇತ್ರದಲ್ಲಿ ಈ ಹಿಂದೆ 8 ವಾರ್ಡ್‌ಗಳಲ್ಲಿ ಐದು ವಾರ್ಡ್‌ನಲ್ಲಿ ಬಿಜೆಪಿ ಗೆದ್ದಿತ್ತು. ಈಗ ಪ್ರತಿ ವಾರ್ಡ್‌ನಲ್ಲೂ ಬಿಜೆಪಿ ಗೆಲುವಿಗೆ ಎಲ್ಲರೂ ಶ್ರಮಿಸಬೇಕು' ಎಂದು ಮನವಿ ಮಾಡಿದರು. ಬಿಜೆಪಿ ಕಾರ್ಯಕರ್ತರಾದ ಚಿಕ್ಕಬಾಣಾವರದ ಶಾಂತಿನಗರ ಸುರೇಶ್ ಖಾಡೆ, ಸೌಂದರ್ಯ ಬಡಾವಣೆಯ ಶಂಕರಪ್ಪ ಎಬಿಬಿ, ಸಿಡೇದಹಳ್ಳಿಯ ಪಿ.ಎಚ್.ರಾಜು, ಎಂಇಐ ಬಡಾವಣೆಯ ನಾಯ್ಡು, ಬಾಗಲಗುಂಟೆ ಮಾರಮ್ಮ ದೇವಸ್ಥಾನ ಹತ್ತಿರದ ಮಹೇಶ್, ಹಾವನೂರು ಬಡಾವಣೆಯ ಹನುಮಂತರಾಯಪ್ಪ, ಭುವನೇಶ್ವರಿನಗರದ ವೆಂಕಟೇಶಯ್ಯ, ಮಲ್ಲಸಂದ್ರದ ಗಂಗರಾಜು, ಬಿಎಚ್‌ಇಎಲ್ ಮಿನಿ ಕಾಲೊನಿಯ ಹುಚ್ಚರಂಗಯ್ಯ, ದಾಸರಹಳ್ಳಿಯ ಚಂದ್ರಣ್ಣ (ಮರಿಯಪ್ಪ), ಮತ್ತು ಡಿ.ಎಂ.ವೆಂಕಟೇಶ್ ಅವರ ಮನೆಗೆ ಕೇಂದ್ರ ಸಚಿವರು, ಶಾಸಕರು ಭೇಟಿ ನೀಡಿದರು.

ಶಿಫಾರಸಿನಂತೆ ಒಳ ಮೀಸಲಾತಿಗೆ ಒತ್ತಾಯ

ಬೆಂಗಳೂರು: ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್‌ದಾಸ್ ಆಯೋಗ ನೀಡಿದ ವರದಿಯ ಶಿಫಾರಸಿನಂತೆಯೇ 101 ಜಾತಿಗಳಿಗೂ ಒಳಮೀಸಲಾತಿ ಪ್ರಮಾಣ ನಿಗದಿ ಮಾಡಬೇಕು ಎಂದು ಅಹಿಂದ ಚಳವಳಿ ರಾಜ್ಯ ಸಂಚಾಲಕ ಆರ್.ಸುರೇಂದ್ರ ಒತ್ತಾಯಿಸಿದ್ದಾರೆ.

ಈಗ ಸಿದ್ಧಪಡಿಸಿರುವ ಮಸೂದೆಯನ್ನೇ ರಾಜ್ಯಪಾಲರಿಗೆ ಮರು ಸಲ್ಲಿಸಿದರೆ ಮಾದಿಗ ಸಮುದಾಯ ಮತ್ತು ಅಲೆಮಾರಿಗಳಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಆಯೋಗದ ಶಿಫಾರಸಿನಂತೆ ಒಳ ಮೀಸಲಾತಿ ನಿಗದಿ ಮಾಡಿ, ಮತ್ತೆ ಸದನದ ಒಪ್ಪಿಗೆ ಪಡೆಯಬೇಕು. ನಂತರ ರಾಜ್ಯಪಾಲರ ಸಹಿಗೆ ಸಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರದಂತೆ ಒಳಮೀಸಲಾತಿ ಜಾರಿಗೆ ತಂದರೆ ಕೆಲ ಜಾತಿಗಳಿಗೆ ಮಾತ್ರ ಅನುಕೂಲವಾಗುತ್ತದೆ ಎಂದು ಅವರು ದೂರಿದ್ದಾರೆ.

ನಿಧನ ವಾರ್ತೆ

ಜನಾರ್ದನ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಆಡಳಿತ ವಿಭಾಗ ನಿವೃತ್ತ ಅಧೀಕ್ಷಕ ಎಂ.ಆರ್. ಜನಾರ್ದನ್ (68) ನಿಧನರಾದರು. ಅವರಿಗೆ ಪತ್ನಿ ಇದ್ದಾರೆ. ಜನಾರ್ದನ್ ಅವರು ನಿವೃತ್ತಿ ನಂತರ ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಆಸ್ತಿ ವಿಭಾಗದಲ್ಲಿ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮೃತರ ಅಂತ್ಯಕ್ರಿಯೆ ಶನಿವಾರ ಚಾಮರಾಜಪೇಟೆ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೈನ ಸಾಹಿತ್ಯ ಸಿರಿ ಕಾರ್ಯಕ್ರಮದಲ್ಲಿ ಪಿ.ರತ್ನಾಕರ್, ಶಾಂತಿನಾಥ ದಿಬ್ಬದ, ಮಮತಾ ಕಾಂತರಾಜು, ನಾಗಶ್ರೀ ಮುಪ್ಪಾನೆ, ಪ್ರತಿಭಾ ರತ್ನಾಕರ್ ಉಪಸ್ಥಿತರಿದ್ದರು

'ಅಹಿಂಸೆ ಪ್ರತಿಪಾದಿಸುವ ಯಶೋಧರ ಚರಿತೆ'

ಬೆಂಗಳೂರು: 'ಹಿಂಸೆ, ಕೊಲೆ-ಸುಲಿಗೆ ತುಂಬಿರುವ ಜಗತ್ತಿನಲ್ಲಿ ಜನ್ನ ಕವಿ ಬರೆದಿರುವ ಯಶೋಧರ ಚರಿತೆ ಅಹಿಂಸೆಯನ್ನೇ ಮೂಲವಾಗಿ ಪ್ರತಿಪಾದಿಸುವ ಬಹು ಮುಖ್ಯ ಕೃತಿ' ಎಂದು ನಿವೃತ್ತ ಪ್ರಾಧ್ಯಾಪಕ ಶಾಂತಿನಾಥ ದಿಬ್ಬದ ತಿಳಿಸಿದರು.

ಬೆಂಗಳೂರು ಸೆಂಟ್ರಲ್ ಜೈನ್ ಮಿಲನ್ ಸಂಸ್ಥೆ ಜಯನಗರದ ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜೈನ ಸಾಹಿತ್ಯ ಸಿರಿ ತಿಂಗಳ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

'ಅಹಿಂಸೆ ಕೇವಲ ಮಾನವ ಜನ್ಮಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಅದು ಇಡೀ ಜೀವಸಂಕುಲಕ್ಕೆ ಅನ್ವಯಿಸುವಂತಹದ್ದು. ಜನ್ನನ ಈ ಕಾವ್ಯದಲ್ಲಿ ಮನಪರಿವರ್ತನೆಗೆ ಕಾಲಲಬ್ದಿ ಬಹಳ ಮುಖ್ಯ ಎಂದು ತಿಳಿಸಿದ್ದಾನೆ. ಕೊಂದರಷ್ಟೇ ಹಿಂಸೆಯಲ್ಲ, ಕೊಲ್ಲುತ್ತೇನೆ ಎಂದು ಯೋಚಿಸಿದರೂ ಅದೂ ಹಿಂಸೆಯೇ ಎಂಬ ಸಂದೇಶವನ್ನು ಈ ಕಾವ್ಯ ತಿಳಿಸುತ್ತದೆ' ಎಂದು ಹೇಳಿದರು.

ನಿವೃತ್ತ ಅಧಿಕಾರಿ ಪಿ. ರತ್ನಾಕರ ಮಾತನಾಡಿ, 'ಜನ್ನ ತನ್ನ ಕಾಲಘಟ್ಟದಲ್ಲಿ ಎರಡೂ ಧಾರ್ಮಿಕ ಕಾವ್ಯಗಳನ್ನು ಬರೆದು ಆ ಮೂಲಕ ಜೈನಧರ್ಮದ ತತ್ವಗಳನ್ನು ತಿಳಿಸುವ ಪ್ರಯತ್ನ ಮಾಡಿದ. ಆ ತತ್ವಗಳು ನಮಗೆ ಮನದಟ್ಟಾಗಬೇಕು' ಎಂದರು.

ಜೈನ್ ಮಿಲನ್ ಸೆಂಟ್ರಲ್ ಘಟಕದ ಅಧ್ಯಕ್ಷೆ ಮಮತಾ ಕಾಂತರಾಜ್, ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ನಾಗಶ್ರೀ ಮುಪ್ಪಾನೆ, ಜೈನ ಸಾಹಿತ್ಯ ಸಿರಿ ಸಂಚಾಲಕರಾದ ಪದ್ಮಿನಿ ನಾಗರಾಜು, ಬ್ರಾಹ್ಮಿಲ ಮದನ್, ಪ್ರತಿಭಾ ರತ್ನಾಕರ ಇದ್ದರು.

ಮೆಜೆಸ್ಟಿಕ್ ಸುತ್ತಲೂ ಪ್ರಯಾಸದ ಪ್ರಯಾಣ

ಮುಗಿಯದ ವೈಟ್‌ಟಾಪಿಂಗ್ ಕಾಮಗಾರಿ, ಸಂಚಾರ ನಿರ್ಬಂಧದಿಂದ ಪರದಾಟ

• ಖಲೀಲಅಹ್ಮದ ಶೇಖ

ದಟ್ಟಣೆ ಪ್ರದೇಶಗಳು

- ಆನಂದರಾವ್ ವೃತ್ತ
- ಕೆ.ಆರ್. ವೃತ್ತ
- ಶಿವಾನಂದ ವೃತ್ತ
- ಸಂಗೊಳ್ಳಿ ರಾಯಣ್ಣ ವೃತ್ತ
- ಓಕಳಿಪುರ ಜಂಕ್ಷನ್
- ರಾಜೀವ್‌ಗಾಂಧಿ ವೃತ್ತ (ಸೆಂಟ್ರಲ್)

ಸಂಚಾರ ಸಂಕಟ

ಬೆಂಗಳೂರು: ನಗರದ ಹೃದಯಭಾಗದ ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಪ್ರವೇಶ ಕಲ್ಪಿಸುವ ರಸ್ತೆಗಳಲ್ಲಿ ನಿತ್ಯವೂ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಈ ಮಾರ್ಗದಲ್ಲಿ ಸಂಚರಿಸುವ ಜನರು ನಿತ್ಯವೂ ತೊಂದರೆ ಅನುಭವಿಸುತ್ತಿದ್ದಾರೆ.

ಹೊರ ರಾಜ್ಯ, ಹೊರ ಜಿಲ್ಲೆಗಳಿಂದ ಬರುವ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳು ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆ, ಟ್ಯಾಂಕ್‌ಬಂಡ್ ರಸ್ತೆ, ಧನ್ವಂತರಿ ರಸ್ತೆಯ ಮೂಲಕ ಮೆಜೆಸ್ಟಿಕ್–ಗಾಂಧಿನಗರ ಪ್ರವೇಶಿಸುತ್ತವೆ.

ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಗೆ ನಿತ್ಯ ಸಾವಿರಾರು ಬಸ್‌ಗಳು ತೆರಳುತ್ತವೆ. ಇದರಿಂದ ಬೆಳಿಗ್ಗೆ 8ರಿಂದ 11ರ ವರೆಗೆ ಹಾಗೂ ಸಂಜೆ 6ರಿಂದ ರಾತ್ರಿ 11ರ ವರೆಗೆ ವಿಪರೀತ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಯಶವಂತಪುರ, ಯಲಹಂಕ, ಮಲ್ಲೇಶ್ವರ, ಶೇಷಾದ್ರಿಪುರ, ಕುರುಬರ ಹಳ್ಳಿ, ರಾಜಾಜಿನಗರದಿಂದ ಬರುವ ಬಿಎಂಟಿಸಿ ಬಸ್‌ಗಳು ಪ್ಲಾಟ್‌ಫಾರಂ ರಸ್ತೆಯ ಮೂಲಕ ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ತೆರಳುತ್ತವೆ. ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿರುವ ಕಾರಣ ಕಿರಿದಾದ ರಸ್ತೆಯಲ್ಲಿ ನಿತ್ಯ ದಟ್ಟಣೆಯ ಅವಧಿಯಲ್ಲಿ ಓಕಳಿಪುರದ ಮಿಲ್ ಜಂಕ್ಷನ್‌ನಿಂದ ಮಂತ್ರಿ ಸ್ಕ್ವೇರ್‌ನಲ್ಲಿರುವ ರಾಜೀವ್ ಗಾಂಧಿ ವೃತ್ತದವರೆಗೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

‘ಬೆಳಗಿನ ಜಾವ 4 ಗಂಟೆಯಿಂದ 8 ಗಂಟೆಯ ವರೆಗೆ ಹಾಗೂ ಸಂಜೆ 7ರಿಂದ ರಾತ್ರಿ 11ರ ವರೆಗೆ ಟ್ಯಾಂಕ್‌ಬಂಡ್ ರಸ್ತೆಯ ಉದ್ದಕ್ಕೂ ಖಾಸಗಿ ಬಸ್‌ಗಳು ಪ್ರಯಾಣಿಕರನ್ನು ಪಿಕ್‌ಅಪ್ ಮಾಡುವುದರ ಜೊತೆಗೆ ಲಗೇಜ್ ಲೋಡ್ ಮಾಡಿಕೊಳ್ಳಲು ಸಾಲುಗಟ್ಟಿ ನಿಲ್ಲುವ ಕಾರಣ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಈ ಮಾರ್ಗದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ತೆರಳಲು ಸಂಚಾರ ವಿಭಾಗದ ಪೊಲೀಸರು ನಿರ್ಬಂಧಿಸುತ್ತಾರೆ. ಆದರೆ, ಖಾಸಗಿ ಬಸ್‌ಗಳ ಸಂಚಾರಕ್ಕೆ ಅವಕಾಶ ಕಲ್ಪಿಸುತ್ತಾರೆ. ಇದು ಮೆಜೆಸ್ಟಿಕ್ ಸುತ್ತ ಮುತ್ತಲೂ ಸಂಚಾರ ದಟ್ಟಣೆ ಹೆಚ್ಚಾಗಲು ಕಾರಣ’ ಎನ್ನುತ್ತಾರೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು.

ಮೆಜೆಸ್ಟಿಕ್, ಗಾಂಧಿನಗರ, ಓಕಳಿಪುರ, ಮಲ್ಲೇಶ್ವರ, ರೇಸ್‌ಕೋರ್ಸ್ ರಸ್ತೆ, ಕೆ.ಜಿ.ರಸ್ತೆ, ಶೇಷಾದ್ರಿಪುರ, ಮಲ್ಲೇಶ್ವರ ವೃತ್ತ, ರಾಜಾಜಿನಗರ, ಶ್ರೀರಾಂಪುರ, ಅರಮನೆ ರಸ್ತೆ, ಕೆ.ಆರ್. ವೃತ್ತ, ಕಾರ್ಪೊರೇಷನ್ ವೃತ್ತ, ಹಳೇ ಮೈಸೂರು ರಸ್ತೆ, ಚಾಲುಕ್ಯ ವೃತ್ತ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿಧಾನವಾಗಿ ದಟ್ಟಣೆ ಉಂಟಾಗುತ್ತದೆ’ ಎಂದು ಕೆ.ಆರ್. ವೃತ್ತದ ವ್ಯಾಪಾರಿ ಆನಂದ ಹೇಳಿದರು.

‘ರೇಸ್‌ಕೋರ್ಸ್ ರಸ್ತೆ ಮೂಲಕ ವಾಹನಗಳು ಬಸವೇಶ್ವರ ವೃತ್ತಕ್ಕೆ ಹೋಗುತ್ತವೆ. ಆನಂದರಾವ್ ವೃತ್ತದ ಮೂಲಕವೂ ಕೆಲ ವಾಹನಗಳು ಸಂಚರಿಸಿ ಉದ್ಯಾನ ಬಳಿ ರಸ್ತೆಗೆ ಸೇರುತ್ತವೆ. ಇಂಥ ಸಂದರ್ಭದಲ್ಲಿ ಬಳ್ಳಾರಿ ರಸ್ತೆ, ಅರಮನೆ ರಸ್ತೆ ಹಾಗೂ ಕೆ.ಆರ್. ವೃತ್ತದಲ್ಲಿ ವಾಹನಗಳ ದಟ್ಟಣೆ ಉಂಟಾಗುತ್ತದೆ. ಅಗ್ನಿಶಾಮಕ ದಳ ಠಾಣೆ, ಕಾರಾಗೃಹ ಇಲಾಖೆ ಕಚೇರಿ, ಮಹಾರಾಣಿ ಕಾಲೇಜು, ಚುನಾವಣಾ ಆಯೋಗ, ಕಾಲೇಜು ಶಿಕ್ಷಣ ಇಲಾಖೆ, ಜಾರಿ ನಿರ್ದೇಶನಾಲಯದ ಕಚೇರಿ ಹಾಗೂ ಇತರೆ ಸಂಸ್ಥೆಗಳು ಶೇಷಾದ್ರಿ ರಸ್ತೆಯಲ್ಲಿವೆ. ಇಲ್ಲಿಯ ಕೆಲಸಗಾರರು, ನಿತ್ಯವೂ ದಟ್ಟಣೆಯಿಂದಾಗಿ ಬೇಸತ್ತು ಹೋಗಿದ್ದಾರೆ’ ಎಂದರು.

‘ಸಾಮಾನ್ಯವಾಗಿ ವಾರಾಂತ್ಯದಲ್ಲಿ ಮೆಜೆಸ್ಟಿಕ್ ಸುತ್ತಲೂ ಸಂಚಾರ ದಟ್ಟಣೆ ಇರುತ್ತದೆ. ಹೊರ ಊರುಗಳಿಗೆ ಹೋಗಲು ರೈಲು ಮತ್ತು ಬಸ್‌ಗಳಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಿರುವ ಪ್ರಯಾಣಿಕರು ನಿಗದಿತ ಸಮಯಕ್ಕೆ ನಿಲ್ದಾಣ ತಲುಪಲು ಆಗುವುದಿಲ್ಲ. ಆಟೊ, ಬಿಎಂಟಿಸಿ ಬಸ್‌ಗಳಲ್ಲಿ ರೈಲು ನಿಲ್ದಾಣ, ಮೆಜೆಸ್ಟಿಕ್‌ನತ್ತ ಹೋಗುವವರು ದಟ್ಟಣೆ ಉಂಟಾಗುವ ಕಾರಣ ಮಾರ್ಗ ಮಧ್ಯೆಯೇ ವಾಹನಗಳಿಂದ ಕೆಳಗಿಳಿದು, ನಿಲ್ದಾಣದತ್ತ ಹೆಜ್ಜೆ ಹಾಕುತ್ತಾರೆ’ ಎಂದು ಸಾರ್ವಜನಿಕರು ಆರೋಪಿಸಿದರು.

ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುವ ಪ್ಲಾಟ್‌ಫಾರಂ ರಸ್ತೆಯಲ್ಲಿ ಸಂಚಾರ ದಟ್ಟಣೆ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪಿಕ್‌ಅಪ್, ಡ್ರಾಪ್‌ನಿಂದ ಸಂಚಾರ ದಟ್ಟಣೆ

‘ಮೆಜೆಸ್ಟಿಕ್‌ನಿಂದ ಶೇಷಾದ್ರಿಪುರದ ಪ್ಲಾಟ್‌ಫಾರಂ ಮುಖ್ಯರಸ್ತೆಯ ಮೂಲಕ ಬಹುತೇಕ ಖಾಸಗಿ ಬಸ್‌ಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ತೆರಳುತ್ತವೆ. ಇಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಪ್ರಾರಂಭಿಸಲಾಗಿದ್ದು, ಒಂದು ಭಾಗದ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ. ಏಕಮುಖ ಸಂಚಾರದ ರಸ್ತೆಯಲ್ಲಿಯೇ ಖಾಸಗಿ ವಾಹನಗಳು ಸಂಚರಿಸುತ್ತಿದ್ದು, ದಟ್ಟಣೆ ಆಗುತ್ತಿದೆ. ರಾತ್ರಿ 8.30ರ ನಂತರ ಪಿಕ್‌ಅಪ್, ಡ್ರಾಪ್‌ನಿಂದಾಗಿ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ’ ಎನ್ನುತ್ತಾರೆ ಸಂಚಾರ ವಿಭಾಗದ ಪೊಲೀಸರು.

ಸಾರ್ವಜನಿಕರು ಏನಂತಾರೆ?

ನಗರದ ಎಲ್ಲ ಪ್ರದೇಶಗಳಿಗೆ ಹಾಗೂ ಹೊರ ರಾಜ್ಯದ ಎಲ್ಲ ಭಾಗಗಳಿಗೆ ಮೆಜೆಸ್ಟಿಕ್‌ನಿಂದ ಬಸ್‌ಗಳಿವೆ. ನಿಲ್ದಾಣದಿಂದ ಹೊರಬರುವ ಬಹುತೇಕ ಬಸ್‌ಗಳು, ಶೇಷಾದ್ರಿ ರಸ್ತೆ ಮೂಲಕ ಸಾಗುತ್ತವೆ. ದಟ್ಟಣೆ ಉಂಟಾದರೆ, ಬಸ್‌ಗಳು ನಿಂತಲೇ ನಿಲ್ಲಬೇಕಾಗುತ್ತದೆ. ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು

ದೇವೇಂದ್ರ ನಾಯಕ್, ಆಟೊ ಚಾಲಕ

ಮೆಜೆಸ್ಟಿಕ್‌ನಿಂದ ಓಕಳಿಪುರಂ ಜಂಕ್ಷನ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ವಾಹನ ಸಂಚಾರ ನಿಧಾನವಾಗಿ ಸಂಚಾರ ದಟ್ಟಣೆ ಆಗುತ್ತಿದೆ. ಮೆಜೆಸ್ಟಿಕ್‌ನ ಧನ್ವಂತರಿ ರಸ್ತೆಯಲ್ಲಿ ಖಾಸಗಿ ಬಸ್‌ಗಳು ಲಗೇಜ್ ತುಂಬಿಕೊಳ್ಳಲು ಸಾಲುಗಟ್ಟಿ ನಿಲ್ಲುವುದರಿಂದ ರಾತ್ರಿ ಸಮಯದಲ್ಲಿ ವಿಪರೀತ ದಟ್ಟಣೆ ಆಗುತ್ತಿದೆ. ಸಂಚಾರ ವಿಭಾಗದ ಪೊಲೀಸರು ಇದಕ್ಕೆ ಕಡಿವಾಣ ಹಾಕಬೇಕು

ಶಿವರಾಜ, ರಾಜಾಜಿನಗರ

ಸುದ್ದಿ 2 ನಿಮಿಷ

ಅನಧಿಕೃತ ಕಟ್ಟಡಗಳ ತೆರವು

ಬೆಂಗಳೂರು: ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ ಇಲ್ಲವೇ ನಕ್ಷೆಗೆ ವಿರುದ್ಧವಾಗಿ ನಿರ್ಮಿಸಿದ ಕಟ್ಟಡ, ಹೆಚ್ಚುವರಿಯಾಗಿ ನಿರ್ಮಿಸಿದ ಅಂತಸ್ತುಗಳನ್ನು ತೆರವುಗೊಳಿಸುವ ಕಾರ್ಯ ಶನಿವಾರವೂ ಮುಂದುವರಿಯಿತು.

ಹೆಬ್ಬಾಳ ವಿಭಾಗದ ಜೆ.ಸಿ. ನಗರ ಉಪನಗರ ವಿಭಾಗದಲ್ಲಿ ದೊಡ್ಡಮ್ಮ ಬಡಾವಣೆಯ ಮನೋರಾಯನಪಾಳ್ಯದಲ್ಲಿ ನಿರ್ಮಿಸುತ್ತಿದ್ದ ಕಟ್ಟಡ, ವಿದ್ಯಾರಣ್ಯಪುರ ವಿಭಾಗದ ವ್ಯಾಪ್ತಿಯ ಕೊಡಿಗೇಹಳ್ಳಿ ಉಪ ವಿಭಾಗದ ಕಾಟೇರಮ್ಮ ದೇವಸ್ಥಾನ ಹತ್ತಿರದ ನಿವೇಶನದಲ್ಲಿದ್ದ ಕಟ್ಟಡ, ರಾಜೀವ್ ಗಾಂಧಿನಗರದ ಕೊಡಿಗೇಹಳ್ಳಿಯ ನಿವೇಶನದ ಕಟ್ಟಡ, ಕುವೆಂಪುನಗರ ಉಪ ವಿಭಾಗದ ಡಿಫೆನ್ಸ್ ಬಡಾವಣೆಯ ನಿವೇಶನದ ಕಟ್ಟಡಗಳ ಹೆಚ್ಚುವರಿ ಭಾಗ ತೆರವುಗೊಳಿಸಲಾಯಿತು.

ಯಲಹಂಕ ವಿಭಾಗದ ಶಿವನಹಳ್ಳಿ ಗ್ರಾಮದ ಕಟ್ಟಡ, ಎ.ಎಂ.ಎಸ್ ಬಡಾವಣೆಯ ಎರಡು ಕಟ್ಟಡ, ಬ್ಯಾಟರಾಯನಪುರ ವಿಭಾಗದ ಕೋಗಿಲು ಉಪವಿಭಾಗದ ಕಟ್ಟಿಗೇಹಳ್ಳಿಯ ರೇವಾ ಕಾಲೇಜಿನ ಎದುರಿನ ಕಟ್ಟಡ, ಜಕ್ಕೂರು ಉಪ-ವಿಭಾಗದ ಸಹಕಾರನಗರದ ಕಟ್ಟಡಗಳ ಹೆಚ್ಚುವರಿ ಭಾಗಗಳನ್ನು ತೆರವು ಮಾಡಲಾಯಿತು.

ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನಿರ್ದೇಶನದಂತೆ ಕಾರ್ಯಪಾಲಕ ಎಂಜಿನಿಯರ್ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆಯಿತು. ತೆರವಿಗೆ ತಗಲುವ ವೆಚ್ಚವನ್ನು ದಂಡದ ಸಮೇತ ಮಾಲೀಕರಿಂದ ವಸೂಲಿ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹1.8 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಬಯಲು ರಂಗಮಂದಿರಕ್ಕೆ ಚಾಲನೆ

ಯಲಹಂಕ: ಅಮೃತಹಳ್ಳಿಯ ಕೆರೆಯ ಪಕ್ಕದಲ್ಲಿ ನಿರ್ಮಿಸಿರುವ ಬಯಲು ರಂಗಮಂದಿರವನ್ನು ಉದ್ಘಾಟಿಸಲಾಯಿತು.

ಸರ್ಕಾರದ ನಗರೋತ್ಥಾನ ಅನುದಾನದಡಿಯಲ್ಲಿ ₹1.8 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಈ ಬಯಲು ರಂಗಮಂದಿರದಲ್ಲಿ 500 ಮಂದಿ ಕುಳಿತು ವೀಕ್ಷಿಸಲು ಸ್ಥಳಾವಕಾಶವಿದೆ. ಹಿಂಭಾಗದ ಪರದೆಯ ಮೇಲೆ ಹಾಗೂ ಸುತ್ತಲಿನ ಗೋಡೆಯ ಮೇಲೆ ಸುಂದರವಾದ ಚಿತ್ರಗಳನ್ನು ಬಿಡಿಸಲಾಗಿದೆ.

‘ಕೆರೆಯಲ್ಲಿ ಈಗಾಗಲೆ ನಡಿಗೆ ಪಥ, ಯೋಗ ಪೆವಿಲಿಯನ್, ತೆರೆದ ಜಿಮ್, ಮಕ್ಕಳು ಆಟವಾಡಲು ಮತ್ತು ಹಿರಿಯ ನಾಗರಿಕರು ಕುಳಿತುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ಕೆರೆಯ ಸುತ್ತಮುತ್ತ ಹಲವಾರು ಬಡಾವಣೆಗಳು ನಿರ್ಮಾಣವಾಗಿದ್ದು, ಇಲ್ಲಿನ ನಿವಾಸಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ರಂಗಮಂದಿರದ ಅವಶ್ಯಕತೆಯಿತ್ತು. ಈ ದಿಸೆಯಲ್ಲಿ ಇಲ್ಲಿನ ಜನರು ಒಂದೆಡೆ ಸೇರಿ ಸ್ಥಳೀಯ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ರಂಗಮಂದಿರ ನಿರ್ಮಿಸಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು. ಸ್ವಸ್ತಿಕ ನೃತ್ಯ ಮತ್ತು ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ವಿಶೇಷ ನೃತ್ಯ ಪ್ರದರ್ಶನ ಹಾಗೂ ಸ್ಥಳೀಯ ಕಲಾವಿದರಿಂದ ಭರತನಾಟ್ಯ, ಗಾಯನ, ಕೊಳಲುವಾದನ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬಿಬಿಎಂಪಿ ಮಾಜಿ ಸದಸ್ಯ ಪಿ.ವಿ.ಮಂಜುನಾಥ ಬಾಬು, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣಬೈರೇಗೌಡ, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ವಿ.ಹರಿ, ಕೆ.ಗೌರೀಶ್, ಶಾಂತಮ್ಮ, ದಿವ್ಯ ರಾಜಣ್ಣ ಉಪಸ್ಥಿತರಿದ್ದರು.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ಕ್ಯಾಮೆರಾ ಹಿಡಿದು ನಿಂತಿರುವ ಕಲಾಕೃತಿಯನ್ನು ಕೆ.ಪಿ. ಈಶಾನ್ಯೆ, ಇಬ್ರಾಹಿಂ ಮೈಗೂರು, ಎಂ. ಜಗದೀಶ್ ಕುತೂಹಲದಿಂದ ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ತೆಂಗಿನ ಗರಿಗಳಲ್ಲಿ ತೇಜಸ್ವಿ ಜೀಪು, ಸ್ಕೂಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಂಗಿನ ಗರಿಗಳಲ್ಲಿ ಅರಳಿದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಜೀಪು, ಸ್ಕೂಟರ್, ತರಕಾರಿಗಳಿಂದ ಮಾಡಿದ ನವಿಲು, ಹಂಸ, ‘ನಿರುತ್ತರ’ದ ಮನೆ ನೋಡುಗರ ಮನಸೂರೆಗೊಂಡವು.

‘ತೇಜಸ್ವಿ ವಿಸ್ಮಯ’ ವಿಷಯಾಧಾರಿತ ಫಲಪುಷ್ಪ ಪ್ರದರ್ಶನದ ಅಂಗವಾಗಿ ಲಾಲ್‌ಬಾಗ್‌ನ ತೋಟಗಾರಿಕೆ ಮಾಹಿತಿ ಕೇಂದ್ರದಲ್ಲಿ ಆಯೋಜಿಸಿರುವ ಇಕೆಬಾನ, ಪುಷ್ಪಭಾರತಿ, ಪುಷ್ಪ ರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್ ಜಾನೂರು ಮತ್ತು ಬೋನ್ಸಾಯ್ ಗಿಡಗಳ ಪ್ರದರ್ಶನದಲ್ಲಿ ಕಂಡುಬಂದ ದೃಶ್ಯವಿದು.

ಈ ಪ್ರದರ್ಶನಕ್ಕೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಪುತ್ರಿ ಕೆ.ಪಿ. ಈಶಾನ್ಯೆ ಶನಿವಾರ ಚಾಲನೆ ನೀಡಿದರು. ಇಕೆಬಾನ ಹೂಗಳ ಪ್ರದರ್ಶನ ಚಿತ್ತಾಕರ್ಷಕವಾಗಿತ್ತು. ಜನರು ತಮ್ಮ ಇಷ್ಟದ ಪ್ರದರ್ಶನಗಳ ಎದುರು ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದರು.

ತೇಜಸ್ವಿ ಅವರು ಕ್ಯಾಮೆರಾ ಹಿಡಿದುಕೊಂಡು ನಿಂತಿರುವ ಮಾದರಿಯನ್ನು ಬಾಳೆ ಎಲೆಯಲ್ಲಿ ಸೊಗಸಾಗಿ ರಚಿಸಲಾಗಿದೆ. ಸಾರ್ವಜನಿಕರು ಇದರ ಮುಂಭಾಗದಲ್ಲಿ ನಿಂತುಕೊಂಡು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ತೆಂಗಿನ ಗರಿಗಳಲ್ಲಿ ರಚಿಸಿದ ಆಮೆಯ ಮಾದರಿಗಳು ನೋಡಗರ ಗಮನ ಸೆಳೆದವು. ಡಚ್ ಹೂವಿನ ಜೋಡಣೆ, ಬೋನ್ಸಾಯ್ ಗಿಡಗಳ ಪ್ರದರ್ಶನ ಆಕರ್ಷಕವಾಗಿತ್ತು. ತೆಂಗಿನ ಗರಿಗಳಲ್ಲಿ ಮೂಡಿಗೆರೆಯ ವಾತಾವರಣವನ್ನು ರೂಪಿಸಿದ ಮಾದರಿ ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸಿದರು.

ತೋಟಗಾರಿಕೆ ಇಲಾಖೆಯ ನಿರ್ದೇಶಕ ಇಬ್ರಾಹಿಂ ಮೈಗೂರು ಉಪಸ್ಥಿತರಿದ್ದರು.

49 ಸಾವಿರ ಮಂದಿ ಭೇಟಿ

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಯುತ್ತಿರುವ ತೇಜಸ್ವಿ ವಿಸ್ಮಯ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಶನಿವಾರ 49,721 ಜನ ಭೇಟಿ ನೀಡಿದ್ದು, ₹17.60 ಲಕ್ಷ ಪ್ರವೇಶ ಶುಲ್ಕ ಸಂಗ್ರಹವಾಗಿದೆ ಎಂದು ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಎಂ. ಜಗದೀಶ್ ತಿಳಿಸಿದ್ದಾರೆ.

ಕ್ಷೀರ ಸಂಜೀವಿನಿಗೆ ದಶಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಹೈನೋದ್ಯಮದಲ್ಲಿ 9 ಲಕ್ಷ ಮಂದಿ ತೊಡಗಿಸಿಕೊಂಡಿದ್ದು, ಇದರಲ್ಲಿ ಮಹಿಳೆಯರ ಸಂಖ್ಯೆಯೇ 4.72 ಲಕ್ಷ. ಈ ಮೂಲಕ ಮಹಿಳೆಯರು ದೇಶ, ರಾಜ್ಯದ ಆರ್ಥಿಕ ಪ್ರಗತಿ ಹಾಗೂ ತಲಾ ಆದಾಯ ವೃದ್ಧಿಗೆ ಕೊಡುಗೆ ನೀಡುತ್ತಿದ್ದಾರೆ’ ಎಂದು ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಹೇಳಿದರು.

ಕರ್ನಾಟಕ ಹಾಲು ಮಹಾಮಂಡಳ, ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕ್ಷೀರ ಸಂಜೀವಿನಿ ಯೋಜನೆಯ ದಶಮಾನೋತ್ಸವದಲ್ಲಿ ಅವರು ಮಾತನಾಡಿದರು.

‘ಕ್ಷೀರ ಸಂಜೀವಿನಿ ಹಂತ-1 ರಿಂದ 5ರ ಯೋಜನೆಯಡಿ ಹೈನುಗಾರಿಕೆ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ₹75.93 ಕೋಟಿ ಮೀಸಲಿರಿಸಲಾಗಿದೆ. ಕ್ಷೀರ ಸಂಜೀವಿನಿ ಯೋಜನೆಯಡಿಯಲ್ಲಿ ಹೈನುಗಾರಿಕೆ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಉದ್ದೇಶದಿಂದ ಆದ್ಯತಾ ಗುಂಪಿನ ಸದಸ್ಯರಿಗೆ ತರಬೇತಿ ನೀಡುವುದು, ಹಸುಗಳನ್ನು ಕೊಡಿಸುವುದು ಹಾಗೂ ಅರಿವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು, ಯೋಜನೆಯು ಪ್ರಗತಿಯಲ್ಲಿದೆ ಎಂದರು.

ಕೆಎಂಎಫ್ ಆಡಳಿತಾಧಿಕಾರಿ ಟಿ.ಎಚ್.ಎಂ.ಕುಮಾರ್, ರಾಷ್ಟ್ರೀಯ ಜೀವನೋಪಾಯ ಮಿಷನ್ ಯೋಜನಾ ನಿರ್ದೇಶಕಿ ಆರ್.ಸ್ನೇಹಲ್, ಕೋಲಾರ ಹಾಲು ಒಕ್ಕೂಟದ ಅಧ್ಯಕ್ಷ ನಂಜೇಗೌಡ, ಮೈಸೂರು ಹಾಲು ಒಕ್ಕೂಟದ ಅಧ್ಯಕ್ಷ ಈರೇಗೌಡ, ಮಂಡ್ಯ ಹಾಲು ಒಕ್ಕೂಟದ ಅಧ್ಯಕ್ಷ ಶಿವಕುಮಾರ್, ಚಾಮರಾಜನಗರ ಹಾಲು ಒಕ್ಕೂಟದ ಅಧ್ಯಕ್ಷ ನಂಜುಂಡ ಸ್ವಾಮಿ, ಶಿವಮೊಗ್ಗ ಹಾಲು ಒಕ್ಕೂಟದ ಅಧ್ಯಕ್ಷ ವಿದ್ಯಾಧರ್, ಬಾಗಲಕೋಟ ವಿಜಯಪುರ ಹಾಲು ಒಕ್ಕೂಟದ ಅಧ್ಯಕ್ಷ ಕರೇಗೌಡ, ಕಲಬುರಗಿ ಹಾಲು ಒಕ್ಕೂಟದ ಅಧ್ಯಕ್ಷ ಆರ್.ಕೆ.ಪಾಟೀಲ್, ದಕ್ಷಿಣ ಕನ್ನಡ ಹಾಲು ಒಕ್ಕೂಟದ ಅಧ್ಯಕ್ಷ ರವಿಚಂದ್ರ ಹೆಗ್ಡೆ ಉಪಸ್ಥಿತರಿದ್ದರು.

ದಶಮಾನೋತ್ಸವ ಪ್ರಯುಕ್ತ ಕರ್ನಾಟಕ ಹಾಲು ಮಹಾಮಂಡಳದ 16 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಅತೀ ಹೆಚ್ಚು ಹಾಲು ಸರಬರಾಜು ಮಾಡಿದ 1500 ಹಾಲು ಉತ್ಪಾದಕ ಮಹಿಳಾ ಸದಸ್ಯರನ್ನು ಗೌರವಿಸಲಾಯಿತು.

ಬಸ್ ನೌಕರರ ಬೆಂಗಳೂರು ಚಲೋ 29ಕ್ಕೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರ ಬೇಡಿಕೆ ಈಡೇರಿಸದೇ ಇರುವುದನ್ನು ಖಂಡಿಸಿ ಜ.29ರಂದು ಬೆಂಗಳೂರು ಚಲೋ ನಡೆಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

38 ತಿಂಗಳ ಹಿಂಬಾಕಿ ನೀಡಿಲ್ಲ. 2024ರ ಜನವರಿಯಿಂದ ವೇತನ ಪರಿಷ್ಕರಣೆ ನಡೆಸಬೇಕಿತ್ತು. ಹಲವು ಬಾರಿ ಸರ್ಕಾರದೊಂದಿಗೆ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗದೇ ಇರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಅಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಲಾಗುವುದು ಎಂದು ಕ್ರಿಯಾ ಸಮಿತಿಯ ಎಚ್.ವಿ. ಅನಂತಸುಬ್ಬರಾವ್, ಬಿ. ಜಯದೇವ ಅರಸು, ಎಚ್.ಡಿ. ರೇವಪ್ಪ, ವಿ. ಸೋಮಣ್ಣ, ಜಗದೀಶ ಎಚ್.ಆರ್., ರಾಜೇಂದ್ರಗೌಡ ಜಿ.ಕೆ. ತಿಳಿಸಿದ್ದಾರೆ.

ಎಂ.ಜಿ. ರಸ್ತೆಯಲ್ಲಿರುವ ಜೋಯಾಲುಕ್ಕಾಸ್ ಮಳಿಗೆಯಲ್ಲಿ ‘ವಜ್ರ ಆಭರಣ ಪ್ರದರ್ಶನ’ದ ಉದ್ಘಾಟನೆ ಕಾರ್ಯಕ್ರಮದಲ್ಲಿ ನಾರಾಯಣ್ ಬಂಡಾಪುರ ಗ್ರೂಪ್ ಆಫ್ ಕಾಲೇಜಿನ ಅಧ್ಯಕ್ಷ ಸಿ.ಎಂ. ಮಂಜುನಾಥ, ನಟಿ ತ್ರಿವೇಣಿ ರಾಜ್, ಜೋಯಾಲುಕ್ಕಾಸ್ ಕಾರ್ಯನಿರ್ವಾಹಕ ನಿರ್ದೇಶಕರಾದ ಆಂಥೋನಿ ಜೋಸ್, ಥಾಮಸ್ ಮ್ಯಾಥ್ಯೂ, ನಿರ್ದೇಶಕಿ ಎಲ್ಲಾ ಜಾಯ್ ಅಲುಕ್ಕಾಸ್, ಚಿಲ್ಲರೆ ವ್ಯಾಪಾರ ವಿಭಾಗದ ಮುಖ್ಯಸ್ಥ ರಾಜೇಶ್ ಕೃಷ್ಣ, ಮಾರುಕಟ್ಟೆ ವ್ಯವಸ್ಥಾಪಕ ಸಾಜು ಪಾಲ್, ಪ್ರಾದೇಶಿಕ ವ್ಯವಸ್ಥಾಪಕ ಜೆನೇಶ್ ವಿ.ಎಸ್. ಭಾಗವಹಿಸಿದ್ದರು

ನಗರದಲ್ಲಿ ಇಂದು

ಏಳನೇ ವರ್ಷದ ಸಂಕ್ರಾಂತಿ ಸಂಭ್ರಮ, ‘ಆದರ್ಶ ಜೈನ ಸಮಾಜ ರತ್ನ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಡಿ. ಸುಧಾಕರ, ಅತಿಥಿಗಳು: ಡಿ. ಸುರೇಂದ್ರಕುಮಾರ್, ಎಸ್. ಜಿತೇಂದ್ರ ಕುಮಾರ್, ಅಧ್ಯಕ್ಷತೆ: ಸುಭಾಷ ಪಿ. ಜಿನಗೌಡ, ಪ್ರಶಸ್ತಿ ಪ್ರದಾನ: ಅನಿತಾ ಡಿ. ಸುರೇಂದ್ರ ಕುಮಾರ್, ಪ್ರಶಸ್ತಿ ಸ್ವೀಕರಿಸುವವರು: ಪದ್ಮಿನಿ ನಾಗರಾಜು, ಆಯೋಜನೆ: ಉತ್ತರ ಕರ್ನಾಟಕ ಜೈನ ಬಾಂಧವರು, ಸ್ಥಳ: ಡಾ. ವೀರೇಂದ್ರ ಹೆಗ್ಗಡೆ ಸಭಾಂಗಣ, ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಶಂಕರಪುರ, ಬೆಳಿಗ್ಗೆ 9.30

ಪದ್ಮಿನಿ ನಾಗರಾಜು

‘ಆನು ಒಲಿದಂತೆ ಹಾಡುವೆ’ ಕನ್ನಡ ಮನಸ್ಸಿನೊಂದಿಗೆ ಒಂದು ದಿನ, ಕೆ.ಜಿ. ನಾಗರಾಜಪ್ಪ ಅವರ ಸಮಗ್ರ ಸಾಹಿತ್ಯ ಅವಲೋಕನ, ಸಂವಾದ ಗೋಷ್ಠಿ: ಚಾಲನೆ: ಡಿ.ವಿ. ಪರಮಶಿವಮೂರ್ತಿ, ಅಧ್ಯಕ್ಷತೆ: ವಿಕ್ಟರ್ ಲೋಬೊ ಎಸ್.ಜೆ., ಆಯೋಜನೆ: ಕನ್ನಡ ವಿಶ್ವವಿದ್ಯಾಲಯ ಹಂಪಿ, ಸ್ಥಳ: ನೋಬಿಲಿ ಹಾಲ್, ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 10ರಿಂದ

‘ಗಜಲ್ ಕಮ್ಮಟ’ ಒಂದು ದಿನದ ತರಬೇತಿ ಶಿಬಿರ ಉದ್ಘಾಟನೆ: ರಾಜಪ್ಪ ದಳವಾಯಿ, ಅಧ್ಯಕ್ಷತೆ: ರಂಗಸ್ವಾಮಿ ಸಿದ್ದಯ್ಯ, ಅತಿಥಿ: ಕಾಶಿನಾಥ್ ಅಂಬಲಗಿ, ಆಯೋಜನೆ: ಕರ್ನಾಟಕ ಗಜಲ್ ಅಕಾಡೆಮಿ, ಸ್ಥಳ: ಪ್ರೆಸ್ಟೀಜ್ ಸೇಂಟ್ ಜಾನ್ಸ್‌ವುಡ್ ಅಪಾರ್ಟ್‌ಮೆಂಟ್, ಸುದ್ದುಗುಂಟೆಪಾಳ್ಯ, ಬೆಳಿಗ್ಗೆ 10ರಿಂದ

ಸಂಕಥನ ಸಾಹಿತ್ಯ ಸಹವಾಸ: ಭಾಗವಹಿಸುವವರು: ಅಗ್ರಹಾರ ಕೃಷ್ಣಮೂರ್ತಿ, ಜಯಶಂಕರ ಹಲಗೂರು, ಸುನೈಫ್ ವಿಟ್ಲ, ಸಂಧ್ಯಾರಾಣಿ, ಅಪರ್ಣಾ ಎಚ್.ಎಸ್., ಸ್ಥಳ: ಆರ್ಟ್ ಗ್ಯಾಲರಿ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಬೆಳಿಗ್ಗೆ 10

‘ಅಡಿಗಾಸ್ ಯಾತ್ರಾ’ 32ನೇ ವಾರ್ಷಿಕೋತ್ಸವ: ಅತಿಥಿಗಳು: ವಚನಾನಂದ ಸ್ವಾಮೀಜಿ, ಬಸವರಾಜ ಹೊರಟ್ಟಿ, ವಿಶ್ವೇಶ್ವರ ಭಟ್, ಎಂ. ಶ್ರೀನಿವಾಸ್, ಅದಿತಿ ಪ್ರಭುದೇವ, ಕೆ. ರಾಧಾಕೃಷ್ಣ ಹೊಳ್ಳ, ಕೆ. ನಾಗರಾಜ ಅಡಿಗ, ಆಶಾ ಎನ್. ಅಡಿಗ, ಆಯೋಜನೆ: ಅಡಿಗಾಸ್ ಯಾತ್ರಾ, ಸ್ಥಳ: ಎಫ್‌ಕೆಸಿಸಿಐ ಸಭಾಂಗಣ, ಎರಡನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತದ ಹತ್ತಿರ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 10

ವಚನಾನಂದ ಸ್ವಾಮೀಜಿ

ರಾಷ್ಟ್ರ ಕವಿ ಕುವೆಂಪು, ದ.ರಾ. ಬೇಂದ್ರೆ ಜನ್ಮದಿನ, ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಉಪನ್ಯಾಸ: ಕಾ.ವೆಂ. ಶ್ರೀನಿವಾಸಮೂರ್ತಿ, ವೈಚಾರಿಕ ಕೃತಿ ಆಯ್ಕೆಯ ಕುರಿತು: ಎಚ್. ದಂಡಪ್ಪ, ಆಶಯ ನುಡಿ: ಎ.ಎಸ್. ನಾಗರಾಜಸ್ವಾಮಿ, ‘ಕುವೆಂಪು ಚಿರಂತನ’ ಪ್ರಶಸ್ತಿ ಸ್ವೀಕರಿಸುವವರು: ರಘುನಾಥ ಚ.ಹ., ‘ಕುವೆಂಪು ಅನಿಕೇತನ’ ಪ್ರಶಸ್ತಿ ಸ್ವೀಕರಿಸುವವರು: ಇಂದೂಧರ ಹೊನ್ನಾಪುರ, ‘ಕುವೆಂಪು ಯುವಕವಿ’ ಪ್ರಶಸ್ತಿ ಸ್ವೀಕರಿಸುವವರು: ಸಂಘಮಿತ್ರೆ ನಾಗರಘಟ್ಟ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಬರಗೂರು ರಾಮಚಂದ್ರಪ್ಪ

ಪುರಂದರದಾಸರ ಆರಾಧನಾ ಮಹೋತ್ಸವ: ಉಪಸ್ಥಿತಿ: ಹ.ಭ.ಪ. ಭಾನುದಾಸ ಮಹಾರಾಜ ಸರ್ವದೆ ಬಂಕಾಪುರ, ಎಸ್. ರಾಘವೇಂದ್ರ ಆಚಾರ್, ಆಯೋಜನೆ: ಶ್ರೀ ಅಭಯ ಲಕ್ಷ್ಮೀನರಸಿಂಹ ಚಾರಿಟಬಲ್ ಟ್ರಸ್ಟ್, ಸ್ಥಳ: ಶ್ರೀ ಅಭಯ ಲಕ್ಷ್ಮೀನರಸಿಂಹ ಶ್ರೀ ಪಟ್ಟಾಭಿರಾಮ ದೇವಸ್ಥಾನ, ಮೂರನೇ ಬ್ಲಾಕ್, ತ್ಯಾಗರಾಜನಗರ, ಬೆಳಿಗ್ಗೆ 8ರಿಂದ

ಪುರಂದರದಾಸರ ಆರಾಧನಾ ಸಂಗೀತೋತ್ಸವ: ಪುರಂದರದಾಸರ ವಿಗ್ರಹಕ್ಕೆ ಅಭಿಷೇಕ, ಪುರಂದರದಾಸರ ಕೃತಿಗಳ ಗೋಷ್ಠಿ ಗಾಯನ: ಲಕ್ಷ್ಮಿ ಭಾಸ್ಕರ್, ಚಂದ್ರಿಕಾ ಬದರಿನಾಥ್, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ಪುರಂದರದಾಸರ ಬೃಹತ್ ಶಿಲಾವಿಗ್ರಹ ಸನ್ನಿಧಾನ, ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನದ ಆವರಣ, ಉತ್ತರಾದಿಮಠ, ಪಂಪ ಮಹಾಕವಿ ರಸ್ತೆ, ಬಸವನಗುಡಿ, ಬೆಳಿಗ್ಗೆ 9ರಿಂದ

ಪುರಂದರದಾಸರ ಆರಾಧನಾ ಮಹೋತ್ಸವ: ಗಾಯನ: ಆತ್ರೇಯೀ ಕೃಷ್ಣಾ ಕೆ., ಮೃದಂಗ: ಪ್ರಜ್ವಲ್ ಭಾರದ್ವಾಜ್, ಪಿಟೀಲು: ಶೃತಿ ಸಿ.ವಿ., ಖಂಜೀರಾ: ಹರೀಶ್‌ಚಂದ್ರ, ಆಯೋಜನೆ: ಸಮೀರ ಸಮಯ ಸಂಜೀವಿನಿ ಸಂಸತ್ ಪ್ರತಿಷ್ಠಾನ, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಎಂಟನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6

ಪುರಂದರ ನಮನ: ಗಾಯನ: ರಮ್ಯಾ ಸುಧೀರ್, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಕೇದಾರನಾಥ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಕೆಂಗೇರಿ ಉಪನಗರ, ಸಂಜೆ 6.30

ದಾಸರ ಪದಗಳ ಗಾಯನ: ಕೆ.ಪಿ. ಶಿಶಿರ್, ಹಾರ್ಮೋನಿಯಂ: ಸಂಸ್ಕೃತಿ ಬಾಣಾವರ್, ತಬಲಾ: ಧ್ರುವ ಆಚಾರ್ಯ, ತಾಳ: ಎಸ್.ಆರ್. ಇಂಚರಾ, ಆಯೋಜನೆ: ರಾಜರಾಜೇಶ್ವರಿನಗರದ ಶ್ರೀಮನ್ಮಧ್ವ ಸಂಘ, ಸ್ಥಳ: ಸೀತಾರಾಮ ಮಂದಿರ, ರಾಘವೇಂದ್ರ ಸ್ವಾಮಿ ಮಠದ ರಸ್ತೆ, ಬೆಮೆಲ್ ಬಡಾವಣೆ ಮೂರನೇ ಹಂತ, ರಾಜರಾಜೇಶ್ವರಿನಗರ, ಸಂಜೆ 6.45

ಹೊಸ ವರ್ಷದ ಸಂಭ್ರಮಾಚರಣೆ, 20ನೇ ಸಾಂಸ್ಕೃತಿಕ ಸಿಂಚನ: ಉದ್ಘಾಟನೆ: ಭಾಸ್ಕರರಾವ್, ಅಧ್ಯಕ್ಷತೆ: ಗಂಡಸಿ ಸದಾನಂದಸ್ವಾಮಿ, ಅತಿಥಿಗಳು: ಆರ್. ಶ್ರೀಧರ್, ಬಿ.ಎಸ್. ಮಂಜುನಾಥ, ಶಶಿಧರ್ ಕೋಟೆ, ಅನೀಲ್ ಕುಮಾರ್ ಎನ್.ಪಿ., ಚಂದ್ರಿಕಾ ಬಿ.ವಿ., ಆಯೋಜನೆ: ಇದು ನಿಮ್ಮ ವಾಹಿನಿ ಕಲಾವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಅರ್ಥ್‌ಮೆಟಿಕ್ ಜೀನಿಯಸ್ ಕಂಟೆಸ್ಟ್: ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಎಸ್. ನಾರಾಯಣಸ್ವಾಮಿ, ಸ್ಥಳ: ರೇವಾ ವಿಶ್ವವಿದ್ಯಾಲಯ, ಬೆಳಿಗ್ಗೆ 10

ರುಕ್ಮಿಣಿ ರಘುರಾಮ್ ಅವರ ‘ಸೆರಗಿನ ಕಿಡಿ’ ಪುಸ್ತಕ ಬಿಡುಗಡೆ: ಜಗದೀಶಶರ್ಮಾ ಸಂಪ, ಅಧ್ಯಕ್ಷತೆ: ಜಿ. ಅಶ್ವತ್ಥನಾರಾಯಣ, ಆಯೋಜನೆ: ಕದಂಬ ಪ್ರಕಾಶನ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜಿನ ಆವರಣ, ಬಸವನಗುಡಿ, ಬೆಳಿಗ್ಗೆ 10.30

ಪುಸ್ತಕಗಳ ಬಿಡುಗಡೆ, ಸಂವಾದ: ಅಧ್ಯಕ್ಷತೆ: ಜಿ.ಬಿ. ಹರೀಶ, ಅತಿಥಿಗಳು: ಸಂತೋಷ್ ಕುಮಾರ್ ಮೆಹೆಂದಳೆ, ಅಣಕು ರಾಮನಾಥ್, ಸಿ.ಜಿ. ವಿಜಯಸಿಂಹ ಆಚಾರ್ಯ, ಉಪಸ್ಥಿತಿ: ರಮೇಶ್ ಶೆಟ್ಟಿಗಾರ್, ಕಂ.ಕ. ಮೂರ್ತಿ, ನಳಿನಿ ಭೀಮಪ್ಪ, ಸುಮಾ ರಮೇಶ್, ಸಂವಾದ ನಿರ್ವಹಣೆ: ಅರ್ಚನಾ ಆರ್., ಆಯೋಜನೆ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಸ್ಥಳ: ಸುಚಿತ್ರ ಸಭಾಂಗಣ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10.30

ಅಖಿಲ ಭಾರತ ಅಂಚೆ ಗ್ರೂಪ್ ‘ಸಿ’ ನೌಕರರ ಸಂಘದ ಕರ್ನಾಟಕ ವೃತ್ತದ ಸಮ್ಮೇಳನ: ಅತಿಥಿಗಳು: ಪಿ. ಶ್ರೀಧರ್ ರೆಡ್ಡಿ, ಜಿ. ಜಾನಕಿರಾಮ್, ಚಂದ್ರಸ್ವಾಮಿ, ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಕೆ. ಪ್ರಕಾಶ್, ಚಂದ್ರಶೇಖರ್ ಕೆ., ಸಿ.ಎಸ್. ಷಡಕ್ಷರಿ, ಸ್ಥಳ: ಅಖಿಲ ಭಾರತ ಅಂಚೆ ಗ್ರೂಪ್ ‘ಸಿ’ ನೌಕರರ ಸಂಘ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

16ನೇ ವರ್ಷದ ಸರ್ವಸದಸ್ಯರ ಸಭೆ: ಆಯೋಜನೆ: ಆರುವೇಲು ನಿಯೋಗಿ ಬ್ರಾಹ್ಮಣ ಸಂಘ, ಸ್ಥಳ: ಗಂಜಾಂ ಮಂಟಪ, ಬುಲ್‌ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮ ಹತ್ತಿರ, ಬೆಳಿಗ್ಗೆ 11

‘ಸಮಾನತೆಯ ಹಾದಿಯಲ್ಲಿ ಲಕ್ಷ್ಮೀನಾರಾಯಣ ನಾಗವಾರ’ ಹೋರಾಟಗಾರನ ಅಳಿಯದ ನೆನಪು: ಅತಿಥಿಗಳು: ಎಚ್.ಸಿ. ಮಹದೇವಪ್ಪ, ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ, ಬಿ.ಆರ್. ಪಾಟೀಲ, ಇಂದಿರಾ ಕೃಷ್ಣಪ್ಪ, ಪುರುಷೋತ್ತಮ ದಾಸ್, ಜನಾರ್ದನ, ಅಲಿಬಾಬಾ, ಅಧ್ಯಕ್ಷತೆ: ಜೀವನಹಳ್ಳಿ ವೆಂಕಟೇಶ್, ಆಯೋಜನೆ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಆರ್‌ಪಿಐ ಪದಾಧಿಕಾರಿಗಳ ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಸತೀಶ್, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಕೆ.ಪಿ. ಕಾರ್ ಕೇರ್ ಹಾಲ್, ಎಚ್‌ಎಸ್‌ಆರ್ ಲೇಔಟ್, ಮಧ್ಯಾಹ್ನ 12

‘ಸಮರ್ಪಣಾ’ ಪ್ರವಚನ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 4

ಪೊಲೀಸರ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭ: ಅತಿಥಿಗಳು: ಜಿ. ಪರಮೇಶ್ವರ, ಕನ್ನಿಕಾ ಪರಮೇಶ್ವರಿ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಕ್ರೀಡಾಂಗಣ, ಕೋರಮಂಗಲ, ಸಂಜೆ 4.30

‘ಮಹಾಮಂತ್ರಿ ದುಷ್ಟಬುದ್ಧಿ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಎಲೆಕ್ಟ್ರಾನಿಕ್ ಸಿಟಿ ಯಕ್ಷಾಭಿನಿ ಬಳಗ, ಸ್ಥಳ: ಐಐಐಟಿಬಿ ಸಭಾಂಗಣ, ಎಲೆಕ್ಟ್ರಾನಿಕ್ ಸಿಟಿ, ಸಂಜೆ 4.30

ಹಿಂದೂಸ್ತಾನಿ ಪಿಟೀಲು ವಾದನ: ವಿನಾಯಕ ಅನಂತ ಹೆಗಡೆ, ತಬಲಾ: ಗೌರೀಶ್ ಅನಂತ ಹೆಗಡೆ, ಆಯೋಜನೆ: ನಾದಬ್ರಹ್ಮ ಕಲಾಕೇಂದ್ರ, ಸ್ಥಳ: ನಾದಬ್ರಹ್ಮ ಪ್ರಾರ್ಥನಾ ಮಂದಿರ, ಜಿ.ಪಿ. ರಾಜರತ್ನ ರಸ್ತೆ, ವೇಣುಗೋಪಾಲರೆಡ್ಡಿ ಬಡಾವಣೆ, ಅರಕೆರೆ, ಬನ್ನೇರುಘಟ್ಟ ರಸ್ತೆ, ಸಂಜೆ 5

ಮಹಿಳಾ ಯಕ್ಷೋತ್ಸವ, ಸಿರಿಕಲಾ ಮೇಳದ ವಾರ್ಷಿಕೋತ್ಸವ, ಸಿರಿಕಲಾ ಪುರಸ್ಕಾರ, ಸಿರಕಲಾಪೋಷಕ ಪುರಸ್ಕಾರ ಪ್ರದಾನ: ಪುರಸ್ಕಾರ ಸ್ವೀಕರಿಸುವವರು: ಗಜಾನನ ಭಂಡಾರಿ ಬೋಳ್ಗೆರೆ, ರ.ವಿ. ಜಹಾಗೀರದಾರ, ‘ದ್ರೌಪದಿ ಪ್ರತಾಪ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ಆಯೋಜನೆ: ಸಿರಿಕಲಾ ಮೇಳ, ಸ್ಥಳ: ಉತ್ತರ ಕನ್ನಡ ಸಂಘ, ನಂದಿನಿ ಬಡಾವಣೆ, ಸಂಜೆ 5

ಚಿಲಕುಂದ ಸಹೋದರಿಯರ ಸಂಗೀತ ಕಛೇರಿ: ಗಾಯನ: ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಅದಮ್ಯ ಆರ್., ಘಟ್ಟ: ವಿದ್ಯಾಶಂಕರ್, ಆಯೋಜನೆ: ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ್ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5ರಿಂದ

‘ಕೆರೆಕೈ ಕಮಲಾಕರ್ ಭಟ್’ ಸ್ಮಾರಕ ಸಂಗೀತ ಕಛೇರಿ: ಗಾಯನ: ಕಿರಣ್ ಕಮಲಾಕರ್ ಭಟ್, ತಬಲಾ: ಅರುಣ್ ಕಮಲಾಕರ್ ಭಟ್, ಹಾರ್ಮೋನಿಯಂ: ಮಧುಸೂದನ್ ಭಟ್, ಗಾಯನ: ರುತುರಾಜ್ ಲಾಡ್, ತಬಲಾ: ವಿಘ್ನೇಶ್ ಕಾಮತ್, ಹಾರ್ಮೋನಿಯಂ: ತೇಜಸ್ ರವೀಂದ್ರ ಕಾಟೋಟಿ, ಆಯೋಜನೆ: ಸಪ್ತಕ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.30

‘ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ ಸ್ಮಾರಕ’ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಎನ್. ಕುಮಾರ್, ಪ್ರಶಸ್ತಿ ಸ್ವೀಕರಿಸುವವರು: ಮೈಸೂರು ಎಂ. ನಾಗರಾಜ್, ಮೈಸೂರು ಎಂ. ಮಂಜುನಾಥ್, ಆಯೋಜನೆ ಮತ್ತು ಸ್ಥಳ: ದಿ ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ರಾಜ್ಯಮಟ್ಟದ ಐದು ದಿನಗಳ ಜಾನಪದ ನಾಟಕಗಳ ಉತ್ಸವ: ಅತಿಥಿಗಳು: ಎನ್. ಕೃಷ್ಣಪ್ಪ ಕೋಡಿಪಾಳ್ಯ, ಕೆ. ವೆಂಕಟೇಶ್, ಕಿರಣ್ ಕೆ., ‘ಹಳ್ಳಿಯಲ್ಲೊಂದು ಹರಿಕಥಾ ಪ್ರಸಂಗ’ ನಾಟಕ ಪ್ರದರ್ಶನ: ರಚನೆ: ಯು. ಗೋವಿಂದೇಗೌಡ, ನಿರ್ದೇಶನ: ಧನ್ವಂತ್ರಿ ಬಿ., ಪ್ರಸ್ತುತಿ: ರಂಗ ಪರಂಪರೆ ಟ್ರಸ್ಟ್, ಸ್ಥಳ: ಗಂಗಮ್ಮ ಪಟೇಲ್ ಮುದ್ದಭೈರಪ್ಪ ಸಭಾಂಗಣ, ನ್ಯೂ ಮಂಜುಳ ಪಬ್ಲಿಕ್ ಸ್ಕೂಲ್ ಸಮುಚ್ಚಯ, ಗೃಹಲಕ್ಷ್ಮಿ ಬಡಾವಣೆ, ನೆಲಗದರನಹಳ್ಳಿ, ಮಧ್ಯಾಹ್ನ 3

‘ಜ್ಞಾನ ದೇಗುಲ–ನಮ್ಮೂರ ಸರ್ಕಾರಿ’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಸಿದ್ದೇಶ್ವರ ನನಸುಮನೆ, ಆಯೋಜನೆ: ಜನಪದರು, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

‘ತೇಜಸ್ವಿ ನಾಟಕೋತ್ಸವ’ದ ಅಂಗವಾಗಿ ‘ಕರ್ವಾಲೊ’ ನಾಟಕ ಪ್ರದರ್ಶನ: ಪ್ರಸ್ತುತಿ: ರೂಪಾಂತರ, ಆಯೋಜನೆ: ತೋಟಗಾರಿಕೆ ಇಲಾಖೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಸ್ಥಳ: ಲಾಲ್‌ಬಾಗ್, ಸಂಜೆ 5

‘ಮುದ್ದಣ್ಣನ ಪ್ರಮೋಷನ್ ಪ್ರಸಂಗ’ ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಬಿ. ಅಶೋಕ್, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 5

ಬೆಂಗಳೂರು ಹಬ್ಬ: ಮಣಿಪುರ್ ವಿತ್ ಲವ್, ಸ್ಕ್ರೀಮ್ಸ್ ಆಫ್ ಸೈಲೆನ್ಸ್, ಸಂಗೀತ ಕಛೇರಿಗಳು: ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 5.30ರಿಂದ. ‘ಮೂಡ್ಸ್ ಆ್ಯಂಡ್ ಮೆಲೊಡೀಸ್–ನಮ್ಮ ಬೆಂಗಳೂರಿನಲ್ಲೊಂದು ದಿನ’: ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30ರಿಂದ.

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ ‘ಜೈಮಿನಿ ಭಾರತ’ ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ಶ್ರೀಶಾನಂದ, ಎಂ. ರಮೇಶ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಸಂಜೆ 5.45



ಪಾವಗಡ ಪ್ರಕಾಶರಾವ್

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಕೇಂದ್ರ ಸರ್ಕಾರಿ ನೌಕರರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿ (ಐಸಿಎಫ್‌ಆರ್‌ಇ) ನಡೆಸುವ ವಿವಿಧ ಹುದ್ದೆಗಳ ಪರೀಕ್ಷೆಗಳಲ್ಲಿ ನಕಲಿ ಅಭ್ಯರ್ಥಿಗಳಿಂದ ಪರೀಕ್ಷೆ ಬರೆಯಿಸಿ ಹಾಗೂ ನಕಲಿ ದಾಖಲಾತಿ ಸಲ್ಲಿಸಿ ಕೆಲಸ ಗಿಟ್ಟಿಸಿಕೊಂಡಿದ್ದ ಏಳು ಮಂದಿ ಕೇಂದ್ರ ಸರ್ಕಾರಿ ನೌಕರರ ವಿರುದ್ಧ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐಸಿಎಫ್‌ಆರ್‌ಇ ನಿರ್ದೇಶಕ ಡಾ. ಶಕ್ತಿಸಿಂಗ್ ಚೌಹಾಣ್ ಅವರು ನೀಡಿದ ದೂರು ಆಧರಿಸಿ ಎಂಟಿಎಸ್ ನೌಕರರಾದ ದಿನೇಶ್, ಸುಧೀರ್, ಪ್ರಿನ್ಸ್, ಸೋನು, ಪ್ರವೀಣ್, ರಾಜ್ ಕುಮಾರ್ ಹಾಗೂ ಅರಣ್ಯ ರಕ್ಷಕ ಸುನೀಲ್ ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ.

'ಐಸಿಎಫ್‌ಆರ್‌ಇ ವತಿಯಿಂದ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಎಂಟಿಎಸ್) ಹಾಗೂ ಅರಣ್ಯ ರಕ್ಷಕ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿತ್ತು. ಇದರಂತೆ 2019, 2022 ಹಾಗೂ 2023ರಲ್ಲಿ ಪರೀಕ್ಷೆ ಬರೆದು ಸರ್ಕಾರಿ ಕೆಲಸ ಗಿಟ್ಟಿಸಿಕೊಂಡಿದ್ದರು.

2025ರಲ್ಲಿ ನೇಮಕಗೊಂಡ ಸರ್ಕಾರಿ ಉದ್ಯೋಗಿಗಳ ದಾಖಲೆ ನೈಜತೆ ಪರಿಶೀಲಿಸಲು ಸೂಚಿಸಲಾಗಿತ್ತು. ಪರಿಶೀಲನೆ ವೇಳೆ ನಾಲ್ವರು ನೌಕರರ ಬದಲಾಗಿ ಬೇರೆಯವರು ಪರೀಕ್ಷೆ ಬರೆದಿರುವುದು ಕಂಡುಬಂದಿತ್ತು. ನೇಮಕದ ವೇಳೆ ಸಂಗ್ರಹಿಸಲಾಗಿದ್ದ ದಾಖಲಾತಿಯಲ್ಲಿರುವ ಸಹಿಗೂ ಪರೀಕ್ಷೆ ವೇಳೆ ಮಾಡಿದ ಸಹಿಗೂ ವ್ಯತ್ಯಾಸ ಇರುವುದು ಕಂಡುಬಂದಿತ್ತು. ಎಫ್‌ಎಸ್‌ಎಲ್‌ನಲ್ಲಿ ಇದು ದೃಢವಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಪರಿಶೀಲಿಸಿದಾಗ ಬೇರೆ ಅಭ್ಯರ್ಥಿಗಳು ಪರೀಕ್ಷೆ ಬರೆದಿರುವುದು ಕಂಡುಬಂದಿತ್ತು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಆರೋಪಿಗಳ ಪೈಕಿ ದಿನೇಶ್ 2019ರಲ್ಲಿ ಎಂಟಿಎಸ್ ಗೆ ನೇಮಕಗೊಂಡಿದ್ದರು. ಸುನಿಲ್ ಕುಮಾರ್ ಯಾದವ್ 2023ರಲ್ಲಿ ಉದ್ಯೋಗಕ್ಕೆ ಸೇರಿದ್ದರು. ಉಳಿದವರು 2022ರಲ್ಲಿ ನೇಮಕಾತಿ ಹೊಂದಿದ್ದರು. ತಲೆಮರೆಸಿಕೊಂಡಿರುವ ಆರೋಪಿಗಳ ಶೋಧ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಅನಕ್ಷರಸ್ಥರು ಹೆಚ್ಚು ಸೃಜನಶೀಲರು'

ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ರಂಗಕರ್ಮಿ ಜನ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಕ್ಷರಸ್ಥರನ್ನು ಬುದ್ಧಿಗೇಡಿಗಳೆಂದು ಕರೆಯುವವರೇ ಬುದ್ಧಿಗೇಡಿಗಳು. ಅಕ್ಷರ ಜ್ಞಾನ ಇಲ್ಲದ ಜನರೇ ಹೆಚ್ಚು ಜ್ಞಾನಿಗಳಾಗಿರುತ್ತಾರೆ. ಅವರಿಗಿಂತ ದೊಡ್ಡ ಸೃಜನಶೀಲರು ಬೇರೆ ಎಲ್ಲೂ ಇಲ್ಲ' ಎಂದು ರಂಗಕರ್ಮಿ ಎಚ್. ಜನಾರ್ದನ್ (ಜನ್ನಿ) ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಆಯೋಜಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅವರಿಗಿರುವ ಬುದ್ಧಿವಂತಿಕೆ, ಎಲ್ಲರನ್ನು ಒಳಗೊಳ್ಳುವ ಗುಣ ನಮ್ಮಲ್ಲಿ ಇಲ್ಲ. ಬೇಕಿದ್ದರೆ ಮಹದೇಶ್ವರ ಬೆಟ್ಟಕ್ಕೆ ಒಂದು ಬಾರಿ ಹೋಗಿ ಬನ್ನಿ. ಅಲ್ಲಿ 50 ಲಕ್ಷ ಜನರು ಸೇರುತ್ತಾರೆ. ಭಾಷೆ ಬೇರೆಯಾಗಿರುತ್ತದೆ. ಭಾಷೆ ಒಂದೇ ಇದ್ದರೆ ಧ್ವನಿ ಬೇರೆಯಾಗಿರುತ್ತದೆ. ಅಲ್ಲಿ 25 ಲಕ್ಷ ವೈವಿಧ್ಯ ಕಾಣಬಹುದು. ಆದರೆ, ಅವರೆಲ್ಲರೂ ಮಹದೇಶ್ವರನ ಹೆಸರಲ್ಲಿ ಒಂದಾಗುತ್ತಾರೆ. ಹಾಡು ಕಟ್ಟುತ್ತಾರೆ. ಸಂವಹನ ನಡೆಸುತ್ತಾರೆ. ಒಳಗೊಳ್ಳುವಿಕೆ ಅಲ್ಲಿ ಕಾಣಬಹುದು' ಎಂದರು.

'ನಾವು ಅಡ್ಡದಾರಿ ಹಿಡಿಯುತ್ತೇವೆ. ಒಳಗೊಳ್ಳುವುದಿಲ್ಲ. ಮನುಷ್ಯ ಸಂಬಂಧಗಳನ್ನು ಬೆಳೆಸುವುದಿಲ್ಲ. ಮನುಷ್ಯ ಸಂಬಂಧ ಕಟ್ಟಲಾಗದೇ ದೇಶ ಕಟ್ಟುತ್ತೇವೆ ಎಂಬುದಕ್ಕೆ ಅರ್ಥವೇ ಇರುವುದಿಲ್ಲ' ಎಂದರು.

'ಅಕ್ಷರಸ್ಥರಾದ ನಾವು ಇಷ್ಟು ಉದ್ದದ ಹಾಡು ಎಂದು ಬರೆಯುತ್ತೇವೆ. 20 ಗೆರೆ ಇದ್ದರೆ ಅಷ್ಟನ್ನೇ ಓದುತ್ತೇವೆ. ಅಷ್ಟನ್ನೇ ಹಾಡುತ್ತೇವೆ. ಆದರೆ, ಜನಪದರು ನೋಡುತ್ತ ನೋಡುತ್ತಲೇ ಕಾವ್ಯ ಕಟ್ಟುತ್ತಾರೆ' ಎಂದು ತಿಳಿಸಿದರು.

'ರಾಷ್ಟ್ರೀಯ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದವರಷ್ಟೇ ಕಲಾವಿದರು ಎಂದು ಭಾವಿಸುವುದು ಇದೆ. ಈ ಜನಪದ ಹಾಡುಗಾರರು, ಜನಪದ ಕಲಾವಿದರು ಯಾವ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದಾರೆ? ಜನಪದರದ್ದೇ ನಿಜವಾದ ಶ್ರೀಮಂತ ಸಂಸ್ಕೃತಿ' ಎಂದು ಬಣ್ಣಿಸಿದರು.

'ಕವಿ ಸಿದ್ದಲಿಂಗಯ್ಯ ಅವರ ಶೇ90ರಷ್ಟು ಹಾಡುಗಳಿಗೆ ರಾಗ ಸಂಯೋಜನೆ ಮಾಡಿದವನು ನಾನು. ಒಂದು ಬಾರಿ ಅವರು ಓದುತ್ತಾರೆ. ಅದಕ್ಕೆ ಸರಿಯಾಗಿ ಅಲ್ಲೇ ರಾಗ ಸಂಯೋಜಿಸುತ್ತೇನೆ. ಒಂದೇ ಬಾರಿಗೆ ಅವರ ಕವಿತೆ ಹಾಡು ಆಗಿ ಬಿಡುತ್ತದೆ. 2ನೇ ಬಾರಿಗೆ ರಾಗ ಸಂಯೋಜಿಸಿದ್ದೇ ಇಲ್ಲ' ಎಂದು ಅನುಭವ ಬಿಚ್ಚಿಟ್ಟರು.

'ಈಗ ಕಾಡು ಮತ್ತು ನೀರನ್ನು ಮಾರಾಟ ಮಾಡುವವರಿದ್ದಾರೆಯೇ ಹೊರತು, ನಿಸರ್ಗವನ್ನು ಅರ್ಥ ಮಾಡಿಕೊಳ್ಳುವವರಿಲ್ಲ. ಅದುವೇ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಅದುವೇ ಸಮಾಜಘಾತುಕವಾದುದು. ಪ್ರಕೃತಿಯನ್ನು ಅರ್ಥ ಮಾಡಿಕೊಂಡವರಿಂದ ಪರಿಸರ ನಾಶ ಸಾಧ್ಯವಿಲ್ಲ' ಎಂದು ಹೇಳಿದರು.

'ಕಾರಂತ, ಸಿದ್ದಲಿಂಗಯ್ಯ ಮುಂತಾದವರು ತಾಯಿ ಹೃದಯದವರು. ಸಾಮೂಹಿಕ ಚಿಂತನೆ, ಸಮಷ್ಟಿ ಚಿಂತನೆಗಳನ್ನು ಕಲಿಸಿದವರು' ಎಂದರು.

ಜನ್ನಿ ಹೇಳಿದ್ದು

- ಅನಕ್ಷರಸ್ಥರಲ್ಲಿ ಒಳಗೊಳ್ಳುವಿಕೆ ಹೆಚ್ಚು
- ಸಂಬಂಧ ಕಟ್ಟದೆ ದೇಶ ಕಟ್ಟಲು ಸಾಧ್ಯವಿಲ್ಲ
- ನೋಡುತ್ತಲೇ ಕಾವ್ಯ ಕಟ್ಟುವ ಜನಪದರು

'ಕೊಳೆಗೇರಿಯಲ್ಲಿ ನರಳಿ ಅರಳಿದ ಬಾಲ್ಯ'

ಜನಾರ್ದನ

'ನನ್ನ ಬಾಲ್ಯ ಕೊಳೆಗೇರಿಯಲ್ಲಿ ನರಳಿ ಅರಳಿತು. ಮನೆಯಲ್ಲಿ ಕಿತ್ತುತಿನ್ನುವ ಬಡತನವಿತ್ತು. ತುತ್ತು ಅನ್ನಕ್ಕಾಗಿ ಬಾವಿಯಲ್ಲಿ ನೀರು ಸೇದಬೇಕಿತ್ತು. ಪುಟ್ಟ ಕೈಗಳಲ್ಲಿ ನೀರು ಸೇದಿ ಬೊಬ್ಬೆಗಳು ಬಂದಿದ್ದವು' ಎಂದು ಜನ್ನಿ ಬಾಲ್ಯದ ದಿನಗಳನ್ನು ಕಣ್ಣಲ್ಲಿ ನೀರು ತುಂಬಿಸಿಕೊಂಡು ನೆನಪು ಮಾಡಿಕೊಂಡರು.

'ಶ್ರೀರಾಂಪುರದ ಕೊಳೆಗೇರಿಯಲ್ಲಿ ನಾನು ಮಾತ್ರವಲ್ಲ ಕವಿ ಸಿದ್ದಲಿಂಗಯ್ಯ ಕೂಡ ಅಲ್ಲೇ ಬೆಳೆದವರು. ಗುಡಿಸಲೇ ನಮ್ಮ ಬದುಕು ರೂಪಿಸಿದೆ. ಹಾಸ್ಟೆಲ್ ಸೇರಿದರೆ ಹೊಟ್ಟೆ ತುಂಬುತ್ತದೆ ಎಂಬ ಕಾರಣಕ್ಕೆ ವೈಟ್‌ಫೀಲ್ಡ್‌ನಲ್ಲಿ ಹಾಸ್ಟೆಲ್‌ಗೆ ಸೇರಿದ್ದೆ. ಅಲ್ಲಿ 15 ಎಕರೆ ಮಾವು, ತೆಂಗು, ಬಾಳೆ ತೋಟಗಳಿದ್ದವು. ಬೆಳಿಗ್ಗೆ 5ಕ್ಕೆ ಎಬ್ಬಿಸಿ ನೀರು ಹಾಕಲು ಕಳುಹಿಸುತ್ತಿದ್ದರು' ಎಂದರು.

'ಸಿದ್ದಲಿಂಗಯ್ಯ ಅವರ ಕಾರಣದಿಂದಾಗಿಯೇ ಕಾರಂತರು, ಕಿ.ರಂ. ನಾಗರಾಜ್, ಪ್ರಸನ್ನ ಇಂಥ ಅನೇಕರ ಸಂಪರ್ಕಕ್ಕೆ ಬರಲು ಸಾಧ್ಯವಾಯಿತು' ಎಂದು ನೆನಪು ಮಾಡಿಕೊಂಡರು.

'ಸಮುದಾಯ'ದಲ್ಲಿ ಮಾಡಿದ ಪ್ರಯೋಗ, ನರಗುಂದ ರೈತರ ಹತ್ಯೆ ನಡೆಸಿದ ಹೋರಾಟಗಳನ್ನು ಸ್ಮರಿಸಿದರು.

ಬೀದಿ ಬದಿ ವ್ಯಾಪಾರಿಗಳ ದಿನಾಚರಣೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹಿಳಾ ಬೀದಿ ಬದಿಯ ವ್ಯಾಪಾರಿ ಸಂಘಟನೆಗಳ ಒಕ್ಕೂಟದಿಂದ ಜ.19ಕ್ಕೆ ಜೆ.ಸಿ. ರಸ್ತೆಯಲ್ಲಿರುವ ಪುರಭವನದಲ್ಲಿ ಬೀದಿ ಬದಿ ವ್ಯಾಪಾರಿ ಒಕ್ಕೂಟದ ಉದ್ಘಾಟನೆ ಹಾಗೂ ಬೀದಿ ಬದಿಯ ವ್ಯಾಪಾರಿಗಳ ದಿನಾಚರಣೆ ಹಮ್ಮಿಕೊಳ್ಳಲಾಗಿದೆ' ಎಂದು ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷೆ ಆರ್. ಮುನಿಲಕ್ಷ್ಮೀ ತಿಳಿಸಿದರು.

ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಗರದಲ್ಲಿರುವ ಬೀದಿ ಬದಿಯ ವ್ಯಾಪಾರಿಗಳಿಗೆ ಗುರುತಿನ ಚೀಟಿಗಳ ವಿತರಿಸಬೇಕು. ಮಹಿಳಾ ವ್ಯಾಪಾರಿಗಳಿಗೆ ಶೌಚಾಲಯ ನಿರ್ಮಿಸಬೇಕು. ಬೀದಿ ವ್ಯಾಪಾರಿಗಳ ಅಧಿನಿಯಮ 2014ರ ಸಂಪೂರ್ಣ ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿದರು.

ಒಕ್ಕೂಟದ ಉಪಾಧ್ಯಕ್ಷೆ ಲಲಿತಾ, ಪ್ರಧಾನ ಕಾರ್ಯದರ್ಶಿ ಜಮೀಲಾಬಾನು, ಸಹ ಕಾರ್ಯದರ್ಶಿಗಳಾದ ಧನಲಕ್ಷ್ಮೀ, ಜಿ. ಪುಷ್ಪಲತಾ, ಸಂಘಟನಾ ಕಾರ್ಯದರ್ಶಿ ಅಲೀಮಾ, ಖಜಾಂಜಿ ಲಕ್ಷ್ಮೀ ಆರ್., ಸಂಚಾಲಕಿ ದೀಪಾ ಬಡಿಗೇರ ಉಪಸ್ಥಿತರಿದ್ದರು.

ಹೋರಾಟಕ್ಕೆ 'ಮನರೇಗಾ ರಕ್ಷಣಾ ಒಕ್ಕೂಟ–ಕರ್ನಾಟಕ' ಕರೆ

ನರೇಗಾ ಮರು ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ನರೇಗಾ) ರದ್ದುಪಡಿಸುವ ಕೇಂದ್ರ ಸರ್ಕಾರದ ವಿರುದ್ಧ ಗ್ರಾಮ ಮಟ್ಟದಿಂದ ಸಂಸತ್ತಿನವರೆಗೂ ಹೋರಾಟ ನಡೆಸಬೇಕು ಎಂಬ ನಿರ್ಣಯವನ್ನು 'ಮನರೇಗಾ ರಕ್ಷಣಾ ಒಕ್ಕೂಟ-ಕರ್ನಾಟಕ'ವು ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ ತೆಗೆದುಕೊಳ್ಳಲಾಯಿತು.

ಒಕ್ಕೂಟವು ನಗರದಲ್ಲಿ ಶನಿವಾರ 'ಉದ್ಯೋಗ ಖಾತರಿ ಧ್ವಂಸದ ವಿಬಿ ಜಿ ರಾಮ್ ಜಿ ಕಾನೂನಿನ ಅಪಾಯಗಳು ಮತ್ತು ಮುನ್ನೆಚ್ಚರಿಕೆ' ವಿಚಾರಗೋಷ್ಠಿಯನ್ನು ಆಯೋಜಿಸಿತ್ತು. ನರೇಗಾವನ್ನು ರದ್ದುಪಡಿಸಿ ಕೇಂದ್ರ ಸರ್ಕಾರವು ತರಲು ಹೊರಟಿರುವ ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್–ಗ್ರಾಮೀಣ (ವಿಬಿ–ಜಿ ರಾಮ್ ಜಿ) ಯೋಜನೆಯು ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತದೆ ಎಂಬ ಆತಂಕ ವಿಚಾರಗೋಷ್ಠಿಯಲ್ಲಿ ವ್ಯಕ್ತವಾಯಿತು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, 'ಕೇಂದ್ರದಲ್ಲಿ ಅತ್ಯಂತ ಕೆಟ್ಟ ಪಕ್ಷ ಅಧಿಕಾರದಲ್ಲಿದ್ದು, ಅಷ್ಟೇ ಕೆಟ್ಟ ಆಡಳಿತ ನೀಡುತ್ತಿದೆ. ಅದರಲ್ಲಿ ಎಷ್ಟು ಕೆಡುಕು ತುಂಬಿದೆ ಎಂಬುದಕ್ಕೆ ವಿಬಿ–ಜಿ ರಾಮ್ ಜಿ ಯೋಜನೆಯೇ ಸಾಕ್ಷಿ. ಈ ಕೆಡುಕಿನ ವಿರುದ್ಧ ನಾವೆಲ್ಲರೂ ಹೋರಾಡಬೇಕು' ಎಂದು ಕರೆ ನೀಡಿದರು.

ಕೃಷಿ ತಜ್ಞ ಕೆ.ಪಿ.ಸುರೇಶ ವಿಷಯವನ್ನು ಪ್ರಸ್ತಾಪಿಸಿ, 'ಕೇಂದ್ರ ಸರ್ಕಾರವು ನರೇಗಾ ಯೋಜನೆಯ ಹೆಸರನ್ನಷ್ಟೇ ಬದಲಿಸಿದೆ ಎಂದು ತಪ್ಪಾಗಿ ಅರ್ಥೈಸಲಾಗುತ್ತಿದೆ. ಆದರೆ ಇದು, ಜನರ ಹಕ್ಕು ಮತ್ತು ರಾಜ್ಯಗಳ ಅಧಿಕಾರ ಕಸಿದುಕೊಳ್ಳುವ ಹುನ್ನಾರ ಎಂಬುದನ್ನು ಅರಿತುಕೊಳ್ಳಬೇಕು' ಎಂದರು.

'ನರೇಗಾ ಅಡಿ ಬೇಡಿಕೆ ಇದ್ದಷ್ಟು ಉದ್ಯೋಗ ನೀಡಲಾಗುತ್ತಿತ್ತು. ಹೊಸ ಯೋಜನೆ ಅಡಿಯಲ್ಲಿ ಎಷ್ಟು ಉದ್ಯೋಗ ನೀಡಬೇಕು ಎಂಬುದನ್ನು ಕೇಂದ್ರವೇ ನಿರ್ಧರಿಸಲಿದೆ. ನರೇಗಾ ಅಡಿ ನಡೆಸುವ ಕಾಮಗಾರಿ, ಜನರಿಗೆ ನೀಡುವ ಉದ್ಯೋಗಗಳನ್ನು ಗ್ರಾಮ ಪಂಚಾಯತಿಗಳ ಮೂಲಕ ರಾಜ್ಯ ನಿರ್ಧರಿಸುತ್ತಿತ್ತು. ಆ ಅಧಿಕಾರವನ್ನು ಈಗ ಕೇಂದ್ರವು ಕಿತ್ತುಕೊಳ್ಳಲಿದೆ' ಎಂದು ವಿವರಿಸಿದರು.

ದಲಿತ ಸಂಘರ್ಷ ಸಮಿತಿಯ ಮುಖಂಡ ಇಂದೂಧರ ಹೊನ್ನಾಪುರ, 'ಕಾಂಗ್ರೆಸ್, ಈ ಹೋರಾಟವನ್ನು ದಡಮುಟ್ಟಿಸುತ್ತವೆ ಎಂದು ಕುಳಿತರೆ ಸಾಕಾಗುವುದಿಲ್ಲ. ಜನರೇ ಹೋರಾಟಕ್ಕೆ ಇಳಿದರೆ, ಕೇಂದ್ರ ಸರ್ಕಾರವನ್ನು ಮಣಿಸಲು ಸಾಧ್ಯವಾಗುತ್ತದೆ' ಎಂದರು.

ಗೋಷ್ಠಿಯಲ್ಲಿ ವ್ಯಕ್ತವಾದ ವಿಷಯಗಳನ್ನು ಒಗ್ಗೂಡಿಸಿ, ನಿರ್ಣಯಗಳನ್ನು ಅಂಗೀಕರಿಸಲಾಯಿತು.

'ಉದ್ಯೋಗ ಖಾತರಿ ಧ್ವಂಸದ ವಿಬಿ ಜಿ ರಾಮ್ ಜಿ ಕಾನೂನಿನ ಅಪಾಯ ಮತ್ತು ಮುನ್ನೆಚ್ಚರಿಕೆ' ವಿಚಾರಸಂಕಿರಣದಲ್ಲಿ ಕೆ.ಪಿ.ಸುರೇಶ್, ಟಿ.ಎನ್.ಪ್ರಕಾಶ ಕಮ್ಮರಡಿ, ಎಸ್.ಜಿ.ಸಿದ್ಧರಾಮಯ್ಯ, ದೇವಿ, ಶಾರದಾ ಗೋಪಾಲ್ ಭಾಗಿಯಾಗಿದ್ದರು –ಪ್ರಜಾವಾಣಿ ಚಿತ್ರ

ಪ್ರಮುಖ ನಿರ್ಣಯಗಳು

- ರಾಜ್ಯದ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮಸಭೆ ನಡೆಸಿ ಈ ವಿಷಯ ಚರ್ಚಿಸಬೇಕು. ವಿಬಿ ಜಿ ರಾಮ್–ಜಿ ಕಾನೂನನ್ನು ತಿರಸ್ಕರಿಸುವ ನಿರ್ಣಯವನ್ನು ಜ.26ರಂದು ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಅಂಗೀಕರಿಸಬೇಕು
- ಎಲ್ಲ ಗ್ರಾಮಗಳ ಮನೆ–ಮನೆಗೂ ಹೋಗಿ, ಕೇಂದ್ರ ಸರ್ಕಾರದ ಈ ನೀತಿಯ ಅಪಾಯಗಳನ್ನು ಜನರಿಗೆ ವಿವರಿಸಬೇಕು
- ಜ 30ರ, ಹುತಾತ್ಮರ ದಿನದಂದು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಬೇಕು. ಈ ಕಾನೂನನ್ನು ಹಿಂಪಡೆಯಿರಿ ಎಂದು ಒತ್ತಾಯಿಸಿ, ಪ್ರಧಾನಿಗೆ ಪತ್ರ ರವಾನಿಸಬೇಕು
- ಜ.22ರಂದು ದೆಹಲಿಯಲ್ಲಿ ನಡೆಯಲಿರುವ ಪ್ರತಿಭಟನಾ ಸಭೆಗೆ ಮನರೇಗಾ ರಕ್ಷಣಾ ಒಕ್ಕೂಟದ ಪ್ರತಿನಿಧಿಗಳು ಭಾಗಿಯಾಗಬೇಕು
- ಇದೇ 21ರಂದು ಬೆಂಗಳೂರಿನ ಪುರಭವನದ ಎದುರು ನಡೆಯಲಿರುವ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು.
- ಫೆಬ್ರುವರಿ 20ರಂದು ನರೇಗಾ ಯೋಜನೆಗೆ 20 ವರ್ಷ ತುಂಬಲಿದ್ದು, ಆ ದಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಹಾ ಪಂಚಾಯತಿ ನಡೆಸಬೇಕು



ಜಿಬಿಎ ಕೇಂದ್ರೀಕೃತ ಆಡಳಿತ ವ್ಯವಸ್ಥೆಗೆ ಬಿಎನ್‌ಪಿ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಬಿಎ ಕೇಂದ್ರೀಕೃತ ಆಡಳಿತ ಪದ್ಧತಿಯನ್ನು ಬೆಂಗಳೂರು ನವನಿರ್ಮಾಣ ಪಕ್ಷ (ಬಿಎನ್‌ಪಿ) ಖಂಡಿಸುತ್ತದೆ. ನಗರದ ಸುಸ್ಥಿರ ಅಭಿವೃದ್ಧಿಗೆ 'ಏರಿಯಾ ಸಭಾ'ಗಳೇ ಅತ್ಯಂತ ಪರಿಣಾಮಕಾರಿ ಚೌಕಟ್ಟು' ಎಂದು ಪಕ್ಷದ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್ ಅವರು ಶುಕ್ರವಾರ ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಡಳಿತದಲ್ಲಿ ವಿಕೇಂದ್ರೀಕರಣ ತರುವ ಮೂಲಕ ಬೆಂಗಳೂರು ನಗರವನ್ನು ಅಭಿವೃದ್ಧಿ ಪಥದೆಡೆಗೆ ಕರೆದೊಯ್ಯುವುದು ನಮ್ಮ ಗುರಿ. ಈ ನಿಟ್ಟಿನಲ್ಲಿ ನಮ್ಮ ಪಕ್ಷ ಪಾಲಿಕೆಗಳಿಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಲಿದೆ' ಎಂದು ತಿಳಿಸಿದರು.

'ಬಿಎನ್‌ಪಿ ಬೆಂಗಳೂರು ನಗರಕ್ಕಷ್ಟೇ ಸೀಮಿತ. ಪಕ್ಷ ಈಗಾಗಲೇ ಮಿಷನ್ 50 ಅಭಿಯಾನ ಪ್ರಾರಂಭಿಸಿದೆ. ಪಾಲಿಕೆ ಚುನಾವಣೆಯಲ್ಲಿ 100 ವಾರ್ಡ್‌ಗಳಿಂದ ಸ್ಪರ್ಧಿಸಿ, ಕನಿಷ್ಠ 50 ವಾರ್ಡ್‌ಗಳಲ್ಲಿ ಜಯಗಳಿಸುವ ಗುರಿ ಮತ್ತು ವಿಶ್ವಾಸ ಇದೆ' ಎಂದು ತಿಳಿಸಿದರು.

'ಪೂರ್ವ ಮತ್ತು ದಕ್ಷಿಣ ಪಾಲಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಿಎನ್‌ಪಿ ಅಭ್ಯರ್ಥಿಗಳು ಸ್ಪರ್ಧಿಸಲಿದ್ದು, ಭವಿಷ್ಯದಲ್ಲಿ ಐದೂ ಪಾಲಿಕೆ ವ್ಯಾಪ್ತಿಯ ಎಲ್ಲ ವಾರ್ಡ್‌ಗಳಲ್ಲಿ ಸ್ಪರ್ಧಿಸಲಿದ್ದೇವೆ' ಎಂದು ಮಾಹಿತಿ ನೀಡಿದರು.

'ಕೇವಲ ಚುನಾವಣೆಯಲ್ಲಿ ಗೆಲ್ಲುವ ನಿಟ್ಟಿನಲ್ಲಿ ನಮ್ಮ ಪಕ್ಷ ಕಾರ್ಯನಿರ್ವಹಿಸುವುದಿಲ್ಲ. ಕೋವಿಡ್ ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪಕ್ಷದ ಕಾರ್ಯಕರ್ತರು ತೊಡಗಿಸಿಕೊಂಡಿದ್ದಾರೆ. ನಮ್ಮ ಕೆಲಸಗಳೇ ಪಕ್ಷದ ಪ್ರಣಾಳಿಕೆ, ಅವು ಮತವಾಗಿ ಪರಿವರ್ತನೆಯಾಗಲಿವೆ' ಎಂದು ನುಡಿದರು.

ಈ ವೇಳೆ ವಿವಿಧ ವಾರ್ಡ್‌ಗಳಿಂದ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸುವ ಪಕ್ಷದ ಅಭ್ಯರ್ಥಿಗಳನ್ನು ಪರಿಚಯಿಸಲಾಯಿತು. ಸುದ್ದಿಗೋಷ್ಠಿಯಲ್ಲಿ ಬಿಎನ್‌ಪಿ ಉತ್ತರಹಳ್ಳಿ ವಾರ್ಡ್ ಮುಖ್ಯಸ್ಥ ನಿಶ್ಚಿತ್ ಅಶೋಕ್ ಕುಮಾರ್ ಉಪಸ್ಥಿತರಿದ್ದರು.

'ಹೊಸ ಕಾನೂನು ಪರಿಹಾರವಲ್ಲ'

ಬಿಎನ್‌ಪಿ ಯುವ ಘಟಕದ ಮುಖಂಡ ರಿಶ್ವಾನ್‌ಜಾಸ್ ರಾಘವನ್ ಮಾತನಾಡಿ, 'ನಗರದ ಸಮಸ್ಯೆಗಳಿಗೆ ಹೊಸ ಕಾನೂನುಗಳು ಪರಿಹಾರವಲ್ಲ. ಬದಲಿಗೆ ಯುವ ನಾಯಕರ ಅವಶ್ಯವಿದೆ. ಇಲ್ಲಿ ಪ್ರತಿ ಯೋಜನೆಗೂ ಕಟ್ಟುನಿಟ್ಟಾದ ಗಡುವು ಇರಲಿದ್ದು, ಪ್ರತಿ ಅಧಿಕಾರಿಯೂ ಹೊಣೆಗಾರರು' ಎಂದರು.

ಪಕ್ಷದ ಆಡಳಿತ ಮಂಡಳಿ ಮುಖ್ಯಸ್ಥೆ ಲಲಿತಾಂಬ ಬಿ.ವಿ. ಮಾತನಾಡಿ, 'ನಾವು ಸಾಂಪ್ರದಾಯಿಕ ರಾಜಕೀಯ ಸೂತ್ರ ಪಾಲಿಸುವುದಿಲ್ಲ. ನಮ್ಮ ಮನೆಯಂತಿರುವ ಬೆಂಗಳೂರು ನಗರವನ್ನು ವೃತ್ತಿಪರ ಶೈಲಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿದ್ದೇವೆ' ಎಂದು ತಿಳಿಸಿದರು.

ಚಿತ್ರಾವಳಿ

ಜಯನಗರದ ನಾಲ್ಕನೇ ಬ್ಲಾಕ್‌ನ 11ನೇ ಕ್ರಾಸ್‌ನಲ್ಲಿರುವ ಮೋಹೆ ಮಳಿಗೆಯಲ್ಲಿ ಮಹಿಳೆಯರು ಧರಿಸುವ ವಿವಿಧ ಮಾದರಿಯ ಉಡುಗೆಗಳನ್ನು ರೂಪದರ್ಶಿಯರು ಶನಿವಾರ ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ನಾಗಸಂದ್ರದ ವಿನಾಯಕನಗರ ಮತ್ತು ವಿಕಾಸನಗರದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು

ಮುಂಬೈ ರೇಸ್

ಮಿಸ್ ಅಮೆರಿಕನ್ ಪೀ ಗೆಲ್ಲುವ ನಿರೀಕ್ಷೆ

ಮೂಲ್‌ರಾಜ್ ಗೋಕುಲದಾಸ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ ಅಮೆರಿಕನ್ ಪೀ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚಾಲೆಂಜ್ ಅಕ್ಸೆಪ್ಟೆಡ್ 7, ಈಸ್ಟರ್ನ್ ಮೊನಾರ್ಕ್ 8, ಎನ್‌ಫೋರ್ಸರ್ 6
2ನೇ ರೇಸ್: ಮಿಸ್ ಅಮೆರಿಕನ್ ಪೀ 1, ಡ್ರೀಮ್ ಸೆಲ್ಲರ್ 2, ಐರಿಷ್ ಗೋಲ್ಡ್ 4
3ನೇ ರೇಸ್: ಎಂಡ್ಯೂರೆನ್ಸ್ 4, ಬ್ರೇಕ್ ಪಾಯಿಂಟ್ 2, ಕಿಮಿಕೊ 1
4ನೇ ರೇಸ್: ಜಿ ವ್ಯಾಲೆಂಟಿನೊ 6, ಬ್ಲೂ ಜೆಟ್ 4, ಗನ್‌ಫೈರ್ 7
5ನೇ ರೇಸ್: ಇನ್ವಿಕ್ಟರ್ 3, ಲೊರೆಂಜೊ 4, ಸೊಲೆವಾ 9
6ನೇ ರೇಸ್: ಅಮೆರಿಕನ್ ಈಗಲ್ 12, ಲೂಸಿಯೊ 4, ಬೆಜಾಲೆಲ್ 5
7ನೇ ರೇಸ್: ರಾಯಲ್ ಚಾಂಪ್ 6, ಗೋಲ್ಡನ್ ಹಾರ್ಟ್ 2, ಷಿಕಾಗೊ ಚೈಮ್ಸ್ 5

ಉತ್ತಮ ಬೆಟ್: ಇನ್ವಿಕ್ಟರ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಕರಾಮುವಿ ಪ್ರವೇಶಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಕರಾಮುವಿ) ಮಹಿಳಾ ಪ್ರಾದೇಶಿಕ ಕೇಂದ್ರದಲ್ಲಿ 2025–26ರ ಸಾಲಿನ ಜನವರಿ ಆವೃತ್ತಿಯ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ.

'ಬಿ.ಎ., ಬಿ.ಕಾಂ., ಬಿ.ಎಸ್.ಡಬ್ಲ್ಯು., ಬಿ.ಬಿ.ಎ., ಬಿ.ಸಿ.ಎ., ಬಿ.ಎಸ್ಸಿ.(ಜನರಲ್ ಮತ್ತು ಐ.ಟಿ.), ಬಿ.ಎಲ್.ಐ.ಎಸ್ಸಿ., ಎಂ.ಎ., ಎಂ.ಸಿ.ಜೆ., ಎಂ.ಎಸ್.ಡಬ್ಲ್ಯು., ಎಂ.ಕಾಂ., ಎಂ.ಎಲ್.ಐ.ಎಸ್ಸಿ., ಎಂ.ಸಿ.ಎ., ಎಂ.ಎಸ್ಸಿ., ಎಂ.ಬಿ.ಎ., ಪಿ.ಜಿ. ಸರ್ಟಿಫಿಕೇಟ್ ಪ್ರೋಗ್ರಾಮ್‌ಗಳು, ಡಿಪ್ಲೊಮಾ ಪ್ರೋಗ್ರಾಮ್‌ಗಳು ಮತ್ತು ಸರ್ಟಿಫಿಕೇಟ್ ಪ್ರೋಗ್ರಾಮ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ' ಎಂದು ಪ್ರಾದೇಶಿಕ ನಿರ್ದೇಶಕಿ ಶಶಿಕಲಾ ಜೆ. ತಿಳಿಸಿದ್ದಾರೆ.

ಆಸಕ್ತ ವಿದ್ಯಾರ್ಥಿಗಳು ಕರಾಮುವಿ ಅಧಿಕೃತ ಜಾಲತಾಣದಲ್ಲಿ (www.ksoumysuru.ac.in) ಅರ್ಜಿಗಳನ್ನು ಭರ್ತಿ ಮಾಡಬೇಕು. ಪ್ರವೇಶ ಶುಲ್ಕವನ್ನು ಪ್ರಾದೇಶಿಕ ಕಚೇರಿಯಲ್ಲಿ ಅಥವಾ ಆನ್‌ಲೈನ್ ಮೂಲಕ ಪಾವತಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್ ಮತ್ತು ನಿವೃತ್ತ ಸೈನಿಕರಿಗೆ, ಆಟೋ ಅಥವಾ ಕ್ಯಾಬ್ ಚಾಲಕರು ಮತ್ತು ಅವರ ಮಕ್ಕಳಿಗೆ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎಸ್‌ಡಬ್ಲ್ಯೂಕೆಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ ನೌಕರರಿಗೆ ಬೋಧನಾ ಶುಲ್ಕ ವಿನಾಯಿತಿ ಇರಲಿದೆ.

ಕೋವಿಡ್ ಸಾಂಕ್ರಾಮಿಕದಿಂದ ಮೃತರಾದವರ ಮಕ್ಕಳು, ಲಿಂಗತ್ವ ಅಲ್ಪಸಂಖ್ಯಾತರು, ದೃಷ್ಟಿಹೀನರು (ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ) ಪೂರ್ಣ ಶುಲ್ಕ ವಿನಾಯಿತಿಗೆ ಅರ್ಹರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಎಸ್‌ಎಸ್‌ಪಿ ಮೂಲಕ ವಿದ್ಯಾರ್ಥಿವೇತನ ಪಡೆಯಬಹುದು ಎಂದು ತಿಳಿಸಿದ್ದಾರೆ.

ಮಾಹಿತಿ: 080–27448811, 9741197921, 9483517160 ಸಂಪರ್ಕಿಸಬಹುದು.

ಸತ್ಯ–ಧರ್ಮ, ನ್ಯಾಯದ ಮಾರ್ಗದಲ್ಲಿ ಸಾಗಲು ಕರೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಬಸವಣ್ಣ ಹೇಳಿದಂತೆ ಸತ್ಯ-ಧರ್ಮ, ನ್ಯಾಯದ ಮಾರ್ಗದಲ್ಲಿ ಸಾಗಬೇಕು. ಮನುಷ್ಯರಾಗಿ ಜೀವಿಸಿದಾಗ ಮಾತ್ರ ಜೀವನ ಸಾರ್ಥಕ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಬಂಡೇ ಮಠದ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಜನಜಾಗೃತಿ ಧರ್ಮ ಸಮಾವೇಶ, ಶಿವದೀಕ್ಷೆ ಸಮಾರಂಭದಲ್ಲಿ ಗೌರವ ಗುರುರಕ್ಷೆ ಸ್ವೀಕರಿಸಿ ಮಾತನಾಡಿ, ಪೂಜೆ, ಧರ್ಮ, ಸಂಸ್ಕೃತಿ ಮನೆಗೆ ಸೀಮಿತವಾಗದೆ ಮಾನವ ಧರ್ಮ ಉಳಿಸುವ ಕೆಲಸ ಆಗಬೇಕಾಗಿದೆ ಎಂದರು.

ಬಾಳೆ ಹೊನ್ನೂರು ಎಡೆಯೂರು ಮಠದ ರೇಣುಕಾ ಶಿವಾಚಾರ್ಯ ಸ್ವಾಮೀಜಿ, 'ವೀರಶೈವ-ಲಿಂಗಾಯತರು ಒಂದಾಗಬೇಕು. ಮಕ್ಕಳಿಗೆ ಸಂಸ್ಕಾರ, ಮಾನವೀಯ ಮೌಲ್ಯ ಕಲಿಸಬೇಕು. ಅವರಲ್ಲಿ ಧರ್ಮ, ಸಂಸ್ಕೃತಿ ಮೈಗೂಡಿಸಿಕೊಳ್ಳಲು ಸಾಧ್ಯ' ಎಂದು ಹೇಳಿದರು.

ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ, 'ಸಮಾಜ ಸೇವೆ ಮಾಡುವವರೇ ನಿಜವಾದ ಸೇವಕರು. ಅವರಲ್ಲಿ ಕರುಣೆ, ಸ್ನೇಹ, ವಿಶಾಲ ಹೃದಯತೆ ಇರುತ್ತದೆ. ಅಂಥ ಸಮಾಜ ಕಾಣಬೇಕಾದರೆ, ಧರ್ಮ ಉಳಿಸುವ ಕೆಲಸದಲ್ಲಿ ಭಾಗಿಯಾಗಬೇಕು ಎಂದರು.

ಬಂಡೆ ಮಠದ ಪೀಠಾಧ್ಯಕ್ಷ ಸಚ್ಚಿದಾನಂದ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಶಿವಗಂಗೆಯ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಕಾಡಸಿದ್ದೇಶ್ವರ ಪೀಠಾಧ್ಯಕ್ಷ ಕರಿವೃಷಭ ದೇಶೀಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಕಲ್ಲಬಾಳು ಪೀಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ನಾಗಲಾಪುರ ಮಠದ ಪಟ್ಟದ ತೇಜೇಶಲಿಂಗ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಮಠದ ಶಿವಾಚಾರ್ಯ ಸ್ವಾಮೀಜಿ, ಕನ್ನಲ್ಲಿಯ ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಬಿಡದಿಯ ಹುಚ್ಚಪ್ಪ ಸ್ವಾಮೀಜಿ, ಶಾಸಕ ಎಸ್.ಟಿ.ಸೋಮಶೇಖರ್, ಬಿಡದಿ ನವೀನ್‌ಕುಮಾರ್, ಕೆ.ಎಸ್. ಮಂಜುನಾಥಯ್ಯ ಇದ್ದರು.

ಶಿವಾನಂದಶಿವಾಚಾರ್ಯ ಸ್ವಾಮೀಜಿ ಅವರು ಸಮಾವೇಶವನ್ನು ಉದ್ಘಾಟಿಸಿದರು. ಅನುಪಮಾ ಪಂಚಾಕ್ಷರಿ, ಎಂ.ರುದ್ರೇಶ್, ಗಂಗಾಂಭಿಕೆ ಮಲ್ಲಿಕಾರ್ಜುನ, ಎಂ.ಡಿ.ಲಕ್ಷ್ಮಿನಾರಾಯಣ, ಬಿ.ಎಸ್.ಯಡಿಯೂರಪ್ಪ, ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರು, ಸಚ್ಚಿದಾನಂದ ಸ್ವಾಮೀಜಿ, ನಂಜುಂಡೇಶ್, ರುದ್ರೇಶ್, ಎಸ್.ಆರ್.ಮೋಹನ್ ಕುಮಾರ್(ಮಂಜು) ಇದ್ದರು.

2030ರೊಳಗೆ 800 ವಂದೇ ಭಾರತ್

ಪ್ರಜಾವಾಣಿ ವಾರ್ತೆ

ನವದೆಹಲಿ: ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸುವಂತೆ ಪ್ರಯಾಣಿಕರಿಂದ ಬೇಡಿಕೆ ಹೆಚ್ಚಿದ್ದು, ಇದಕ್ಕೆ ಪೂರಕವಾಗಿ ತನ್ನ ಸಂಪರ್ಕ ಜಾಲವನ್ನು ವಿಸ್ತರಿಸಲು ಭಾರತೀಯ ರೈಲ್ವೆ ಯೋಜಿಸುತ್ತಿದೆ.

2030ರೊಳಗೆ 800 ರೈಲುಗಳು ಹಾಗೂ 2047ರೊಳಗೆ 4,500 ವಂದೇ ಭಾರತ್ ರೈಲುಗಳ ಸಂಚಾರ ಆರಂಭಿಸುವ ಗುರಿ ಹೊಂದಲಾಗಿದೆ. ಪ್ರಸ್ತುತ 80ಕ್ಕೂ ಹೆಚ್ಚು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ದೇಶದ 280 ಜಿಲ್ಲೆಗಳ ಪ್ರಮುಖ ನಗರಗಳ ನಡುವೆ ಸಂಚರಿಸುತ್ತಿವೆ.

ಭಾರತೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕಿ ಜಿ.ಮಾಧವಿ ಲತಾ ಸಲಹೆ

'ನೀರು ಒದಗಿಸಲು ತಂತ್ರಜ್ಞಾನ ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಜನರಿಗೆ ನೀರು ಒದಗಿಸಲು ಜಲಮಂಡಳಿ ಎಂಜಿನಿಯರ್‌ಗಳ ತಂಡ ಶ್ರಮಿಸುತ್ತಿದ್ದು, ಎಲ್ಲರಿಗೂ ನೀರು ಲಭ್ಯವಾಗುವಂತೆ ಮಾಡಲು ಪರಿಣಾಮಕಾರಿಯಾಗಿ ತಂತ್ರಜ್ಞಾನ ಬಳಸಿಕೊಳ್ಳಬೇಕು' ಎಂದು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ ಜಿ.ಮಾಧವಿ ಲತಾ ಸಲಹೆ ನೀಡಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಂಜಿನಿಯರ್‌ಗಳ ಸಂಘ ಆಯೋಜಿಸಿದ್ದ ತಾಂತ್ರಿಕ ದಿನಚರಿ ಬಿಡುಗಡೆ ಹಾಗೂ ನಿವೃತ್ತ ಎಂಜಿನಿಯರ್‌ಗಳಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ನೀರಿನ ಸೋರಿಕೆ, ಅನಿರೀಕ್ಷಿತ ಸವಾಲುಗಳನ್ನು ಸಮರ್ಪಕವಾಗಿ ಎದುರಿಸುತ್ತಾ ಕಾವೇರಿ ನದಿಯಿಂದ ಬೆಂಗಳೂರು ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುತ್ತಿರುವ ಎಂಜಿನಿಯರ್‌ಗಳ ಕಾರ್ಯ ಶ್ಲಾಘನೀಯ' ಎಂದು ಹೇಳಿದರು.

'ಭಾರತದ ನಿರ್ಮಾಣಕ್ಕೆ ಸಿವಿಲ್, ಮೆಕ್ಯಾನಿಕಲ್ ಎನ್ನದೇ ಪ್ರತಿಯೊಬ್ಬ ಎಂಜಿನಿಯರ್‌ಗಳ ಶ್ರಮ ಬಹಳಷ್ಟಿದೆ. ಒಂದು ಹೊಸ ಯೋಜನೆ ಅನುಷ್ಠಾನ ಮಾಡಲು ಮುಂದಾದರೆ, ಎಷ್ಟೆಲ್ಲಾ ತೊಡಕುಗಳು ಎದುರಾಗುತ್ತವೆ ಎಂಬುದು ಎಂಜಿನಿಯರ್‌ಗಳಿಗೆ ಮಾತ್ರ ಅರ್ಥ ಆಗಲಿದೆ. ಕ್ಲಿಷ್ಟಕರ ಸಂದರ್ಭಗಳನ್ನು ಎದುರಿಸುತ್ತಲೇ ಪರಿಹಾರ ಕಂಡುಕೊಂಡು ಜನರ ಉಪಯೋಗಕ್ಕೆ ಸಿಗುವಂತೆ ಮಾಡುವುದೇ ಎಂಜಿನಿಯರ್‌ಗಳ ನಿಜವಾದ ಕೆಲಸ' ಎಂದು ನುಡಿದರು.

ಜಲಮಂಡಳಿ ಅಧ್ಯಕ್ಷ ಡಾ. ರಾಮಪ್ರಸಾತ್ ಮನೋಹರ್ ಮಾತನಾಡಿ, 'ಸವಾಲು ಎದುರಿಸಲು ಎಂಜಿನಿಯರ್‌ಗಳು ಸಿದ್ಧರಿರಬೇಕು. ಹೊಸ ಆಲೋಚನೆಗಳ ಮೂಲಕ ನಾಗರಿಕರಿಗೆ ಅನುಕೂಲವಾಗುವ ಯೋಜನೆ ರೂಪಿಸಿ ಅನುಷ್ಠಾನ ಮಾಡಲು ಮಂಡಳಿ ಪ್ರತಿಯೊಬ್ಬರು ಶ್ರಮಿಸಬೇಕು' ಎಂದು ಅವರು ಹೇಳಿದರು.

ಪ್ರಧಾನ ಮುಖ್ಯ ಎಂಜಿನಿಯರ್ ಬಿ.ಎಸ್.ದಲಾಯತ್, ಸಂಘದ ಅಧ್ಯಕ್ಷ ಬಿ.ಸಿ.ಗಂಗಾಧರ, ಉಪಾಧ್ಯಕ್ಷ ರಮಾನಂದ, ಕಾರ್ಯದರ್ಶಿ ಎ.ರಾಜಶೇಖರ, ಖಜಾಂಚಿ ಎಸ್. ಚಂದ್ರಶೇಖರ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ತಾಂತ್ರಿಕ ದಿನಚರಿ ಬಿಡುಗಡೆ
- ಎಂಜಿನಿಯರ್‌ಗಳಿಗೆ ಸನ್ಮಾನ
- ಜನಸ್ನೇಹಿ ಯೋಜನೆ ರೂಪಿಸಲು ಸಲಹೆ

ಬೆಂಗಳೂರು ಜಲಮಂಡಳಿ ಎಂಜಿನಿಯರ್‌ಗಳ ಸಂಘದ ತಾಂತ್ರಿಕ ದಿನಚರಿ ಬಿಡುಗಡೆ ಸಮಾರಂಭದಲ್ಲಿ ಬಿ.ಎಸ್.ದಲಾಯತ್, ಸಿ.ಜಿ.ಗಂಗಾಧರ್, ಡಾ.ರಾಮಪ್ರಸಾತ್ ಮನೋಹರ್, ಮಾಧವಿ ಲತಾ, ರಾಜಶೇಖರ್ ಹಾಜರಿದ್ದರು.



ರಸ್ತೆಯ ಮೇಲೆ ಚರಂಡಿ ನೀರು ಹರಿದಿರುವುದು

'ಸಮರ್ಪಕ ಒಳಚರಂಡಿ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೊಳಚೆ ನೀರು ಹಾಗೂ ದುರ್ವಾಸನೆಗೆ ಬೇಸತ್ತು ಸಮರ್ಪಕ ಚರಂಡಿ ನಿರ್ಮಿಸುವಂತೆ ಒತ್ತಾಯಿಸಿ ಮಂಜುನಾಥ್ ನಗರ ಮತ್ತು ಕಲ್ಕೆರೆ ನಿವಾಸಿಗಳು ಜಿಬಿಎ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಣ್ಣಯ್ಯಪ್ಪ ತೆಂಗಿನ ತೋಟದ ಬಡಾವಣೆ ಸಮೀಪದ ಕಲ್ಕೆರೆಯಿಂದ ಮಂಜುನಾಥ್ ನಗರ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕೆಲ ವರ್ಷಗಳಿಂದ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೆ ಕೊಳಚೆ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಪ್ರತಿದಿನ ಸಾರ್ವಜನಿಕರು ದುರ್ವಾಸನೆಗೆ ಹೈರಾಣಾಗಿದ್ದಾರೆ. ನಿತ್ಯದ ಸಂಚಾರಕ್ಕೆ ಅಡಚಣೆಯಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.

ಕೊಳಚೆ ನೀರಿನಿಂದ ರಸ್ತೆ ಸಂಪೂರ್ಣ ಹಾಳಾಗಿದೆ. ವಾಹನ ಸವಾರರು ಹಾಗೂ ವಿದ್ಯಾರ್ಥಿಗಳು ಪ್ರತಿನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಶಾಸಕ ಬೈರತಿ ಬಸವರಾಜ ಮತ್ತು ಜಿಬಿಎ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮಂಜುನಾಥ್ ನಗರ ನಿವಾಸಿ ಕೆ.ವಿ.ಶ್ರೀನಿವಾಸ್ ಅಸಮಾಧಾನ ವ್ಯಕ್ತಪಡಿಸಿದರು.

'ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿದೆ. ಅಕ್ಕಪಕ್ಕದಲ್ಲಿರುವ ನಾಲ್ಕೈದು ಮನೆಯವರು ಉದ್ದೇಶಪೂರ್ವಕವಾಗಿ ಚರಂಡಿ ನಿರ್ಮಿಸಲು, ಕಾವೇರಿ ಪೈಪ್‌ಲೈನ್ ಅಳವಡಿಕೆಗೆ ಹಾಗೂ ಒಳಚರಂಡಿ ನಿರ್ಮಾಣಕ್ಕೆ ಅಡ್ಡಿಪಡಿಸುತ್ತಿದ್ದಾರೆ. ವಿದ್ಯುತ್ ಕಂಬ ಹಾಕಲು ಬಿಡುತ್ತಿಲ್ಲ. ಸಾರ್ವಜನಿಕ ರಸ್ತೆಯನ್ನು ತಮಗೆ ಸೇರಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತಿಲ್ಲ ಧಮ್ಕಿ ಹಾಕುತ್ತಿದ್ದಾರೆ' ಎಂದು ಕಲ್ಕೆರೆ ನಿವಾಸಿ ಕೆ.ಪಿ.ಶಂಕರಪ್ಪ ದೂರಿದರು.

ಆದಷ್ಟು ಬೇಗ ಚರಂಡಿ ನಿರ್ಮಾಣ ಮಾಡುವಂತೆ ಕಲ್ಕೆರೆ ನಿವಾಸಿ ಮೂರ್ತಿ, ಮುಖಂಡ ಬೀರಪ್ಪ ಆಗ್ರಹಿಸಿದರು.

ಚಿಟಿಕೆ ಸುದ್ದಿ

ಡ್ರಗ್ಸ್ ಪೂರೈಕೆ ಉದ್ಯಮಿ ಬಂಧನ

ದಾವಣಗೆರೆ: ಸಿಂಥೆಟಿಕ್ ಡ್ರಗ್ಸ್ ಪೂರೈಕೆ ಆರೋಪದಡಿ ಉದ್ಯಮಿ ಶಿವರಾಜ್ ಅವರನ್ನು ಇಲ್ಲಿನ ವಿದ್ಯಾನಗರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಅಂತರರಾಜ್ಯ ಗಾಂಜಾ ವಹಿವಾಟು ನಡೆಸುತ್ತಿದ್ದ ಆರೋಪದಡಿ ಈಚೆಗೆ ಉದ್ಯಮಿ ವೇದಮೂರ್ತಿ ಅವರನ್ನು ಬಂಧಿಸಲಾಗಿತ್ತು. ಈ ಪ್ರಕರಣದ ತನಿಖೆ ಕೈಗೊಂಡಿರುವ ಪೊಲೀಸರು ಶಿವರಾಜ್ ಅವರನ್ನೂ ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 11ಕ್ಕೆ ಏರಿದೆ.

‘ಎಸ್.ಎಸ್.ಲೇಔಟ್ ನಿವಾಸಿಯಾದ ಶಿವರಾಜ್ ಹಿಂದೆ ಆರ್‌ಟಿಒ ಕಚೇರಿಯಲ್ಲಿ ಏಜೆಂಟ್ ಆಗಿದ್ದರು. ಬಂಧನದ ವೇಳೆ ಮಾದಕ ವಸ್ತು ಪತ್ತೆಯಾಗಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ. ‘ಸಂಘಟನೆಯೊಂದರಲ್ಲಿ ಗುರುತಿಸಿಕೊಂಡಿದ್ದ ಶಿವರಾಜ್, ಪ್ರಭಾವಿ ಎಂದು ತೋರಿಸಿಕೊಳ್ಳಲು ಪ್ರಭಾವಿಗಳು, ಪೊಲೀಸರ ಜೊತೆ ನಿಕಟ ಸಂಪರ್ಕ ಹೊಂದಿದ್ದರು’ ಎಂದು ಹೇಳಿದ್ದಾರೆ.

ಗುಂಜಾಳಗೆ ಮೃತ್ಯುಂಜಯ-ಮಹಾಂತ ಪ್ರಶಸ್ತಿ

ಧಾರವಾಡ: ನಗರದ ಮುರುಘಾ ಮಠದ ಮೃತ್ಯುಂಜಯ-ಮಹಾಂತ ಪ್ರಶಸ್ತಿಗೆ ಸಾಹಿತಿ ಪ್ರೊ. ಎಸ್. ಆರ್.ಗುಂಜಾಳ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರೊ. ಎಸ್‌ಆರ್ ಗುಂಜಾಳ

ಪ್ರಶಸ್ತಿ ₹ 1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಜನವರಿ 22ರಂದು ಮುರುಘಾಮಠದ ಜಾತ್ರಾ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಂಡ್ಯ: ಚಿನ್ನಕ್ಕಾಗಿ ಕೆಐಒಸಿಎಲ್ ಶೋಧ

ಮರ ಕಡಿಯಬಾರದು, ನೆಡುತೋಪುಗಳಿಗೆ ಹಾನಿ ಆಗಬಾರದು: ಅರಣ್ಯ ಇಲಾಖೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮಂಡ್ಯ ಜಿಲ್ಲೆಯ ಯಡಿಯೂರು ಬ್ಲಾಕ್‌ನಲ್ಲಿ ಚಿನ್ನಕ್ಕಾಗಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿಯು (ಕೆಐಒಸಿಎಲ್) ಅನ್ವೇಷಣೆ ನಡೆಸಲಿದೆ.

ಚಿನ್ನ ಅದಿರಿನ ಶೋಧಕ್ಕಾಗಿ ಯಡಿಯೂರು ಬ್ಲಾಕ್‌ನಲ್ಲಿ ಇರುವ ರಸ್ತೆಗಳನ್ನು ಬಳಸಿಕೊಂಡು, ಮರಗಳನ್ನು ಕಡಿಯದೆ, ಪೊದೆಗಳನ್ನು ತೆರವುಗೊಳಿಸದೆ ಮತ್ತು ಮರದ ಕೊಂಬೆಗಳನ್ನು ಕಡಿಯದೆ ಎರಡು ಕೊಳವೆಬಾವಿಗಳು ಮತ್ತು ಮೂರು ಕಂದಕಗಳನ್ನು ಕೊರೆಯಲು ಅನುಮತಿ ನೀಡಬೇಕು ಎಂದು ಕಂಪನಿಯು ಅರಣ್ಯ ಇಲಾಖೆಗೆ ಜನವರಿ 13ರಂದು ಕೋರಿದೆ.

ಅನ್ವೇಷಣೆ ಪೂರ್ಣಗೊಂಡು ಅದಿರಿನ ಲಭ್ಯತೆಯ ಅಂದಾಜು ಲೆಕ್ಕಾಚಾರ ನಡೆಸಿದ ಬಳಿಕ ಕಂಪನಿಯು ಗಣಿ ಸಚಿವಾಲಯದ ರಾಷ್ಟ್ರೀಯ ಖನಿಜ ಪರಿಶೋಧನಾ ಟ್ರಸ್ಟ್‌ಗೆ (ಎನ್‌ಎಂಇಟಿ) ವರದಿ ಸಲ್ಲಿಸಲಿದೆ.

ಹಟ್ನಾ ಮೀಸಲು ಅರಣ್ಯದ 50 ಚದರ ಕಿ.ಮೀ. ಪ್ರದೇಶದಲ್ಲಿ ಶೋಧ ನಡೆಸಲು ಅನುಮತಿ ನೀಡಬೇಕು ಎಂದು ಕಂಪನಿಯು ಎನ್‌ಎಂಇಟಿಗೆ ಪ್ರಸ್ತಾವ ಸಲ್ಲಿಸಿತ್ತು. 2024ರ ಫೆಬ್ರುವರಿಯಲ್ಲಿ ನಡೆದ ಟ್ರಸ್ಟ್‌ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಉಕ್ಕು ಸಚಿವಾಲಯ ಪ್ರಸ್ತಾವಕ್ಕೆ ಸಮ್ಮತಿಸಿತ್ತು.

ಚಿನ್ನದ ಹುಡುಕಾಟಕ್ಕಾಗಿ ಐದು ಕೊಳವೆಬಾವಿಗಳನ್ನು ಹಾಗೂ ಕಂದಕಗಳನ್ನು ತೋಡಲು ಅನುಮತಿ ನೀಡಬೇಕು ಎಂದು ಮಂಡ್ಯ ಡಿಸಿಎಫ್‌ಗೆ ಕೆಐಒಸಿಎಲ್ ಪ್ರಸ್ತಾವ ಸಲ್ಲಿಸಿತ್ತು. ಆ ಬಳಿಕ ಸ್ಥಳೀಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಮೈಸೂರು ಸಿಸಿಎಫ್‌ಗೆ ವರದಿ ಸಲ್ಲಿಸಿದ್ದರು. ಪರಿಶೋಧನೆಗೆ ಪ್ರಸ್ತಾಪಿಸಿರುವ ಸರ್ವೆ ಸಂಖ್ಯೆ 81ರಲ್ಲಿ 88 ಎಕರೆ ನೆಡುತೋಪು ಇದ್ದು, ಮೀಸಲು ಅರಣ್ಯವೆಂದು 2022ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಅದರಲ್ಲಿ ಉಲ್ಲೇಖಿಸಿದ್ದರು. ಅದಾದ ನಂತರ ಕಂದಾಯ ಹಾಗೂ ಅರಣ್ಯ ಅಧಿಕಾರಿಗಳು ಜಂಟಿ ಸರ್ವೆ ನಡೆಸಿದ್ದರು.

ಮರಗಳನ್ನು ಕಡಿಯದೆಯೇ ಹಾಗೂ ನೆಡುತೋಪುವಿಗೆ ಹಾನಿ ಮಾಡದೆಯೇ ಕಂಪನಿಯು ಇಲ್ಲಿ ಪರಿಶೋಧನಾ ಚಟುವಟಿಕೆ ನಡೆಸಬಹುದು ಎಂದು ಮಂಡ್ಯ ಡಿಸಿಎಫ್ ಅಭಿಪ್ರಾಯ ನೀಡಿದ್ದರು. ಪರಿಶೀಲನೆ ಹಾಗೂ ಮುಂದಿನ ಹಂತದ ಪ್ರಕ್ರಿಯೆಗಾಗಿ ಮೈಸೂರು ಸಿಸಿಎಫ್ ಅವರು ಅರಣ್ಯ ಇಲಾಖೆಯ ಪ್ರಧಾನ ಕಚೇರಿಗೆ ವರದಿ ಕಳುಹಿಸಿದ್ದರು.

‘ಈ ಪ್ರದೇಶವು ಸಂರಕ್ಷಿತ ಪ್ರದೇಶ ಅಥವಾ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಬರುತ್ತದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಗಣಿಗಾರಿಕೆಗಾಗಿ ರಾಷ್ಟ್ರೀಯ ಉದ್ಯಾನ ಹಾಗೂ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಸಮೀಕ್ಷೆ ನಡೆಸುವಂತಿಲ್ಲ. ಕೇಂದ್ರ ಪರಿಸರ ಸಚಿವಾಲಯದ ಮಾರ್ಗಸೂಚಿ ಅನ್ವಯ ಸ್ಪಷ್ಟ ಅಭಿಪ್ರಾಯದೊಂದಿಗೆ ವಿಸ್ತೃತ ವರದಿ ಸಲ್ಲಿಸಬೇಕು’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಅವರು ಮಂಡ್ಯ ಡಿಸಿಎಫ್ ಅವರಿಗೆ 2025ರ ಅಕ್ಟೋಬರ್‌ನಲ್ಲಿ ನಿರ್ದೇಶನ ನೀಡಿದ್ದರು.

ಅರಣ್ಯ ಇಲಾಖೆಗೆ ಇದೇ 13ರಂದು ಉತ್ತರ ನೀಡಿರುವ ಕೆಐಒಸಿಎಲ್, ‘ಕಾಡಿಗೆ ಯಾವುದೇ ರೀತಿ ಹಾನಿಯಾಗದಂತೆ ಶೋಧ ನಡೆಸಲಾಗುವುದು’ ಎಂದು ಸ್ಪಷ್ಟಪಡಿಸಿದೆ.

ಎಲ್ಲೆಲ್ಲಿ ಸಮೀಕ್ಷೆ
- ಹಾವೇರಿ ಕಾಕೋಳ್ ಬ್ಲಾಕ್
- ಕೊಪ್ಪಳ, ರಾಯಚೂರಿನ ಕಿಲ್ಲರಹಟ್ಟಿ ಪ್ರದೇಶ
- ಹಾವೇರಿ ಚಿನ್ನಿಕಟ್ಟಿ ಬ್ಲಾಕ್

(ಮಾಹಿತಿ: ಎನ್‌ಎಂಇಟಿ)

ಸುದ್ದಿ 2 ನಿಮಿಷ

ಡಿಸಿಸಿ ಬ್ಯಾಂಕ್: ಶಾಸಕ ಕೆ.ಎಸ್.ಆನಂದ್‌ಗೆ ಸೋಲು

ಚಿಕ್ಕಮಗಳೂರು: ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಡಿಸಿಸಿ) ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

13 ನಿರ್ದೇಶಕ ಸ್ಥಾನಗಳಲ್ಲಿ 8 ಸ್ಥಾನಗಳಿಗೆ ಕಡೂರು ಮಾಜಿ ಶಾಸಕ ಬೆಳ್ಳಿ ಪ್ರಕಾಶ್, ತರೀಕೆರೆ ಮಾಜಿ ಶಾಸಕ ಡಿ.ಎಸ್.ಸುರೇಶ್ ಸೇರಿದಂತೆ ಅವಿರೋಧ ಆಯ್ಕೆಯಾಗಿತ್ತು. ಉಳಿದ 5 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಎರಡೂ ಪಕ್ಷಗಳ ಆಂತರಿಕ ಒಪ್ಪಂದದಂತೆ 11 ಸ್ಥಾನ ಬಿಜೆಪಿ ಮತ್ತು 2 ಸ್ಥಾನ ಜೆಡಿಎಸ್‌ಗೆ ಹಂಚಿಕೆಯಾಗಿತ್ತು. ಅದೇ ರೀತಿಯ 11 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತರು ಮತ್ತು 2 ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಚಿಕ್ಕಮಗಳೂರು ತಾಲ್ಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಮೇಲ್ಮನೆ ಸದಸ್ಯರಾದ ಸಿ.ಟಿ.ರವಿ, ಎಸ್.ಎಲ್. ಭೋಜೇಗೌಡ ಜಯ ಸಾಧಿಸಿದರೆ, ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಡೂರಿನ ಕಾಂಗ್ರೆಸ್ ಶಾಸಕ ಕೆ.ಎಸ್.ಆನಂದ್ ಸೋತರು.

ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಮುಖಂಡ, ಮಾಜಿ ಶಾಸಕ ಎಂ.ಪಿ.ಕುಮಾರಸ್ವಾಮಿ ಕೂಡಾ ಸೋಲನುಭವಿಸಿದ್ದಾರೆ.

₹10 ಸಾವಿರ ಲಂಚ: ಎಫ್‌ಡಿಎ ಲೋಕಾಯುಕ್ತ ಬಲೆಗೆ

ಕಮಲಾಪುರ (ಕಲಬುರಗಿ ಜಿಲ್ಲೆ): ತಹಶೀಲ್ದಾರ್ ಕಚೇರಿಯಲ್ಲಿ ₹10 ಸಾವಿರ ಲಂಚ ಪಡೆಯುತ್ತಿದ್ದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಶಶಿಕಾಂತ ಜಂಜಿರ್ ಎಂಬಾತನನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ತಹಶೀಲ್ದಾರ್ ಕೋರ್ಟ್‌ನ ಆದೇಶದ ಪ್ರತಿಯನ್ನು ಕಚನಳ್ಳಿ ತಾಂಡಾದ ಕಿಶನ್ ರಾಠೋಡ ಕೋರಿದ್ದರು. ಲಂಚ ಕೊಟ್ಟರೆ ನೀಡುವುದಾಗಿ ಶಶಿಕಾಂತ ತಿಳಿಸಿದ್ದ. ಬೇಸತ್ತ ಕಿಶನ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲೋಕಾಯುಕ್ತ ಎಸ್ಪಿ ಸಿದ್ದರಾಜು ಸಿ. ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಅರುಣಕುಮಾರ್ ಮರಗುಂಡಿ ನೇತೃತ್ವದ ಸಿಬ್ಬಂದಿ, ಆರೋಪಿ ಲಂಚದ ಹಣ ಪಡೆಯುವಾಗ ಬಂಧಿಸಿದರು.

ಗಾಳಿಪಟ ಉತ್ಸವ

ಚಿತ್ರ: ಫಕ್ರುದ್ದೀನ್ ಎಚ್.



ಕರಾವಳಿ ಉತ್ಸವದ ಅಂಗವಾಗಿ ಮಂಗಳೂರಿನ ತಣ್ಣೀರುಬಾವಿ ಬ್ಲೂ ಬೇ ಬೀಚ್‌ನಲ್ಲಿ ಶನಿವಾರ ಆರಂಭಗೊಂಡ ಒಎನ್‌ಜಿಸಿ– ಎಂಆರ್‌ಪಿಎಲ್ ಅಂತರರಾಷ್ಟ್ರೀಯ 9ನೇ ಗಾಳಿಪಟ ಉತ್ಸವದಲ್ಲಿ ತಾಯಿಯೊಂದಿಗೆ ಮಗುವೊಂದು ಕಡಲ ತಡಿಯ ಮರಳಿನಲ್ಲಿ ಆಟವಾಡಿದ ಕ್ಷಣ

ರಾಜೀವ ಗೌಡ ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ‘ಕಲ್ಟ್’ ಸಿನಿಮಾ ಬ್ಯಾನರ್ ತೆರವುಗೊಳಿಸಿದ ಶಿಡ್ಲಘಟ್ಟದ ನಗರಸಭೆ ಆಯುಕ್ತೆ ಅಮೃತಾ ಗೌಡ ಅವರಿಗೆ ದೂರವಾಣಿಯಲ್ಲಿ ಧಮ್ಕಿ ಹಾಕಿದ್ದ ಕಾಂಗ್ರೆಸ್ ಮುಖಂಡ ರಾಜೀವ ಗೌಡ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ಜ.22ಕ್ಕೆ ಮುಂದೂಡಲಾಗಿದೆ.

ರಾಜೀವ ಗೌಡ ಪರ ವಕೀಲ ಕೆ.ಎನ್. ಶಿವಶಂಕರರೆಡ್ಡಿ ಚಿಂತಾಮಣಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಅರ್ಜಿಯನ್ನೂ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶ ಕಾಂತರಾಜು, ವಾದ, ವಿವಾದದ ಆಲಿಸಿ ವಿಚಾರಣೆ ಮುಂದೂಡಿದರು.

> **ಅಭಿಮಾನಿಗಳ ಪರವಾಗಿ ನಾನು ಕ್ಷಮೆ ಕೇಳುತ್ತೇನೆ. ಮಾಧ್ಯಮದ ಮೂಲಕ ಬ್ಯಾನರ್ ಗಲಾಟೆ ನನ್ನ ಗಮನಕ್ಕೆ ಬಂದಿತು. ಕೇಳಿ ಬೇಜಾರಾಯಿತು. ಈ ಘಟನೆ ನಡೆಯಬಾರದಿತ್ತು**
> **ಝೈದ್ ಖಾನ್,** ನಟ

ಶಿಡ್ಲಘಟ್ಟ ನಗರಸಭೆ ಆಯುಕ್ತೆ ಜಿ.ಅಮೃತಾಗೌಡ ಅವರು ರಾಜೀವಗೌಡ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ದೂರಿನ ಆಧಾರದ ಮೇಲೆ ಬಿಎನ್‌ಎಸ್ 2023ರ ಸೆಕ್ಷನ್ 132, 224, 352, 351 (3) ಮತ್ತು 56ರ ಅಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಪೊಲೀಸರ ಬಂಧನದಿಂದ ತಪ್ಪಿಸಿಕೊಳ್ಳಲು ರಾಜೀವ ಗೌಡ ತಲೆಮರೆಸಿಕೊಂಡಿದ್ದಾರೆ.

‘ಫ್ಯಾಸಿಸಂ: ಪ್ರತಿರೋಧ ಅಗತ್ಯ’

ಬಹುರೂಪಿ ವಿಚಾರಗೋಷ್ಠಿಯಲ್ಲಿ ಸಿದ್ಧಾರ್ಥ ವರದರಾಜನ್

ಪ್ರಜಾವಾಣಿ ವಾರ್ತೆ

ಮೈಸೂರು: ‘ಫ್ಯಾಸಿಸಂ ಅನ್ನು ಆರಂಭದಲ್ಲಿಯೇ ಗುರುತಿಸಿ, ಪ್ರತಿರೋಧ ತೋರದಿದ್ದರೆ ಅದು ದೇಶ ಮತ್ತು ಜನರನ್ನು ನಾಶ ಮಾಡುತ್ತದೆ. ಪ್ರಜಾಪ್ರಭುತ್ವಕ್ಕೆ ಮಾದರಿಯಾಗಿದ್ದ ಭಾರತ ಮತ್ತು ಅಮೆರಿಕದಲ್ಲಿ ಕಾಣುತ್ತಿರುವುದು ಇದನ್ನೇ’ ಎಂದು ಪತ್ರಕರ್ತ ಸಿದ್ಧಾರ್ಥ ವರದರಾಜನ್ ಶನಿವಾರ ಇಲ್ಲಿ ಅಭಿಪ್ರಾಯಪಟ್ಟರು.

ರಂಗಾಯಣದಲ್ಲಿ ನಡೆಯುತ್ತಿರುವ ‘ಬಹುರೂಪಿ ಬಾಬಾಸಾಹೇಬ್’ ರಾಷ್ಟ್ರೀಯ ನಾಟಕೋತ್ಸವದಲ್ಲಿ ‘ರಾಷ್ಟ್ರೀಯ ವಿಚಾರಸಂಕಿರಣ’ ಉದ್ಘಾಟಿಸಿ ಅವರು ಮಾತನಾಡಿದರು.

‘ಜರ್ಮನಿ, ಇಟಲಿಗಳಲ್ಲಿ ಏನಾಯಿತು ಎಂಬ ಇತಿಹಾಸ ಕಣ್ಣ ಮುಂದಿದೆ. ಹೀಗಾಗಿ, ಫ್ಯಾಸಿಸಂ ವಿರುದ್ಧದ ಹೋರಾಟವನ್ನು ಮುಂದೂಡುವುದು ಸಲ್ಲದು. ಪ್ರಜಾಪ್ರಭುತ್ವ ನಿರಂಕುಶತ್ವಕ್ಕೆ ಹೊರಳುವ ಮೊದಲೇ ಪ್ರತಿರೋಧ ತೋರದಿದ್ದರೇ ನಾಳೆಗಳು ಕಠಿಣವಾಗಿರುತ್ತವೆ’ ಎಂದರು.

‘ಫ್ಯಾಸಿಸಂ ಎಂಬುದು ಎಂದಿಗೂ ದೊಡ್ಡ ಘೋಷಣೆಯೊಂದಿಗೆ ಬರುವುದಿಲ್ಲ. ಅಧಿಕಾರ ಹಿಡಿದ ನಂತರ ತನಗೆ ಬೇಕಾದ ಕಾನೂನು ಜಾರಿಗೊಳಿಸುತ್ತದೆ. ಭಾಷೆ, ಧರ್ಮ, ಸಂಸ್ಕೃತಿಯ ಹೆಸರಿನಲ್ಲಿ ಸಾಮಾಜಿಕ ಶ್ರೇಣೀಕರಣವನ್ನು ಜೀವಂತವಾಗಿ ಇರಿಸುತ್ತದೆ’ ಎಂದು ವ್ಯಾಖ್ಯಾನಿಸಿದರು.

ಸಾಮಾನ್ಯ ಜನರೇ ಸಂತ್ರಸ್ತರು: ‘ರಾಜಕೀಯದಲ್ಲಿ ಹಣಬಲವೇ ಪ್ರಧಾನ. ಭಾರತ ಮತ್ತು ಅಮೆರಿಕದಲ್ಲಿ ಅದನ್ನು ಕಾಣುತ್ತಿದ್ದೇವೆ. ವ್ಯವಹಾರಿಕ, ಹಣಕಾಸು ಹಿತಾಸಕ್ತಿಗಳು ಡೊನಾಲ್ಡ್ ಟ್ರಂಪ್ ಅವರ ಆಡಳಿತದ ನಿರ್ಧಾರ ರೂಪಿಸುತ್ತಿವೆ. ಭಾರತದಲ್ಲೂ ಬಿಜೆಪಿಗೆ ಶೇ 85ರಷ್ಟು ದೇಣಿಗೆ ಹರಿದುಬಂದಿದೆ. ದೇಣಿಗೆ ಕೊಟ್ಟವರ ಹಿತಾಸಕ್ತಿಗಳೇ ಚುಕ್ಕಾಣಿ ಹಿಡಿದವರಿಗೆ ಮುಖ್ಯವಾಗಿದೆ. ಆದರೆ, ಸಾಮಾನ್ಯ ಜನರು ಸಂತ್ರಸ್ತರಾಗುತ್ತಿದ್ದಾರೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ನಾಯಕ ಪ್ರಶ್ನಾತೀತನಾದಾಗ ಪ್ರಜಾಪ್ರಭುತ್ವ ಇಕ್ಕಟ್ಟಿಗೆ ಸಿಲುಕುತ್ತದೆ ಎಂದು ಎಚ್ಚರಿಸಿದ್ದ ಅಂಬೇಡ್ಕರ್ ಅವರು ವ್ಯಕ್ತಿಪೂಜೆ ವಿರೋಧಿಸಿದ್ದರು. ಈಗ ಪ್ರಶ್ನಿಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಅಂಬೇಡ್ಕರ್‌ರಂತೆ ಮನುಸ್ಮೃತಿ ಸುಟ್ಟ ಯುವತಿ ವಿರುದ್ಧವೇ ಪ್ರಕರಣ ದಾಖಲಿಸಲಾಗಿದೆ’ ಎಂದರು.

‘ಜಾಗತಿಕ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಸಮಸ್ಯೆಗಳು’ ಕುರಿತು ಪ್ರೊ.ರವಿ ಭಂಡಾರಿ, ಪ್ರೊ.ಎಂ.ಜೆ. ವಿನೋದ್, ‘ಅಂಬೇಡ್ಕರ್ ಅವರ ಪರಿಕಲ್ಪನೆಯ ಪ್ರಜಾಪ್ರಭುತ್ವ ಒಂದು ಮುಖಾಮುಖಿ’ ಕುರಿತು ಚೆನ್ನೈನ ಚಿಂತಕ ಲಕ್ಷ್ಮಣನ್, ‘ಸಮಕಾಲೀನ ಭಾರತ ಮತ್ತು ಒಳಗೊಳ್ಳುವ ರಾಜಕಾರಣ’ ವಿಷಯದ ಬಗ್ಗೆ ರೇಖಾರಾಜ್, ‘ಜಾಗತಿಕ ಮತ್ತು ಸ್ಥಳೀಯ ಸಾಮಾಜಿಕ ಅಸಮಾನತೆಗಳ ನಿರ್ಮೂಲನೆ’ ವಿಶ್ವಸಂಸ್ಥೆಯ ಕೆ.ಪಿ. ಅಶ್ವಿನಿ, ‘ಫ್ಯಾಸಿಸಂ ವಿರುದ್ಧ ಪ್ರತಿರೋಧದ ಸಂಕೇತವಾದ ಸಂವಿಧಾನ’ ಕುರಿತು ಎಚ್.ವಿ.ವಾಸು ಮಾತನಾಡಿದರು.

ವಿಚಾರಸಂಕಿರಣದಲ್ಲಿ ಸಿದ್ಧಾರ್ಥ ವರದರಾಜನ್ ಮಾತನಾಡಿದರು. ಎಂ.ಡಿ. ಸುದರ್ಶನ್, ಸತೀಶ್ ತಿಪಟೂರು, ಕೆ.ಶಿವಕುಮಾರ್, ಪ್ರೊ.ಎನ್‌ಕೆ.ಲೋಕನಾಥ್, ಡಾ.ಎಚ್‌ಸಿ.ಮಹದೇವಪ್ಪ, ಪ್ರೊ.ನರೇಂದ್ರಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

> **ಅಂಬೇಡ್ಕರ್ ಅವರನ್ನು ಹೊಗಳುವ ನಾಯಕರು, ಅವರ ಹೋರಾಟದ ಮಾದರಿಯಲ್ಲಿ ನಡೆದವರ ವಿರುದ್ಧವೇ ಪ್ರಕರಣವನ್ನು ದಾಖಲಿಸುವುದು ದ್ವಂದ್ವ ನಿಲುವಲ್ಲವೇ?**
> **ಸಿದ್ಧಾರ್ಥ ವರದರಾಜನ್,** ಪತ್ರಕರ್ತ

ಮಾತುಕತೆಗೆ ಕರೆಸಿ ಮಾವನ ಇರಿದು ಕೊಂದ ಅಳಿಯ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಬೆಳ್ಳಾವರದಲ್ಲಿ ವ್ಯಕ್ತಿಯೊಬ್ಬರು ಮಾತುಕತೆಗೆಂದು ಮನೆಗೆ ಮಾವನನ್ನು ಕರೆಸಿಕೊಂಡಿದ್ದು, ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ.

ಬಿಕ್ಕೋಡು ಗ್ರಾಮದ ಅನಿಲ್ ಮೃತ. ಅಳಿಯ, ಆರೋಪಿ ರಾಜೇಶ್ ತಲೆಮರೆಸಿಕೊಂಡಿದ್ದು, ಅರೇಹಳ್ಳಿ ಪೊಲೀಸರು ಶೋಧ ನಡೆಸಿದ್ದಾರೆ.

ಬೆಳ್ಳಾವರದ ರಾಜೇಶ್ ಹಾಗೂ ಅನಿಲ್ ಅವರ ಮಗಳು ಅನಿಷಾ, ವಿರೋಧದ ನಡುವೆ ಪ್ರೀತಿಸಿ ಮದುವೆಯಾಗಿದ್ದರು. ಕುಟುಂಬದೊಳಗೆ ಅಸಮಾಧಾನ ಮತ್ತು ವೈಮನಸ್ಸು ಇತ್ತು. ಇದನ್ನು ನಿವಾರಿಸಲು ತಂದೆ ಅನಿಲ್ ಅವರನ್ನು ಅನಿಷಾ ಶನಿವಾರ ಮನೆಗೆ ಕರೆಸಿಕೊಂಡಿದ್ದಳು.

ಈ ವೇಳೆ ಅಳಿಯ ಚಾಕುವಿನಿಂದ ಇರಿದಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ಅನಿಲ್ ಅವರನ್ನು ಹಾಸನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಟಿಕೆಟ್ ನೀಡದೆ ಕಡೆಗಣನೆ: ಕುಬೇರಪ್ಪ

ಹುಬ್ಬಳ್ಳಿ: ‘ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಮೋಹನ್ ಲಿಂಬಿಕಾಯಿ ಅವರ ಹೆಸರನ್ನು ಘೋಷಿಸಲಾಗಿದ್ದು, ನನಗೆ ಅನ್ಯಾಯವಾಗಿದೆ’ ಎಂದು ಟಿಕೆಟ್ ಆಕಾಂಕ್ಷಿ ಆರ್.ಎಂ.ಕುಬೇರಪ್ಪ ಹೇಳಿದರು. ‘ಬಿಜೆಪಿಯಿಂದ ಬಂದಿರುವ ಮೋಹನ್ ಲಿಂಬಿಕಾಯಿ ಕಾಂಗ್ರೆಸ್ ಪಕ್ಷಕ್ಕೆ ಏನೂ ಕೊಡುಗೆ ನೀಡಿಲ್ಲ. ಅವರು ಯಾರು ಎಂಬುದು ಕಾರ್ಯಕರ್ತರು, ಮುಖಂಡರಿಗೆ ಗೊತ್ತಿಲ್ಲ’ ಎಂದು ಶನಿವಾರ ಹೇಳಿದರು.

ಶಾಂತಿಧಾಮದಲ್ಲಿ ಭೀಮಣ್ಣ ಖಂಡ್ರೆ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ಮಾಜಿ ಸಚಿವ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ (102) ಅವರ ಅಂತ್ಯಕ್ರಿಯೆ ಶನಿವಾರ ಸಂಜೆ ಪಟ್ಟಣ ಹೊರವಲಯದ ಚಿಕಲಚಂದಾ ಸಮೀಪದ ತೋಟದ ಮನೆಯ ಶಾಂತಿಧಾಮದಲ್ಲಿ ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ನೆರವೇರಿತು.

ಪತ್ನಿ ದಿವಂಗತ ಲಕ್ಷ್ಮೀಬಾಯಿ ಸಮಾಧಿ ಬಳಿಯೇ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಐದು ವಿಭೂತಿಗಳನ್ನು ಸಾಂಕೇತಿಕವಾಗಿ ಇರಿಸಿ ಅಂತ್ಯಕ್ರಿಯೆ ಕಾರ್ಯಕ್ಕೆ ಚಾಲನೆ ನೀಡಿದರು. ಭಾಲ್ಕಿ ಹಿರೇಮಠದ ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು ವಚನ ಪಠಿಸಿ ಬಸವ ಮಂತ್ರದೊಂದಿಗೆ ವಿಧಿವಿಧಾನ ಪೂರೈಸಿದರು.

ವಿಭೂತಿ, ಪತ್ರಿ, ಹೂ ಹಾಗೂ ರುದ್ರಾಕ್ಷಿಯೊಂದಿಗೆ ಸಮಾಧಿ ಮಾಡಲಾಯಿತು. ಇದಕ್ಕೂ ಮುನ್ನ ಭೀಮಣ್ಣ ಖಂಡ್ರೆಯವರ ಮಕ್ಕಳಾದ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ, ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಅಮರಕುಮಾರ್ ಖಂಡ್ರೆ, ಮೊಮ್ಮಗ, ಸಂಸದ ಸಾಗರ ಖಂಡ್ರೆ ಹಾಗೂ ಇತರೆ ಕುಟುಂಬ ಸದಸ್ಯರು ಆರತಿ ಬೆಳಗಿ, ಅಂತಿಮ ಗೌರವ ಸಲ್ಲಿಸಿದರು.

ಅಂತ್ಯಕ್ರಿಯೆಗೆ ಕೊಂಡೊಯ್ಯುವಾಗ ಭಾವುಕರಾದ ಸಚಿವ ಈಶ್ವರ ಬಿ. ಖಂಡ್ರೆ ಅವರು ತಂದೆ ಭೀಮಣ್ಣ ಖಂಡ್ರೆ ಅವರ ಪಾರ್ಥೀವ ಶರೀರವನ್ನು ದಿಟ್ಟಿಸಿ ನೋಡಿದರು. ಖಂಡ್ರೆ ಕುಟುಂಬ ಸದಸ್ಯರು ಇದ್ದಾರೆ ಚಿತ್ರ: ಲೋಕೇಶ ವಿ. ಬಿರಾದಾರ

> **ಭೀಮಣ್ಣ ಖಂಡ್ರೆ ಅವರು ಸಮಾಜವಾದಿಯಾಗಿ ಬದುಕಿದ್ದರು. ನಿಷ್ಠುರ ಮತ್ತು ಖಂಡಿತವಾದಿ. ರೈತರು, ಸಹಕಾರಿ ಕ್ಷೇತ್ರದಲ್ಲೂ ಕೆಲಸ ಮಾಡಿ ಸಾರ್ಥಕ ಜೀವನ ನಡೆಸಿದ್ದಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಸರ್ಕಾರಿ ಗೌರವ ಸಲ್ಲಿಸಲಾಯಿತು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಪಟ್ಟಣದ ಖಂಡ್ರೆ ಗಲ್ಲಿಯಲ್ಲಿರುವ ನಿವಾಸದಲ್ಲಿ ಭೀಮಣ್ಣ ಖಂಡ್ರೆ ಅವರ ಪಾರ್ಥೀವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ. ಪಾಟೀಲ, ಕೆ.ಜೆ. ಜಾರ್ಜ್, ಲಕ್ಷ್ಮಿ ಹೆಬ್ಬಾಳ್ಕರ್, ಡಾ.ಶರಣ ಪ್ರಕಾಶ ಪಾಟೀಲ, ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬೈಲೂರು ನಿಷ್ಕಲ ಮಂಟಪದ ನಿಜಗುಣಪ್ರಭು ಸ್ವಾಮೀಜಿ, ಕೂಡಲಸಂಗಮ ಬಸವಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ, ಇಳಕಲ್ ಗುರುಮಹಾಂತ ಸ್ವಾಮೀಜಿ, ಮುಚಳಂಬದ ಪ್ರಣವಾನಂದ ಸ್ವಾಮೀಜಿ, ಭಾತಂಬ್ರಾದ ಶಿವಯೋಗೀಶ್ವರ ಸ್ವಾಮೀಜಿ, ಗಂಗಾಂಬಿಕಾ ಅಕ್ಕ, ಪ್ರಭುದೇವ ಸ್ವಾಮೀಜಿ ಸೇರಿದಂತೆ ಇತರೆ ಮಠಾಧೀಶರು, ರಾಜಕೀಯ ಪಕ್ಷಗಳ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಸೈಬರ್ ವಂಚಕರನ್ನು ಜೈಲಿಗಟ್ಟಲು ಕಾಯ್ದೆ

ಒಂದನೇ ಪುಟದಿಂದ...

‘ಸೈಬರ್ ವಂಚಕರನ್ನು ಮಟ್ಟಹಾಕಲು ಕಠಿಣ ಕಾನೂನು ಜಾರಿಗೆ ತರಲು ಸಿದ್ಧತೆ ನಡೆದಿದೆ. ಡ್ರಗ್ಸ್ ನಿಯಂತ್ರಣಕ್ಕೂ ಮುಂದಿನ ಅಧಿವೇಶನದ ವೇಳೆಗೆ ಕಠಿಣ ಕಾನೂನು ರೂಪಿಸುತ್ತೇವೆ’ ಎಂದು ಹೇಳಿದರು.

ಜೈಲುಗಳಲ್ಲಿ ಅವ್ಯವಸ್ಥೆ ಹಾಗೂ ಮಾದಕ ವಸ್ತು ಜಾಲ ನಿಯಂತ್ರಣದಲ್ಲಿನ ಯಾವುದೇ ಲೋಪವನ್ನು ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದರು.

‘ಡ್ರಗ್ಸ್ ದಂಧೆಯಲ್ಲಿ ವಿದೇಶಿ ಪ್ರಜೆಗಳೂ ಶಾಮೀಲಾಗುತ್ತಿದ್ದಾರೆ. ಅವರು ಜಾಮೀನು ಪಡೆದು ಹೊರಬಂದ ಮೇಲೆ ರಾಜ್ಯದಲ್ಲೇ ಉಳಿದುಕೊಳ್ಳುತ್ತಿದ್ದಾರೆ. ವಿದೇಶಿ ಪ್ರಜೆಗಳನ್ನು ಮುಲಾಜಿಲ್ಲದೇ ಆಯಾ ದೇಶಕ್ಕೆ ವಾಪಸ್ ಕಳುಹಿಸಬೇಕು. ಮಾದಕ ವಸ್ತು ವ್ಯಸನಿಗಳನ್ನು ವಿಚಾರಣೆಗೆ ಒಳಪಡಿಸಿದರೆ ಡ್ರಗ್ಸ್ ಜಾಲ ಪತ್ತೆ ಹಚ್ಚಬಹುದು. ಉತ್ಪಾದಕರು, ಪೂರೈಕೆದಾರರನ್ನು ಮಟ್ಟಹಾಕಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ತಿಳಿಸಿದರು.

> **ಬಲಾಢ್ಯರು, ಸಮಾಜಘಾತುಕ ಶಕ್ತಿಗಳಿಗೆ ಮಣೆ ಹಾಕಬೇಡಿ. ದುರ್ಬಲರು, ಪರಿಶಿಷ್ಟರು, ಅಲ್ಪಸಂಖ್ಯಾತರ ರಕ್ಷಣೆ ಎಲ್ಲರ ಹೊಣೆ. ದುರ್ಬಲರಿಗೆ ಅನ್ಯಾಯ ಆಗಬಾರದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

‘ಪೊಲೀಸರು ಜಾಗ್ರತೆಯಿಂದ ಕೆಲಸ ಮಾಡಿದಾಗ ಅನೇಕ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿದೆ. ಎಟಿಎಂ ದರೋಡೆ, ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಾಟೆ ಪ್ರಕರಣಗಳಲ್ಲಿ ಪೊಲೀಸರು ಸ್ವಲ್ಪ ಎಚ್ಚರಿಕೆ ವಹಿಸಿದ್ದರೂ ಘಟನೆಗಳನ್ನು ತಪ್ಪಿಸಬಹುದಾಗಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿಯೂ ಮುನ್ನೆಚ್ಚರಿಕೆ ವಹಿಸಿದ್ದರೆ ಅಮಾಯಕರು ಕಾಲ್ತುಳಿತದಲ್ಲಿ ಬಲಿ ಆಗುವುದನ್ನು ತಪ್ಪಿಸಲು ಸಾಧ್ಯವಿತ್ತು’ ಎಂದು ಹೇಳಿದರು.

ಉತ್ಖನನ: ಪ್ರಾಚ್ಯ ಅವಶೇಷ ಗೋಚರ

ಪ್ರಜಾವಾಣಿ ವಾರ್ತೆ

ಗದಗ: ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಸ್ಥಾನ ಆವರಣದಲ್ಲಿ ನಡೆದಿರುವ ಉತ್ಖನನದ ವೇಳೆ ಶನಿವಾರ ಪ್ರಾಚೀನ ಕಾಲದ ಶಿಲೆ ಪತ್ತೆಯಾಗಿದ್ದು, ಅರ್ಧದಷ್ಟು ಗೋಚರಿಸಿದೆ. ‘ಉತ್ಖನನ ಇನ್ನಷ್ಟು ಆಳಕ್ಕೆ ಇಳಿದರೆ, ಅದು ಏನು ಎಂಬುದರ ನಿಖರ ಮಾಹಿತಿ ಲಭ್ಯವಾಗಲಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಶನಿವಾರ ಸಿಕ್ಕ ಪ್ರಾಚ್ಯ ಅವಶೇಷವು ದೇವಸ್ಥಾನಗಳಲ್ಲಿ ದೈವಕ್ಕೆ ಅಭಿಷೇಕ ನಡೆಸಿದ ಸಂದರ್ಭದಲ್ಲಿ ನೀರು ಹರಿದು ಹೋಗಲು ಇರುವ ಪಾಣಿಪೀಠದಂತಿದೆ. ಅದರ ಕೆಳಗೆ ಏನಿದೆ ಎಂಬುದು ಗೊತ್ತಾಗಿಲ್ಲ. ಸದ್ಯ ಎರಡೂವರೆ ಅಡಿ ಉತ್ಖನನ ನಡೆದಿದೆ. ಹಂತ ಹಂತವಾಗಿ ಅದರ ಮಾಹಿತಿ ಲಭ್ಯವಾಗಲಿದೆ’ ಎಂದು ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

ಉತ್ಖನನದ ವೇಳೆ ಗೋಚರಿಸಿದ ಪ್ರಾಚ್ಯ ಅವಶೇಷ

ಉತ್ಖನನ ಸ್ಥಳದ ಸುತ್ತಮುತ್ತ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧವಿದೆ. ಫೋಟೊಗ್ರಫಿ ಮತ್ತು ವಿಡಿಯೊಗ್ರಫಿ ನಿಷೇಧಿಸಲಾಗಿದೆ. ಇದಕ್ಕೆ ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಜಾತ್ರೆಯನ್ನು 47 ವರ್ಷಗಳಿಂದ ಅದ್ದೂರಿಯಾಗಿ ನಡೆಸುತ್ತಿದ್ದೇವೆ. ಈಗ ಉತ್ಖನನದ ಕಾರಣ ಜಿಲ್ಲಾಡಳಿತ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ಹೇರಿದೆ.ಇದರಿಂದ ಮಾರ್ಚ್‌ನಲ್ಲಿ ಜಾತ್ರೆ ನಡೆಸುವುದಾದರೂ ಹೇಗೆ? ನಿರ್ಬಂಧ ಆದೇಶ ಹಿಂಪಡೆಯಲಿ’ ಎಂದು ದೇವಸ್ಥಾನದ ಸಮಿತಿಯವರು ಆಗ್ರಹಿಸಿದ್ದಾರೆ.

‘ಲಕ್ಕುಂಡಿಯ ಗತವೈಭವವನ್ನು ಪುನಃ ಸ್ಥಾಪಿಸಲು ಉತ್ಖನನ ನಡೆದಿದೆಯೇ ಹೊರತು ಜಾತ್ರೆಗೆ ಅಡ್ಡಿಪಡಿಸುವ ಉದ್ದೇಶದಿಂದ ಅಲ್ಲ. ಈ ವರ್ಷವೂ ಜಾತ್ರಾ ಮಹೋತ್ಸವವನ್ನು ಅದ್ದೂರಿಯಾಗಿಯೇ ನಡೆಸಲಾಗುವುದು’ ಎಂದು ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಓದಲು ಸಾಧ್ಯವಾಗದವರಿಗೆ ಕೇಳುವ ಅವಕಾಶ • ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಡಿಜಿಟಲೀಕರಣ

ಪ್ರಾಚೀನ ಕಾವ್ಯಗಳಿಗೆ ಆಧುನಿಕ ಸ್ಪರ್ಶ

• ವರುಣ ಹೆಗಡೆ

ಬೆಂಗಳೂರು: ನೂರಾರು ವರ್ಷಗಳ ಹಿಂದಿನ ಕನ್ನಡದ ಪ್ರಾಚೀನ ಕಾವ್ಯಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಆಧುನಿಕ ಸ್ಪರ್ಶ ನೀಡುತ್ತಿದೆ. ಪಂಪನ ‘ವಿಕ್ರಮಾರ್ಜುನ ವಿಜಯ’, ರನ್ನನ ‘ಗದಾಯುದ್ಧ’ ಮೊದಲಾದ ಕೃತಿಗಳು ಡಿಜಿಟಲ್ ವೇದಿಕೆಗಳ ನೆರವಿನಿಂದ ಬೆರಳ ತುದಿಯಲ್ಲಿಯೆ ಲಭ್ಯವಾಗಲಿದ್ದು, ವಿವಿಧ ಕಾವ್ಯಗಳ ಸಾಲುಗಳನ್ನು ಓದುವ ಜತೆಗೆ ಕೇಳಿಸಿಕೊಳ್ಳಬಹುದಾಗಿದೆ.

‘ನಾಡೋಜ’ ಶೀರ್ಷಿಕೆಯಡಿ ಅಕಾಡೆಮಿಯು ಪ್ರಾಚೀನ ಮಹಾಕಾವ್ಯಗಳು ಹಾಗೂ ಮೌಲ್ಯಯುತ ಕೃತಿಗಳನ್ನು ಡಿಜಿಟಲೀಕರಣಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಪ್ರಾಚೀನ ಕೃತಿಗಳು ಕನ್ನಡಿಗರಿಗೆ ಸುಲಭವಾಗಿ ದೊರೆಯುವ ಜತೆಗೆ, ಶಾಶ್ವತವಾಗಿ ಉಳಿಯಬೇಕೆಂಬ ಉದ್ದೇಶದಿಂದ ಅಕಾಡೆಮಿ ಈ ಯೋಜನೆ ರೂಪಿಸಿದೆ. ಈಗಾಗಲೆ 26 ಕೃತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಈ ಕೃತಿಗಳು ಶೀಘ್ರದಲ್ಲಿಯೇ ಅಕಾಡೆಮಿ ವೆಬ್‌ಸೈಟ್‌ನಲ್ಲಿ ಲಭ್ಯವಾಗಲಿವೆ.

ವೃತ್ತಿಯಲ್ಲಿ ಎಂಜಿನಿಯರ್ ಆಗಿರುವ ಕಥೆಗಾರ ಶ್ರೀಹರ್ಷ ಸಾಲಿಮಠ ಅವರ ಸಂಪಾದಕತ್ವದಲ್ಲಿ ಡಿಜಿಟಲೀಕರಣ ಪ್ರಕ್ರಿಯೆ ನಡೆಯುತ್ತಿದೆ. ಆಯ್ಕೆ ಮಾಡಿಕೊಂಡ ಮಹಾಕಾವ್ಯಗಳ ಪುಟಗಳನ್ನು ಸ್ಕ್ಯಾನ್ ಮಾಡುವ ಬದಲು, ಓದುಗರ ದೃಷ್ಟಿಯಿಂದ ಯೂನಿಕೋಡ್ ತಂತ್ರಜ್ಞಾನ ಬಳಸಿಕೊಂಡು ಹೊಸದಾಗಿ ಟೈಪ್ ಮಾಡಲಾಗುತ್ತಿದೆ. ಇದರಿಂದಾಗಿ ನಿಗದಿತ ಕೃತಿಗನ್ನು ಒಮ್ಮೆಲೆಯೇ ಸಂಪೂರ್ಣವಾಗಿ ಅಥವಾ ಪುಟವಾರು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇಲ್ಲವಾದಲ್ಲಿ, ನಿರ್ದಿಷ್ಟ ಸಾಲುಗಳನ್ನು ಅಕ್ಷರ ಶೈಲಿಯಲ್ಲಿಯೂ ಓದಬಹುದಾಗಿದೆ.

> **ಕನ್ನಡದ ಅಮೂಲ್ಯ ಕೃತಿಗಳು ಎಲ್ಲ ಕನ್ನಡಿಗರಿಗೆ ತಲುಪಬೇಕು. ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ ಲಭ್ಯವಾಗಬೇಕು. ಈ ಉದ್ದೇಶದಿಂದ ಡಿಜಿಟಲೀಕರಣ ಪ್ರಕ್ರಿಯೆ ನಡೆಯುತ್ತಿದೆ**
> **ಎಲ್.ಎನ್. ಮುಕುಂದರಾಜ್**
> ಅಧ್ಯಕ್ಷ, ಕರ್ನಾಟಕ ಸಾಹಿತ್ಯ ಅಕಾಡೆಮಿ

ಡಿಜಿಟಲೀಕರಣಗೊಂಡ ಕೃತಿಗಳು

20 ಸಾವಿರ ಪುಟ: ಈಗಾಗಲೇ 26 ಕೃತಿಗಳಿಂದ ಸುಮಾರು 20 ಸಾವಿರ ಪುಟಗಳನ್ನು ಡಿಜಿಟಲೀಕರಣಕ್ಕೆ ಒಳಪಡಿಸಲಾಗಿದೆ. ಈ ಪ್ರಕ್ರಿಯೆ 2025ರ ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿದ್ದು, ನೂರು ವರ್ಷಗಳಿಗಿಂತ ಹಳೆಯದಾದ ಹಾಗೂ ಹಕ್ಕುಸ್ವಾಮ್ಯ ಹೊಂದಿರದ ಕೃತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಈ ಯೋಜನೆಯಡಿ ಜಾನಪದ ಕಾವ್ಯಗಳನ್ನೂ ಪರಿಗಣಿಸಲಾಗಿದೆ. ಮಂಟೇಸ್ವಾಮಿ, ಮಲೆಮಹದೇಶ್ವರ ಮೊದಲಾದ ಕಾವ್ಯಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಕಾವ್ಯದ ಲಭ್ಯತೆ ಆಧರಿಸಿ ಈ ಪ್ರಕ್ರಿಯೆಯನ್ನು ನಿರಂತರ ಮುಂದುವರಿಸಲು ಅಕಾಡೆಮಿ ನಿರ್ಧರಿಸಿದೆ.

‘ಯೋಜನೆಯಡಿ ಪುಸ್ತಕಗಳ ಡಿಜಿಟಲೀಕರಣ ಪ್ರಕ್ರಿಯೆ ನಿರಂತರ ನಡೆಯಲಿದೆ. ಡಿಜಿಟಲೀಕರಣಗೊಂಡ ಪುಸ್ತಕಗಳನ್ನು ಅಕಾಡೆಮಿ ವೆಬ್‌ಸೈಟ್‌ಗೆ ಅಳವಡಿಸಲಾಗುತ್ತದೆ. ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯ ಆ್ಯಪ್‌ಗಳ ನೆರವಿನಿಂದ ಸುಲಭವಾಗಿ ಓದಲು ಹಾಗೂ ಕೇಳಲು ಸಾಧ್ಯ. ಹೀಗಾಗಿ, ಅಂಧರನ್ನು ಕೂಡ ಈ ಕೃತಿಗಳು ತಲುಪಲಿವೆ. ಕಾವ್ಯದಲ್ಲಿನ ನಿರ್ದಿಷ್ಟ ಸಾಲು ಹಾಗೂ ಪದಗಳನ್ನು ಹುಡುಕುವ ಅವಕಾಶವನ್ನೂ ಒದಗಿಸಲಾಗಿದೆ’ ಎಂದು ಶ್ರೀಹರ್ಷ ಸಾಲಿಮಠ ವಿವರಿಸಿದರು.

ಯಾವೆಲ್ಲ ಕೃತಿಗಳ ಡಿಜಿಟಲೀಕರಣ?

ಪಂಪನ ‘ವಿಕ್ರಮಾರ್ಜುನ ವಿಜಯ’, ರನ್ನನ ‘ಗದಾಯುದ್ಧ’, ಶ್ರೀವಿಜಯನ ‘ಕವಿರಾಜಮಾರ್ಗ’, ಆಂಡಯ್ಯನ ‘ಕಬ್ಬಿಗರ ಕಾವಂ’, ರಾಘವಾಂಕನ ‘ಹರಿಶ್ಚಂದ್ರ ಕಾವ್ಯ’, ಜನ್ನನ ‘ಯಶೋಧರ ಚರಿತೆ’, ಲಕ್ಷ್ಮೀಶನ ‘ಜೈಮಿನಿ ಭಾರತ’, ಕನಕದಾಸರ ‘ನಳ ಚರಿತ್ರೆ’, ‘ರಾಮಧಾನ್ಯ ಚರಿತ್ರೆ’, ಫಲ್ಕುರಿಕೆ ಸೋಮನಾಥನ ‘ಸೋಮೇಶ್ವರ ಶತಕ’, ಹರಿಹರನ ‘ಪಂಪಾಶತಕ’, ‘ರಕ್ಷಾ ಶತಕ’, ಮುದ್ದಣನ ‘ರಾಮಾಶ್ವಮೇಧಂ’ ಸೇರಿ 26 ಕಾವ್ಯಗಳನ್ನು ಈಗಾಗಲೇ ಡಿಜಿಟಲೀಕರಣ ಮಾಡಲಾಗಿದೆ. ಗಳಗನಾಥ ಮೊದಲಾದವರ ಕೃತಿಗಳ ಡಿಜಿಟಲೀಕರಣ ಪ್ರಕ್ರಿಯೆ ನಡೆಯುತ್ತಿದೆ.

‘ಕನ್ನಡಿಗರಿಗೆ ಕನ್ನಡ ಕಾವ್ಯಗಳನ್ನು ತಲುಪಿಸಲು ಈ ಯೋಜನೆ ಸಹಕಾರಿಯಾಗಲಿದೆ. ಮುದ್ರಣ ಮಾಧ್ಯಮದ ಜತೆಗೆ ಡಿಜಿಟಲ್ ಮಾಧ್ಯಮಕ್ಕೂ ಅಕಾಡೆಮಿ ತೆರೆದುಕೊಂಡಿದೆ. ಈಗಾಗಲೇ ಡಿಜಿಟಲೀಕರಣಗೊಂಡ ಕಾವ್ಯಗಳನ್ನು ಶೀಘ್ರದಲ್ಲಿಯೇ ಅಕಾಡೆಮಿ ವೆಬ್‌ಸೈಟ್‌ಗೆ ಅಳವಡಿಸಿ, ಜನಾರ್ಪಣೆ ಮಾಡಲಾಗುವುದು’ ಎಂದು ಎಲ್.ಎನ್. ಮುಕುಂದರಾಜ್ ತಿಳಿಸಿದರು.

AVR® SWARNA MAHAL JEWELLERS
Purity is our Tradition

AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್

CIN: U36911TZ2009PLC015427
ನೋಂದಾಯಿತ ಕಚೇರಿ : 251-A, ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ, ತಮಿಳುನಾಡು – 636 004. ಫೋನ್: 0427–2333307
ಇ–ಮೇಲ್–accountsavrswarnamahal.com ವೆಬ್ ಸೈಟ್: www.avrswarnamahal.com

ಸ್ಥಿರ ಠೇವಣಿಗಳನ್ನು ಆಹ್ವಾನಿಸುತ್ತಿದ್ದೇವೆ

ಫಿಕ್ಸೆಡ್ ಡೆಪಾಸಿಟ್ ಸ್ಕೀಮ್‌ಗಳು						
ಸ್ಕೀಮ್ 'ಎ' (ಸಂಚಿತವಲ್ಲದ)		ಸ್ಕೀಮ್ 'ಬಿ' (ಸಂಚಿತ)				
ಅವಧಿ	ವಾರ್ಷಿಕ ಬಡ್ಡಿಯ ದರ (%) ತ್ರೈಮಾಸಿಕವಾಗಿ ಪಾವತಿಸಬೇಕು	ಅವಧಿ	ವಾರ್ಷಿಕ ಬಡ್ಡಿಯ ದರ (%) ಸಂಯೋಜಿತ ತ್ರೈಮಾಸಿಕ	ಠೇವಣಿಯ ಕನಿಷ್ಠ ಮೊತ್ತ (ರೂ.)	ಮೆಚ್ಯೂರಿಟಿ ಮೇಲೆ ಪಾವತಿಸಬೇಕಾದ ಮೊತ್ತ (ರೂ.)	ಪರಿಣಾಮಕಾರಿ ವಾರ್ಷಿಕ ಇಳುವರಿ (%)
1 ವರ್ಷ	8.00	1 ವರ್ಷ	8.00	10,000	10824	8.24%
2 ವರ್ಷಗಳು	8.50	2 ವರ್ಷಗಳು	8.50	10,000	11832	9.16%
3 ವರ್ಷಗಳು	9.00	3 ವರ್ಷಗಳು	9.00	10,000	13060	10.20%
ಸ್ಕೀಮ್ 'ಎ' ಮತ್ತು ಸ್ಕೀಮ್ 'ಬಿ' ಗಾಗಿ ಕನಿಷ್ಠ ರೂ.10,000/- ಗೆ ಒಳಪಟ್ಟು ರೂ.1,000/- ಗುಣಾಂಕಗಳಲ್ಲಿ ಠೇವಣಿಗಳನ್ನು ಸ್ವೀಕರಿಸಲಾಗುತ್ತದೆ / ನವೀಕರಿಸಲಾಗುತ್ತದೆ.						

ನಮೂನೆ DPT -1

ಸುತ್ತೋಲೆ ಅಥವಾ ಜಾಹೀರಾತು ರೂಪದ ಠೇವಣಿ ಹೂಡಿಕೆಯ ಸುತ್ತೋಲೆ

ಕಂಪನಿಗಳ (ಠೇವಣಿ ಸ್ವೀಕಾರ) ನಿಯಮಗಳು, 2014 ರ ಸೆಕ್ಷನ್ 73 (2) (ಎ) ಮತ್ತು ಸೆಕ್ಷನ್ 76 ಮತ್ತು ನಿಯಮ 4 (1) ಮತ್ತು 4 (2) ಗೆ ಅನುಸಾರವಾಗಿ ಸುತ್ತೋಲೆ ಅಥವಾ ಜಾಹೀರಾತು ರೂಪದ ಸುತ್ತೋಲೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ:

1. **ಸಾಮಾನ್ಯ ಮಾಹಿತಿ:**

ಎ. ಕಂಪನಿಯ ಹೆಸರು, ವಿಳಾಸ, ವೆಬ್‌ಸೈಟ್ ಮತ್ತು ಇತರ ಸಂಪರ್ಕ ವಿವರಗಳು:

ಹೆಸರು : AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್
CIN : U36911TZ2009PLC015427
ವಿಳಾಸ : 251–ಎ, ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ–636004, ತಮಿಳುನಾಡು
ವೆಬ್ ಸೈಟ್ : www.avrswarnamahal.com
ದೂರವಾಣಿ : +91 427 2333307
ಇ–ಮೇಲ್ : accounts@avrswarnamahal.com

ಬಿ. ಕಂಪನಿಯ ಸಂಯೋಜನೆಯ ದಿನಾಂಕ: 24 ನೇ ಆಗಸ್ಟ್ 2009

ಸಿ. (i) ಕಂಪನಿಯು ನಡೆಸುವ ವ್ಯವಹಾರ:

ಆಭರಣಕಾರರು, ಅಕ್ಕಸಾಲಿಗ, ಬೆಳ್ಳಿಯ ಮಾರಾಟ ಮತ್ತು ವಿತರಕರು ಬೆಲೆಬಾಳುವ ಲೋಹಗಳು, ಸದ್ಗುಣ ವಸ್ತುಗಳು, ನಾಣ್ಯಗಳು, ಅಮೂಲ್ಯ ಮತ್ತು ಅರೆ–ಅಮೂಲ್ಯ ಲೋಹಗಳು, ಗಟ್ಟಿಗಳು, ವಜ್ರಗಳು, ಅಮೂಲ್ಯ ಮತ್ತು ಅರೆ–ಅಮೂಲ್ಯ ಕಲ್ಲುಗಳು, ರತ್ನಗಳು, ರತ್ನಗಳು, ರತ್ನಗಳು ಮತ್ತು ಎಲ್ಲಾ ರೀತಿಯ ಆಭರಣಗಳು, ಆಭರಣ ಉತ್ಪನ್ನಗಳು, ಸದ್ಗುಣ ವಸ್ತುಗಳು, ನಾಣ್ಯಗಳು, ಗಡಿಯಾರಗಳು, ಕಟ್ಲರಿ, ಕ್ಯೂರಿಯೋಗಳು, ಆಭರಣಗಳು, ಪಾತ್ರೆಗಳ ಆಮದುದಾರರು ಮತ್ತು ರಫ್ತುದಾರರು ಮತ್ತು ವ್ಯಾಪಾರಿಗಳ ವ್ಯವಹಾರವನ್ನು ಮುಂದುವರಿಸುವುದು. ಪ್ಲಾಟಿನಂ, ಬೆಳ್ಳಿ ಅಥವಾ ಅದರ ಯಾವುದೇ ಸಂಯೋಜನೆಗಳಿಂದ ಅಥವಾ ಇತರ ಯಾವುದೇ ಲೋಹ ಅಥವಾ ಮಿಶ್ರಲೋಹದೊಂದಿಗೆ ಅವುಗಳ ಯಾವುದೇ ಸಂಯೋಜನೆಯಿಂದ ತಯಾರಿಸಲಾಗಿದೆ.

(ii) ಕಂಪನಿಯ ಅಂಗಸಂಸ್ಥೆಗಳು ಮತ್ತು ಘಟಕಗಳು/ ಶಾಖೆಗಳು

1. **ಅಂಗಸಂಸ್ಥೆಗಳು: ಇಲ್ಲ**
2. **ಘಟಕಗಳು / ಶಾಖೆಗಳು:**

1. 251–G, ಓಮಲೂರು ಮುಖ್ಯ ರಸ್ತೆ, ಸ್ವರ್ಣಪುರಿ, ಸೇಲಂ – 636 004
2. 24/18, ಎಸ್ಎನ್‌ಕೆ ಕಾಂಪ್ಲೆಕ್ಸ್, ಸ್ಕ್ವೇರ್ ಮಾರ್ಕೆಟ್, ಮೇಟ್ಟೂರು ಅಣೆಕಟ್ಟು – 636 401
3. 17,18,19, ಸೇಲಂ ಮುಖ್ಯ ರಸ್ತೆ, ಕಳ್ಳಕುರಿಚಿ – 606 202
4. 351, ಬೆಂಗಳೂರು ಮುಖ್ಯ ರಸ್ತೆ, ಕೃಷ್ಣಗಿರಿ – 635 001
5. 194, ಬಜಾರ್ ಬೀದಿ, ಸೇಲಂ – 636 001
6. 1-D, ನಾಲ್ಕು ರಸ್ತೆಗಳ ಹತ್ತಿರ, ಧರ್ಮಪುರಿ – 636 701
7. ನಂ. 102, ಆರ್‌ಕೆವಿ ರಸ್ತೆ, ಈರೋಡ್ – 638 001
8. ನಂ. 17/6/157, ನಂಗವಲ್ಲಿ ಮುಖ್ಯ ರಸ್ತೆ, ತಾರಮಂಗಲಂ – 636 502.
9. ನಂ. 1092 ಮತ್ತು 1096/1, ಕಡಲೂರು ಮುಖ್ಯ ರಸ್ತೆ, ಅತ್ತೂರು – 636 102.
10. 123–B, ಪಳನಿಸಾಮಿ ರಸ್ತೆ, ತಿರುಪ್ಪತ್ತೂರು – 635 601
11. 1–A/40, ಕಚ್ಚೇರಿ ಸ್ಟ್ರೀಟ್, ರಾಜಾಜಿ ಸ್ಟ್ರೀಟ್, ರಾಸಿಪುರಂ – 637 408
12. PL. ನಂ. 2054 – ಎ, ಡಿ. ನಂ.45, ಎಲ್–ಬ್ಲಾಕ್, II ಅವೆನ್ಯೂ, ಅಣ್ಣಾ ನಗರ್ ಪಶ್ಚಿಮ, ಚೆನ್ನೈ – 600 040
13. D. ನಂ. 11/135, 11/135–1, ಕಡೈ ವೀಧಿ, ತಿರುಪತ್ತೂರು ಮುಖ್ಯ ರಸ್ತೆ, ಹರೂರ್ – 636 903
14. 744/1–B, ಸೇಲಂ ಬೆಂಗಳೂರು ಬೈ ಪಾಸ್ ರಸ್ತೆ, ಹೊಸೂರು – 635 109
15. 76, ವೆಂಕಟೇಶಪುರಂ, ಶಂಕರ್ ನಗರ, ಸೇಲಂ – 636 007
16. 76/1, ನೆಲ ಮಹಡಿ, ವೆಂಕಟೇಶಪುರಂ, ಶಂಕರ್ ನಗರ, ಸೇಲಂ – 636 007
17. ಸಿಟಿಬ್ಯಾಂಕ್, 8ನೇ ಮಹಡಿ, 148, ಅಕ್ರೋಪೋಲಿಸ್, ಡಾ ರಾಧಾಕೃಷ್ಣನ್ ಸಾಲೈ, ಮೈಲಾಪೂರ್, ಮೈಲಾಪೂರ್, ಚೆನ್ನೈ, ತಮಿಳುನಾಡು – 600 004
18. AVR ಸ್ವರ್ಣಮಹಲ್ ಜ್ಯುವೆಲರಿ ಹತ್ತಿರ, 244, ಬಜಾರ್ ಸ್ಟ್ರೀಟ್, ಸೇಲಂ, ತಮಿಳುನಾಡು – 636 001
19. ಎರಡನೇ ಮಹಡಿ, ಘಟಕ ಸಂಖ್ಯೆ. S-22, ಹಳೆಯ ನಂ. 66, ಹೊಸ ನಂ.142, ಫೀನಿಕ್ಸ್ ಮಾರ್ಕೆಟ್‌ಸಿಟಿ, ವೆಲಚೇರಿ ಮುಖ್ಯ ರಸ್ತೆ, ವೆಲಚೇರಿ, ಚೆನ್ನೈ, ತಮಿಳುನಾಡು –600 042
20. ಅಂಗಡಿ ನಂ.09, ಮೇಲಿನ ನೆಲ ಮಹಡಿ, 13/1, ಮರೀನಾ ಮಾಲ್, ಹಳೆಯ ಮಹಾಬಲಿಪುರಂ ರಸ್ತೆ, ಎಗತ್ತೂರು, ಚೆನ್ನೈ, ಚೆಂಗಲ್ಪಟ್ಟು, ತಮಿಳುನಾಡು – 603 103
21. 25 AV/11, ನೈನಂಪಟ್ಟಿ ರಸ್ತೆ, ಸರ್ಕಾರಿ ಆಸ್ಪತ್ರೆ, ಎಡಪ್ಪಾಡಿ, ಎಡಪ್ಪಾಡಿ ರಸ್ತೆ, ಸೇಲಂ – 637 101
22. 57, ಪುರಸೈವಕ್ಕಂ ಹೈ ರೋಡ್, ಚೆನ್ನೈ ತಮಿಳುನಾಡು – 600 007
23. 10/214–ಬಿ, ಅರ್ಧನಾರಿ ಸ್ಟ್ರೀಟ್, ಡಾ ಸುದಾಕರ್ ಇಎನ್‌ಟಿ ಕೇರ್, ಸ್ವರ್ಣಪುರಿ, ಸೇಲಂ – 636 016
24. ಎರಡನೇ ಮಹಡಿ, ಘಟಕ ಸಂಖ್ಯೆ. SF-33A, ಹಳೆಯ ನಂ.66, ಹೊಸ ನಂ.142, ಫೀನಿಕ್ಸ್ ಮಾರ್ಕೆಟ್ ಸಿಟಿ, ವೆಲಚೇರಿ ಮುಖ್ಯ ರಸ್ತೆ, ವೆಲಚೇರಿ, ಚೆನ್ನೈ, ತಮಿಳುನಾಡು – 600 042
25. 114, USMAN ರಸ್ತೆ, T ನಗರ, ಚೆನ್ನೈ, ತಮಿಳುನಾಡು – 600 017
26. ಸಂಖ್ಯೆ 109, ತುರೈಯೂರ್ ರಸ್ತೆ, ವೆಂಕಟವಾಸಪುರಂ, ಪೆರಂಬಲೂರ್ – 621 212
27. 85, ಕಾವೇರಿ ರಸ್ತೆ, ತಿರುನಗರ ಕಾಲೋನಿ, ಈರೋಡ್ – 638 003
28. 31, ಚೈತನ್ಯ ಪ್ಲಾಟಿನಂ, 33ನೇ ಬಿ ಕ್ರಾಸ್, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
29. 533, 2ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಪೂರ್ವ, ಬೆಂಗಳೂರು, ಬೆಂಗಳೂರು ನಗರ, ಕರ್ನಾಟಕ – 560 003
30. 507, 2ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಪೂರ್ವ, ಬೆಂಗಳೂರು, ಬೆಂಗಳೂರು ನಗರ, ಕರ್ನಾಟಕ – 560 003
31. ಎರಡನೇ ಮಹಡಿ, 172/1, ಅಂಗಡಿ ಸಂಖ್ಯೆ SF 02, ವೇಗಾ ನಗರ, ಬಿ ಐ ರಸ್ತೆ, ಶ್ರೀನಿವಾಸ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು, ಬೆಂಗಳೂರು ನಗರ, ಕರ್ನಾಟಕ – 560 076
32. ಎರಡನೇ ಮಹಡಿ, SF 209, ಗರುಡಾ ಮಾಲ್, ಮಗ್ರತ್ ರಸ್ತೆ, ಬೆಂಗಳೂರು – 560 025
33. 648, 6ನೇ ಬ್ಲಾಕ್, 100 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು – 560 095
34. 1ನೇ ಮಹಡಿ, ಪ್ಲಾಟ್ ಸಂಖ್ಯೆ 299/301 / ಫ್ಲಾಟ್ ಸಂಖ್ಯೆ 7, ಜೋಹರ್ ಅರಮನೆ, ಕಲ್ಬದೇವಿ ರಸ್ತೆ, ವಿಠ್ಠಲ್ ವಾಡಿ, ಭುಲೇಶ್ವರ, ಮುಂಬೈ, ಮಹಾರಾಷ್ಟ್ರ – 400 002
35. ಹಳೆಯ ಸಂಖ್ಯೆ: 110, ಹೊಸ ಸಂಖ್ಯೆ: 156, ಅಟ್ಟೂಸಾಲೈ, ಪಾಂಡಿಚೇರಿ – 605 001

ಡಿ. ಕಂಪನಿಯ ನಿರ್ವಹಣೆಯ ಸಂಕ್ಷಿಪ್ತ ವಿವರಗಳು:

ನಿರ್ದೇಶಕರ ಮಂಡಳಿಯ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟು ಕಂಪನಿಯನ್ನು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಜಂಟಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ವೃತ್ತಿಪರ ವ್ಯವಸ್ಥಾಪಕರ ತಂಡವು ನಿರ್ವಹಿಸುತ್ತದೆ.ಬ

ಇ. ನಿರ್ದೇಶಕರ ಹೆಸರುಗಳು, ವಿಳಾಸಗಳು, ಡಿಐಎನ್ ಮತ್ತು ಉದ್ಯೋಗಗಳು

ಕ್ರ. ಸಂ.	ಹೆಸರು ಮತ್ತು ವಿಳಾಸ	DIN	ಉದ್ಯೋಗ
1.	**ಶ್ರೀ ಎ.ಬಿ. ಸುದರ್ಶನಂ,** ನಂ–2, ಗಾಂಧಿ ರಸ್ತೆ, ಎಲ್ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ ಸೇಲಂ – 636 007	02739946	Chairman and Managing Director
2.	**ಶ್ರೀ ಎ.ಬಿ.ಎಸ್. ಸಂಜಯ್,** ನಂ.2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ ಸೇಲಂ – 636 007	02736931	Managing Director
3.	**ಶ್ರೀಮತಿ ಚಂದ್ರಲೇಕಾ,** ನಂ–2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ – 636 007	02739936	Whole Time Director
4.	**ಶ್ರೀಮತಿ ಸೌಮ್ಯ ಸಂಜಯ್,** ನಂ–2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ, ಸೇಲಂ – 636 007	02729683	Whole Time Director
5.	**ಶ್ರೀ. ಎ.ವಿ.ಆರ್. ಸಿದ್ಧಾಂತ್** ನಂ. 2, ಗಾಂಧಿ ರೋಡ್, ಎಲ್‌ಐಸಿ ಆಫೀಸ್ ಎದುರು, ರಾಮಕೃಷ್ಣ ರೋಡ್, ಹಸ್ತಿನಾಪುರಂ, ಸೇಲಂ – 636 007	10364592	Whole Time Director
6.	**ಶ್ರೀ. ನಟರಾಜ್ ದಿನೇಶ್** ಎಚ್ ನಂ. 102–ಇ, ತೀರ್ಥಗಿರಿ ರಸ್ತೆ, ವಿಜಯರಾಘವಪುರಂ, ಸೇಲಂ – 636 001	10013116	Company Secretary in Practice
7.	**ಶ್ರೀ. ಆದಿತ್ಯ ರವಿಶಂಕರ್** ನಂ. 05, 2ನೇ ಕ್ರಾಸ್, ಮರವನೇರಿ, ಸೇಲಂ – 636 007	10061503	Chartered Accountant in Practice
9.	**ಶ್ರೀಮತಿ ಕೆ.ಎಂ. ಕೋಕಿಲಾ ರಾಣಿ** 171/53, ಪಳನಿಯಪ್ಪ ಕಾಲನೀ, ಅನ್ನದಾನಪಟ್ಟಿ, ಸೇಲಂ – 636 002	10364593	Company Secretary in Practice

ಎಫ್. ಅಪಾಯದ ಅಂಶಗಳ ನಿರ್ವಹಣೆಯ ಗ್ರಹಿಕೆ:

a) ಉದ್ಯಮದ ಸಂಘಟಿತ/ಅಸಂಘಟಿತ ವಲಯಗಳೆರಡರಲ್ಲೂ ಕಂಪನಿಯು ಸ್ಪರ್ಧಾತ್ಮಕ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ.
b) ಚಿನ್ನದ ಬೆಲೆಯ ಏರಿಳಿತ ಮತ್ತು ಅಂಚುಗಳ ಮೇಲೆ ಅದರ ವ್ಯತಿರಿಕ್ತ ಪರಿಣಾಮ.
c) ಅಭಿರುಚಿ ಮತ್ತು ಫ್ಯಾಷನ್ ಆದ್ಯತೆಗಳಲ್ಲಿನ ಬದಲಾವಣೆಯಿಂದಾಗಿ ಉದ್ಯಮದಲ್ಲಿ ಅಂತರ್ಗತ ಮಿತಿ.

ಜಿ. ಒಳಗೊಂಡಿರುವ ಮೊತ್ತ, ಡೀಫಾಲ್ಟ್ ಅವಧಿ ಸೇರಿದಂತೆ ಡೀಫಾಲ್ಟ್ ವಿವರಗಳು ಮತ್ತು ಪ್ರಸ್ತುತ ಸ್ಥಿತಿ, ಮರುಪಾವತಿಯಲ್ಲಿ–

i)	ಶಾಸನಬದ್ಧ ಬಾಕಿಗಳು	ಶೂನ್ಯ
ii)	ಸಾಲಪತ್ರಗಳು ಮತ್ತು ಅದರ ಮೇಲಿನ ಬಡ್ಡಿ	ಶೂನ್ಯ
iii)	ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯಿಂದ ಸಾಲ ಮತ್ತು ಅದರ ಮೇಲಿನ ಬಡ್ಡಿ.	ಶೂನ್ಯ

2. **ಠೇವಣಿ ಯೋಜನೆಯ ವಿಶೇಷತೆಗಳು:**

ಎ. ಮಂಡಳಿಯ ನಿರ್ಣಯದ ಅಂಗೀಕಾರದ ದಿನಾಂಕ : 01.09.2025
ಬಿ. ಅಂತಹ ಠೇವಣಿಗಳ ಆಹ್ವಾನವನ್ನು ಅಧಿಕೃತಗೊಳಿಸುವ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿದ ದಿನಾಂಕ : 30.09.2025
ಸಿ. ಠೇವಣಿಗಳ ಪ್ರಕಾರ ಅಂದರೆ ಸುರಕ್ಷಿತ ಅಥವಾ ಅಸುರಕ್ಷಿತ : ಸುರಕ್ಷಿತ ಡಿ.

ಕ್ರ.ಸಂ.	ವಿವರಗಳು	ಮೊತ್ತ (ರೂ. ಲಕ್ಷಗಳಲ್ಲಿ)
1	ಕಾಯ್ದೆ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಪ್ರಕಾರ ಕಂಪನಿಯು ಠೇವಣಿಗಳ ಮೂಲಕ ಸಂಗ್ರಹಿಸಬಹುದಾದ ಮೊತ್ತ; ಪಾವತಿಸಿದ ಬಂಡವಾಳದ ಒಟ್ಟು 10%, ಉಚಿತ ಮೀಸಲು ಮತ್ತು ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ ಅದರ ಸದಸ್ಯರಿಂದ; ಪಾವತಿಸಿದ ಬಂಡವಾಳದ ಒಟ್ಟು 25%, ಉಚಿತ ಮೀಸಲು ಮತ್ತು ಸೆಕ್ಯುರಿಟೀಸ್ ಪ್ರೀಮಿಯಂ ಖಾತೆಯು ಸಾರ್ವಜನಿಕರಿಂದ;	4,268.29 10,670.74
2	ಹಿಂದಿನ ಹಣಕಾಸು ವರ್ಷದ ಕೊನೆಯ ದಿನದಂದು ಠೇವಣಿಗಳ ಒಟ್ಟು ಮೊತ್ತ;	1,011.23
3	ಸುತ್ತೋಲೆ ಅಥವಾ ಜಾಹೀರಾತನ್ನು ಹೊರಡಿಸಿದ ದಿನಾಂಕದಂದು ಠೇವಣಿಗಳ ಒಟ್ಟು ಮೊತ್ತ;	1,199.83
4	ಹೆಚ್ಚಿಸಲು ಉದ್ದೇಶಿಸಿರುವ ಠೇವಣಿಗಳ ಮೊತ್ತ;	5,000.00
5	ಮುಂದಿನ ಹನ್ನೆರಡು ತಿಂಗಳೊಳಗೆ ಮರುಪಾವತಿಸಬಹುದಾದ ಠೇವಣಿಗಳ ಮೊತ್ತ; (FY 2025-26)	241.85

e. ಠೇವಣಿಗಳನ್ನು ಸಂಗ್ರಹಿಸುವ ನಿಯಮಗಳು:

1. ಅವಧಿ: ಠೇವಣಿಗಳನ್ನು 1 ವರ್ಷ, 2 ವರ್ಷ ಮತ್ತು 3 ವರ್ಷಗಳ ಅವಧಿಗೆ ಸ್ವೀಕರಿಸಲು ಪ್ರಸ್ತಾಪಿಸಲಾಗಿದೆ.
2. ಬಡ್ಡಿ ದರ:

ಫಿಕ್ಸೆಡ್ ಡೆಪಾಜಿಟ್ ಸ್ಕೀಮ್						
ಸ್ಕೀಮ್ 'ಎ' (ನಾನ್ ಕ್ಯುಮ್ಯುಲೇಟಿವ್)		ಸ್ಕೀಮ್ 'ಬಿ' (ಕ್ಯುಮ್ಯುಲೇಟಿವ್)				
ಅವಧಿ	ವಾರ್ಷಿಕ ಬಡ್ಡಿ ದರ (%) ತ್ರೈಮಾಸಿಕವಾಗಿ ಪಾವತಿಸಬೇಕು	ಅವಧಿ	ವಾರ್ಷಿಕ ಬಡ್ಡಿ ದರ (%) ತ್ರೈಮಾಸಿಕವಾಗಿ ಪಾವತಿಸಬೇಕು	ಕನಿಷ್ಠ ಠೇವಣಿ ಮೊತ್ತ (₹)	ಮೆಚ್ಯುರಿಟಿ ಸಮಯದಲ್ಲಿ ಪಾವತಿಸಬೇಕಾದ ಮೊತ್ತ (₹)	ಪರಿಣಾಮಕಾರಿ ವಾರ್ಷಿಕ ಇಳುವರಿ (%)
1 ವರ್ಷ	8.00	1 ವರ್ಷ	8.00	10,000	10,824	8.24%
2 ವರ್ಷ	8.50	2 ವರ್ಷ	8.50	10,000	11,832	9.16%
3 ವರ್ಷ	9.00	3 ವರ್ಷ	9.00	10,000	13,060	10.20%

✓ ಕನಿಷ್ಠ ಠೇವಣಿ ಮೊತ್ತ ರೂ. 10,000/- ಮತ್ತು ಅದಕ್ಕಿಂತ ಹೆಚ್ಚಿನದು ರೂ. 1,000/- ರ ಗುಣಕಗಳಲ್ಲಿ
✓ ಕನಿಷ್ಠ ಠೇವಣಿ ಅವಧಿ – 1 ವರ್ಷ. ಗರಿಷ್ಠ ಠೇವಣಿ ಅವಧಿ – 3 ವರ್ಷಗಳು
✓ ಗರಿಷ್ಠ ಠೇವಣಿ ಮೊತ್ತ: ಗರಿಷ್ಠ ಮಿತಿಯಿಲ್ಲ

ಬಡ್ಡಿಯನ್ನು ತ್ರೈಮಾಸಿಕವಾಗಿ ಸಂಯೋಜಿಸಲಾಗುತ್ತದೆ ಮತ್ತು ಮುಕ್ತಾಯದ ಸಮಯದಲ್ಲಿ ಪಾವತಿಸಲಾಗುತ್ತದೆ.

3. ಪಾವತಿ ಮತ್ತು ಮರುಪಾವತಿ ವಿಧಾನ:

1	ಪಾವತಿ ವಿಧಾನ	Cheque/Demand Draft/NEFT/RTGS/UPI
2	ಮರುಪಾವತಿಯ ವಿಧಾನ	Cheque/Demand Draft/NEFT/RTGS/UPI

f. ಯೋಜನೆಯನ್ನು ತೆರೆಯುವ ದಿನಾಂಕ ಮತ್ತು ಸುತ್ತೋಲೆ ಅಥವಾ ಜಾಹೀರಾತು ಮಾನ್ಯವಾಗಿರುವ ಅವಧಿಯನ್ನು ನಮೂದಿಸುವ ಪ್ರಸ್ತಾವಿತ ಸಮಯದ ವೇಳಾಪಟ್ಟಿ: ಕಂಪನಿಗಳ ರಿಜಿಸ್ಟ್ರಾರ್ ಗೆ ಸಲ್ಲಿಸಿದ ದಿನಾಂಕದಿಂದ 30 ದಿನಗಳ ನಂತರ ಯೋಜನೆಯನ್ನು ತೆರೆಯಲಾಗುತ್ತದೆ. 2025–2026ರ ಹಣಕಾಸು ವರ್ಷದ ಉಳಿದ ಅವಧಿಯಲ್ಲಿ ಚಂದಾದಾರಿಕೆಗಳನ್ನು ಸ್ವೀಕರಿಸುವುದನ್ನು ಮುಂದುವರಿಸಲು ಈ ಸುತ್ತೋಲೆಯನ್ನು ಹೊರಡಿಸಲಾಗುತ್ತಿದೆ. ಈ ಸುತ್ತೋಲೆಯು 30/09/2026 ರವರೆಗೆ ಅಥವಾ 2026 ರಲ್ಲಿ ಕಂಪನಿಯ ಎಜಿಎಂನ ಟೈ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಾನ್ಯವಾಗಿರುತ್ತದೆ.

g. ಠೇವಣಿಗಳನ್ನು ಹೆಚ್ಚಿಸಲು ಕಾರಣಗಳು ಅಥವಾ ಉದ್ದೇಶಗಳು; ಕಂಪನಿಯ ದುಡಿಯುವ ಬಂಡವಾಳದ ಅವಶ್ಯಕತೆಗಳನ್ನು ಸುಲಭಗೊಳಿಸುವುದು.

h. ಕ್ರೆಡಿಟ್ ರೇಟಿಂಗ್ ಪಡೆಯಲಾಗಿದೆ:

1 ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳ ಹೆಸರು : ICRA ಲಿಮಿಟೆಡ್
2. ಪಡೆದ ರೇಟಿಂಗ್ : A-
3. ಪಡೆದ ರೇಟಿಂಗ್ ನ ಅರ್ಥ : ಸ್ಥಿರ
4. ರೇಟಿಂಗ್ ಪಡೆದ ದಿನಾಂಕ : 09.04.2025

I. ಅಂತಹ ಠೇವಣಿಗಳನ್ನು ಭದ್ರಪಡಿಸಿಕೊಳ್ಳಲು ರಚಿಸಲಾದ / ರಚಿಸಬೇಕಾದ ಶುಲ್ಕದ ಸಂಕ್ಷಿಪ್ತ ವಿವರಗಳು, ಯಾವುದಾದರೂ ಇದ್ದರೆ : ಅನ್ವಯಿಸುವುದಿಲ್ಲ

j. ಅಂತಹ ಠೇವಣಿಗಳಲ್ಲಿ ನಿರ್ದೇಶಕರು, ಪ್ರವರ್ತಕರು ಅಥವಾ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಗಳ ಯಾವುದೇ ಹಣಕಾಸಿನ ಅಥವಾ ಇತರ ವಸ್ತು ಆಸಕ್ತಿ ಮತ್ತು ಅಂತಹ ಆಸಕ್ತಿಯ ಪರಿಣಾಮವು ಇತರ ವ್ಯಕ್ತಿಗಳ ಹಿತಾಸಕ್ತಿಗಳಿಗಿಂತ ಭಿನ್ನವಾಗಿದೆ: ನಿರ್ದೇಶಕರು, ಪ್ರವರ್ತಕರು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಯಾವುದೇ ಠೇವಣಿ ಇಟ್ಟಿದ್ದರೆ ಅಥವಾ ಅಂತಹ ಯಾವುದೇ ವ್ಯಕ್ತಿಯು ಯಾವುದೇ ಠೇವಣಿ ಇಟ್ಟಿದ್ದರೆ, ಅನ್ವಯವಾಗುವ ಬಡ್ಡಿದರವು ಚಾಲ್ತಿಯಲ್ಲಿರುವ ಯೋಜನೆಯ ಪ್ರಕಾರ ಇರುತ್ತದೆ.

3. ಬಾಕಿ ಇರುವ ಯಾವುದೇ ಠೇವಣಿಗಳ ವಿವರಗಳು: (ಲಕ್ಷ ರೂ.ಗಳಲ್ಲಿ)

a.	31.03.2025 ರಂತೆ ಬಾಕಿ ಇರುವ ಮೊತ್ತ	1011.23
b.	ಸ್ವೀಕಾರ ದಿನಾಂಕ	31/03/2025
c.	ಸ್ವೀಕರಿಸಲಾದ ಒಟ್ಟು ಮೊತ್ತ	1011.23
d.	ಬಡ್ಡಿ ದರ	1 ವರ್ಷಕ್ಕೆ – 8.00% 2 ವರ್ಷಕ್ಕೆ – 8.50% 3 ವರ್ಷಕ್ಕೆ – 9.00%
e.	31.03.2025 ರಂತೆ ಠೇವಣಿದಾರರ ಒಟ್ಟು ಸಂಖ್ಯೆ	382
f.	ಠೇವಣಿಗಳ ಮರುಪಾವತಿ ಮತ್ತು ಅದರ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ, ಠೇವಣಿದಾರರ ಸಂಖ್ಯೆ, ಮೊತ್ತ ಮತ್ತು ಡೀಫಾಲ್ಟ್ ಅವಧಿ ಸೇರಿದಂತೆ ಯಾವುದೇ ಡೀಫಾಲ್ಟ್ ಇದ್ದರೆ.	ಇಲ್ಲ
g.	ಠೇವಣಿದಾರರಿಂದ ಯಾವುದೇ ಮನ್ನಾ, ಠೇವಣಿಗಳ ಮೇಲೆ ಗಳಿಸಿದ ಬಡ್ಡಿ	ಇಲ್ಲ

4. ಕಂಪನಿಯ ಆರ್ಥಿಕ ಸ್ಥಿತಿ:

a. ಕಂಪನಿಯ ಲಾಭಗಳು, ತೆರಿಗೆಗೆ ನಿಬಂಧನೆಯನ್ನು ಮಾಡುವ ಮೊದಲು ಮತ್ತು ನಂತರ, ಸುತ್ತೋಲೆ ಅಥವಾ ಜಾಹೀರಾತಿನ ಬಿಡುಗಡೆಯ ದಿನಾಂಕದ ಮೊದಲು ಮೂರು ಹಣಕಾಸು ವರ್ಷಗಳು:

ವರ್ಷ	ತೆರಿಗೆಯ ಮುನ್ನ ಲಾಭ (ರೂ. ಲಕ್ಷಗಳಲ್ಲಿ)	ತೆರಿಗೆಯ ನಂತರದ ಲಾಭ (ರೂ. ಲಕ್ಷಗಳಲ್ಲಿ)
2022-23	7399.81	5378.37
2023-24	6344.80	4516.12
2024-25	8712.46	6293.63

b. ಸದರಿ ಮೂರು ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯು ಘೋಷಿಸಿದ ಲಾಭಾಂಶಗಳು; ಕಳೆದ ಮೂರು ವರ್ಷಗಳ ಬಡ್ಡಿ ವ್ಯಾಪ್ತಿಯ ಅನುಪಾತ (ತೆರಿಗೆಯ ನಂತರದ ನಗದು ಲಾಭ ಮತ್ತು ಪಾವತಿಸಿದ ಬಡ್ಡಿ / ಪಾವತಿಸಿದ ಬಡ್ಡಿ);

ವರ್ಷ	2022-23	2023-24	2024-25
ಘೋಷಿಸಿದ ಲಾಭಾಂಶ	0%	50%	50%
ಬಡ್ಡಿ ವ್ಯಾಪ್ತಿಯ ಅನುಪಾತ	4.44	3.45	2.89

c. ಸುತ್ತೋಲೆ ಅಥವಾ ಜಾಹೀರಾತನ್ನು ನೀಡುವ ದಿನಾಂಕಕ್ಕೆ ಮುಂಚಿತವಾಗಿ ಲೆಕ್ಕಪರಿಶೋಧಿತ ಮೂರು ಬ್ಯಾಲೆನ್ಸ್ ಶೀಟ್ ಗಳಲ್ಲಿರುವಂತೆ ಕಂಪನಿಯ ಆರ್ಥಿಕ ಸ್ಥಿತಿಯ ಸಾರಾಂಶ:

ಹೊಣೆಗಾರಿಕೆಗಳು	ಮಾರ್ಚ್ 31, 2025 ರಂತೆ	ಮಾರ್ಚ್ 31, 2024 ರಂತೆ	ಮಾರ್ಚ್ 31, 2023 ರಂತೆ	ಸ್ವತ್ತುಗಳು	ಮಾರ್ಚ್ 31, 2025 ರಂತೆ	ಮಾರ್ಚ್ 31, 2024 ರಂತೆ	ಮಾರ್ಚ್ 31, 2023 ರಂತೆ
ಈಕ್ವಿಟಿ ಷೇರು ಬಂಡವಾಳ	748.24	748.24	748.24	ಚಾಲ್ತಿಯಲ್ಲದ ಸ್ವತ್ತುಗಳು	25051.59	23108.90	20874.08
ಮೀಸಲು ಮತ್ತು ಹೆಚ್ಚುವರಿ	41934.73	36055.24	31919.06	ಪ್ರಸ್ತುತ ಸ್ವತ್ತುಗಳು	104311.70	81272.82	72634.50
ಪ್ರಸ್ತುತವಲ್ಲದ ಹೊಣೆಗಾರಿಕೆಗಳು	8886.65	9725.19	10746.25				
ಪ್ರಸ್ತುತ ಹೊಣೆಗಾರಿಕೆಗಳು	77793.67	57853.05	50095.04				
ಒಟ್ಟು	129363.29	104381.72	93508.58	Total	129363.29	104381.72	93508.58

d. ಸುತ್ತೋಲೆ ಅಥವಾ ಜಾಹೀರಾತನ್ನು ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಮೂರು ವರ್ಷಗಳ ಲೆಕ್ಕಪರಿಶೋಧಿತ ನಗದು ಹರಿವಿನ ಹೇಳಿಕೆ:

ವಿವರಗಳು	31.03.2025	31.03.2024	31.03.2023
ಕಾರ್ಯಾಚರಣೆಯ ಚಟುವಟಿಕೆಗಳಿಂದ ಹಣದ ಹರಿವು	-14715.78	471.43	5362.49
ಹೂಡಿಕೆ ಚಟುವಟಿಕೆಗಳಿಂದ ಹಣದ ಹರಿವು	-2123.93	-3464.24	-2034.91
ಹಣಕಾಸು ಚಟುವಟಿಕೆಗಳಿಂದ ಹಣದ ಹರಿವು	17149.93	4708.91	-2609.97
ನಗದು ಮತ್ತು ನಗದು ಸಮಾನಗಳಲ್ಲಿ ನಿವ್ವಳ ಹೆಚ್ಚಳ/(ಕಡಿಮೆ) –	310.22	1716.10	717.61

e. ಕಳೆದ ಮೂರು ವರ್ಷಗಳಲ್ಲಿ ಅಕೌಂಟಿಂಗ್ ನೀತಿಗಳಲ್ಲಿನ ಯಾವುದೇ ಬದಲಾವಣೆ ಮತ್ತು ಕಂಪನಿಯ ಲಾಭ ಮತ್ತು ಮೀಸಲುಗಳ ಮೇಲೆ ಅವುಗಳ ಪರಿಣಾಮ:
ಕಂಪನಿಯ ಹಣಕಾಸು ಹೇಳಿಕೆಗಳನ್ನು ಭಾರತೀಯ ಅಕೌಂಟಿಂಗ್ ಮಾನದಂಡಗಳಿಗೆ ಅನುಗುಣವಾಗಿ ತಯಾರಿಸಲಾಗುತ್ತದೆ. ("Ind AS") ಕಂಪನಿಗಳ (ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು 2015 ರ ಅಡಿಯಲ್ಲಿ ಅಧಿಸೂಚಿಸಲಾಗಿದೆ ಮತ್ತು ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 133 ನೊಂದಿಗೆ ಓದಲಾಗಿದೆ.

5. ನಿರ್ದೇಶಕರ ಘೋಷಣೆ–

1. ಕಾಯ್ದೆಯ ಪ್ರಾರಂಭದ ಮೊದಲು ಅಥವಾ ನಂತರ ಸ್ವೀಕರಿಸಲಾದ ಠೇವಣಿಗಳ ಮರುಪಾವತಿಯಲ್ಲಿ ಅಥವಾ ಅಂತಹ ಠೇವಣಿಗಳ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಯು ವಿಫಲವಾಗಿಲ್ಲ ಮತ್ತು ಡೀಫಾಲ್ಟ್ ಸಂಭವಿಸಿದಾಗ, ಕಂಪನಿಯು ಡೀಫಾಲ್ಟ್ ಅನ್ನು ಸರಿದೂಗಿಸುತ್ತದೆ ಮತ್ತು ಡೀಫಾಲ್ಟ್ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿ ಮುಗಿದಿದೆ.
2. ಕಂಪನಿಯ ವ್ಯವಹಾರಗಳು ಮತ್ತು ನಿರೀಕ್ಷೆಗಳಿಗೆ ಸಂಬಂಧಿಸಿದಂತೆ ನಿರ್ದೇಶಕರ ಮಂಡಳಿಯು ತಮ್ಮನ್ನು ಸಂಪೂರ್ಣವಾಗಿ ತೃಪ್ತಿಪಡಿಸಿಕೊಂಡಿದೆ ಮತ್ತು ಕಂಪನಿಯ ಅಂದಾಜು ಭವಿಷ್ಯದ ಹಣಕಾಸಿನ ಸ್ಥಿತಿಗೆ ಸಂಬಂಧಿಸಿದಂತೆ ಅವರು ಅಭಿಪ್ರಾಯಪಡುತ್ತಾರೆ. ಕಂಪನಿಯು ತನ್ನ ಬಾಧ್ಯತೆಗಳನ್ನು ಯಾವಾಗ ಪಾವತಿಸಬೇಕೋ ಆಗ ಪೂರೈಸಲು ಸಾಧ್ಯವಾಗುತ್ತದೆ ಮತ್ತು ಸುತ್ತೋಲೆ ಅಥವಾ ಜಾಹೀರಾತನ್ನು ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ಕಂಪನಿಯು ದಿವಾಳಿಯಾಗುವುದಿಲ್ಲ,
3. ಕಂಪನಿಯು ಕಾಯ್ದೆಯ ಪೂರ್ವದರ್ಶಿತ್ವಗಳನ್ನು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಅನುಸರಿಸಿದೆ;
4. ಕಾಯ್ದೆ ಮತ್ತು ನಿಯಮಗಳ ಅನುಸರಣೆಯು ಠೇವಣಿಗಳ ಮರುಪಾವತಿಯನ್ನು ಕೇಂದ್ರ ಸರ್ಕಾರವು ಖಾತರಿಪಡಿಸುತ್ತದೆ ಎಂದು ಸೂಚಿಸುವುದಿಲ್ಲ;
5. ಕಾಯ್ದೆ ಪ್ರಾರಂಭವಾಗುವ ಮೊದಲು ಕಂಪನಿಯು ಸ್ವೀಕರಿಸಿದ ಠೇವಣಿಗಳನ್ನು ಮರುಪಾವತಿಸಲಾಗಿದೆ ಅಥವಾ ಠೇವಣಿಗಳ ಸ್ವೀಕಾರ ನಿಯಮಗಳು, 2014 ರ ನಿಯಮ 19 ರ ಪ್ರಕಾರ ನಿಗದಿತ ದಿನಾಂಕದೊಳಗೆ ಬಡ್ಡಿಯೊಂದಿಗೆ ಮರುಪಾವತಿಸಬೇಕು;
6. ಕ್ರೆಡಿಟ್ ರೇಟಿಂಗ್ ನಲ್ಲಿ ಯಾವುದೇ ಪ್ರತಿಕೂಲ ಬದಲಾವಣೆಯ ಸಂದರ್ಭದಲ್ಲಿ, ಠೇವಣಿದಾರರಿಗೆ ಯಾವುದೇ ದಂಡವಿಲ್ಲದೆ ಠೇವಣಿಗಳನ್ನು ಹಿಂಪಡೆಯಲು ಅವಕಾಶ ನೀಡಲಾಗುವುದು;
7. ಠೇವಣಿಗಳನ್ನು ಸುತ್ತೋಲೆ ಅಥವಾ ಸುತ್ತೋಲೆಯಲ್ಲಿ ಜಾಹೀರಾತಿನ ರೂಪದಲ್ಲಿ ಸೂಚಿಸಲಾದ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು;
8. ಕಂಪನಿಯು ಸ್ವೀಕರಿಸಿರುವ ಠೇವಣಿಗಳು (ಯಾವುದೇ ಭದ್ರಿತ ಠೇವಣಿಗಳು ಇದ್ದಲ್ಲಿ, ಅವುಗಳ ಒಟ್ಟು ಮೊತ್ತವನ್ನು ಪ್ರತ್ಯೇಕವಾಗಿ ಸೂಚಿಸಬೇಕು) ಭದ್ರತೆಯಿಲ್ಲದವುಗಳಾಗಿದ್ದು, ಕಂಪನಿಯ ಇತರ ಎಲ್ಲಾ ಭದ್ರತೆಯಿಲ್ಲದ ಬಾಧ್ಯತೆಗಳ ಆಧಾರದ ಮೇಲೆ ಸಮಾನ ಹಕ್ಕು ಹೊಂದಿರುತ್ತವೆ.

ಸ್ಥಳ: ಸೇಲಂ
ದಿನಾಂಕ : 22.10.2025

ಮಂಡಳಿಯ ಆದೇಶದಂತೆ
AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್
ಶ್ರೀ ಎ.ಬಿ.ಎಸ್.ಸಂಜಯ್ – ವ್ಯವಸ್ಥಾಪಕ ನಿರ್ದೇಶಕ

ಸ್ವತಂತ್ರ ಆಡಿಟರ್ (ಲೆಕ್ಕ ಪರಿಶೋಧಕರ) ಪ್ರಮಾಣಪತ್ರ

ನಿರ್ದೇಶಕರ ಮಂಡಳಿ (ಬೋರ್ಡ್ ಆಫ್ ಡೈರೆಕ್ಟರ್ಸ್),
AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್,
251–ಎ, ಓಮಲೂರ್ ರಸ್ತೆ, ಸ್ವರ್ಣಪುರಿ,
ಸೇಲಂ 636 004.

ಆತ್ಮೀಯರೇ,

ಠೇವಣಿಗಳನ್ನು ಆಹ್ವಾನಿಸುವ ಜಾಹೀರಾತು ರೂಪದಲ್ಲಿ ಸುತ್ತೋಲೆ ಅಥವಾ ಸುತ್ತೋಲೆಗೆ (ಫಾರ್ಮ್ DPT 1) ಮತ್ತು ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 73 (ಕಾಯಿದೆ) ಕ್ಕೆ ಸಂಬಂಧಿಸಿದಂತೆ ಕಂಪನಿಗಳ ನಿಯಮ 4 (ಠೇವಣಿಗಳ ಸ್ವೀಕೃತಿ) ನಿಯಮಗಳು, 2018 (ನಿಯಮಗಳು) ರ ಅಗತ್ಯತೆಗಳಿಗೆ ಅನುಗುಣವಾಗಿ ಸ್ವತಂತ್ರ ಲೆಕ್ಕ ಪರಿಶೋಧಕರ ಪ್ರಮಾಣಪತ್ರ

1. ದಿನಾಂಕ ಸೆಪ್ಟೆಂಬರ್ 30, 2025 ರ ನಮ್ಮ ಒಪ್ಪಂದ ಪತ್ರದ (ಎಂಗೇಜ್‌ಮೆಂಟ್ ಲೆಟರ್) ನಿಯಮಗಳಿಗೆ ಅನುಸಾರವಾಗಿ ಈ ವರದಿಯನ್ನು ನೀಡಲಾಗಿದೆ.
2. AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್ (ಕಂಪನಿ) ನ ಶಾಸನಬದ್ಧ ಲೆಕ್ಕಪರಿಶೋಧಕರಾದ ನಾವು, ಶ್ರೀನಿವಾಸನ್ ಮತ್ತು ಪದ್ಮನಾಭನ್, ಮಾರ್ಚ್ 31, 2025 ರಂತೆ ಬಾಕಿ ಇರುವ ಠೇವಣಿಗಳ ಮರುಪಾವತಿಯಲ್ಲಿ ಕಂಪನಿಯು ಡೀಫಾಲ್ಟ್ ಮಾಡಿಲ್ಲ ಎಂದು ಪ್ರಮಾಣೀಕರಿಸಲು ವಿನಂತಿಸಲ್ಪಟ್ಟಿದ್ದೇವೆ.

ಆಡಳಿತದ ಜವಾಬ್ದಾರಿ

3. ಎಲ್ಲಾ ಲೆಕ್ಕಪತ್ರ ನಿರ್ವಹಣೆ ಮತ್ತು ಅದರ ವಿಷಯಗಳನ್ನು ಬೆಂಬಲಿಸುವ ಇತರ ದಾಖಲೆಗಳ ರಚನೆ ಮತ್ತು ನಿರ್ವಹಣೆ ಸೇರಿದಂತೆ ಜೊತೆಯಲ್ಲಿರುವ ಫಾರ್ಮ್ DPT 1 ರ ತಯಾರಿಕೆಗೆ ಕಂಪನಿಯ ಆಡಳಿತವು ಜವಾಬ್ದಾರವಾಗಿದೆ. ಹೇಳಿಕೆಯ ತಯಾರಿಕೆ ಮತ್ತು ಪ್ರಸ್ತುತಿಗೆ ಸಂಬಂಧಿಸಿದ ಆಂತರಿಕ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಹಾಗೂ ತಯಾರಿಕೆಯ ಸರಿಯಾದ ಆಧಾರವನ್ನು ಅನ್ವಯಿಸುವುದು ಮತ್ತು ಸಂದರ್ಭಗಳಲ್ಲಿ ಸಮಂಜಸವಾದ ಅಂದಾಜುಗಳನ್ನು ಮಾಡುವುದನ್ನು ಈ ಜವಾಬ್ದಾರಿಯು ಒಳಗೊಂಡಿರುತ್ತದೆ.
4. ಕಂಪನಿಯು ರೂಪಿಸಿದ ಯೋಜನೆಯ ಪ್ರಕಾರ ಅಂತಹ ಠೇವಣಿಗಳು ಬಾಕಿಯಿರುವಾಗ, ಠೇವಣಿಗಳನ್ನು ಮರುಪಾವತಿಸಲು/ಹಿಂಪಡೆಯಲು ಕಂಪನಿಯ ಆಡಳಿತವು ಜವಾಬ್ದಾರವಾಗಿರುತ್ತದೆ. ಅಲ್ಲದೆ, ಠೇವಣಿಗಳನ್ನು ಆಹ್ವಾನಿಸುವ ಜಾಹೀರಾತುಗಳ ರೂಪದಲ್ಲಿ 1 ಸುತ್ತೋಲೆ ಅಥವಾ ಸುತ್ತೋಲೆ (ಫಾರ್ಮ್ DPT 1) ಮತ್ತು ಕಾಯಿದೆಯ ಸೆಕ್ಷನ್ 73 ಕ್ಕೆ ಸಂಬಂಧಿಸಿದ ನಿಯಮಗಳ ಅಗತ್ಯತೆಗಳಿಗೆ ಕಂಪನಿಯ ಅನುಸರಣೆ ಆಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯ ಆಡಳಿತವು ಜವಾಬ್ದಾರವಾಗಿದೆ.

ಆಡಿಟರ್ ರವರ ಜವಾಬ್ದಾರಿ

5. ಕಂಪನಿಯು ನಿರ್ವಹಿಸಿರುವ ಖಾತೆಗಳ ಆಡಿಟ್ ಮಾಡಿದ ಪುಸ್ತಕಗಳು ಮತ್ತು ಇತರ ಸಂಬಂಧಿತ ದಾಖಲೆಗಳು ಮತ್ತು ದಾಖಲೆಗಳ ಪ್ರಕಾರ ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳ ಮರುಪಾವತಿಯಲ್ಲಿ ಕಂಪನಿಯು ಡೀಫಾಲ್ಟ್ ಮಾಡಿಲ್ಲ ಎಂಬ ಸಮಂಜಸವಾದ ಭರವಸೆಯನ್ನು ನೀಡುವುದು ನಮ್ಮ ಜವಾಬ್ದಾರಿಯಾಗಿದೆ.
6. ಆಡಳಿತದ ವಿನಂತಿಯ ಪ್ರಕಾರ, ಈ ಪ್ರಮಾಣೀಕರಣದ ಉದ್ದೇಶಕ್ಕಾಗಿ ನಾವು ಮಾರ್ಚ್ 31, 2025 ರಂತೆ ಬಾಕಿ ಇರುವ ಠೇವಣಿಗಳಿಗಾಗಿ ನಮ್ಮ ಪರಿಶೀಲನೆಯನ್ನು ನಿರ್ಬಂಧಿಸಿದ್ದೇವೆ. ಆದ್ದರಿಂದ, ಹಿಂದಿನ ವರ್ಷಗಳಲ್ಲಿ ಯಾವುದಾದರೂ ಡೀಫಾಲ್ಟ್‌ಗಳ ಅನುಸರಣೆಯ ಬಗ್ಗೆ ನಾವು ಪ್ರತಿಕ್ರಿಯಿಸುವುದಿಲ್ಲ, ನಮ್ಮ ಪರೀಕ್ಷೆಯ ಭಾಗವಾಗಿ ಈ ಕೆಳಗಿನ ಕಾರ್ಯ ವಿಧಾನಗಳನ್ನು ನಾವು ನಿರ್ವಹಿಸಿದ್ದೇವೆ:

ಎ) ಮಾರ್ಚ್ 31, 2025 ರಂತೆ ಕಂಪನಿಯು ನಿರ್ವಹಿಸುವ ಸ್ವತಂತ್ರ ಹಣಕಾಸು ಹೇಳಿಕೆಗಳು, ಖಾತೆಗಳ ಪುಸ್ತಕಗಳು, ಠೇವಣಿಗಳ ನೋಂದಣಿ ಮತ್ತು ಇತರ ಸಂಬಂಧಿತ ದಾಖಲೆಗಳಿಗೆ ಬಾಕಿ ಉಳಿದಿರುವ ಮೊತ್ತಗಳನ್ನು ಪತ್ತೆ ಹಚ್ಚಲಾಗಿದೆ.
ಬಿ) ಇಲ್ಲಿ ಒಳಗೊಂಡಿರುವ ಮಾಹಿತಿಯ ನಿಖರತೆಯನ್ನು ನಿರ್ಧರಿಸಲು ನಾವು ಮಾದರಿ ಆಧಾರದ ಮೇಲೆ ಠೇವಣಿಗಳ ನೋಂದಣಿ ಮತ್ತು ಇತರ ಸಂಬಂಧಿತ ದಾಖಲೆಗಳಲ್ಲಿ ಸೇರಿಸಲಾದ ವಿವರಗಳನ್ನು ಪರೀಕ್ಷಿಸಿದ್ದೇವೆ.
ಸಿ) ಠೇವಣಿಗಳ ಅವಧಿ ಮೀರಿದೆಯೇ ಎಂಬುದನ್ನು ನಿರ್ಧರಿಸಲು ನಾವು ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳ ವಯಸ್ಸಾಗುವಿಕೆಯನ್ನು ಪರೀಕ್ಷಿಸಿದ್ದೇವೆ.

7. ಮಾರ್ಚ್ 31, 2025 ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಹಣಕಾಸು ಹೇಳಿಕೆಗಳನ್ನು ನಾವು ಆಡಿಟ್ ಮಾಡಿದ್ದೇವೆ. ಲೆಕ್ಕಪರಿಶೋಧನೆಯ ಮಾನದಂಡಗಳು ಮತ್ತು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿದ ಇತರ ಅನ್ವಯವಾಗುವ ಅಧಿಕೃತ ಘೋಷಣೆಗಳಿಗೆ ಅನುಗುಣವಾಗಿ, ಈ ಹಣಕಾಸು ಹೇಳಿಕೆಗಳ ಬಗ್ಗೆ ನಮ್ಮ ಆಡಿಟ್ ಅನ್ನು ನಡೆಸಲಾಗಿದೆ. ಹಣಕಾಸಿನ ಹೇಳಿಕೆಗಳು ವಸ್ತು ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯಲು ನಾವು ಆಡಿಟ್ ಬಗ್ಗೆ ಯೋಜನೆ ಮಾಡಬೇಕು ಮತ್ತು ನಿರ್ವಹಿಸಬೇಕು ಎಂದು ಆ ಮಾನದಂಡಗಳು ಬಯಸುತ್ತವೆ.
8. ನಾವು ಕಂಪನಿಯ ಆಡಳಿತದಿಂದ ಸೂಕ್ತ ಪ್ರಾತಿನಿಧ್ಯಗಳನ್ನು ಪಡೆದುಕೊಂಡಿದ್ದೇವೆ.

ಅಭಿಪ್ರಾಯ

9. ಮೇಲಿನಂತೆ ನಮ್ಮ ಪರೀಕ್ಷೆಯ ಆಧಾರದ ಮೇಲೆ ಮತ್ತು ಕಂಪನಿಯ ಆಡಳಿತದಿಂದ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಮಾರ್ಚ್ 31, 2025 ರಂತೆ ಬಾಕಿ ಇರುವ ಠೇವಣಿಗಳ ಮರುಪಾವತಿಯಲ್ಲಿ ಕಂಪನಿಯು ಡೀಫಾಲ್ಟ್ ಮಾಡಿಲ್ಲ ಎಂದು ನಾವು ಅಭಿಪ್ರಾಯ ಪಟ್ಟಿದ್ದೇವೆ.

ಬಳಕೆಯ ಮೇಲಿನ ನಿರ್ಬಂಧ

10. ಕಂಪನಿಯ ರಿಜಿಸ್ಟ್ರಾರ್‌ಗೆ ಈ ಪ್ರಮಾಣಪತ್ರವನ್ನು ಸಲ್ಲಿಸಲು ಕಂಪನಿಯನ್ನು ಸಕ್ರಿಯಗೊಳಿಸುವ ಉದ್ದೇಶಕ್ಕಾಗಿ ಮಾತ್ರ ನಿಮ್ಮ ನಿರ್ದಿಷ್ಟ ಕೋರಿಕೆಯ ಮೇರೆಗೆ ಈ ಪ್ರಮಾಣಪತ್ರವನ್ನು ನೀಡಲಾಗಿದೆ. ಈ ಪ್ರಮಾಣಪತ್ರವನ್ನು ನಮ್ಮ ಪೂರ್ವ ಲಿಖಿತ ಒಪ್ಪಿಗೆಯಿಲ್ಲದೆ ಯಾವುದೇ ಉದ್ದೇಶಕ್ಕಾಗಿ ಬಳಸಬಾರದು, ಕೋಟ್ ಮಾಡಬಾರದು ಅಥವಾ ಉಲ್ಲೇಖಿಸಬಾರದು. ಅಂತೆಯೇ, ಯಾವುದೇ ಇತರ ಉದ್ದೇಶಕ್ಕಾಗಿ ಅಥವಾ ಈ ಪ್ರಮಾಣಪತ್ರವನ್ನು ಯಾವುದೇ ವ್ಯಕ್ತಿಗೆ ಅಥವಾ ನಮ್ಮ ಪೂರ್ವಾನುಮತಿಯಿಲ್ಲದೆ ಲಿಖಿತವಾಗಿ ಯಾರ ಕೈಗೆ ಸಿಗಬಹುದು ಎಂಬುದಕ್ಕಾಗಿ ನಾವು ಯಾವುದೇ ಹೊಣೆಗಾರಿಕೆ ಅಥವಾ ಕರ್ತವ್ಯವನ್ನು ಸ್ವೀಕರಿಸುವುದಿಲ್ಲ ಅಥವಾ ತೆಗೆದುಕೊಳ್ಳುವುದಿಲ್ಲ

ಶ್ರೀನಿವಾಸನ್ ಮತ್ತು ಪದ್ಮನಾಭನ್ ಅವರಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
FRN: 004021S

ಕೆ. ಎಂ. ಪದ್ಮನಾಭನ್
ಪಾಲುದಾರ
MRN 026594
UDIN: 24026S94BKCLZW4982
ದಿನಾಂಕ: ಅಕ್ಟೋಬರ್ 22, 2025

ಕಾಡು ಕಾಯುವವರ ವ್ಯಥೆ

ಬಂಡೀಪುರದ ಹಡಿಯಾಳ ವಲಯದಲ್ಲಿ ಸಿಬ್ಬಂದಿ ಏಕಾಂಗಿಯಾಗಿ ದೊಣ್ಣೆ ಹಿಡಿದುಗಸ್ತು ಮಾಡುತ್ತಿರುವುದು. ಪ್ರಜಾವಾಣಿ ಸಂಗ್ರಹದಿಂದ

ಒಂದನೇ ಪುಟದಿಂದ..

ಪಿಎಫ್, ಇಎಸ್‌ಐ ಸೌಲಭ್ಯ ಸಹಿತ ಹೊರಗುತ್ತಿಗೆ ತಮ್ಮ ಬದುಕಲ್ಲಿ ಬದಲಾವಣೆ ತರಬಹುದು ಎಂದು ತಿಳಿದಿದ್ದ ನೌಕರರಿಗೆ ತಾವು ಯಾವ ರೀತಿ ಮೋಸ ಹೋಗಿದ್ದೇವೆ ಎನ್ನುವುದು ಅನಾವರಣಗೊಳ್ಳುತ್ತಿವೆ.

'ಯಾವುದೋ ಏಜೆನ್ಸಿ ಎಂಬ ಅಗೋಚರ ಸಂಸ್ಥೆಯಿಂದ ಸಂಬಳವೂ ಸರಿಯಾಗಿ ಸಿಗುತ್ತಿಲ್ಲ, ಇಲಾಖೆ ಅಧಿಕಾರಿಗಳನ್ನು ಕೇಳೋಣ ಎಂದರೆ ಕೆಲವರು ಏಜೆನ್ಸಿಯರೊಂದಿಗೆ ಕೈ ಜೋಡಿಸಿದ್ದಾರೆ. ಒಂದಷ್ಟು ಅಧಿಕಾರಿಗಳು ತಾವೇ ಏಜೆನ್ಸಿಯನ್ನು ಬೇರೆಯವರ ಹೆಸರಿನಲ್ಲಿ ನಡೆಸುತ್ತಿದ್ದಾರೆಯೇ ಎನ್ನುವ ಅನುಮಾನಗಳೂ ಇವೆ. ನ್ಯಾಯ ಕೊಡಬೇಕಾದವರೆ ಅನ್ಯಾಯದ ಹಾದಿಯಲ್ಲಿ ನಿಂತಿರುವಾಗ ನಾವು ಯಾರನ್ನು ಕೇಳೋದು. ಶೋಷಣೆ ಎನ್ನುವುದು ನಮ್ಮನ್ನು ಅತಂತ್ರ ಸ್ಥಿತಿಗೆ ತಳ್ಳುತ್ತಿದೆ' ಎಂದು ನೌಕರರು ಬೇಸರದಿಂದಲೇ ಹೇಳುತ್ತಾರೆ.

ನೌಕರರ ಕ್ಷೇಮ ನೋಡಿಕೊಳ್ಳಬೇಕಾದ ಇಲಾಖೆಯು ಬಾಯಿ ಮಾತಿನ ಅನುಕಂಪ ತೋರುತ್ತಿದೆ. ಹೆಚ್ಚು ಕಡೆ ಸ್ಥಳೀಯರಿಗೆ ಉದ್ಯೋಗ ನೀಡುವ ಬದಲು ಯಂತ್ರೋಪಕರಣಗಳ ಬಳಕೆಗೆ ಒತ್ತು ನೀಡಿರುವುದೂ ಪರೋಕ್ಷವಾಗಿ ಆಕ್ರೋಶಕ್ಕೆ ಕಾರಣವಾಗುತ್ತಿದೆ. ಇದು ಕಾಡಿನ ಗಸ್ತಿನ ಮೇಲೆ ಕೆಟ್ಟ ಪರಿಣಾಮ ಬೀರಿ ಕಳ್ಳಬೇಟೆ ಹೆಚ್ಚಳ, ವನ್ಯಜೀವಿಗಳ ಅಕಾಲಿಕ ಸಾವು, ಕಾಡಿನ ಬೆಂಕಿಯಂತಹ ಅನಾಹುತಕ್ಕೂ ದಾರಿ ಮಾಡಿಕೊಡುತ್ತಿದೆ.

ಉದ್ಯೋಗ ಸ್ವರೂಪ ಬದಲು

ಅರಣ್ಯ ಇಲಾಖೆಯಲ್ಲಿ ದಿನಗೂಲಿ/ ಗುತ್ತಿಗೆ ಪದ್ಧತಿ ಹೊಸದಲ್ಲ. ಆರೇಳು ದಶಕಗಳಿಂದಲೂ ಇದೆ. ಆದರೆ ಮೂರು ದಶಕದಿಂದ ಇದು ಸಮಸ್ಯೆಯ ರೂಪ ತಳೆದಿದೆ. 70–80ರ ದಶಕದಲ್ಲೂ ಇಲಾಖೆಯಲ್ಲಿ ವೀಕ್ಷಕರು, ಚಾಲಕರ ಹುದ್ದೆಗಳನ್ನು ದಿನಗೂಲಿ ಆಧಾರದಲ್ಲಿ ತುಂಬಿಕೊಂಡು ಇಲಾಖೆಯಿಂದ ತಿಂಗಳ ಅವಧಿಯೊಳಗೆ ವೇತನ ನೀಡಲಾಗುತ್ತಿತ್ತು. ಸೇವಾ ಅನುಭವದ ಮೇಲೆ ಕೆಲವರು ಕಾಯಂ ಆಗಿ ನಿವೃತ್ತರೂ ಆಗಿದ್ದಾರೆ.

1996ರಲ್ಲಿ ದಿನಗೂಲಿ ನೌಕರರ ಕಲ್ಯಾಣ ಕಾಯ್ದೆ ಅಡಿ ನೇಮಕ ಪ್ರಮಾಣ ಹೆಚ್ಚಳವಾಯಿತು. ಅರಣ್ಯ ಇಲಾಖೆಯಲ್ಲಿ ಎಂಆರ್(ಮಸ್ಟರ್ ರೋಲ್) ಹಾಗೂ ಪಿಸಿಪಿ (ಪೆಟ್ಟಿ ಕೇಸ್ ಪೇಮೆಂಟ್) ಎನ್ನುವ ಎರಡು ವಿಧದಲ್ಲಿ ನೇಮಕ ಮಾಡಿಕೊಂಡು ವೇತನವನ್ನು ದಿನಗೂಲಿಯಾಗಿ ನಿಗದಿ ಮಾಡಿ ಮಾಸಿಕವಾಗಿ ಇಲಾಖೆಯಿಂದಲೇ ನೀಡಲಾಗುತ್ತಿತ್ತು. ಇಲಾಖೆಯಿಂದ ಸಂಬಳ ಸಿಗುತ್ತಿದ್ದುದರಿಂದ ಪಿಎಫ್, ಇಎಸ್‌ಐ ಸೌಲಭ್ಯ ಜತೆಗೆ ಏಜೆನ್ಸಿ ಗೋಜಲು ಇರಲಿಲ್ಲ.

2006ರಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಬಳಿಕ ದಿನಗೂಲಿ ನೌಕರರ ಸುರಕ್ಷತೆಗೆ ಪ್ರತ್ಯೇಕ ಕಾಯ್ದೆಯನ್ನು ರೂಪಿಸಲಾಯಿತು. ಕರ್ನಾಟಕದಲ್ಲಿ 2008ರಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಿ ವರದಿ ಪಡೆದು ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಕಾಯ್ದೆ 2012 ಅನ್ನು ಜಾರಿಗೊಳಿಸಲಾಯಿತು. ಇದರಡಿ 10 ವರ್ಷ ಮೇಲ್ಪಟ್ಟು ಕೆಲಸ ಮಾಡಿದ ಅರಣ್ಯ ಇಲಾಖೆ 4500 ನೌಕರರಿಗೆ ಕಾಯಂ ಅಲ್ಲದೇ ಇದ್ದರೂ ಹೆಚ್ಚಿನ ವೇತನ, ಎಚ್‌ಆರ್‌ಎ, ಡಿಎ ಸಹಿತ ಕೆಲವು ಸೌಲಭ್ಯಗಳನ್ನು ನೀಡಲಾಯಿತು. ಅವರಲ್ಲಿ ಶೇ 90ರಷ್ಟು ಮಂದಿ ಈಗ ನಿವೃತ್ತರಾಗಿದ್ದಾರೆ.

2017ರ ಜುಲೈನಲ್ಲಿ ಸರ್ಕಾರ ದಿನಗೂಲಿ ನೌಕರರನ್ನು ಹಂಗಾಮಿ ನೌಕರರನ್ನಾಗಿ ಬದಲಾಯಿಸಿತು. ಪಿಎಫ್, ಇಎಸ್‌ಐ ಸೌಲಭ್ಯದ ಜತೆಯಲ್ಲಿ ಹೆಚ್ಚು ವೇತನ ಸಿಗಲಿದೆ ಎಂದು ತಿಳಿಸಿದ್ದರಿಂದ ಅದಕ್ಕೆ ನೌಕರರು ಒಪ್ಪಿಕೊಂಡರು. ಅನಂತರ ಸಮಸ್ಯೆ ಬಿಗಡಾಯಿಸಿದೆ.



ಲೋಕಾಯುಕ್ತ ಸ್ವಯಂ ಪ್ರೇರಿತ ಪ್ರಕರಣ

ಅರಣ್ಯ ಇಲಾಖೆ ನೌಕರರಿಗೆ ಏಜೆನ್ಸಿ ಮೂಲಕ ನೀಡುತ್ತಿರುವ ಸಂಬಳ, ಸೌಲಭ್ಯಗಳ ವಿಚಾರವಾಗಿ ಇರುವ ದೂರಿನ ವಿಚಾರಣೆಗೆ ಲೋಕಾಯುಕ್ತ ತನಿಖೆ ಚುರುಕುಗೊಳಿಸಿದೆ. 2019ರಲ್ಲಿ ದೂರು ದಾಖಲಿಸಿಕೊಂಡರೂ ಕ್ರಮ ಆಗಿರಲಿಲ್ಲ. ಅದೇ ಪ್ರಕರಣಕ್ಕೆ ಮರು ಜೀವ ನೀಡಲಾಗಿದೆ.

ಪಿಎಫ್ ಮೊತ್ತವನ್ನು ಕಡಿತ ಮಾಡಿದರೂ ನೌಕರರ ಖಾತೆಗೆ ಹಾಕದೇ ಇರುವುದು, ನಿಗದಿತ ವೇತನ ನೀಡದಿರುವ ದೂರುಗಳು ಬಂದಿರುವುರದಿಂದ ವಿಚಾರಣೆ ಆರಂಭಿಸಲಾಗಿದೆ. ಅರಣ್ಯ ಇಲಾಖೆ ವಿವಿಧ ವಿಭಾಗಗಳಿಂದ 2017ರಿಂದ ಏಜೆನ್ಸಿ ಮೂಲಕ ನೀಡಿರುವ ವೇತನ, ಸೌಲಭ್ಯದ ವಿವರವನ್ನು ಸಂಗ್ರಹ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಏಜೆನ್ಸಿಗಳ ವೃತ್ತಾಂತ

2017ಕ್ಕಿಂತಲೂ ಮುಂಚೆ ದಿನಗೂಲಿ ನೌಕರರಿಗೆ ಅರಣ್ಯ ಇಲಾಖೆಯಿಂದ ವಿವಿಧ ಶೀರ್ಷಿಕೆಗಳಿಂದ ವೇತನ ನೀಡಲಾಗುತ್ತಿತ್ತು. ಹೊರಗುತ್ತಿಗೆಗೆ ಬದಲಾದಾಗ ಇವುಗಳ ಹೊಣೆಯನ್ನು ಏಜೆನ್ಸಿಗಳಿಗೆ ವಹಿಸಲಾಯಿತು. ಟೆಂಡರ್ ಪಡೆದ ಏಜೆನ್ಸಿಗಳು ಆಯಾ ವಿಭಾಗಗಳಿಗೆ ನೌಕರರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡವು. ಇಲಾಖೆಯಿಂದ ಏಜೆನ್ಸಿಗೆ ವಾರ್ಷಿಕ ಮೊತ್ತ ಬಿಡುಗಡೆ ಮಾಡಿದರೆ, ನೌಕರರಿಗೆ ಏಜೆನ್ಸಿಗಳು ವೇತನ ನೀಡುತ್ತಿವೆ.

ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚು ಏಜೆನ್ಸಿಗಳಿವೆ. ಕೆಲವು ಏಜೆನ್ಸಿಗಳು ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ ನೌಕರರಿಗೆ ವೇತನ, ಸೌಲಭ್ಯ ನಿಗದಿತವಾಗಿ ಸಿಗುತ್ತಿಲ್ಲ. ಕೆಲವನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಈ ಕಾರಣದಿಂದಲೇ ಒಬ್ಬರೇ ಬೇರೆ ಬೇರೆ ಹೆಸರಲ್ಲಿ ಏಜೆನ್ಸಿ ರೂಪಿಸಿಕೊಂಡಿದ್ದಾರೆ ಎನ್ನುವ ಆರೋಪವಿದೆ.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ 122 ಹೊರಗುತ್ತಿಗೆ ಸಿಬ್ಬಂದಿ ಇದ್ದು, ನವೆಂಬರ್ ವೇತನ ಬಿಡುಗಡೆಯಾಗಿರಲಿಲ್ಲ. ಹಿಂದೆ, ಸೆಪ್ಟೆಂಬರ್ 2024ರಿಂದ ಮಾರ್ಚ್ 2025ರವರೆಗೆ ವೇತನ ನೀಡದ ಕಾರಣಕ್ಕೆ ಮೈಸೂರಿನ ಆರ್‌ಸಿ ಬಿಸಿನೆಸ್ ಸಲ್ಯೂಷನ್ ಕಂಪನಿಯನ್ನು 2 ವರ್ಷಗಳ ಅವಧಿಗೆ ಕಪ್ಪುಪಟ್ಟಿಗೆ ಸೇರಿಸಲಾಗಿತ್ತು. ಪ್ರಸ್ತುತ ಬಿಡಿಎನ್ ಎಂಟರ್‌ಪ್ರೈಸಸ್ ಸಂಸ್ಥೆಗೆ ವೇತನ ಪಾವತಿ ಗುತ್ತಿಗೆ ನೀಡಲಾಗಿದೆ.

ಆದರೆ ಆರ್‌ಸಿ ಬಿಸಿನೆಸ್ ಸಲ್ಯೂಷನ್ ಕಂಪೆನಿ ಮುಖ್ಯಸ್ಥ ಚರಣ್ ಕುಮಾರ್ ಅವರು ಸರ್ಕಾರದಿಂದಲೇ ಸರಿಯಾಗಿ ಅನುದಾನ ಬಿಡುಗಡೆ ಆಗದಿರುವುದೇ ವೇತನ ಸಮಸ್ಯೆ ಮೂಲ ಎಂದು ಮತ್ತೊಂದು ಮುಖ ತೆರೆದಿಡುತ್ತಾರೆ.

'ಹೊರಗುತ್ತಿಗೆ ಸಿಬ್ಬಂದಿಗೆ ಪ್ರತಿ ತಿಂಗಳು ವೇತನ, ಇಎಸ್‌ಐ, ಪಿಎಫ್ ಪಾವತಿ ಮಾಡಲು ನಿಗದಿತ ಸಮಯಕ್ಕೆ ಅರಣ್ಯ ಇಲಾಖೆಯಿಂದ ಅನುದಾನ ಬಿಡುಗಡೆಯಾಗುತ್ತಿರಲಿಲ್ಲ. ವರ್ಷಕ್ಕೊಮ್ಮೆ ಬಿಲ್ ಪಾವತಿ ಮಾಡುತ್ತಿದ್ದರಿಂದ ಇಎಸ್‌ಐ, ಪಿಎಫ್ ವಂತಿಗೆ ಪಾವತಿಸಲು ವಿಳಂಬ ಆಗುತ್ತಿತ್ತು. ಈಚೆಗೆ ಪಿಎಫ್, ಇಎಸ್‌ಐ ವಂತಿಗೆಯನ್ನು ಪಾವತಿಸದ ಬಗ್ಗೆ ಕಾರಣ ಕೇಳಿ ನೀಡಿದ್ದ ನೋಟಿಸ್‌ಗೆ ಉತ್ತರ ನೀಡಿ ಹೆಚ್ಚುವರಿ ದಂಡದೊಂದಿಗೆ ಇಎಸ್‌ಐ, ಪಿಎಫ್ ವಂತಿಗೆ ಪಾವತಿಸಿರುವ ಇಸಿಆರ್ ದಾಖಲೆಗಳನ್ನು ಸಲ್ಲಿಕೆ ಮಾಡಿದ್ದೇವೆ. ಪೂರ್ವಾಪರ ವಿಚಾರಿಸದೇ ಕಠಿಣ ಕ್ರಮ ತೆಗೆದುಕೊಂಡಿರುವುದು ಸರಿಯಲ್ಲ' ಎಂದು ಹೇಳುತ್ತಾರೆ.

ಇದೇ ರೀತಿ ನಾಗರಹೊಳೆಯಲ್ಲಿ ಗುತ್ತಿಗೆ ಪಡೆದಿದ್ದ ನವೀನ್ ಬೋಪಣ್ಣ ಎಂಬುವವರಿಗೆ ಅರಣ್ಯ ಇಲಾಖೆ ದಂಡವನ್ನೂ ವಿಧಿಸಿತ್ತು. ಕೆಲವು ಏಜೆನ್ಸಿಗಳು ತಪ್ಪು ಎಸಗಿದ್ದರೂ ಪ್ರಭಾವ ಬಳಸಿ ಕ್ರಮದಿಂದ ತಪ್ಪಿಸಿಕೊಂಡಿವೆ ಎನ್ನುವ ಆರೋಪ ಬಹಳಷ್ಟಿದೆ.

ಆನೆ ಕಾರ್ಯಪಡೆಯಲ್ಲಿ 36 ಜನರಿದ್ದರೂ, 46 ಜನರಿದ್ದರೆಂದು ಬಿಲ್ ಮಾಡಿರುವ ವಿಚಾರ ಹಾಸನದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರ ನಡೆಸಿ ಸಭೆಯಲ್ಲಿ ಬೆಳಕಿಗೆ ಬಂದಿತ್ತು.

'ಇಎಸ್‌ಐ ಹಾಗೂ ಪಿಎಫ್ ಕೊಡಲಾಗುವುದು ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ. ಆದರೆ, ಪ್ರಮಾಣ ಎಷ್ಟು, ಎಷ್ಟು ಪಿ.ಎಫ್ ಉಳಿಯುತ್ತಿದೆ ಎಂಬುದರ ದಾಖಲೆಗಳೇ ಇಲ್ಲ. ಜತೆಗೆ ಕೊಡುವ ಸಂಬಳಕ್ಕೆ ಶೇ 18ರಷ್ಟು ಜಿಎಸ್‌ಟಿ ವಿಧಿಸುತ್ತಾರೆ. ಜಿಎಸ್‌ಟಿ ಹೊರೆಯನ್ನು ಹೊರಗುತ್ತಿಗೆ ಏಜೆನ್ಸಿಗೆ ಹಾಕಬೇಕೇ ಹೊರತು ನೌಕರರಿಗೆ ಅಲ್ಲ. ಶೇ 1ರಷ್ಟು ಸರ್ವಿಸ್ ಚಾರ್ಜ್ ನಮ್ಮ ಹಣದಲ್ಲೇ ಕೊಡುತ್ತಾರೆ' ಎಂಬುದು ನೌಕರರ ವಾದ.

ಸಾಮಾಜಿಕ, ಪ್ರಾದೇಶಿಕ ಅರಣ್ಯಗಳಲ್ಲಿ ತುಂಡು ಗುತ್ತಿಗೆ ಹೆಸರಿನಲ್ಲಿ ಹೆಚ್ಚು ಕೆಲಸಗಾರರನ್ನು ಸೃಷ್ಟಿಸಿ ಇನ್ನಾರೋ ಸಂಬಳ ಪಡೆಯುತ್ತಿರುವ ಆರೋಪಗಳೂ ಇವೆ.

ವೇತನ ತಾರತಮ್ಯದ ಸ್ವರೂಪ: ಹೊಸದಾಗಿ ಬಂದವರು, ಹತ್ತು ವರ್ಷಗಳ ಹಿಂದೆ ಸೇರಿದ್ದರೂ ಒಂದೇ ರೀತಿಯ ಸಂಬಳವಿದೆ. ಈ ತಾರತಮ್ಯ ನಿವಾರಿಸಬೇಕು. ಕೆಲಸದ ಹೊರೆ, ಸೇವಾ ಹಿರಿತನ ಮತ್ತು ಮೌಲ್ಯ ಆಧರಿಸಿ ಸಂಬಳ ನೀಡಬೇಕು ಎಂಬ ನಿಯಮವನ್ನು ಪಾಲಿಸುತ್ತಿಲ್ಲ. ಸರ್ಕಾರಿ ಸಿಬ್ಬಂದಿ ಸರಿಯಾಗಿ 5ಗಂಟೆಗೆ ಕಚೇರಿಯಿಂದ ತೆರಳುತ್ತಾರೆ. ಹೊರ ಗುತ್ತಿಗೆ ನೌಕರರು ಸಂಜೆ 6.30ರಿಂದ 7 ಗಂಟೆಯವರೆಗೂ ಕಚೇರಿಯಲ್ಲೇ ಕೆಲಸ ಮಾಡಬೇಕಾಗುತ್ತದೆ' ಎಂಬುದು ಹೊರ ಗುತ್ತಿಗೆ ನೌಕರರ ದೂರು.

'ಇದೀಗ ಹೊಸತಾಗಿ ಹೊರಗುತ್ತಿಗೆ ನೌಕರರಿಗೆ ₹6 ಸಾವಿರ ಕಡಿತ ಮಾಡಿ ₹12 ಸಾವಿರ ಮಾತ್ರ ಕೊಡ್ತಾರೆ. ಸರಿಯಾಗಿ ವೇತನ ನೀಡುವಂತೆ ಮೇಲಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಸ್ಥಳೀಯ ಶಾಸಕರಿಗೂ ಮನವರಿಕೆ ಮಾಡಿದ್ದೇವೆ. ಆದರೂ, ಸಂಬಳ ಕಡಿತ ನಿಂತಿಲ್ಲ' ಎಂದರು ಯಾದಗಿರಿ ಜಿಲ್ಲೆಯ ಹಂಗಾಮಿ ನೌಕರರೊಬ್ಬರು.

ವನ್ಯಜೀವಿ ವಿಭಾಗದಲ್ಲಿ ಭಿನ್ನ ವನ್ಯಜೀವಿ ವಿಭಾಗಗಳಲ್ಲಿ ನೌಕರರಾಗಿ ಸೇರಿಕೊಂಡವರು ಒಂದು ರೀತಿ ದಶಾವತಾರಿಗಳೇ. ವನ್ಯಜೀವಿ ರಕ್ಷಣೆ, ಕಳ್ಳಬೇಟೆ ತಡೆ ಶಿಬಿರಗಳ ಗಸ್ತು, ಟವರ್ ವೀಕ್ಷಣೆ ಗೋಪುರ, ಆನೆ, ಹುಲಿ, ಚಿರತೆ ಕಾರ್ಯಾಚರಣೆ, ಸೋಲಾರ್ ಬೇಲಿ ನಿರ್ವಹಣೆ, ಸಫಾರಿ ವಾಹನಗಳು, ಅಧಿಕಾರಿಗಳ ವಾಹನ ಚಾಲಕರು, ಅತಿಥಿ ಗೃಹ ಮೇಟಗಳು, ಕಚೇರಿ ನಿರ್ವಹಣೆ. ಎಲ್ಲವೂ ತಿಳಿದಿರಬೇಕು. ಇಲ್ಲಿ ಕೆಲಸಕ್ಕೆ ಹೊತ್ತು ಗೊತ್ತು ಇಲ್ಲ. ಕೆಲಸ ಇದ್ದ ತತ್‌ಕ್ಷಣ ಹೊರಡಲು ಸದಾ ಸಿದ್ದರಿರಬೇಕು. ರಜೆ ಸಿಕ್ಕರೆ ಮನೆ. ಇಲ್ಲದೇ ಇದ್ದರೆ ಎಲ್ಲಾ ದಿನಗಳ ರಜೆಯನ್ನು ಒಟ್ಟಿಗೆ ಸೇರಿಸಿಕೊಂಡು ತಿಂಗಳಿಗೆ ನಾಲ್ಕು ದಿನ ವೈಯಕ್ತಿಕವಾಗಿ ಬಳಸಿಕೊಳ್ಳುತ್ತಾರೆ ಬಹುತೇಕ ಸಿಬ್ಬಂದಿ. ನಡುವೆ ಹುಷಾರು ತಪ್ಪಿ ಕೆಲಸಕ್ಕೆ ಹೋಗದೇ ಇದ್ದರೆ ಸಂಬಳ ಕಡಿತವೂ ಆಗುತ್ತದೆ. ಗಸ್ತು ಹೋಗುವವರಿಗೆ ಶಸ್ತ್ರಾಸ್ತ್ರಗಳು ಸುಸಜ್ಜಿತವಾಗಿಲ್ಲ. ಇದರಿಂದ ಕೆಲವೊಬ್ಬರಿಗೆ ಲಾಠಿ ರೂಪದ ಕೋಲೇ ಅಸ್ತ್ರ ಆಗುತ್ತದೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ 7 ವನ್ಯಜೀವಿ ವಲಯಗಳಲ್ಲಿ 120ಕ್ಕೂ ಹೆಚ್ಚು ಮಂದಿ ಹೊರಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಹಿಂದೆ ಇದೇ ವಿಭಾಗದಲ್ಲಿ ಹೊರಗುತ್ತಿಗೆ ನೌಕರರಿಗೆ ನಾಲ್ಕು ತಿಂಗಳ ವೇತನ ಪಾವತಿಯಾಗಿರಲಿಲ್ಲ. ಪರಿಣಾಮ ಹೊರಗುತ್ತಿಗೆ ನೌಕರರು ಮುಷ್ಕರಕ್ಕೆ ತೆರಳಿದ್ದಾಗ ಕಿಡಿಗೇಡಿಗಳು ವಿಷ ಹಾಕಿ ಐದು ಹುಲಿಗಳನ್ನು ಕೊಂದಿದ್ದು ಭಾರೀ ಸದ್ದು ಮಾಡಿತ್ತು. ತಿಂಗಳುಗಟ್ಟಲೆ ಸಂಬಳ ನೀಡಿಲ್ಲದಿರುವುದು ಸ್ಥಳೀಯ ಆರ್‌ಎಫ್‌ಒಗಳಿಂದ ಆರಂಭಿಸಿ ಅರಣ್ಯ ಸಂರಕ್ಷಣಾಧಿಕಾರಿಗೂ ಗೊತ್ತಿದ್ದರೂ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ.

ಕಳ್ಳಬೇಟೆ ತಡೆ ಶಿಬಿರದ ಸ್ಥಿತಿಗತಿ

ಕರ್ನಾಟಕದ ಹುಲಿ ಸಂರಕ್ಷಿತ ಪ್ರದೇಶ, ವನ್ಯಜೀವಿ ವಿಭಾಗಗಳಲ್ಲಿ ಕಳ್ಳಬೇಟೆ ತಡೆ ಶಿಬಿರಗಳ ಮಾಹಿತಿ ಕಲೆ ಹಾಕುತ್ತಾ ಹೋದರೆ ಒಂದೊಂದು ಶಿಬಿರದಲ್ಲಿ ವಿಭಿನ್ನ ಸಮಸ್ಯೆ ಲೋಕವೇ ತೆರೆದುಕೊಳ್ಳುತ್ತದೆ.

ಬಂಡೀಪುರ, ನಾಗರಹೊಳೆ, ಬಿಆರ್‌ಟಿ ಹುಲಿಧಾಮ ವ್ಯಾಪ್ತಿಯಲ್ಲೂ ಸಿಬ್ಬಂದಿ ಕೊರತೆಯಿದ್ದು, ಇರುವವರಿಗೆ ಹೊರೆ ಹಂಚಲಾಗಿದೆ. ಕಳ್ಳಬೇಟೆ ಶಿಬಿರಗಳಲ್ಲಿ ನಾಲ್ವರು ಹಂಗಾಮಿ ಹಾಗೂ ಒಬ್ಬ ಕಾಯಂ ನೌಕರ ಇರಬೇಕು ಎಂಬ ನಿರ್ದೇಶನವಿದ್ದರೂ ಅದು ಪಾಲನೆಯಾಗುತ್ತಿಲ್ಲ.

ಕಾಳಿ ಹುಲಿ ಸಂರಕ್ಷಿತಾರಣ್ಯ, ಬೆಳಗಾವಿ ಜಿಲ್ಲೆಯ ಖಾನಾಪುರ, ಕಣಕುಂಬಿ ವಲಯ ಶಿಬಿರಗಳಲ್ಲಿ ಸಿಬ್ಬಂದಿ ಸಂಖ್ಯೆ ಕಡಿತಗೊಳಿಸಲಾಗಿದೆ. ಹಿಂದೆ ಕೆಲಸ ಮಾಡುತ್ತಿದ್ದ ನಾಲ್ಕು ಸಿಬ್ಬಂದಿ ಬದಲಾಗಿ ಇಬ್ಬರನ್ನೇ ಉಳಿಸಿಕೊಳ್ಳಲಾಗಿದೆ.

'ಜನವಸತಿ ಸ್ಥಳದಿಂದ ಬಹುದೂರದಲ್ಲಿರುವ ಬೇಟೆತಡೆ ಶಿಬಿರಗಳಲ್ಲಿ ಇಬ್ಬರೇ ವಾಸವಿರುತ್ತೇವೆ. ರಕ್ಷಣೆಗೆ ಆಯುಧ ಇಲ್ಲ. ಹೆಚ್ಚಿನ ಜನರಿಲ್ಲದ ಕಾರಣ ವನ್ಯಜೀವಿ ದಾಳಿ ಆತಂಕವಿದೆ. ನಾಲ್ಕು ಮಂದಿ ಕೆಲಸವನ್ನು ಇಬ್ಬರೇ ಮಾಡಬೇಕಿರುವುದರಿಂದ ರಜೆಯೂ ಸಿಗದೇ ಒತ್ತಡ ಹೆಚ್ಚಿದೆ. ಯಾವುದೇ ಸೂಚನೆ ನೀಡದೆ ಈ ಹಿಂದೆ ಹಲವರನ್ನು ಕೆಲಸದಿಂದ ತೆಗೆಯಲಾಗಿದೆ. ಇದರಿಂದ ನಮಗೂ ಉದ್ಯೋಗದ ಅಭದ್ರತೆ ಕಾಡುತ್ತಿದೆ' ಎಂದು ಸಿಬ್ಬಂದಿ ದೂರಿದರು.

ನ್ಯಾಯಾಲಯ ತೀರ್ಪುಗಳ ಬಲ: ಹಂಗಾಮಿ ನೌಕರರ ವಿಚಾರದಲ್ಲಿ 2025ರ ಒಂದು ವರ್ಷದಲ್ಲೇ ನಾಲ್ಕು ಮಹತ್ವದ ಆದೇಶಗಳನ್ನು ಸುಪ್ರೀಂ ಕೋರ್ಟ್ ನೀಡಿದೆ. ಕರ್ನಾಟಕ ಹೈಕೋರ್ಟ್‌ನ ಬೆಂಗಳೂರು ಹಾಗೂ ಕಲಬುರಗಿ ಪೀಠದಲ್ಲೂ ಹಂಗಾಮಿ ನೌಕರರ ಪರವಾಗಿಯೇ ತೀರ್ಪುಗಳು ಬಂದಿವೆ.

'ಹಂಗಾಮಿ ಎನ್ನುವುದನ್ನು ಬಿಟ್ಟರೆ ದೀರ್ಘಕಾಲದಿಂದ ಕಾಯಂ ನೌಕರರ ರೀತಿಯಲ್ಲಿಯೇ ಕೆಲಸ ಮಾಡುತ್ತಿರುವವರನ್ನು ಉಮಾದೇವಿ ಪ್ರಕರಣದ ನೆಪವೊಡ್ಡಿ ಕಾಯಂ ಮಾಡುವುದಿಲ್ಲ. ಅವರಿಗೆ ಸೂಕ್ತ ವೇತನ, ಸೌಲಭ್ಯ ನೀಡುವುದಿಲ್ಲ ಎಂದು ಹೇಳಲಾಗದು. ಉಮಾದೇವಿ ಪ್ರಕರಣದ ತಾತ್ಪರ್ಯವನ್ನು ಆಡಳಿತದಲ್ಲಿರುವವರು ತಮಗೆ ಬೇಕಾದ ರೀತಿ ವ್ಯಾಖ್ಯಾನ ಮಾಡಿಕೊಳ್ಳುವುದು ಸಲ್ಲ. ಈ ನೌಕರರು ಕಾಯಂ ನೌಕರರಿಗೆ ಸಿಗುವ ಘನತೆ, ಭದ್ರತೆ ಮತ್ತು ಸರ್ಕಾರಿ ಸವಲತ್ತುಗಳಿಂದ ವಂಚಿತರಾಗಿದ್ದಾರೆ ಹೊರಗುತ್ತಿಗೆ ನೇಮಕ ಕ್ರಮಬದ್ಧವಲ್ಲದೇ ಇರಬಹುದು. ಆದರೆ ಅದು ಕಾನೂನು ಬಾಹಿರವಲ್ಲ. ಹೀಗೆ ಕೆಲಸ ಮಾಡಿದವರು ಕಾಯಂ ಆಗಲು ಅರ್ಹರು' ಎಂದು ಸುಪ್ರೀಂಕೋರ್ಟ್ ತನ್ನ ತೀರ್ಪುಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ.

ನ್ಯಾಯಾಲಯದ ತೀರ್ಪು ಇದ್ದರೂ ವಿವಿಧ ಇಲಾಖೆಗಳಲ್ಲಿ ಜೇನುಗೂಡಿನಂತಿರುವ ಈ ಸಮಸ್ಯೆಗೆ ಕೈ ಹಾಕಲು ಸರ್ಕಾರ ಮನಸು ಮಾಡುತ್ತಿಲ್ಲ. ಕಾಲಮಿತಿಯೊಳಗೆ ಹಂಗಾಮಿ ನೌಕರರ ಬದುಕಿಗೆ ಭದ್ರತೆ ನೀಡಿ ಎನ್ನುವ ಸೂಚನೆ ಕಾರಣದಿಂದ ರಾಜ್ಯ ಸರ್ಕಾರವು ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ಖಾಸಗಿ ಹೊರಗುತ್ತಿಗೆ ನಿಷೇಧ ಮಸೂದೆ 2025 ಮಂಡಿಸುವುದಾಗಿ ಘೋಷಣೆ ಮಾಡಿತ್ತು.

ಅಧಿವೇಶನದಲ್ಲಿ ಮಸೂದೆ ಮಂಡನೆಯಾಗದೇ ಇರುವುದರಿಂದ ಅರಣ್ಯ ಇಲಾಖೆ ನೌಕರರ ಹೊರಗುತ್ತಿಗೆ ಸಮಸ್ಯೆ ಸದ್ಯಕ್ಕೆ ಮುಗಿಯುವ ಲಕ್ಷಣಗಳಿಲ್ಲ. ಕಷ್ಟದ ಬದುಕಿಗೆ ಕೊನೆಯೇ ಇಲ್ಲ.

ಪರಿಕಲ್ಪನೆ: ಯತೀಶ್‌ಕುಮಾರ್ ಜಿ.ಡಿ
ಪೂರಕ ಮಾಹಿತಿ: ಎಸ್.ಕೆ.ವಿಜಯಕುಮಾರ್ (ಚಿಕ್ಕಮಗಳೂರು), **ಗಣಪತಿ ಹೆಗಡೆ** (ಕಾರವಾರ), **ಬಾಲಚಂದ್ರ** (ಚಾಮರಾಜನಗರ) **ಶಿವಪ್ರಸಾದ್ ರೈ** (ಮೈಸೂರು), **ಬಷೀರಅಹ್ಮದ್ ನಗಾರಿ**(ಕಲಬುರಗಿ)

> ಮುಂಚೂಣಿ ಹೊರಗುತ್ತಿಗೆ ಸಿಬ್ಬಂದಿಯ ಪಾತ್ರವೂ ಮಹತ್ವದ್ದಾಗಿದೆ. ಹೀಗಾಗಿ ಹೊರಗುತ್ತಿಗೆ ಸಿಬ್ಬಂದಿಗೂ ₹20 ಲಕ್ಷ ವಿಮೆ ಸೌಲಭ್ಯ ಕಲ್ಪಿಸಲು ಬ್ಯಾಂಕ್ ಆಫ್ ಬರೋಡಾದೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

> ಮುಂಚೂಣಿ ಸಿಬ್ಬಂದಿ ವನ್ಯಜೀವಿ ಹಾಗೂ ಅರಣ್ಯ ಸಂಪತ್ತು ಸಂರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ದುರ್ಗಮ ಪರಿಸ್ಥಿತಿಯಲ್ಲೂ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ಸಕಾಲದಲ್ಲಿ ವೇತನ, ಪಿಎಫ್, ಇಎಸ್‌ಐ ಸೌಲಭ್ಯಗಳು ಸಿಗಬೇಕು
> **ಗಿರಿಧರ ಕುಲಕರ್ಣಿ,** ವನ್ಯಜೀವಿ ಸಂರಕ್ಷಣಾವಾದಿ

> ಸಿಎಂ ಕಾನೂನು ಸಲಹೆಗಾರ, ಶಾಸಕ ಎ.ಎಸ್. ಪೊನ್ನಣ್ಣ ಅವರ ಪ್ರಯತ್ನದಿಂದ ಸರ್ಕಾರದ ಹಂತದಲ್ಲಿ ಪ್ರಯತ್ನಗಳು ಆಗಿವೆ. ಆದರೆ ನಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ
> **ಹರೀಶ್,** ಉಪಾಧ್ಯಕ್ಷ ಹೊರಗುತ್ತಿಗೆ ನೌಕರರ ಸಂಘ ಮಡಿಕೇರಿ

> ಅರಣ್ಯ ಇಲಾಖೆಯ ಅರಣ್ಯ ರಕ್ಷಕ ಸಹಿತ 4 ಸಾವಿರ ಹುದ್ದೆ ಸೇರಿ 6 ಸಾವಿರ ಹುದ್ದೆ ಖಾಲಿ ಇವೆ. ಹೊರಗುತ್ತಿಗೆ ಆಧಾರದಲ್ಲಿ 3800 ನೌಕರರು ಕೆಲಸ ಮಾಡುತ್ತಿದ್ದಾರೆ. ವೇತನ, ಸೌಲಭ್ಯ ವಿಚಾರದಲ್ಲಿ ದೂರುಗಳಿದ್ದು, ನೋಟಿಸ್ ನೀಡಿ ಕ್ರಮ ವಹಿಸಲಾಗುತ್ತಿದೆ
> **ಕುಮಾರಪುಷ್ಕರ್,** ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ, ಸಮನ್ವಯ).

ವೇತನ ಹೇಗಿದೆ

ಪ್ರತಿದಿನ ₹698 ವೇತನವನ್ನು ಹಂಗಾಮಿ ನೌಕರರಿಗೆ ನೀಡಲಾಗುತ್ತದೆ. ವೇತನದಲ್ಲಿ ಪಿಎಫ್ ಮೊತ್ತ ₹2350, ಇಎಸ್‌ಐಗೆ ₹130 ಕಡಿತ ಮಾಡಲಾಗುತ್ತಿದೆ. ಉಳಿದ ಮೊತ್ತ ₹15500 ರಿಂದ ₹16500 ವರೆಗೂ ಅವರ ಅನುಭವದ ಆಧಾರದ ಮೇಲೆ ಸಿಗಲಿದೆ. ನೌಕರರಿಗೆ 26 ದಿನದ ವೇತನ ಸಿಗುತ್ತಿದೆ. ವನ್ಯಜೀವಿ ವಿಭಾಗದವರಿಗೆ ಕಷ್ಟಪರಿಹಾರ ಭತ್ಯೆ ₹2000 ನೀಡುವುದರಿಂದ ಅದು ಹೆಚ್ಚುವರಿಯಾಗಿ ಲಭಿಸಲಿದೆ.

ಪೂರ್ಣ ಈಡೇರದ ಭರವಸೆ

ವನ್ಯಜೀವಿ ವಿಭಾಗದಲ್ಲಿ ಕೆಲಸ ಮಾಡುವ ನೌಕರರಿಗೆ ಮಾಸಿಕ ₹2000 ಕಷ್ಟ ಪರಿಹಾರ ಭತ್ಯೆ ನೀಡುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ಘೋಷಿಸಿದ್ದರು. ಅದು ಸಮರ್ಪಕವಾಗಿ ಸಿಗುತ್ತಿಲ್ಲ. ಕೆಲವು ಕಡೆಗಳಲ್ಲಿ ಎಂಟು ತಿಂಗಳು ಬಂದರೆ ಇನ್ನು ಕೆಲವು ಕಡೆಗಳಲ್ಲಿ ದೊರೆಯುತ್ತಿಲ್ಲ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 18-1-2001

● ಅಗ್ನಿ 2 ಯಶಸ್ವಿ ಪ್ರಯೋಗ

ಬಾಲಸೋರ್, ಜ.17 (ಪಿಟಿಐ)– ಸ್ವದೇಶದಲ್ಲೇ ನಿರ್ಮಿತಗೊಂಡ ಅಗ್ನಿ ಸರಣಿಯ ಉನ್ನತ ಕ್ಷಿಪಣಿ ಅಗ್ನಿ– 2 ಇಂದು ಪರೀಕ್ಷಾರ್ಥವಾಗಿ ಹಾರಿಬಿಡಲಾಯಿತು. ಪ್ರಯೋಗ ಯಶಸ್ವಿಯಾಗಿ ನಡೆಯಿತು ಎಂದು ರಕ್ಷಣಾ ಇಲಾಖೆ ಪ್ರಕಟಿಸಿದೆ.

ಸಮೀಪದ ವ್ಹೀಲರ್ ದ್ವೀಪದಿಂದ ಚಿಮ್ಮಿದ ಈ ಅಗ್ನಿ– (2). 2,000 ಕಿ.ಮೀಗಳಷ್ಟು ದೂರ ಕ್ರಮಿಸಿ ತನ್ನ ಗುರಿ ಮುಟ್ಟುವ ಸಾಮರ್ಥ್ಯ ಹೊಂದಿದೆ.

ಅಗ್ನಿ ಕ್ಷಿಪಣಿಯ ಸರಣಿ ಪರೀಕ್ಷೆಯಲ್ಲಿ ಇದು 5ನೇ ಪ್ರಯೋಗವಾಗಿದ್ದು, ಮೊದಲನೆಯ ಪರೀಕ್ಷೆ 1989ರಲ್ಲಿ ಇದೇ ಜಾಗದಲ್ಲಿ ನಡೆದಿತ್ತು.

75 ವರ್ಷಗಳ ಹಿಂದೆ

ಗುರುವಾರ, 18-1-1951

● ಯುದ್ಧ ಸ್ತಂಭನ ಸಲಹೆಗಳಿಗೆ ಚೀಣಾ ತಿರಸ್ಕಾರ

ಲಂಡನ್, ಜ.17– ಕೊರಿಯಾದಲ್ಲಿ ಯುದ್ಧ ಸ್ತಂಭನವೇರ್ಪಡಿಸುವ ಬಗ್ಗೆ ವಿಶ್ವಸಂಸ್ಥೆಯ ಸಲಹೆಗಳನ್ನು ಚೀಣಾ ಕಮ್ಯೂನಿಸ್ಟ್ ಸರಕಾರ ಇಂದು ರಾತ್ರಿ ನಿರಾಕರಿಸಿತು ಎಂದು ನೂತನ ಚೀಣಾ ವಾರ್ತಾ ಸಂಸ್ಥೆ ಘೋಷಿಸಿತು.

ಲಂಡನ್‌ನಲ್ಲಿ ತಲುಪಿದ ಈ ವಾರ್ತಾ ಸಂಸ್ಥೆಯ ಸುದ್ದಿಯ ಪ್ರಕಾರ, ಚೀಣಾ ವಿದೇಶಾಂಗ ಸಚಿವ ಚೌ ಎನ್ ಲಾಯ್ ವಿಶ್ವಸಂಸ್ಥೆಗೆ ಉತ್ತರ ಕಳುಹಿಸಿ ಯುದ್ಧ ಸ್ತಂಭನ ಸಲಹೆಗಳ ಉದ್ದೇಶ ಅಮೆರಿಕನ್ ದಾಳಿಗಳಿಗೆ ಸುಧಾರಿಸಿ ಕೊಳ್ಳಲು ಕಾಲಾವಧಿ ಪಡೆಯುವುದಕ್ಕಾಗಿ ಎಂದು ತಿಳಿಸಿ, ಸಲಹೆಗಳಿಗೆ ನಕಾರ ಸೂಚಿಸಿದರೆಂದು ವರದಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

18 ಜನವರಿ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಅಮಾವಾಸ್ಯೆ ಗಂ 25-22, **ನಕ್ಷತ್ರ:** ಪೂರ್ವಾಷಾಢ 10-14, **ಯೋಗ:** ಹರ್ಷಣ ಗಂ. 21-11, **ಕರಣ:** ಚತುಷ್ಪಾದ ಗಂ. 12-46 ಮಕರ ಮಾಸದ 04 ನೇ ದಿನ. **ಮಳೆ ನಕ್ಷತ್ರ:** ಉತ್ತರಾಷಾಢ 3 ನೇ ಪಾದ. **ರಾಹುಕಾಲ:** ಸಾಯಂಕಾಲ 04-30-06-00, **ಸೂರ್ಯೋದಯ:** 07-01, **ಸೂರ್ಯಾಸ್ತ:** 06-21, **ಮುಸ್ಲಿಂ ದಿನಾಂಕ:** 28 ರಜಬ್, **ಅದೃಷ್ಟ ಸಂಖ್ಯೆ:** 5, 10

ಮೇಷ: ಮುಖ್ಯವಾದ ಕೆಲಸಗಳ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸ ಬೇಕಾಗುವುದು. ಸ್ಟೇಷನರಿ ವಸ್ತುಗಳ ಮಾರಾಟಗಾರರಿಗೆ ಹೆಚ್ಚಿನ ಬೇಡಿಕೆ ಹಾಗೂ ಮಾರಾಟದಿಂದ ಲಾಭವಿದೆ.

ವೃಷಭ: ಮಕ್ಕಳ ಮದುವೆಯಂತಹ ವಿಚಾರವನ್ನು ತಿಳಿ ಮನಸ್ಸಿನಿಂದ ಆಲೋಚಿಸಿ, ಸಮಸ್ಯೆಗಳಿಗೆ ಉತ್ತರ ಸಿಗುವುದು. ಸುಡುವ ಪದಾರ್ಥದಿಂದ ದೂರವಿರಿ. ನಿಮ್ಮ ಆಲೋಚನೆಗಳು ಇತರರ ಮೆಚ್ಚುಗೆಗೆ ಪಾತ್ರವಾಗಲಿದೆ.

ಮಿಥುನ: ಅತ್ಯಂತ ಕಠಿಣವಾದ ಪರಿಸ್ಥಿತಿಯನ್ನು ಅನುಭವಿಸಿದ ನಿಮಗೆ ಈ ದಿನ ಆಶಾದಾಯಕ ಹಾಗೂ ಆರಾಮದಾಯಕವಾಗಿರುತ್ತದೆ. ಸೂಕ್ಷ್ಮ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವಾಗ ಎಚ್ಚರವಹಿಸುವುದು ಉತ್ತಮ.

ಕರ್ಕಾಟಕ: ಸಮಯದ ಅಭಾವದಿಂದಾಗಿ ಕೆಲವು ವಿಷಯಗಳು ನಿಮಗೆ ಮುಖ್ಯವೆಂದು ತೋರುತ್ತಿದ್ದರೂ ಅದನ್ನು ಇಂದಿನ ವೇಳಾಪಟ್ಟಿಯಿಂದ ತೆಗೆದು ಹಾಕುವಿರಿ. ಸಾಲದ ಹೊರೆಯು ಕಡಿಮೆಯಾಗಲಿದೆ.

ಸಿಂಹ: ನೀವು ಮಾಡುವ ಕೆಲಸವನ್ನು ಸಮಯೋಚಿತ ಬುದ್ಧಿಯಿಂದ ಯೋಚಿಸಿ ಮಾಡುವುದು ಉತ್ತಮ. ನಿಮ್ಮ ಚಾಣಾಕ್ಷತನದ ನಿರ್ಧಾರಗಳು ನಿಮ್ಮನ್ನು ಗಣ್ಯ ವ್ಯಕ್ತಿಯನ್ನಾಗಿ ಮಾಡಲಿದೆ. ಶ್ರೀ ದುರ್ಗಾದೇವಿಯನ್ನು ಭಜಿಸಿ ಶುಭವಾಗುತ್ತದೆ.

ಕನ್ಯಾ: ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹೊತ್ತ ಹರಕೆಯನ್ನು ತೀರಿಸಲು ಹೆಚ್ಚಿನ ಪ್ರಯತ್ನ ಮತ್ತು ಆಸಕ್ತಿ ಇರಲಿ. ನಿಮ್ಮ ಗೊಂದಲಕ್ಕೆ ಕಾರಣವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವುದು ಒಳ್ಳೆಯದು.

ತುಲಾ: ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯವನ್ನು ಕಟ್ಟಿಹಾಕಿಕೊಳ್ಳುತ್ತದೆ. ನಿಮ್ಮ ಆರನೆಯ ಇಂದ್ರಿಯದ ಸೂಚನೆಯ ಸಹಾಯ ಇಂದು ನಿಮಗೆ ಉಪಯುಕ್ತವಾಗಲಿದೆ. ನಿಮ್ಮ ಸಮಸ್ಯೆಗಳಿಗೆ ಮುಕ್ತಿ ಸಿಗಲಿದೆ.

ವೃಶ್ಚಿಕ: ನಿಮ್ಮ ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಕ್ಕಿ ಉತ್ತಮ ಚಟುವಟಿಕೆಗಳು ಇರುವುವು ಜೊತೆಗೆ ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಹೆಚ್ಚಿನ ಮನ್ನಣೆ ಇರುವುದು. ವ್ಯಾಪಾರದಲ್ಲಿ ಅನಿರೀಕ್ಷಿತ ಲಾಭ ಉಂಟಾಗಬಹುದು.

ಧನು: ಉನ್ನತ ಶಿಕ್ಷಣದ ಮನಸ್ಸಿದ್ದರೂ ಹಲವು ನಿಬಂಧನೆಗಳಿಂದ ವೃತ್ತಿಯನ್ನೇ ಆರಿಸಿಕೊಳ್ಳುವಿರಿ. ಪಿತ್ತಕೋಶಕ್ಕೆ ಸಂಬಂಧಿಸಿದಂತೆ ಅನಾರೋಗ್ಯಗಳು ಎದುರಾಗಬಹುದು. ಅಧ್ಯಯನ ನಿರತರಿಗೆ ಸೂಕ್ತ ಸಹಾಯ ಲಭ್ಯವಾಗುವುದು.

ಮಕರ: ಕ್ಷಣಿಕ ಸುಖಗಳಿಗೆ ಗಮನ ನೀಡದೆ, ಮುಖ್ಯವಾದ ವಿಷಯಗಳ ಬಗ್ಗೆ ಆಲೋಚಿಸುವುದು ನಿಮ್ಮ ಏಳಿಗೆಗೆ, ಅಭಿವೃದ್ಧಿಗೆ ಮೆಟ್ಟಿಲುಗಳಾಗುವುದು. ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ ಹಾಗೂ ಲಾಭವಿದೆ.

ಕುಂಭ: ಈ ದಿನ ದೇವತಾನುಗ್ರಹದಿಂದ ಆರ್ಥಿಕ ಖರ್ಚು-ವೆಚ್ಚಗಳ ಸಮತೋಲನ, ಕುಟುಂಬದಲ್ಲೂ ತೃಪ್ತಿ ಇರುವುದು. ನಿಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಲು ಇಂದು ಬೇಕಾದಷ್ಟು ಅವಕಾಶಗಳು ಒದಗಿ ಬರುವುವು.

ಮೀನ: ಜೀವನದಲ್ಲಿನ ಪ್ರಮುಖ ಬದಲಾವಣೆಯನ್ನು ಈ ದಿನ ಕಾಣಲಿದ್ದೀರಿ. ಲಾಟರಿಯಂತಹ ಯೋಜನೆಗಳು ಕಣ್ಣಾಮುಚ್ಚಾಲೆಯಾಟ ನಡೆಸಲಿದೆ. ಇಂದು ನೀವು ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ.

ಪದಬಂಧ 6288

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಕತ್ತು ಕೊನೆಗಿಟ್ಟು ತೋರಿದ ಬಲ (3)
5.ಅಷ್ಟಮಿ ನಂತರದ ತಿಥಿ (3)
7.ಉರಗದ ಎದೆಯಿಲ್ಲಿ ಕಾಣುತ್ತಿದೆ (2)
8.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
9.ಯಾವ ಅಡೆತಡೆಯೂ ಇಲ್ಲದ ಆಡಳಿತ (7)
12.ತುತ್ತು ತಿನ್ನುವಾಗ ಬಂದಿರುವ ತೊಂದರೆ (2)
13.ಜವಾನನ ಸುತ್ತ ನೆರೆದಿರುವ ಮಂದಿ (2)
14.ಹೆಂಡತಿಯ ಸೋದರಿಯ ಗಂಡ (3)
15. ಸೀಸೆ ಮುಂತಾದವುಗಳ ಮುಚ್ಚಳ (3)

ಮೇಲಿಂದ ಕೆಳಕ್ಕೆ

1.ಮನದ ವಿಷಯ ಪ್ರಸ್ತಾಪ ಮಾಡಿದ್ದಕ್ಕೇ ಈ ದ್ವೇಷ (4)
3.ಕರದೊಳಗೆ ಬಿರುಸಾದುದು ಇದೆ (3)
4.ಈ ಪರಿ ಓಡಿಹೋಗುವಿಕೆ (3)
6.ನಾಟಕನೃತ್ಯಗಳನ್ನು ಪ್ರದರ್ಶಿಸುವ ಸ್ಥಳ ಉಲ್ಟಾ ಕಾಣುತ್ತಿದೆ (4)
7.ಶಾಂತವಾಗುವುದು ಅಥವಾ ಕಡಿಮೆಯಾಗುವುದು (5)
8.ಗುರು ವಿವರಿಸಿದ್ದು ಭೂಮಿಯ ಆಕರ್ಷಣ ಶಕ್ತಿ! (3)
9.ಪ್ರಾಮಾಣಿಕತೆ ಈ ರೀತಿ ಬಂದಿದೆ (3)
10.ಊಟ ಮಾಡಿ ಉಳಿದುದು (4)
11.ಚಂದ್ರನನ್ನು ಹೀಗೂ ಕರೆಯುತ್ತಾರೆ (4)
12.ಅಷ್ಟದಿಕ್ಪಾಲಕರಲ್ಲಿ ಈತನೇ ಶ್ರೀಮಂತ! (3)
13.ವಠಾರದವರ ಹೊಟ್ಟೆ! (3)



6287ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ತಪರಾಕಿ 5.ಮಧುಕರಿ 6.ದಸ್ತಗಿರಿ 8.ಕಠ3 9.ಆನೆ 10.ಕಟುನುಡಿ 13.ಉದಾಸೀನ 14.ಕೆನೆಹಾಲು

ಮೇಲಿಂದ ಕೆಳಕ್ಕೆ:
1.ಆಮಲಕ 2.ಮಕರಂದ 3.ತರಾತುರಿ 4.ಕಿತಾಪತಿ 7.ಗಿಲೀಟು 9.ಆಮಶಂಕೆ 10.ಕಡೆಗೀಲು 11.ಡಿಕ್ರಿದಾರ 12.ನವನಟ

ಸುಡೊಕು 6672

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		9			7	1		4
				3				
5		7	4		6	2		3
					5		3	1
	5	1		8			2	
3			9					8
		2		1		8		5
9			7		8			
	8			2		4		

6671ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಂಗಾಂಗ ಕಸಿ ಆಸ್ಪತ್ರೆಗೆ ಒಡಂಬಡಿಕೆ

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಜತೆ ಒಪ್ಪಂದ ● ಆರ್ಥಿಕ ದುರ್ಬಲರಿಗೆ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ಆವರಣದಲ್ಲಿರುವ 10 ಎಕರೆ ಜಮೀನಿನಲ್ಲಿ ನಿರ್ಮಾಣವಾಗಲಿರುವ ಸಾವಿರ ಹಾಸಿಗೆಗಳ ಚಾರಿಟಬಲ್ ಸೂಪರ್ ಸ್ಪೆಷಾಲಿಟಿ ಹಾಗೂ ಬಹು ಅಂಗಾಂಗ ಕಸಿ ಆಸ್ಪತ್ರೆಗೆ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವು ಐದು ವರ್ಷಗಳಲ್ಲಿ ₹4 ಸಾವಿರ ಕೋಟಿ ವೆಚ್ಚ ಮಾಡಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯ ಸಮ್ಮುಖದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಪ್ರತಿಷ್ಠಾನವು ಆಸ್ಪತ್ರೆಯ ನಿರ್ಮಾಣ, ನಿರ್ವಹಣೆಗೆ ಸಂಬಂಧಿಸಿದಂತೆ ಒಡಂಬಡಿಕೆಗೆ ಸಹಿ ಹಾಕಿತು.

'ಆಸ್ಪತ್ರೆ ನಿರ್ಮಿಸಲು 10 ಎಕರೆ ಜಾಗವನ್ನು ಪ್ರತಿಷ್ಠಾನಕ್ಕೆ 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೀಡಲು ಒಪ್ಪಂದವಾಗಿದೆ. ಆಸ್ಪತ್ರೆಯ ಸಂಪೂರ್ಣ ಬಂಡವಾಳ ಮತ್ತು ಕಾರ್ಯನಿರ್ವಹಣಾ ವೆಚ್ಚವನ್ನು ಪ್ರತಿಷ್ಠಾನ ಭರಿಸಲಿದೆ' ಎಂದರು.

ಪ್ರತಿಷ್ಠಾನದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅನುರಾಗ್ ಬೆಹರ್ ಮಾತನಾಡಿ, 'ಪ್ರತಿಷ್ಠಾನವು ಸಾರ್ವಜನಿಕ ವ್ಯವಸ್ಥೆಗಳಲ್ಲಿ ನಂಬಿಕೆ ಇಟ್ಟಿರುವ ಸಂಸ್ಥೆಯಾಗಿದೆ. ಸಾರ್ವಜನಿಕ ವ್ಯವಸ್ಥೆಗಳು ಬಲಗೊಳ್ಳಬೇಕು. ಆರೋಗ್ಯ ಆರಂಭವಾಗುವುದು ಆಶಾ ಕಾರ್ಯಕರ್ತರು, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ. ನಮ್ಮ ಜನರು ರೋಗ ಪೀಡಿತರಾಗದಂತೆ ತಡೆಯುವುದು ನಮ್ಮ ಮುಖ್ಯ ಗುರಿ ಆಗಬೇಕು' ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿ, 'ಪ್ರತಿಷ್ಠಾನವು ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟರಾಲಜಿ ಮೂಲಕ ಈ ಆಸ್ಪತ್ರೆಯನ್ನು ನಡೆಸಲಿದೆ. ಈ ಆಸ್ಪತ್ರೆ ನಿರ್ಮಾಣಕ್ಕೆ ₹1,000 ಕೋಟಿ ಹೂಡಿಕೆ ಮಾಡಲಿದ್ದು, ನಿರ್ವಹಣೆಗೆ ಪ್ರತಿವರ್ಷ ₹350 ಕೋಟಿ ವೆಚ್ಚ ಮಾಡಲಿದೆ' ಎಂದರು.

ಪ್ರತಿಷ್ಠಾನದ ಆರೋಗ್ಯ ವಿಭಾಗದ ಮುಖ್ಯಸ್ಥ ಆನಂದ ಸ್ವಾಮಿನಾಥನ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ಮುಖ್ಯ ಸಚೇತಕ ಅಶೋಕ ಪಟ್ಟಣ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹ್ಮದ್ ಮೊಹ್ಸಿನ್, ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟರಾಲಜಿ ಸೈನ್ಸ್‌ನ ಡಾ. ಎನ್.ಎಸ್. ನಾಗೇಶ್ ಸೇರಿ ಹಲವರು ಉಪಸ್ಥಿತರಿದ್ದರು.

ಅನುರಾಗ್ ಬೆಹರ್ ಮತ್ತು ಸಿದ್ದರಾಮಯ್ಯ ಒಡಂಬಡಿಕೆ ಪತ್ರ ವಿನಿಮಯ ಮಾಡಿಕೊಂಡರು. ಶಾಲಿನಿ ರಜನೀಶ್, ನಜೀರ್ ಅಹಮದ್, ಶರಣಪ್ರಕಾಶ ಪಾಟೀಲ ಇದ್ದರು –ಪ್ರಜಾವಾಣಿ ಚಿತ್ರ

ಆಸ್ಪತ್ರೆಯ ವಿಶೇಷತೆಗಳು

- ಸರ್ಕಾರಿ ಜಮೀನಿನಲ್ಲಿ ಸ್ಥಾಪನೆ
- ಪ್ರತಿಷ್ಠಾನವು ಬಂಡವಾಳ ಮತ್ತು ಕಾರ್ಯನಿರ್ವಹಣಾ ವೆಚ್ಚ ಭರಿಸಲಿದೆ
- ಐದು ವರ್ಷಗಳ ಒಳಗೆ ಕಾರ್ಯನಿರ್ವಹಿಸುವ ನಿರೀಕ್ಷೆ
- ದುರ್ಬಲ ವರ್ಗಗಳು, ಆರೋಗ್ಯ ಸೇವೆಗಳಿಂದ ವಂಚಿತರಾದವರಿಗೆ ಗುಣಮಟ್ಟದ ಚಿಕಿತ್ಸೆ ಉದ್ದೇಶ
- ಬಡವರಿಗೆ ಉಚಿತ ಚಿಕಿತ್ಸೆಗಾಗಿ ಶೇ 75ರಷ್ಟು ಹಾಸಿಗೆ ಮೀಸಲು. ಉಳಿದವರ ಚಿಕಿತ್ಸೆಗೆ ಕನಿಷ್ಠ ದರ
- ಕಿಡ್ನಿ, ಹೃದಯ, ಯಕೃತ್ ಹೀಗೆ ಅಂಗಾಂಗ ಕಸಿಗೆ ವಿಶೇಷ ಒತ್ತು

ಚಿಟಿಕೆ ಸುದ್ದಿ

ಪಿಯು: ನಾಳೆ 2ನೇ ಪೂರ್ವಸಿದ್ಧತಾ ಪರೀಕ್ಷೆ ಆರಂಭ

ಬೆಂಗಳೂರು: ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಎರಡನೇ ಪೂರ್ವಸಿದ್ಧತಾ ಪರೀಕ್ಷೆ ಜ.19ರಿಂದ ಆರಂಭವಾಗಲಿದ್ದು, ಫೆ.2ರವರೆಗೆ ನಡೆಯಲಿವೆ.

ಜ.2ರಿಂದ 17ರವರೆಗೆ ಮೊದಲ ಪೂರ್ವಸಿದ್ಧತಾ ಪರೀಕ್ಷೆ ನಡೆದಿತ್ತು. ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯ ವೇಳೆ ಕೆಲ ವಿಷಯಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಹಾಗಾಗಿ, ಪಿಯು ಎರಡನೇ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸಲು ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಸೂಚನೆ ನೀಡಿದೆ.

ಪ್ರಶ್ನೆಪತ್ರಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ವಿದ್ಯಾರ್ಥಿಗಳು, ಸಾರ್ವಜನಿಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಪರೀಕ್ಷಾ ಕೊಠಡಿಯ ಒಳಗೆ ಮೊಬೈಲ್ ಫೋನ್ ಬಳಸುವಂತಿಲ್ಲ. ಆಯಾ ವಿಷಯದ ಪ್ರಶ್ನೆಪತ್ರಿಕೆಗಳನ್ನು ಒಂದು ದಿನ ಮೊದಲಷ್ಟೇ ಮುದ್ರಿಸಿಕೊಳ್ಳಬೇಕು ಎಂದು ಎಸ್.ಭರತ್ ಹೇಳಿದ್ದಾರೆ.

ಲಂಚ: ಅಬಕಾರಿ ಡಿಸಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಮಾರಾಟ ಸನ್ನದು ನೀಡಲು ₹25 ಲಕ್ಷ ಲಂಚ ಪಡೆಯುತ್ತಿದ್ದ ಬೆಂಗಳೂರು ಅಬಕಾರಿ ಜಿಲ್ಲೆ-8 ಅಬಕಾರಿ ಉಪ ಆಯುಕ್ತ (ಡಿಸಿ) ಜಗದೀಶ್ ನಾಯ್ಕ್ ಸೇರಿ ಮೂವರನ್ನು ಲೋಕಾಯುಕ್ತ ಬಂಧಿಸಿದೆ.

ಮೈಸೂರು ರಸ್ತೆಗೆ ಹೊಂದಿಕೊಂಡಂತೆ ಬ್ಯಾಟರಾಯನಪುರದ ವ್ಯಾಪ್ತಿಯಲ್ಲಿ ಲಕ್ಷ್ಮೀನಾರಾಯಣ ಸಿ. ಅವರು ಲಾಡ್ಜ್ ಅಂಡ್ ರೆಸ್ಟೋರೆಂಟ್ ತೆರೆಯಲು ಸಿದ್ಧತೆ ನಡೆಸಿದ್ದಾರೆ. ರೆಸ್ಟೋರೆಂಟ್‌ನಲ್ಲಿ ಮದ್ಯಪೂರೈಕೆಗೆ ಸಿಎಲ್-7 ಸನ್ನದು ಪಡೆಯಲು ಅವರು ಅರ್ಜಿ ಸಲ್ಲಿಸಿದ್ದರು ಎಂದು ಲೋಕಾಯುಕ್ತ ಸಂಸ್ಥೆಯು ತಿಳಿಸಿದೆ.

ಸನ್ನದು ಪಡೆಯಲು ಅಗತ್ಯವಿದ್ದ ಎಲ್ಲ ಷರತ್ತುಗಳನ್ನು ಪೂರೈಸಿದ ನಂತರ ₹21 ಲಕ್ಷ ಶುಲ್ಕವನ್ನು ಲಕ್ಷ್ಮೀನಾರಾಯಣ ಅವರು ಪಾವತಿಸಿದ್ದಾರೆ. ಆದರೆ ಅಬಕಾರಿ ಉಪ ಆಯುಕ್ತ ಜಗದೀಶ್ ನಾಯ್ಕ್ ಅವರು ಅರ್ಜಿಯನ್ನು ತಡೆಹಿಡಿದಿದ್ದರು.

ಮುಖ್ಯಾಂಶಗಳು

- ಸನ್ನದು ನೀಡಲು ₹80 ಲಕ್ಷಕ್ಕೆ ಒತ್ತಾಯ
- ಉಪ ಆಯುಕ್ತ, ಸೂಪರಿಂಟೆಂಡೆಂಟ್, ಕಾನ್‌ಸ್ಟೆಬಲ್ ಬಂಧನ
- ಆದಾಯಕ್ಕಿಂತ ಹೆಚ್ಚು ಆಸ್ತಿ: ಪ್ರಕರಣ ದಾಖಲಿಸಲು ಚಿಂತನೆ

ಅರ್ಜಿಗೆ ಸಹಿಯನ್ನೂ ಮಾಡಿರಲಿಲ್ಲ, ತಿರಸ್ಕರಿಸಿಯೂ ಇರಲಿಲ್ಲ. ಈ ಬಗ್ಗೆ ಲಕ್ಷ್ಮೀನಾರಾಯಣ ಪ್ರಶ್ನಿಸಿದಾಗ, ₹80 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಮಾಹಿತಿ ನೀಡಿದೆ.

ಲಕ್ಷ್ಮೀನಾರಾಯಣ ಅವರು ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜು ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ದೂರುದಾರರು ಶನಿವಾರ ನಗರದ ಮೈಸೂರು ರಸ್ತೆಯ, ಬ್ಯಾಟರಾಯನಪುರದಲ್ಲಿ ಇರುವ ಕರ್ನಾಟಕ ರಾಜ್ಯ ಪಾನೀಯ ನಿಗಮದ ಸಂಕೀರ್ಣಕ್ಕೆ ತೆರಳಿದ್ದರು ಎಂದು ವಿವರಿಸಿದೆ.

ಸಂಕೀರ್ಣದಲ್ಲಿರುವ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿಯೇ ಜಗದೀಶ್ ನಾಯ್ಕ್, ಅಬಕಾರಿ ಸೂಪರಿಂಟೆಂಡೆಂಟ್ ಕೆ.ಎಂ.ತಮ್ಮಣ್ಣ ಮತ್ತು ಅಬಕಾರಿ ಕಾನ್‌ಸ್ಟೆಬಲ್ ಲಕ್ಷ್ಮಣ ಗಜೇಂದ್ರ ದೂರುದಾರರಿಂದ ₹25 ಲಕ್ಷ ಪಡೆದುಕೊಂಡಿದ್ದರು. ಇದೇ ವೇಳೆ ದಾಳಿ ನಡೆಸಿ, ಮೂವರನ್ನೂ ಬಂಧಿಸಲಾಯಿತು ಎಂದು ತಿಳಿಸಿದೆ.

ಮೂವರು ಆರೋಪಿಗಳ ಈ ಹಿಂದೆ ಹಲವರ ಬಳಿ ಲಂಚ ಕೇಳಿರುವ ಬಗ್ಗೆ ದೂರುಗಳು ಬಂದಿದ್ದು, ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಕೆ ಪ್ರಕರಣ ದಾಖಲಿಸಲು ಪರಿಶೀಲನೆ ನಡೆಯುತ್ತಿದೆ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

ಸುತ್ತೂರು ರಥೋತ್ಸವ

ಚಿತ್ರ: ಅನೂಪ್ ರಾಘ.ಟಿ.

ಮೈಸೂರು ಜಿಲ್ಲೆ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ನಡೆದ ರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು

'ಕೈಗಾರಿಕಾ ಪ್ರದೇಶ: ಕನ್ನಡ ಸ್ನೇಹಿ ವಾತಾವರಣ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ ವ್ಯಾಪಿಸಿರುವ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಕೈಗಾರಿಕಾ ಪ್ರದೇಶಗಳಲ್ಲಿ ಕನ್ನಡ ಸ್ನೇಹಿ ವಾತಾವರಣ ನಿರ್ಮಾಣವಾಗಬೇಕು. ಸರ್ಕಾರ ಈ ಬಗ್ಗೆ ಕೂಡಲೇ ಕ್ರಮಕ್ಕೆ ಮುಂದಾಗಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಅವರಿಗೆ ಪತ್ರ ಬರೆದಿದ್ದಾರೆ. 'ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿರುವ ಬಹುಪಾಲು ಕೈಗಾರಿಕೆಗಳು, ತಮ್ಮ ನಾಮಫಲಕಗಳಲ್ಲಿ ಕನ್ನಡಕ್ಕೆ ಪ್ರಾಧಾನ್ಯ ನೀಡುತ್ತಿಲ್ಲ. ಆಡಳಿತ ವ್ಯವಸ್ಥೆಯಲ್ಲಿ ಕನ್ನಡವನ್ನು ಪೋಷಿಸದಿರುವುದು ರಾಜ್ಯದಾದ್ಯಂತ ಪ್ರವಾಸ ಕೈಗೊಂಡಾಗ ಗಮನಕ್ಕೆ ಬಂದಿದೆ' ಎಂದು ಹೇಳಿದ್ದಾರೆ.

'ನಾಡಿನ ನೆಲ, ಜಲ, ವಿದ್ಯುತ್ ಸೇರಿದಂತೆ ಎಲ್ಲದರಲ್ಲೂ ಆರ್ಥಿಕ ರಿಯಾಯಿತಿ, ಮೂಲ ಸೌಕರ್ಯಗಳನ್ನು ಪಡೆಯುವ ಕೈಗಾರಿಕೆಗಳು ಇಲ್ಲಿನ ಭಾಷೆ-ಸಂಸ್ಕೃತಿಗೆ ಗೌರವ ಕೊಡಬೇಕು. ಕನ್ನಡದ ಬಗೆಗೆ ಉಪೇಕ್ಷೆ ತೋರುವ ಸಂಸ್ಥೆಗಳಿಗೆ ದಂಡ ವಿಧಿಸುವ ಮೂಲಕ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಮುಂದಾಗಬೇಕು' ಎಂದು ಆಗ್ರಹಿಸಿದ್ದಾರೆ.

'ಕೈಗಾರಿಕಾ ಪ್ರದೇಶಗಳಲ್ಲಿ ಸರ್ಕಾರ ನಿರ್ಮಿಸಿರುವ ರಸ್ತೆ, ನಿಲ್ದಾಣಗಳಿಗೆ ಸಾಧಕ ಕನ್ನಡಿಗರ ಹೆಸರುಗಳನ್ನು ಇಡಬೇಕು. ಈ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಕನ್ನಡಿಗರಿಗೆ ತಾವು ಪರಕೀಯರೆನ್ನುವ ಭಾವನೆ ಮೂಡದಿರುವಂತೆ ಮಾಡುವ ಸವಾಲು ಸರ್ಕಾರದ ಮುಂದಿದೆ' ಎಂದಿದ್ದಾರೆ.

ಸಂತ ಸೇವಾಲಾಲ್ ಜಯಂತಿ ವೆಚ್ಚ: ತನಿಖೆಗೆ ಒತ್ತಾಯ

ಬೆಂಗಳೂರು: ಹೊನ್ನಾಳಿ ತಾಲ್ಲೂಕು ಸೂರಗೊಂಡನಕೊಪ್ಪದಲ್ಲಿ ಪ್ರತಿ ವರ್ಷ ನಡೆಯುವ ಸಂತಸೇವಾಲಾಲ್ ಜಯಂತ್ಯುತ್ಸವದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಶಂಕೆ ಇದ್ದು, ಕೋವಿಡ್ ನಂತರ ನಡೆದ ಎಲ್ಲ ಉತ್ಸವಗಳ ಹಣಕಾಸಿನ ನಿರ್ವಹಣೆಯನ್ನು ತನಿಖೆಗೆ ಒಳಪಡಿಸಬೇಕು ಎಂದು ಬಂಜಾರ ಸಮುದಾಯದ ಸಂಘಟನೆಗಳು ಒತ್ತಾಯಿಸಿವೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ದೂರು ನೀಡಿರುವ ಕರ್ನಾಟಕ ಬಂಜಾರ ಬ್ರಿಗೇಡ್, 'ಸಂತ ಸೇವಾಲಾಲ್ ಅವರು ಜನಿಸಿದ ಪುಣ್ಯಭೂಮಿಯಲ್ಲಿ ಪ್ರತಿ ವರ್ಷ ಜಯಂತಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಆದರೆ, ಪ್ರತಿ ವರ್ಷವೂ ಅಧಿಕ ಖರ್ಚು ತೋರಿಸುತ್ತಿರುವುದು ಹಣ ದುರ್ಬಳಕೆಯ ಶಂಕೆ ಮೂಡಿಸಿದೆ' ಎಂದು ದೂರಿದೆ. 2025ರಲ್ಲಿ ನಡೆದ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ₹5 ಕೋಟಿ ನೀಡಿತ್ತು. ಆದರೆ, ₹4.19 ಕೋಟಿ ಹೆಚ್ಚುವರಿ ಖರ್ಚು ನೀಡಲು ಸಮಾಜಕಲ್ಯಾಣ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಫೆ. 13ರಿಂದ 15ರವರೆಗೆ ನಡೆಯುವ ಜಯಂತಿ ಕಾರ್ಯಕ್ರಮಕ್ಕೂ ₹10 ಕೋಟಿ ಬೇಡಿಕೆ ಇಡಲಾಗಿದೆ. ಎಲ್ಲೂ ಪಾರದರ್ಶಕತೆ ಉಳಿಸಿಕೊಂಡಿಲ್ಲ. ಹಾಗಾಗಿ, ಕಾರ್ಯಕ್ರಮದ ಆಯೋಜನೆ, ವೆಚ್ಚದ ಸಂಪೂರ್ಣ ಹೊಣೆಯನ್ನು ದಾವಣಗೆರೆ ಜಿಲ್ಲಾಡಳಿತಕ್ಕೆ ವಹಿಸಬೇಕು ಎಂದು ಬಂಜಾರ ಸಮುದಾಯದ ಸಂಘಟನೆಗಳು ಒತ್ತಾಯಿಸಿದೆ.

ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ಬಾಗಲಕೋಟೆ ಜಿಲ್ಲೆಯ ಯಂಡಿಗೇರಿಯ ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನವು 'ಕು.ಸುಶ್ರಾವ್ಯ ಶೆಲ್ಲಿಕೇರಿ ಶಿಶು ಸಾಹಿತ್ಯ ಪ್ರಶಸ್ತಿ'ಗೆ 2025ರಲ್ಲಿ ಮೊದಲ ಮುದ್ರಣಗೊಂಡ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

ಆಸಕ್ತರು ಮೂರು ಪ್ರತಿಗಳನ್ನು ಫೆಬ್ರುವರಿ 5ರೊಳಗೆ ಮಲ್ಲಿಕಾರ್ಜುನ ಶೆಲ್ಲಿಕೇರಿ, #19/1/1, ಸಿರಿ, ಈಶ್ವರ ದೇವಸ್ಥಾನದ ಹತ್ತಿರ, 22ನೆ ಕ್ರಾಸ್, ವಿದ್ಯಾಗಿರಿ, ಬಾಗಲಕೋಟೆ-587102 ಈ ವಿಳಾಸಕ್ಕೆ ಕಳುಹಿಸಬಹುದು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಇಂದಿನಿಂದ ಆರ್‌ಎಸ್‌ಎಸ್ ಹಿಂದೂ ಸಮಾಜೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಶತಮಾನ ವರ್ಷದ ಆಚರಣೆಯ ಭಾಗವಾಗಿ, ಹಿಂದೂ ಸಮಾಜೋತ್ಸವ ಕಾರ್ಯಕ್ರಮಗಳು ರಾಜ್ಯದ ಗ್ರಾಮೀಣ ಪ್ರದೇಶದ ಮಂಡಲ ಹಾಗೂ ನಗರ-ಪಟ್ಟಣಗಳ ವಾರ್ಡ್ ಮಟ್ಟದಲ್ಲಿ ಜ.18ರಿಂದ ಆರಂಭವಾಗಲಿವೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಆರ್‌ಎಸ್‌ಎಸ್‌ನ ಹಿರಿಯ ಕಾರ್ಯಕರ್ತ ನಾ. ತಿಪ್ಪೇಸ್ವಾಮಿ, 'ಸಮಾಜೋತ್ಸವ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ್, ಪರಿಸರ ಸಂರಕ್ಷಣೆ, ಸ್ವದೇಶಿ ಜೀವನಶೈಲಿ ಹಾಗೂ ನಾಗರಿಕ ಶಿಷ್ಟಾಚಾರ ಕುರಿತು ಜಾಗೃತಿ ಮೂಡಿಸಲಾಗುತ್ತದೆ. ಕೆಲವು ಕಡೆ ಗೋಪೂಜೆ, ಶೋಭಾಯಾತ್ರೆ, ಬೈಕ್ ರ್‍ಯಾಲಿ, ಸ್ವದೇಶಿ ಉತ್ಪನ್ನ ಪ್ರದರ್ಶನ-ಮಾರಾಟ, ಸಾಂಸ್ಕೃತಿಕ-ದೇಶಭಕ್ತಿ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದರು.

ಫೆಬ್ರುವರಿ 1ರವರೆಗೆ ರಾಜ್ಯದ ದಕ್ಷಿಣ ಪ್ರಾಂತ್ಯ ಹಾಗೂ ಫೆ.28ರವರೆಗೆ ಉತ್ತರ ಪ್ರಾಂತ್ಯದಲ್ಲಿ ಒಟ್ಟು 3 ಸಾವಿರ ಕಾರ್ಯಕ್ರಮಗಳು ನಡೆಯಲಿವೆ. ಧರ್ಮ, ಸಮಾಜ, ಸಂಸ್ಕೃತಿ, ರಾಷ್ಟ್ರ ಕುರಿತ ವಿಷಯಗಳು, ನಮ್ಮ ದೇವಾಲಯಗಳು ಸಮಾಜ ಜಾಗೃತಿ ಕೇಂದ್ರಗಳಾಗಬೇಕು ಎಂಬ ಆಶಯದಡಿ ಜಾಗೃತಿ ಮೂಡಿಸುವುದು ಸಮಾಜೋತ್ಸವದ ಉದ್ದೇಶ ಎಂದು ಅವರು ವಿವರಿಸಿದರು.

ಜಿಲ್ಲಾ ಕೇಂದ್ರಗಳಲ್ಲಿ ನಾಗರಿಕ ಗೋಷ್ಠಿಗಳನ್ನು ಆಯೋಜಿಸಲಾಗಿದೆ. ಮಂಡಲಗಳಲ್ಲಿ ಹಿಂದೂ ಸಮ್ಮೇಳನ, ತಾಲ್ಲೂಕು ಮಟ್ಟದಲ್ಲಿ ಸಾಮಾಜಿಕ ಸದ್ಭಾವನಾ ಸಮಾವೇಶಗಳನ್ನು ಆಯೋಜಿಸಲಾಗುತ್ತಿದೆ ಎಂದು ಹೇಳಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಮೇಲ್ವಿಚಾರಣೆ ಅಭಿಯಂತರರ ಕಛೇರಿ,
ವಲಯ–2, 4ನೇ ಮಹಡಿ, ಅನೆಕ್ಸ್ ಕಟ್ಟಡ–3, ಬೆಂಗಳೂರು – 560002.

ಸಂಖ್ಯೆ: ಮೇಅ/ಬೆಂಕೇನಪಾ/ವ–2/ಟೆಂಡರ್/03/2025–26 ದಿನಾಂಕ: 17–01–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ – (2ನೇ ಕರೆ)
(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮೇಲ್ವಿಚಾರಣೆ ಅಭಿಯಂತರರು, ವಲಯ–2, ಬೆಂಕೇನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಬೆಂಕೇನಪಾ ಅಥವಾ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿರುವ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರು / ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ
1	ಡಿಸ್ಪೆನ್ಸರಿ ರಸ್ತೆ (ಓ.ಪಿ.ಹೆಚ್. ರಸ್ತೆ) ಯಿಂದ ಕಾಮರಾಜ್ ರಸ್ತೆ ಮತ್ತು ಇಬ್ರಾಹಿಂ ಸಾಹಿಬ್ ಬೀದಿ ರಸ್ತೆಗಳಲ್ಲಿ ನಿಲುಗಡೆ ಶುಲ್ಕ ಸಂಗ್ರಹ ಮಾಡುವುದು. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 119.02, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 2,00,000/–**
2	ಮಿಲ್ಲರ್ಸ್ ರಸ್ತೆ ಜಂಕ್ಷನ್, ಪ್ಲಾನೆಟೇರಿಯಂ ರಸ್ತೆ, ಸೆಂಟ್ ಜಾನ್ಸ್ ಚರ್ಚ್ ರಸ್ತೆ ಮತ್ತು ಸೆಂಟ್ ಜಾನ್ಸ್ ರಸ್ತೆಗಳಲ್ಲಿ ನಿಲುಗಡೆ ಶುಲ್ಕ ಸಂಗ್ರಹ ಮಾಡುವುದು. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 141.52, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 2,12,500/–**
3	ದತ್ತಾತ್ರೇಯ ದೇವಸ್ಥಾನ ವಾರ್ಡ್‌ನ 2ನೇ ದೇವಸ್ಥಾನ ರಸ್ತೆ, ಸಂಪಿಗೆ ರಸ್ತೆ, ರೈಲ್ವೆ ಪ್ಯಾರಾಲಲ್ ರಸ್ತೆ ಮತ್ತು ಬಿ.ವಿ.ಕೆ. ಅಯ್ಯಂಗಾರ್ ರಸ್ತೆಗಳಲ್ಲಿ ನಿಲುಗಡೆ ಶುಲ್ಕ ಸಂಗ್ರಹ ಮಾಡುವುದು. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 120.12, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 2,00,000/–**
4	ಮಾವಳ್ಳಿ ಟ್ಯಾಂಕ್ ಬಂಡ್ ರಸ್ತೆ, ಸುಂಕೇನಹಳ್ಳಿ ವಾರ್ಡ್‌ನ ಡಿ.ವಿ.ಜಿ. ರಸ್ತೆ, ಶಂಕರಮಠ ರಸ್ತೆ ಮತ್ತು ಪಿ.ಎಂ.ಕೆ. ರಸ್ತೆಗಳಲ್ಲಿ ನಿಲುಗಡೆ ಶುಲ್ಕ ಸಂಗ್ರಹ ಮಾಡುವುದು. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 136.73, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 2,05,100/–**
5	ವಾಣಿ ವಿಲಾಸ್ ರಸ್ತೆ, ವಾಸವಿ ದೇವಸ್ಥಾನದ ಬೀದಿ, ಕನಕಪುರ ರಸ್ತೆ, ಡೈಗೊನಲ್ ರಸ್ತೆ, ಪಟಾಲಮ್ಮ ರಸ್ತೆ, ಮತ್ತು ಟಿ. ಮರಿಯಪ್ಪ ರಸ್ತೆಗಳಲ್ಲಿ ನಿಲುಗಡೆ ಶುಲ್ಕ ಸಂಗ್ರಹ ಮಾಡುವುದು. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 152.93, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 2,29,500/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **19–01–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **21–01–2026 ರಂದು 16.00 ಗಂಟೆವರೆಗೆ.** 3) ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ: **27–01–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **28–01–2026** ರಂದು 16.30 ಗಂಟೆಗೆ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಮೇಲ್ವಿಚಾರಣೆ ಅಭಿಯಂತರರ ಕಛೇರಿ, ವಲಯ–2, ಬೆಂಕೇನಪಾ, ಬೆಂಗಳೂರು ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಮೇಲ್ವಿಚಾರಣೆ ಅಭಿಯಂತರರು, ವಲಯ–2, ಬೆಂಕೇನಪಾ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ: ಷೆಡ್ ನಂ. ಎ–99, 3ನೇ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು–560 058, ಇ–ಮೇಲ್: khdcsilk@gmail.com ದೂ: 9900306365
ಸಂಖ್ಯೆ: KHDCL/MP(SILK)2025-26/IND0025 ದಿನಾಂಕ: 17.01.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆಹೆಚ್‌ಡಿಸಿಎಲ್) ಇವರು ಪಾಲಿಯೆಸ್ಟರ್ ಜೆರಿಯ 4000 ಮಾರ್ಕ್ಸ್‌ನ ಸರಬರಾಜಿಗಾಗಿ ಪ್ರಸಿದ್ಧ ತಯಾರಕರು/ಅಧಿಕೃತ ಏಜೆಂಟರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **31.01.2026 ಸಂಜೆ 5.30 ಘಂಟೆಯೊಳಗೆ** ಟೆಂಡರುಗಳನ್ನು ಸಲ್ಲಿಸಬೇಕು. ಟೆಂಡರ್‌ಗಳನ್ನು ಯಾವುದೇ ಸೂಚನೆಯಿಲ್ಲದೆ ಪೂರ್ತಿ ಅಥವಾ ಭಾಗಶಃ ಪರಿಗಣಿಸುವ ಅಥವಾ ತಿರಸ್ಕರಿಸುವ ಪರಿಮಿತಿ/ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/– ವ್ಯವಸ್ಥಾಪಕರು, ಉತ್ಪಾದನೆ (ರೇಷ್ಮೆ)
ವಾಸಾಸಂಇ/ಸಿ.ಪಿ/ಕೆಎಸ್‌ಎಂಸಿಎ/5094/2025–26.

ಬೆಂಗಳೂರು ವಿಶ್ವವಿದ್ಯಾಲಯ
ಪರೀಕ್ಷಾ ಭವನ, ಜ್ಞಾನಭಾರತಿ ಆವರಣ, ಬೆಂಗಳೂರು–560056
ನಂ: ಪವಿ. 3/ಪಿಹೆಚ್.ಡಿ/ಪ್ರವೇಶಾತಿ/ಆನ್‌ಲೈನ್/ಸಾಫ್ಟ್‌ವೇರ್/2025–26 ದಿನಾಂಕ: 14.01.2026

ಅಧಿಸೂಚನೆ

2025–26ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಪಿಹೆಚ್.ಡಿ ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳುವುದು, ಅರ್ಜಿಗಳನ್ನು ಸ್ವೀಕರಿಸುವುದು, ರಶೀದಿಗಳನ್ನು ನೀಡುವುದು, ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು, OMR ಹಾಳೆಗಳು ಮತ್ತು ಪ್ರಶ್ನೆ ಪತ್ರಿಕೆಗಳ ವಿನ್ಯಾಸ, ಫಲಿತಾಂಶದ ಅಪ್‌ಲೋಡ್, ಮೆರಿಟ್ ಪಟ್ಟಿಯ ತಯಾರಿಕೆ ಮತ್ತು ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಾಫ್ಟ್‌ವೇರ್ ವಿನ್ಯಾಸ ಮತ್ತು ಅಭಿವೃದ್ಧಿ ಪಡಿಸಲು ದ್ವಿ ಲಕೋಟೆ ಪದ್ಧತಿ (2 Cover System) ಅಂದರೆ ತಾಂತ್ರಿಕ ಮತ್ತು ಹಣಕಾಸು ದರಪಟ್ಟಿಯನ್ನು ನೊಂದಾಯಿತ ಸಂಸ್ಥೆ/ಕಂಪನಿಗಳಿಂದ ಆಹ್ವಾನಿಸಲಾಗಿದೆ.

ತಾಂತ್ರಿಕ ಮತ್ತು ಹಣಕಾಸು ಬಿಡ್‌ನ ಅರ್ಹತೆ/ ವಿಶೇಷತೆಗಳನ್ನು ಷರತ್ತು ಹಾಗೂ ನಿಬಂಧನೆಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ bangaloreuniversity.karnataka.gov.in ನಿಂದ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ. ದರಪಟ್ಟಿಯನ್ನು ಸಹಾಯಕ ಕುಲಸಚಿವರು (ಮೌ) ಪರೀಕ್ಷಾ ವಿಭಾಗ –3 ಪರೀಕ್ಷಾ ಭವನ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56, ಇವರಿಗೆ ಈ ಅಧಿಸೂಚನೆ ಪ್ರಕಟಗೊಂಡ 10 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–22961210 ಮತ್ತು ಇ–ಮೇಲ್ regeval_ex3@bub.ernet.in ಮುಖಾಂತರ ಸಂಪರ್ಕಿಸಬಹುದಾಗಿದೆ.

DIPR/CP/5095/Zen/2025-26 ಸಹಿ/– ಕುಲಸಚಿವರು (ಮೌಲ್ಯಮಾಪನ)

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in
ಸಂಖ್ಯೆ: DULT-TECH/7/2025 ದಿನಾಂಕ 17.01.2026

ಟೆಂಡರ್ ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯ, ಕರ್ನಾಟಕದಲ್ಲಿನ 11 ಜಿಲ್ಲಾ ಕೇಂದ್ರಗಳ ಸಂಚಾರ ನಿರ್ವಹಣಾ ಯೋಜನೆಯ (TMP) ಸಿದ್ಧತೆಗಾಗಿ ಸಮಾಲೋಚಕರ ಸೇವೆಗಳಿಗಾಗಿ ಟೆಂಡರ್‌ಗಳನ್ನು (ಇ–ಬಿಡ್‌ಗಳನ್ನು) ಆಹ್ವಾನಿಸಿದ್ದು, ಬಿಡುದಾರರು https://kppp.karnataka.gov.in ವೆಬ್‌ಸೈಟ್‌ನಿಂದ ಟೆಂಡರ್ ದಾಖಲೆಯನ್ನು "ಡೌನ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 02.03.2026, ಸಂಜೆ 5.30 ರೊಳಗೆ.** ಸದರಿ ಟೆಂಡರ್ ಸಂಖ್ಯೆಗಳು

ಸಂಖ್ಯೆ	ಜಿಲ್ಲಾ ಕೇಂದ್ರ	ಟೆಂಡರ್ ಸಂಖ್ಯೆ
1	ಉಡುಪಿ ಮತ್ತು ಚಿಕ್ಕಮಗಳೂರು	DULT/2025-26/SE0036
2	ರಾಯಚೂರು	DULT/2025-26/SE0037
3	ಕೋಲಾರ ಮತ್ತು ಚಿತ್ರದುರ್ಗ	DULT/2025-26/SE0038
4	ಹೊಸಪೇಟೆ	DULT/2025-26/SE0039
5	ಹಾಸನ ಮತ್ತು ಮಂಡ್ಯ	DULT/2025-26/SE0040
6	ಬೀದರ್	DULT/2025-26/SE0041
7	ಬಾಗಲಕೋಟೆ ಮತ್ತು ಗದಗ– ಬೆಟಗೇರಿ	DULT/2025-26/SE0042

ಸಹಿ/–ಆಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ.
ವಾಸಾಸಂಇ/ವಾಪ್ರ/5081/ಶಿರಡಿ ಸಾಯಿ/2025–26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಹೊಸನಗರ ಉಪ ವಿಭಾಗ, ಹೊಸನಗರ
ಜಿಲ್ಲೆ: ಶಿವಮೊಗ್ಗ. ತಾಲ್ಲೂಕು:ಹೊಸನಗರ ಇ.ಮೇಲ್: acfhnr@gmail.com
No: ACF/HNR/MPCA-KFDF-CAMPA/CR-1/2025-26/-80
Date:17.01.2026

ಸವಿಸ್ತಾರ ಇ–ಟೆಂಡರ್ ಪ್ರಕಟಣೆ.ಕಾಲ್–3
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್ ಪ್ರಕಟಣೆ)

2025–26 ನೇ ಸಾಲಿನಲ್ಲಿ ಸಾಗರ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿನ MPCA- MPDA(ANR), KFDF (ANR) & CAMPA (AR) Model ಯೋಜನೆಯಡಿ ಒಟ್ಟು 09 ಮುಂಗಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜು ಒಟ್ಟು 63.89 ಲಕ್ಷ ರೂ ಗಳಿಗೆ (ಕಾಲ್–3) ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಯೂನಿಟ್‌ವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿ:27–01–2026 ಸಂಜೆ 5–05 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಕಾಮಗಾರಿಗಳು ಮತ್ತು ಸ್ಥಳಗಳ ಸಂಪೂರ್ಣ ವಿವರಗಳನ್ನು ಇ–ಪುರ್‌ಮೆಂಟ್‌ನಲ್ಲಿ ವಿವರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/135/01/1653

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ. ಸುಭಾಷ್ ನಗರ, 6ನೇ ಅಡ್ಡರಸ್ತೆ, ಮಂಡ್ಯ–571401, ದೂ:08232–221651
e-mail-dcfsfmandya@gmail.com
ಸಂ:ಎ3/ಬಿಯುಡಿ/ಹೊ.ಟೆಂ/ಸಿಆರ್–47/2025–26 ದಿ:14.01.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ಮತ್ತು 2025–26ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾವಣೆಯಾಗಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ಈ ವಿಭಾಗ ಮತ್ತು ವಲಯಗಳಲ್ಲಿ 2026–27ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2026 ರಿಂದ 31.03.2027 ರ ವರೆಗೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ವೆಬ್‌ಸೈಟ್ http://kppp.karnataka.gov.inರಲ್ಲಿ ಈ ಅನುಸೂಚಿಯಲ್ಲಿರುವ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/716/2025–26

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ.
ಡಾ: ಸಿದ್ಧಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.
ಸಂಖ್ಯೆ: ಸಹೋವೈಮ&ಆ/11/ಸರಬ/2025-26 ದಿನಾಂಕ: 14.01.2026

ಇ–ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಬೆಂಗಳೂರು ಇಲ್ಲಿಗೆ ಚಿಕಿತ್ಸೆಗೆ ಬರುವ ರೋಗಿಗಳಿಗೆ ಅವಶ್ಯವಿರುವ **ಹೋಮಿಯೋಪಥಿ ಔಷಧಿಗಳನ್ನು ಖರೀದಿಸುವ ಸಲುವಾಗಿ** ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಬಿಡ್‌ಗಳನ್ನು ಆಹ್ವಾನಿಸಿದೆ.

ಇ–ಟೆಂಡರ್ ಪ್ರಕ್ರಿಯೆ:

ಇ–ಟೆಂಡರ್ ಅಧಿಸೂಚನೆ ಸಂಖ್ಯೆ :	**ಸಹೋವೈಮ&ಆ/11/ಸರಬ/2025–26 ದಿನಾಂಕ: 13.01.2026.**
ಇ–ಟೆಂಡರ್ ದಾಖಲೆ ಇ ಪೋರ್ಟಲ್‌ನಲ್ಲಿ ದೊರೆಯುವ	**ದಿನಾಂಕ: 14.01.2026**
ಇ–ಟೆಂಡರ್ ದಾಖಲೆ ಇ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಕೊನೆಯ	**ದಿನಾಂಕ: 29.01.2026**
ಆನ್ ಲೈನ್ ಪ್ರಶ್ನೆಗಳಿಗೆ ಕೊನೆಯ	**ದಿನಾಂಕ: 21.01.2026**
ಅಪ್ಲೋಡ್ ಆದ ಇ–ಟೆಂಡರ್‌ಗಳನ್ನು ತೆರೆಯುವ	**ದಿನಾಂಕ: 31.01.2026**
ಇ–ಟೆಂಡರ್ ದಾಖಲೆ ತೆರೆಯುವ ಸ್ಥಳ: **ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು–560079. ಡಾ:ಸಿದ್ಧಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560 079**	
ಆರ್ಥಿಕ ಬಿಡ್ ತೆರೆಯುವ ತಾತ್ಕಾಲಿಕ	**ದಿನಾಂಕ: 03.02.2026**

ಇ–ಟೆಂಡರ್ ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್‌ನಲ್ಲಿ **https://kppp.karntaka.gov.in** ರಲ್ಲಿ **ದಿನಾಂಕ: 14.01.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು

DIPR/CP/RO5098/AAPL/2025-26 ಸಹಿ/- ಪ್ರಾಚಾರ್ಯರು

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)
ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ.
Email-jdahassan@yahoo.com 09.2021 Phone No:08172-267158
ಸಂಖ್ಯೆ:ಜಕೃನಿಹಾ/ಸಿಬ್ಬಂದಿ/ಹೊರಗುತ್ತಿಗೆ/ಟೆಂಡರ್/2025–26
ದಿನಾಂಕ:08.01.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27 ನೇ ಸಾಲಿಗೆ ಜಂಟಿ ಕೃಷಿ ನಿರ್ದೇಶಕರು, ಹಾಸನ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಿರುವ ನಿಬಂದನೆಗೊಳಪಟ್ಟು ಟೆಂಡರ್ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು ಟೆಂಡರ್ ದಸ್ತಾವೇಜನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ರಲ್ಲಿ ದಿನಾಂಕ 08.01.2026 ರಿಂದ ಲಭ್ಯವಿರುತ್ತದೆ. ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 09.02.2026 ರಂದು ಸಂಜೆ 5.30 ಗಂಟೆ ಆಗಿರುತ್ತದೆ. ಇ–ಟೆಂಡರ್‌ನ್ನು ದಿನಾಂಕ 11.02.2026 ರಂದು ಸಂಜೆ 4.00 ಗಂಟೆಗೆ ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ ಇಲ್ಲಿ ಉಪಸ್ಥಿತರಿರುವ ಸಂಸ್ಥೆಯ ಮಾಲೀಕರು/ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.

ಸಹಿ/–ಜಂಟಿ ಕೃಷಿ ನಿರ್ದೇಶಕರು, ಹಾಸನ.
ವಾಸಾಸಂಇ/ಹಿಸನಿ/ಹಾಸನ/941/ಕೆಎಸ್‌ಎಂಸಿಎ/667/2023–24

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ಸರ್ವೆ ನಂ.8, ಡಾ|| ರಾಜ್ ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010. ಫೋನ್ ನಂ. 080–22024000.
ಇ–ಮೇಲ್: cekrdcl@gmail.com, ವೆಬ್‌ಸೈಟ್: http://www.krdcl.in
ಸಂಖ್ಯೆ: KRDCL/IFB/2025-26/22 ದಿನಾಂಕ: 13.01.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು [ಕೆಆರ್‌ಡಿಸಿಎಲ್] ಕೆಟಿಪಿಪಿ 2000 ಕಾಯ್ದೆ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ www.kpppkarnataka.gov.in ಮೂಲಕ ಕೆಳಗಿನ ಕಾಮಗಾರಿಗಾಗಿ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸುತ್ತದೆ.

ಕಾಮಗಾರಿ ವಿವರ: **ಟೋಲ್ ಪ್ಲಾಜಾಗೆ ಸಣ್ಣ ಸುಧಾರಣೆಗಳು – ಮಾಗಡಿ–ದಾಬಾಸ್‌ಪೇಟೆ–ಕೊರಟಗೆರೆ ರಸ್ತೆಯ ಚೈನೇಜ್ 108+614 ಕಿಮೀ ನಿಂದ 110+614 ಕಿಮೀ ವರೆಗೆ ಸುಮಾರು 2.00 ಕಿಮೀ ಉದ್ದದ ಬಲವರ್ಧನೆ ಮತ್ತು ಸಣ್ಣ ಸುಧಾರಣೆಗಳು ಮತ್ತು ದೊಡ್ಡಮಾವತೂರು ಗ್ರಾಮದಲ್ಲಿ ಮದ್ದೂರು–ಕುಣಿಗಲ್ ವಿಭಾಗದಲ್ಲಿ ಮತ್ತು ಕೆಂಪೋಹಳ್ಳಿ ಗ್ರಾಮದಲ್ಲಿ ದಾಬಾಸ್‌ಪೇಟೆ–ಕೊರಟಗೆರೆ ವಿಭಾಗದಲ್ಲಿ ಎರಡು ಟೋಲ್ ಪ್ಲಾಜಾ ಸ್ಥಳಗಳಲ್ಲಿ ಹೆಚ್ಚುವರಿ ಮಾರ್ಗದ ನಿರ್ಮಾಣ.** ಟೆಂಡರಿಗಿಟ್ಟಿರುವ ಮೊತ್ತ (ಲಕ್ಷಗಳಲ್ಲಿ): **511.50.** ಇಎಂಡಿ: **ರೂ.7.68 ಲಕ್ಷಗಳು (ಕೆಪಿಪಿ ಪೋರ್ಟಲ್ ಮೂಲಕ 1.00 ಲಕ್ಷಗಳು ಮತ್ತು ಬ್ಯಾಂಕ್ ಗ್ಯಾರಂಟಿ ಮೂಲಕ 6.68 ಲಕ್ಷಗಳು ಅಥವಾ ಕೆಪಿಪಿ ಪೋರ್ಟಲ್ ಮೂಲಕ 7.68 ಲಕ್ಷಗಳು).** ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ (ಮಳೆಗಾಲ ಸೇರಿದಂತೆ): **3 ತಿಂಗಳುಗಳು.**

1. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ವಿವರಗಳು **17.01.2026** ರಿಂದ ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ. **2.** ವಿವಿಧ ಚಟುವಟಿಕೆಗಳಿಗೆ ದಿನಾಂಕಗಳ ವೇಳಾಪಟ್ಟಿ ಈ ಕೆಳಗಿನಂತಿದೆ: (i) ಬೆಂಗಳೂರಿನ ಕೆಆರ್‌ಡಿಸಿಎಲ್ ಮುಖ್ಯ ಕಛೇರಿಯಲ್ಲಿ ದಿನಾಂಕ: **23.01.2026 ರಂದು 16.00 ಗಂಟೆಗೆ** ಪೂರ್ವ–ಬಿಡ್ ಸಭೆ ನಡೆಯಲಿದ್ದು, ಈ ಸಮಯದೊಳಗೆ ಪೂರ್ವ–ಬಿಡ್ ವಿಚಾರಣೆಗಳನ್ನು ಸಲ್ಲಿಸಬೇಕು. (ii) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **31.01.2026 ರಂದು 17.30 ರವರೆಗೆ.** (iii) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸಮಯ ಮತ್ತು ದಿನಾಂಕ **03.02.2026 ರಂದು ಬೆಳಿಗ್ಗೆ 11.00 ಗಂಟೆಗೆ** ಕೆಆರ್‌ಡಿಸಿಎಲ್ ಮುಖ್ಯ ಕಛೇರಿಯಲ್ಲಿ. "ಕೆಆರ್‌ಡಿಸಿಎಲ್ ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಅಂಗೀಕರಿಸಲು ಅಥವಾ ನಿರಾಕರಿಸಲು ಹಕ್ಕು ಹೊಂದಿದೆ".

ಸೂಚನೆ: ಇನ್ನುಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳು ಅಥವಾ ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಳವಡಿಸಲಾಗುವುದು.

ಸಹಿ/– ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/ಎಎಎ/5090/2025–26

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿತ್ರದುರ್ಗ–577501
ಹಳೇ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಕೆ.ಎಸ್.ಆರ್.ಟಿ.ಸಿ. ಡಿಪೋ ರಸ್ತೆ, ಹೆಚ್.ಎಂ.ಟಿ. ಕಾಂಪೌಂಡ್, ಚರ್ಚ್ ಎಕ್ಸ್‌ಟೆನ್ಷನ್, ಚಿತ್ರದುರ್ಗ 577501
ಫೋ:–08194–234113 ಇ–ಮೇಲ್:daochitradurga2021@gmail.com
ಸಂಖ್ಯೆ:ಜಿಆಕಚಿ/14/ಜಿ/ಲೆಕ್ಕ(2)/2025–26 ದಿನಾಂಕ: 17.01.2026

ಮರು ಇ–ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲಾ ಆಯುಷ್ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 4 ಸರ್ಕಾರಿ ಆಯುರ್ವೇದ ಆಸ್ಪತ್ರೆಗಳು ಮತ್ತು 32 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಿಗೆ 2025–26ನೇ ಸಾಲಿಗೆ ಅಗತ್ಯ ಆಯುರ್ವೇದ ಔಷಧಗಳನ್ನು ಸರಬರಾಜು ಮಾಡಲು ಮರು ಇ–ಟೆಂಡರ್ ಮೂಲಕ ಕೆ.ಟಿ.ಪಿ.ಪಿ–2000ರ ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡಂತೆ ಇ–ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರಿನ ಒಟ್ಟು ಮೊತ್ತ ರೂ: 54,80,000/– (2) ಇ.ಎಂ.ಡಿ ಮೊತ್ತ ಟೆಂಡರ್‌ನ ಒಟ್ಟು ಮೊತ್ತಕ್ಕೆ ಶೇ 2.5% ರಂತೆ (Through e-portal only) ರೂ: 1,37,000/– (3) E-Procurement portalನಲ್ಲಿ ಟೆಂಡರ್ ದಾಖಲಾತಿಗಳನ್ನು Download ಮಾಡಿಕೊಳ್ಳಲು ಪ್ರಾರಂಭದ ದಿನಾಂಕ: 17–01–2026 ರಿಂದ (4) ಬಿಡ್ ಪೂರ್ವಭಾವಿ ಸಭೆ (Pre bid meeting) ಮತ್ತು ಔಷಧಗಳ ಮಾದರಿಗಳನ್ನು ಸಲ್ಲಿಸುವ ದಿನಾಂಕ: 23–01–2026ರ ಮಧ್ಯಾಹ್ನ 03:00 ಗಂಟೆಗೆ (5) ಟೆಂಡರ್ ದಾಖಲಾತಿಗಳನ್ನು E-Procurement portal ನಲ್ಲಿ Upload ಮಾಡಲು ಕೊನೆಯ ದಿನಾಂಕ: 31–01–2026ರ ಸಂಜೆ 5:30ಗಂಟೆಗೆ (6) ಟೆಂಡರ್‌ನ ತಾಂತ್ರಿಕ ಲಕೋಟೆ ತೆರೆಯುವ ಸ್ಥಳ: ಜಿಲ್ಲಾ ಆಯುಷ್ ಕಛೇರಿ ಚಿತ್ರದುರ್ಗ ಇಲ್ಲಿ ದಿನಾಂಕ: 02–02–2026 ಪೂರ್ವಾಹ್ನ 11:00 ಗಂಟೆಗೆ (7) ಆರ್ಥಿಕ ಲಕೋಟೆ ತೆರೆಯುವ ದಿನಾಂಕ ತಾಂತ್ರಿಕ ಬಿಡ್‌ಗಳಳ ಪರಿಶೀಲನೆ ನಂತರ ಆರ್ಥಿಕ ಲಕೋಟೆ ತೆಯುವ ದಿನಾಂಕವನ್ನು ನಿಗದಿಪಡಿಸಲಾಗುವುದು. (8) TENDER REFERENCE NUMBER(KPPP) AYD/2025-26/IND0130/CALL-2 ಟೆಂಡರ್ ದಾಖಲಾತಿಗಳನ್ನು E-Procurement portal https://kppp.karnataka.gov.in ಮೂಲಕ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ upload ಮಾಡಲು ಸೂಚಿಸಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಕಛೇರಿ ದೂರವಾಣಿ ಸಂಖ್ಯೆ: 08194–234113 ಕ್ಕೆ ಸಂಪರ್ಕಿಸಬಹುದು.

DIPR/CTA/KSMCA/604/2025-26
ಸಹಿ/–ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆಯುಷ್ ಕಛೇರಿ ಚಿತ್ರದುರ್ಗ.

ಮುಂಬೈ ಧಾರಣೆ (ಶೇಂಗಾ)	
17-01-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಪಾಮ್ ವಾರದ ಡೆಲಿವರಿ	1283 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1505 (1510)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,41,150 (1,40,800)
ಬೆಳ್ಳಿ ಕೆ.ಜಿಗೆ	2,81,700 (2,79,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1345 (1335)
ಸೂರ್ಯಕಾಂತಿ (ರಿಫೈನ್ಡ್)	₹1595 (1575)
ಪಾಮೋಲಿನ್	₹1285 (1275)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹575
	12 ಕ್ಕೆ	₹80
ಮೈಸೂರು:	100 ಕ್ಕೆ	₹575

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹388-751
ದ್ವಿತಳಿ (ಬಿ.ವಿ)	₹360-915

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹169.50

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹26250
ಎಸಿ	₹14420
ಆರ್‌ಪಿ	₹17200
ಆರ್‌ಸಿ	₹10260

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-1700
ಮಧ್ಯಮ	₹800-1400
ಸಣ್ಣ	₹400-800

ನವೋದ್ಯಮಕ್ಕೆ ₹570 ಕೋಟಿ ಮೀಸಲು

‘ನವೋದ್ಯಮ ನೀತಿ 2025–30’ ಅನಾವರಣಗೊಳಿಸಿದ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಶೀಲತೆಗೆ ಮುಂದಿನ ಐದು ವರ್ಷ ಇನ್ನಷ್ಟು ಉತ್ತೇಜನ ನೀಡಿ, ಕರ್ನಾಟಕವನ್ನು ಜಾಗತಿಕ ನಾವೀನ್ಯತೆಯ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯ ‘ನವೋದ್ಯಮ ನೀತಿ 2025–30’ನ್ನು ಅನಾವರಣಗೊಳಿಸಲಾಗಿದೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಪ್ರಕಟಿಸಿದರು.

ರಾಷ್ಟ್ರೀಯ ‘ನವೋದ್ಯಮ ಮಾಸ’ದ ಅಂಗವಾಗಿ ಎಲೆಕ್ಟ್ರಾನಿಕ್ಸ್, ಐ.ಟಿ ಮತ್ತು ಬಿ.ಟಿ ಇಲಾಖೆಯ ಆಶ್ರಯದಲ್ಲಿ ಶನಿವಾರ ನಡೆದ, ನವೋದ್ಯಮಗಳಿಗೆ ನೆರವಾಗುವ ‘ಐಡಿಯಾ2ಪಿಒಸಿ ಎಲಿವೇಟ್ -2025’ ಯೋಜನೆಯ 146 ವಿಜೇತರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಈ ನೀತಿಯನ್ನು ಬಿಡುಗಡೆ ಮಾಡಿದರು.



2025ರ ನವೋದ್ಯಮ ವಿಜೇತರನ್ನು ಸನ್ಮಾನಿಸಿದ ಕಾರ್ಯಕ್ರಮದಲ್ಲಿ ‘ನವೋದ್ಯಮ ನೀತಿ 2025–30’ಅನ್ನು ಸಚಿವ ಪ್ರಿಯಾಂಕ್ ಖರ್ಗೆ ಅನಾವರಣಗೊಳಿಸಿದರು. ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಇದ್ದರು

‘ಈ ನೀತಿ ಜಾರಿಗಾಗಿ ₹570.67 ಕೋಟಿ ಮೀಸಲಿರಿಸಲಾಗಿದ್ದು, 2030ರ ವೇಳೆಗೆ ಬೆಂಗಳೂರು ಹೊರಗಿನ ಕ್ಲಸ್ಟರ್‌ಗಳಲ್ಲಿ ಕನಿಷ್ಠ 10 ಸಾವಿರ ನವೋದ್ಯಮಗಳು ಸೇರಿದಂತೆ ರಾಜ್ಯದಾದ್ಯಂತ 25 ಸಾವಿರ ನವೋದ್ಯಮಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಹಣಕಾಸು, ಪೋಷಣೆ, ಮಾರ್ಗದರ್ಶನ, ಮಾರುಕಟ್ಟೆ ಲಭ್ಯತೆ, ಅಂತರರಾಷ್ಟ್ರೀಯ ಸಹಯೋಗ, ಸೇರ್ಪಡೆ, ಸುಸ್ಥಿರತೆ ಮತ್ತು ನಿಯಂತ್ರಣ ಕ್ರಮಗಳಿಗೆ ನೆರವು ಸೇರಿದಂತೆ ಒಟ್ಟು ಏಳು ಪ್ರಮುಖ ಆಧಾರ ಸ್ತಂಭಗಳನ್ನು ಈ ನೀತಿ ಆಧರಿಸಿದೆ’ ಎಂದರು.

ಮುಖ್ಯಾಂಶಗಳು

- 25 ಸಾವಿರ ನವೋದ್ಯಮ ಸ್ಥಾಪಿಸುವ ಗುರಿ
- ಮಹಿಳೆ ನೇತೃತ್ವದ ಹಾಗೂ ಗ್ರಾಮೀಣ ನವೋದ್ಯಮ-ಗಳಿಗೆ ಆದ್ಯತೆ
- ಎಲ್ಲ ಹಂತಗಳಲ್ಲಿ ನವೋದ್ಯಮಗಳಿಗೆ ಬೆಂಬಲ ಭರವಸೆ

‘ಮಹಿಳೆಯರೇ ನಡೆಸುವ ಉದ್ಯಮಗಳು, ತಳಮಟ್ಟದ ನಾವೀನ್ಯಕಾರರು, ಗ್ರಾಮೀಣ ಉದ್ಯಮಿಗಳು ಮತ್ತು ಸಾಮಾಜಿಕವಾಗಿ ಪ್ರಭಾವ ಬೀರುವ ಉದ್ಯಮಗಳನ್ನು ಬೆಂಬಲಿಸುವ ಮೂಲಕ ಎಲ್ಲರ ಒಳಗೊಳ್ಳುವಿಕೆಗೆ ನೀತಿಯು ಆದ್ಯತೆ ನೀಡಲಿದೆ. ಆರಂಭಿಕ ಪರಿಕಲ್ಪನೆಯಿಂದ ಆರಂಭಿಸಿ ಜಾಗತಿಕ ವಿಸ್ತರಣೆ ಮತ್ತು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಷೇರುಪೇಟೆ ಪ್ರವೇಶಿಸುವ ಹಂತದವರೆಗೂ ನವೋದ್ಯಮಗಳಿಗೆ ಬೆಂಬಲ ನೀಡುವ ರೀತಿಯಲ್ಲಿ ನೀತಿಯನ್ನು ವಿನ್ಯಾಸಗೊಳಿಸಲಾಗಿದೆ’ ಎಂದೂ ಅವರು ವಿವರಿಸಿದರು.

ಮೂರು ಹೊಸ ಉಪಕ್ರಮಗಳ ಘೋಷಣೆ: ನವೋದ್ಯಮ ವ್ಯವಸ್ಥೆ ಬಲಪಡಿಸುವ, ಡೀಪ್‌ಟೆಕ್ ನಾವೀನ್ಯತೆಗೆ ವೇಗ ನೀಡುವ ಮತ್ತು ಬೆಂಗಳೂರಿನ ಆಚೆಗೆ ನವೋದ್ಯಮಗಳ ಸ್ಥಾಪನೆ ಉತ್ತೇಜಿಸಲು ₹75 ಕೋಟಿ ಮೊತ್ತದ ನಿಧಿ ಸ್ಥಾಪಿಸುವ ಮೂರು ಹೊಸ ಉಪಕ್ರಮಗಳನ್ನು ಕಾರ್ಯಕ್ರಮದಲ್ಲಿ ಘೋಷಿಸಲಾಯಿತು.

ಶಾಸಕ ರಿಜ್ವಾನ್ ಅರ್ಷದ್, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಇದ್ದರು. ಕೊ-ರೋವರ್ ಎಐ ಸ್ಥಾಪಕ ಮತ್ತು ಸಿಇಒ ಅಂಕುಶ್ ಸಬರ್‌ವಾಲ್ ಮತ್ತು ಟ್ರಾಷ್‌ಕಾನ್ -ನ ಸ್ಥಾಪಕಿ ಮತ್ತು ಸಿಇಒ ಆರ್.ಎಂ. ನಿವೇದಾ ತಮ್ಮ ನವೋದ್ಯಮಗಳ ಯಶೋಗಾಥೆಗಳನ್ನು ಹಂಚಿಕೊಂಡರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಪೂಜ್ಯ ನೀಲಮ್ಮನವರು
ದಿನಾಂಕ: 18–01–2026
ನಮ್ಮೆಲ್ಲರ ಬದುಕು ರೂಪಿಸಿ, ನಿಮ್ಮ ಸರಳ ನಿಷ್ಕಲ್ಮಷ ಜೀವನವೇ ನಮಗೆ ಆದರ್ಶದ ದಾರಿದೀಪ, ನಿಮ್ಮ ಪವಿತ್ರ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಕರುಣಿಸಲೆಂದು
ನಿಮ್ಮ ನೆನಪಿನಲ್ಲಿರುವ
ಎಂ.ಕೃಷ್ಣಪ್ಪ. ತೀರ್ಥಪ್ರಸಾದ್.ಕೆ. ಡಾ॥ ಸುನೀಲ್ ಕುಮಾರ್. ಕೆ ಮತ್ತು ಕುಟುಂಬ, ಬಂಧು ವರ್ಗದವರು.

ಬಾಲಿವುಡ್‌ನಲ್ಲಿ ಕೋಮುವಾದದ ಕಾರಣಕ್ಕೆ ಕೆಲಸ ಸಿಗುತ್ತಿಲ್ಲ ಎನ್ನುವ ಎ.ಆರ್. ರೆಹಮಾನ್ ಹೇಳಿಕೆಗೆ ನಿಮ್ಮ ಸಹಮತವಿದೆಯೇ?
• ಹೌದು • ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸವಿನೆನಪು

ಶ್ರೀ ಎ.ನಾಗರಾಜರೆಡ್ಡಿಯವರು ಶ್ರೀಮತಿ ಲಕ್ಷ್ಮಮ್ಮನವರು ಶ್ರೀ ಅಬ್ಬಯ್ಯರೆಡ್ಡಿಯವರು
ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ.
ನಮ್ಮ ಏಳಿಗೆಯ ಪ್ರತಿ ಕ್ಷಣದಲ್ಲೂ ನಮ್ಮನ್ನು ಆಶೀರ್ವದಿಸುತ್ತಿರುವ
ನಿಮ್ಮನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ
ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುತ್ತೇವೆ.
ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಮಗ, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಜೆ.ಪಿ.ನಗರ, ಬೆಂಗಳೂರು

‘₹1.53 ಲಕ್ಷ ಕೋಟಿ ಹೂಡಿಕೆ’

ತಯಾರಿಕೆ, ನವೀಕರಿಸಬಹುದಾದ ಇಂಧನ, ಜಿಸಿಸಿ ವಲಯಕ್ಕೆ ಹೆಚ್ಚಿನ ಬಂಡವಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025ರ ಫೆಬ್ರುವರಿಯಲ್ಲಿ ನಡೆದಿದ್ದ ಜಾಗತಿಕ ಹೂಡಿಕೆದಾರರ ಸಮಾವೇಶದ ಭಾಗವಾಗಿ ರಾಜ್ಯಕ್ಕೆ ಹೊಸದಾಗಿ ₹1.53 ಲಕ್ಷ ಕೋಟಿಯಷ್ಟು ಹೂಡಿಕೆ ಹರಿದುಬಂದಿದೆ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಅವರು ತಿಳಿಸಿದರು.

ಎಂ.ಬಿ ಪಾಟೀಲ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ರಾಜ್ಯಕ್ಕೆ ಹೂಡಿಕೆಯನ್ನು ಆಕರ್ಷಿಸಲು ಹಲವು ಹಂತದಲ್ಲಿ ಕೆಲಸ ಮಾಡಲಾಗುತ್ತಿದೆ. ಜಾಗತಿಕ ಹೂಡಿಕೆದಾರರ ಸಮಾವೇಶ, ಏಕ ಗವಾಕ್ಷಿ ವ್ಯವಸ್ಥೆ ಎಲ್ಲದರ ಫಲವಾಗಿ 11 ತಿಂಗಳಲ್ಲಿ ₹1.53 ಲಕ್ಷ ಕೋಟಿ ಬಂಡವಾಳ ರಾಜ್ಯಕ್ಕೆ ಬಂದಿದೆ’ ಎಂದು ಮಾಹಿತಿ ನೀಡಿದರು.

‘ತಯಾರಿಕೆ, ಮರುಬಳಕೆ ಇಂಧನ, ದತ್ತಾಂಶ ಕೇಂದ್ರಗಳು ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರದ (ಜಿಸಿಸಿ) ವಲಯದಲ್ಲಿ ಹೆಚ್ಚಿನ ಬಂಡವಾಳ ಹರಿದುಬರುತ್ತಿದೆ. ದೇಶ ಮತ್ತು ವಿದೇಶಗಳ ಅಗ್ರಗಣ್ಯ ಉದ್ಯಮಗಳು ಈ ಕ್ಷೇತ್ರದಲ್ಲಿ ಹೂಡಿಕೆಗೆ ಕಾರ್ಯಯೋಜನೆ ರೂಪಿಸಿವೆ. ಕೆಲವೇ ದಿನಗಳಲ್ಲಿ ಇವೆಲ್ಲವೂ ಅನುಷ್ಠಾನಗೊಳ್ಳಲಿವೆ’ ಎಂದರು ವಿವರಿಸಿದರು.

‘ದೇವನಹಳ್ಳಿಯಲ್ಲಿ ದತ್ತಾಂಶ ಕೇಂದ್ರ ಸ್ಥಾಪನೆಗೆ ಎನ್‌ಟಿಟಿಯಿಂದ ₹4,000 ಕೋಟಿ, ನಂಜನಗೂಡಿನಲ್ಲಿ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ತಯಾರಿಕೆಗೆ ಎಟಿ ಆ್ಯಂಡ್ ಎಸ್‌ನಿಂದ ₹2,850 ಕೋಟಿ, ಗೂಗಲ್‌ನಿಂದ ಬೆಂಗಳೂರಿನಲ್ಲಿ ₹2,500 ಕೋಟಿ, ಎಸ್‌ಎಪಿಯಿಂದ ದೇವನಹಳ್ಳಿಯಲ್ಲಿ ₹1,960 ಕೋಟಿ ಹೂಡಿಕೆ ಮತ್ತು ಮಂಗಳೂರು, ಹುಬ್ಬಳ್ಳಿಯಲ್ಲಿ ದತ್ತಾಂಶ ಕೇಂದ್ರ ಸ್ಥಾಪನೆಗೆ ಡೇಟಾ ಸಮುದ್ರ ಕಂಪನಿಯಿಂದ ₹1,350 ಕೋಟಿ ಹೂಡಿಕೆ ಆಗಲಿದೆ’ ಎಂದು ತಿಳಿಸಿದರು.

ಹೆಚ್ಚು ಬಂಡವಾಳ ಆಕರ್ಷಿಸಿದ ವಲಯಗಳು

₹66,293 ಕೋಟಿ	ತಯಾರಿಕೆ ವಲಯ
₹6,350 ಕೋಟಿ	ದತ್ತಾಂಶ ಕೇಂದ್ರಗಳು
₹12,500 ಕೋಟಿ	ಜಾಗತಿಕ ಸಾಮರ್ಥ್ಯ ಕೇಂದ್ರ
₹20,913 ಕೋಟಿ	ನವೀಕರಿಸಬಹುದಾದ ಇಂಧನ

‘ಜಿಗಣಿಯಲ್ಲಿ ಪೆಟ್ರೋಲ್ ಮತ್ತು ಹೈಬ್ರಿಡ್ ಎಂಜಿನ್ ತಯಾರಿಕಾ ಘಟಕ ವಿಸ್ತರಣೆಗೆ ಟೋಯಾಟಾದಿಂದ ₹1,330 ಕೋಟಿ, ಕ್ಯುಪೈಎಐ ಕಂಪನಿಯು ಬೆಂಗಳೂರಿನಲ್ಲಿ ಕ್ವಾಂಟಂ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗೆ ₹1,136 ಕೋಟಿ, ಪಿಸಿಬಿಯ ತಾಮ್ರದ ಲ್ಯಾಮಿನೇಟ್ ತಯಾರಿಕಾ ಘಟಕ ಸ್ಥಾಪನೆಗೆ ವಿಪ್ರೊದಿಂದ ₹499 ಕೋಟಿ ಮತ್ತು ಝಿನ್–ಪ್ರೋಲ್ಡ್ ಬಯೋಸೈನ್ಸಸ್ ಲಿಮಿಟೆಡ್‌ನಿಂದ ಔಷಧ ಕಚ್ಚಾವಸ್ತುಗಳ ತಯಾರಿಕಾ ಘಟಕ ಸ್ಥಾಪನೆಗೆ ₹490 ಕೋಟಿ ಹೂಡಿಕೆ ಆಗಲಿದೆ’ ಎಂದು ವಿವರಿಸಿದರು.

₹4.71 ಲಕ್ಷ ಕೋಟಿ ಈಗಾಗಲೇ ಹೂಡಿಕೆ: ‘2025ರ ಫೆಬ್ರುವರಿಯಲ್ಲಿ ನಡೆಸಿದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹10.27 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಭರವಸೆ ಸಿಕ್ಕಿತ್ತು. ಈ ಪೈಕಿ, ಡಿಸೆಂಬರ್ ಅಂತ್ಯದ ವೇಳೆಗೆ ₹4.71 ಲಕ್ಷ ಕೋಟಿ ಹೂಡಿಕೆ ಆಗಿದೆ’ ಎಂದು ಎಂ.ಬಿ.ಪಾಟೀಲ ಅವರು ಈ ಹಿಂದೆ ತಿಳಿಸಿದ್ದರು.

ಡಿಸೆಂಬರ್ ತ್ರೈಮಾಸಿಕ ಫಲಿತಾಂಶ ಪ್ರಕಟಿಸಿದ ಬ್ಯಾಂಕ್‌ಗಳು

ಐಸಿಐಸಿಐ ಲಾಭ ಇಳಿಕೆ, ಎಚ್‌ಡಿಎಫ್‌ಸಿ ಏರಿಕೆ

ಮುಂಬೈ (ಪಿಟಿಐ): ಖಾಸಗಿ ವಲಯದ ಎರಡನೆಯ ಅತಿದೊಡ್ಡ ಬ್ಯಾಂಕ್ ಆಗಿರುವ ಐಸಿಐಸಿಐ ಬ್ಯಾಂಕ್‌ನ ಡಿಸೆಂಬರ್ ತ್ರೈಮಾಸಿಕದ ಫಲಿತಾಂಶವು ಶೇ 2.68ರಷ್ಟು ಕಡಿಮೆ ಆಗಿ ₹12,537 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಐಸಿಐಸಿಐ ಬ್ಯಾಂಕ್ ₹12,883 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಲಾಭ ₹13,537 ಕೋಟಿ ಆಗಿತ್ತು.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಕೆ ಮಾಡಿದರೆ ಶೇ 7.7ರಷ್ಟು ಹೆಚ್ಚಳ ಕಂಡಿದ್ದು ₹21,932 ಕೋಟಿ ಆಗಿದೆ. ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣವು ಶೇ 11.5ರಷ್ಟು ಹೆಚ್ಚಾಗಿದೆ.

ಹೊಸ ಕಾರ್ಮಿಕ ಸಂಹಿತೆಗಳ ಜಾರಿಗಾಗಿ ಬ್ಯಾಂಕ್ ₹145 ಕೋಟಿ ತೆಗೆದಿರಿಸಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಏರಿಕೆ: ಎಚ್‌ಡಿಎಫ್‌ಸಿ ಬ್ಯಾಂಕ್‌ನ ಡಿಸೆಂಬರ್ ತ್ರೈಮಾಸಿಕದ ಲಾಭವು ಶೇ 12.17ರಷ್ಟು ಹೆಚ್ಚಳ ಕಂಡಿದ್ದು ₹19,807 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹17,657 ಕೋಟಿ ಲಾಭ ಕಂಡಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹19,611 ಕೋಟಿ ಲಾಭ ಗಳಿಸಿದೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಶೇ 6.4ರಷ್ಟು ಹೆಚ್ಚಳವಾಗಿ ₹32,600 ಕೋಟಿಗೆ ತಲುಪಿದೆ. ಬಡ್ಡಿಯೇತರ ವರಮಾನವು ₹13,250 ಕೋಟಿ ಆಗಿದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಮಿಕ ಸಂಹಿತೆಗಳ ಅನುಷ್ಠಾನದ ಕಾರಣದಿಂದಾಗಿ ಬ್ಯಾಂಕ್ ಈ ತ್ರೈಮಾಸಿಕ-ದಲ್ಲಿ ಹೆಚ್ಚುವರಿಯಾಗಿ ₹800 ಕೋಟಿ ವೆಚ್ಚ ಮಾಡಬೇಕಾಯಿತು.

ಪರಸ್ಪರ ಗೌರವದ ಪ್ರತೀಕವಿದು: ಅಮೆರಿಕ ಅಧ್ಯಕ್ಷ ಟ್ರಂಪ್

ಟ್ರಂಪ್‌ಗೆ ‘ನೊಬೆಲ್’ ಹಸ್ತಾಂತರಿಸಿದ ಮರಿಯಾ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ವೆನೆಜುವೆಲಾದ ವಿರೋಧಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರು ತಮಗೆ ದೊರಕಿದ್ದ ನೊಬೆಲ್ ಶಾಂತಿ ಪುರಸ್ಕಾರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸಮರ್ಪಿಸಿದ್ದಾರೆ.

ಪುರಸ್ಕಾರವನ್ನು ಹಸ್ತಾಂತರಿಸುವುದಾಗಿ ಈ ಹಿಂದೆಯೇ ಹೇಳಿದ್ದ ಮಾರಿಯಾ, ಶ್ವೇತಭವನದಲ್ಲಿ ಟ್ರಂಪ್ ಅವರನ್ನು ಭೇಟಿ ಮಾಡಿ ನೊಬೆಲ್ ಪದಕವನ್ನು ನೀಡಿದರು.

ಈ ಬಗ್ಗೆ ‘ಟ್ರುತ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ‘ಮಾರಿಯಾ ಒಬ್ಬ ಅದ್ಭುತ ಮಹಿಳೆ. ನಾನು ಮಾಡಿರುವ ಕೆಲಸವನ್ನು ಗುರುತಿಸಿ ಮಾರಿಯಾ ಅವರು ನೊಬೆಲ್ ಶಾಂತಿ ಪುರಸ್ಕಾರವನ್ನು ನನಗೆ ನೀಡಿದ್ದಾರೆ. ಇದು ಪರಸ್ಪರ ಗೌರವದ ಪ್ರತೀಕವಾಗಿದೆ’ ಎಂದು ಹೇಳಿದ್ದಾರೆ.

'ವೆನೆಜುವೆಲಾದ ಸ್ವಾತಂತ್ರ್ಯಕ್ಕಾಗಿ ಗಟ್ಟಿ ನಿರ್ಧಾರವನ್ನು ಕೈಗೊಂಡ ಟ್ರಂಪ್ ಅವರಿಗೆ ಅಲ್ಲಿನ ನಾಗರಿಕರ ಪರವಾಗಿ ನಾನು ಗೌರವ ಸಲ್ಲಿಸಿದ್ದೇನೆ. ಟ್ರಂಪ್ ಅವರ ಧೈರ್ಯವನ್ನು ವೆನೆಜುವೆಲಾದ ನಾಗರಿಕರು ಎಂದಿಗೂ ಮರೆಯುವುದಿಲ್ಲ’ ಎಂದು ಮಾರಿಯಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾರಿಯಾ ಕೊರಿನಾ ಮಚಾದೊ ಅವರು ನೊಬೆಲ್ ಶಾಂತಿ ಪುರಸ್ಕಾರವನ್ನು ಡೊನಾಲ್ಡ್ ಟ್ರಂಪ್ ಅವರಿಗೆ ಹಸ್ತಾಂತರಿಸಿದರು ಪಿಟಿಐ ಚಿತ್ರ

‘ನೊಬೆಲ್ ಹಸ್ತಾಂತರಿಸಲಾಗದು’

‘ನೊಬೆಲ್ ಪುರಸ್ಕಾರವನ್ನು ಬೇರೆಯವರಿಗೆ ವರ್ಗಾಯಿಸಲು ಸಾಧ್ಯವಿಲ್ಲ’ ಎಂದು ನಾರ್ವೆಯ ನೊಬೆಲ್ ಸಮಿತಿ ಹೇಳಿರುವುದಾಗಿ ನೊಬೆಲ್ ಶಾಂತಿ ಕೇಂದ್ರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

‘ನೊಬೆಲ್ ಪುರಸ್ಕಾರ ಒಮ್ಮೆ ಘೋಷಣೆಯಾದರೆ. ಬದಲಿ ಹೆಸರನ್ನು ಘೋಷಿಸಲು, ಹಂಚಿಕೊಳ್ಳಲು ಮತ್ತು ಹಸ್ತಾಂತರಿಸಲು ಸಾಧ್ಯವಿಲ್ಲ. ಈ ನಿರ್ಧಾರ ಸಾರ್ವಕಾಲಿಕವಾದದ್ದು. ಪದಕವನ್ನು ಹಸ್ತಾಂತರಿಸಬಹುದು ಆದರೆ, ನೊಬೆಲ್ ಪುರಸ್ಕೃತರೆಂಬ ಹೆಸರನ್ನು ಹಸ್ತಾಂತರಿಸಲು ಸಾಧ್ಯವಿಲ್ಲ’ ಎಂದು ಸಮಿತಿ ಹೇಳಿದೆ.

ಡಿಕೆಶಿ ದಾವೋಸ್ ಪ್ರವಾಸ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ ಇದೇ 19 ರಿಂದ ನಡೆಯಲಿರುವ ವಿಶ್ವ ಆರ್ಥಿಕ ಶೃಂಗ ಸಭೆಗೆ ತೆರಳದಿರಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ಧರಿಸಿದ್ದಾರೆ.

ಡಿ.ಕೆ. ಶಿವಕುಮಾರ್

ಬೆಂಗಳೂರು ಮತ್ತು ನವದೆಹಲಿಯಲ್ಲಿ ಈಗಾಗಲೇ ನಿಗದಿಯಾಗಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉದ್ದೇಶದಿಂದ ದಾವೋಸ್ ಪ್ರವಾಸವನ್ನು ಶಿವಕುಮಾರ್ ರದ್ದುಪಡಿಸಿ ದ್ದಾರೆ ಎಂದು ಉಪ ಮುಖ್ಯಮಂತ್ರಿ ಕಚೇರಿಯ ಮೂಲಗಳು ತಿಳಿಸಿವೆ.

ಎಐಸಿಸಿ ನಾಯಕರ ಜೊತೆ ಸರಣಿ ಸಭೆಗಳು, ನರೇಗಾ ಕಾಯ್ದೆ ಮರು ಜಾರಿಗೆ ಆಗ್ರಹಿಸಿ ಕೇಂದ್ರ ಸರ್ಕಾರದ ವಿರುದ್ಧ ಅಭಿಯಾನ ಮತ್ತು ಇದೇ 22ರಿಂದ ನಡೆಯಲಿರುವ ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ಶಿವಕುಮಾರ್ ಭಾಗವಹಿಸಲಿದ್ದಾರೆ. ಹೀಗಾಗಿ, ದಾವೋಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಿಲ್ಲ ಎಂದೂ ಮೂಲಗಳು ಹೇಳಿವೆ.

ಗ್ರೀನ್‌ಲ್ಯಾಂಡ್ ವಶಕ್ಕೆ ಪಡೆಯುವ ನಿರ್ಧಾರಕ್ಕೆ ಬೆಂಬಲ ನೀಡದ ರಾಷ್ಟ್ರಗಳಿಗೆ ತೆರಿಗೆ ಬಿಸಿ

ಶೇ 10ರಷ್ಟು ಹೆಚ್ಚುವರಿ ತೆರಿಗೆ ವಿಧಿಸಿದ ಟ್ರಂಪ್

ಪಾಮ್ ಬೀಚ್ (ಎಎಫ್‌ಪಿ/ಪಿಟಿಐ): ಗ್ರೀನ್‌ಲ್ಯಾಂಡ್ ಅನ್ನು ವಶಕ್ಕೆ ಪಡೆಯುವ ತಮ್ಮ ನಿರ್ಧಾರಕ್ಕೆ ಬೆಂಬಲ ನೀಡದ ಯೂರೋಪಿನ ಕೆಲವು ರಾಷ್ಟ್ರಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶೇ 10ರಷ್ಟು ಹೆಚ್ಚುವರಿ ಸುಂಕ ವಿಧಿಸಿದ್ದಾರೆ. ಈಗಾಗಲೇ ಈ ದೇಶಗಳ ಮೇಲೆ ಅಮೆರಿಕ ಶೇ 15ರಷ್ಟು ತೆರಿಗೆ ವಿಧಿಸಿದ್ದು, ಹೆಚ್ಚುವರಿ ತೆರಿಗೆ ಮೂಲಕ ಈ ದರವು ಶೇ 25ಕ್ಕೆ ಏರಿಕೆಯಾಗಲಿದೆ.

ಫೆಬ್ರುವರಿ 1ರಿಂದ ಹೊಸ ತೆರಿಗೆ ದರ ಜಾರಿಗೆ ಬರಲಿದೆ. ‘ಗ್ರೀನ್‌ಲ್ಯಾಂಡ್ ಅನ್ನು ಮಾರಾಟ ಮಾಡುವ ವಿಚಾರವಾಗಿ ಈ ರಾಷ್ಟ್ರಗಳು ‘ಮಾತುಕತೆ ಮೇಜಿ’ನ ಬಳಿಗೆ ಬರುವವರೆಗೂ ಹೆಚ್ಚುವರಿ ಸುಂಕ ಜಾರಿಯಲ್ಲಿರಲಿದೆ’ ಎಂದು ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ.

ಟ್ರಂಪ್ ಒತ್ತಡಕ್ಕೆ ಮಣಿಯದೆ, ಡೆನ್ಮಾರ್ಕ್ ಬೆಂಬಲಕ್ಕೆ ನಿಂತಿರುವ ನ್ಯಾಟೊ ಸದಸ್ಯರಾದ ನಾರ್ವೆ, ಸ್ವೀಡನ್, ಫ್ರಾನ್ಸ್, ಜರ್ಮನಿ, ಬ್ರಿಟನ್, ನೆದರ್ಲೆಂಡ್ಸ್, ಫಿನ್ಲೆಂಡ್ ರಾಷ್ಟ್ರಗಳಿಗೆ ತೆರಿಗೆ ಬಿಸಿ ತಟ್ಟಲಿದೆ. ಗ್ರೀನ್‌ಲ್ಯಾಂಡ್ ವಿಷಯದಲ್ಲಿ ಈ ರಾಷ್ಟ್ರಗಳು ಪಟ್ಟು ಸಡಿಲಿಸಿದ್ದರೆ ಈಗಿನ ಶೇ 10ರಷ್ಟು ತೆರಿಗೆಯನ್ನು ಜೂನ್ 1ರಿಂದ ಶೇ 25ಕ್ಕೆ ಹೆಚ್ಚಿಸಲಾಗುವುದು’ ಎಂದೂ ಟ್ರಂಪ್ ಎಚ್ಚರಿಸಿದ್ದಾರೆ. ಇನ್ನು 5 ತಿಂಗಳಲ್ಲಿ ಗ್ರೀನ್‌ಲ್ಯಾಂಡ್‌ನ ಸಂಪೂರ್ಣ ಖರೀದಿಯ ಒಪ್ಪಂದ ಆಗಲೇಬೇಕು ಎಂದೂ ಅವರು ಹೇಳಿದ್ದಾರೆ.

ಅಮೆರಿಕ ವಿರುದ್ಧ ಪ್ರತಿಭಟನೆ (ಕೋಪೆನ್‌ಹೆಗನ್ ವರದಿ): ಗ್ರೀನ್‌ಲ್ಯಾಂಡ್ ಅನ್ನು ವಶಪಡಿಸಿಕೊಳ್ಳುವ ಅಮೆರಿಕ ಅಧ್ಯಕ್ಷ ಟ್ರಂಪ್ ಪ್ರಯತ್ನವನ್ನು ವಿರೋಧಿಸಿ ಸಾವಿರಾರು ಜನರು ಡೆನ್ಮಾರ್ಕ್‌ನ ರಾಜಧಾನಿ ಕೋಪೆನ್‌ಹೆಗನ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಪ್ರತಿಭಟನಕಾರರು ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್ ಧ್ವಜ ಹಿಡಿದುಕೊಂಡಿದ್ದರಿಂದ ಕೋಪೆನ್‌ಹೆಗನ್‌ನ ರಸ್ತೆಗಳು ಕೆಂಪು ಮತ್ತು ಬಿಳಿ ಸಮುದ್ರದಂತೆ ಕಾಣುತ್ತಿತ್ತು. ಅಮೆರಿಕ ರಾಯಭಾರ ಕಚೇರಿಯವರೆಗೆ ನಡೆದ ಮೆರವಣಿಗೆಯುದ್ದಕ್ಕೂ ‘ಗ್ರೀನ್‌ಲ್ಯಾಂಡ್ ನಮ್ಮದು’ ಎಂಬ ಘೋಷಣೆಗಳು ಮೊಳಗಿದವು.

ಕೋಪೆನ್‌ಹೆಗನ್, ಆರ್‌ಹಸ್, ಅಲ್‌ಬೋರ್ಗ್, ಒಡೆನ್ಸೆ ಮತ್ತು ಗ್ರೀನ್‌ಲ್ಯಾಂಡ್ ರಾಜಧಾನಿ ನೂಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ಭಾಗಿಯಾಗುವ ಬಗ್ಗೆ ಸಾವಿರಾರು ಜನ ಸಾಮಾಜಿಕ ಜಾಲತಾಣದಲ್ಲಿ ಉತ್ಸಾಹ ತೋರಿದ್ದಾರೆ.

ಸುದ್ದಿ 2 ನಿಮಿಷ

ತಂತ್ರಜ್ಞಾನ ಪಾರ್ಕ್‌ಗಳಲ್ಲಿ ಡಿಜಿಟಲ್ ಶಾಖೆ: ಪಿಎನ್‌ಬಿ

ಬೆಂಗಳೂರು: ‘ಬೆಂಗಳೂರಿನ ಪ್ರಮುಖ ತಂತ್ರಜ್ಞಾನ ಪಾರ್ಕ್‌ಗಳಲ್ಲಿ ಡಿಜಿಟಲ್ ಶಾಖೆಗಳನ್ನು ತೆರೆಯಲು ಯೋಜಿಸಲಾಗಿದೆ’ ಎಂದು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಶೋಕ್ ಚಂದ್ರ ಹೇಳಿದ್ದಾರೆ.

ಇದರ ಜೊತೆಗೆ, ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನವೋದ್ಯಮಗಳಿಗೆ ಮೀಸಲಾದ ಶಾಖೆಯನ್ನು ಸ್ಥಾಪಿಸಲಾಗುವುದು. ಈ ಶಾಖೆಯು ಬ್ಯಾಂಕಿಂಗ್ ಸೇವೆಗಳು, ಸಾಲದ ನೆರವು ಮತ್ತು ಹಣಕಾಸಿಗೆ ಸಂಬಂಧಿಸಿದ ಸಲಹೆಗಳನ್ನು ನೀಡಲಿದೆ ಎಂದು ಅವರು ಹೇಳಿರುವುದಾಗಿ ಪ್ರಕಟಣೆ ತಿಳಿಸಿದೆ.

ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ಹೊಸ ಶಾಖೆಗಳನ್ನು ಆರಂಭಿಸುವ ಮೂಲಕ ಬ್ಯಾಂಕ್‌ನ ವಹಿವಾಟನ್ನು ವಿಸ್ತರಿಸಲಾಗುವುದು ಎಂದಿದ್ದಾರೆ.

ಸೇವಾ ಗುಣಮಟ್ಟಕ್ಕೆ ಬ್ಯಾಂಕ್ ಆದ್ಯತೆ ನೀಡುತ್ತಿದ್ದು, ಕ್ಯೂಆರ್ ಕೋಡ್ ಆಧಾರಿತ ಗ್ರಾಹಕ ಪ್ರತಿಕ್ರಿಯೆ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಗ್ರಾಹಕರು ಶಾಖೆಗಳಲ್ಲಿ ಸಿಗುವ ಸೇವೆಗಳ ಕುರಿತು ನೀಡುವ ಪ್ರತಿಕ್ರಿಯೆಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡುತ್ತದೆ. ಈ ಪ್ರತಿಕ್ರಿಯೆಗಳನ್ನು ಬ್ಯಾಂಕ್‌ನ ನೌಕರರ ಕಾರ್ಯಕ್ಷಮತೆಯ ಮೌಲ್ಯಮಾಪನದ ಜೊತೆ ಬೆಸೆಯಲಾಗುತ್ತದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿರುವ ಮಹಿಳೆಯರಿಗೆ ₹10 ಲಕ್ಷ ಮೌಲ್ಯದ ಕ್ಯಾನ್ಸರ್ ವಿಮಾ ರಕ್ಷಣೆ, ಸ್ವ-ಸಹಾಯ ಗುಂಪುಗಳು (ಎಸ್‌ಎಚ್‌ಜಿಗಳು) ಮತ್ತು ಮಹಿಳಾ ಉದ್ಯಮಿಗಳಿಗೆ ಆದ್ಯತೆಯ ಮೇರೆಗೆ ಸಾಲ ನೀಡುವುದು ಸೇರಿದಂತೆ ಮಹಿಳಾ ಗ್ರಾಹಕರಿಗೆ ಬ್ಯಾಂಕ್ ವಿವಿಧ ಯೋಜನೆಗಳನ್ನು ಆರಂಭಿಸಿದೆ ಎಂದಿದ್ದಾರೆ.

ಇಂಡಿಗೊ ಕಂಪನಿಗೆ ₹22.20 ಕೋಟಿ ದಂಡ

ನವದೆಹಲಿ: 2025ರ ಡಿಸೆಂಬರ್‌ನಲ್ಲಿ ಇಂಡಿಗೊ ವಿಮಾನಗಳ ಸೇವೆಯಲ್ಲಿ ಉಂಟಾದ ಭಾರಿ ವ್ಯತ್ಯಯಕ್ಕೆ ಕಾರ್ಯಾಚರಣೆ ವೈಫಲ್ಯ ಕಾರಣ ಎಂದು ಹೇಳಿರುವ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಇಂಡಿಗೊ ಕಂಪನಿಗೆ ಶನಿವಾರ ₹22.20 ಕೋಟಿ ದಂಡ ವಿಧಿಸಿದೆ.

ಕಳೆದ ವರ್ಷದ ಡಿಸೆಂಬರ್ 3ರಿಂದ 5ರವರೆಗೆ ಇಂಡಿಗೊ ವಿಮಾನಗಳ ಸಂಚಾರದಲ್ಲಿ ಭಾರಿ ಪ್ರಮಾಣದ ವ್ಯತ್ಯಯ ಉಂಟಾಗಿತ್ತು. 2,507 ವಿಮಾನಗಳ ರದ್ದು ಮತ್ತು 1,852 ವಿಮಾನಗಳ ಹಾರಾಟ ವಿಳಂಬ ಆಗಿದೆ ಎಂದು ಇಂಡಿಗೊ ತಿಳಿಸಿತ್ತು. ಇದರಿಂದ 3 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದರು.

ನಾಗರಿಕ ವಿಮಾನಯಾನ ಇಲಾಖೆ ನಿರ್ದೇಶನದ ಮೇರೆಗೆ ಡಿಜಿಸಿಎ ನೇಮಿಸಿದ್ದ ನಾಲ್ವರು ಸದಸ್ಯರ ಸಮಿತಿ ನೀಡಿದ ಶಿಫಾರಸುಗಳನ್ನು ಆಧರಿಸಿ ದಂಡ ವಿಧಿಸಲಾಗಿದೆ.

‘ಬೀದಿ ದಾಸಯ್ಯನ ಸಿ.ಎಂ ಮಾಡಿದ್ರೂ ಒಪ್ಪುವೆವು’

ಒಂದನೇ ಪುಟದಿಂದ...

‘ಸಚಿವರಾಗುವ ಆಕಾಂಕ್ಷೆ ಎಲ್ಲರಿಗೂ ಇರುತ್ತದೆ. ಆದರೆ, ಈ ವಿಷಯವನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ಅವರ ದೆಹಲಿ ಭೇಟಿಗೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ. ಇಲಾಖೆ ಕೆಲಸಗಳಿಗಾಗಿ ನಾನೂ ಆಗಾಗ್ಗೆ ದೆಹಲಿಗೆ ಹೋಗುತ್ತೇನೆ. ಆಗ, ಪಕ್ಷದ ವರಿಷ್ಠರ ಭೇಟಿಗೆ ಪ್ರಯತ್ನಿಸುತ್ತೇನೆ’ ಎಂದರು.

ಡಿಕೆಶಿ ದೆಹಲಿ ಭೇಟಿಗೆ ವಿಶೇಷ ಅರ್ಥ ಬೇಡ: ಎಚ್.ಸಿ. ಮಹದೇವಪ್ಪ

ಮೈಸೂರು: ‘ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಅಸ್ಸಾಂ ಚುನಾವಣೆಗೆ ಪಕ್ಷದ ವೀಕ್ಷಕರಾಗಿದ್ದು, ಈ ಬಗ್ಗೆ ಚರ್ಚೆಗೆ ನವದೆಹಲಿಗೆ ಹೋಗಿದ್ದಾರೆ. ಇದಕ್ಕೆ ವಿಶೇಷ ಅರ್ಥ ಬೇಡ’ ಎಂದು ಸಚಿವ ಡಾ.ಎಚ್.ಸಿ. ಮಹದೇವಪ್ಪ ಇಲ್ಲಿ ಹೇಳಿದರು.

ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘2028ರವರೆಗೆ ಸಿದ್ದರಾಮಯ್ಯ ಅವರೇ ಸಿ.ಎಂ ಆಗಿರುತ್ತಾರೆ’ ಎಂದರು.

‘ಬಿಜೆಪಿಯವರು ರಾಜ್ಯದಲ್ಲಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿಲ್ಲ. ಏನೋ ಆಗುತ್ತದೆ ಎಂದು ಸಂದರ್ಭ ಕಾಯುತ್ತಿರುತ್ತಾರೆ. ನಂತರ ಕೈಗೆಟುಕದ ದ್ರಾಕ್ಷಿ ಹುಳಿ ಎಂದು ಹೋಗುತ್ತಾರೆ. ಈಗ ಅದೇ ಆಗುತ್ತಿದೆ’ ಎಂದರು.

‘ನಾಯಕತ್ವ ಗೊಂದಲ ವರಿಷ್ಠರ ಗಮನದಲ್ಲಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಯಕತ್ವ ಗೊಂದಲ ಹೈಕಮಾಂಡ್ ಗಮನದಲ್ಲಿ ಇರುವುದರಿಂದ ನಾವು ಪದೇ ಪದೇ ಮನವಿ ಮಾಡುವ ಅಗತ್ಯವಿಲ್ಲ. ಇದೇ 21ಕ್ಕೆ ನಾನು ದೆಹಲಿಗೆ ತೆರಳುತ್ತಿದ್ದು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡುತ್ತೇನೆ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸತೀಶ ಜಾರಕಿಹೊಳಿ

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ನಾಯಕತ್ವ ವಿಚಾರವಾಗಿ ಹಲವು ಸಚಿವರು ಹಾಗೂ ಶಾಸಕರು ನೀಡುತ್ತಿರುವ ವಿಭಿನ್ನ ಹೇಳಿಕೆಗಳು ಸರ್ಕಾರದ ವರ್ಚಸ್ಸಿಗೆ ಕುಂದು ತರದಂತೆ ನೋಡಿಕೊಳ್ಳಬೇಕಿದೆ’ ಎಂದರು.

‘ನಾಯಕತ್ವ ವಿಚಾರದಿಂದ ಸ್ಥಳೀಯ ಚುನಾವಣೆಗಳಿಗೆ ತೊಂದರೆ ಆಗುವುದಿಲ್ಲ. ಸ್ಥಳೀಯ ನಾಯಕರನ್ನು ನೋಡಿ ಚುನಾವಣೆಯಲ್ಲಿ ಮತ ಹಾಕುತ್ತಾರೆ. ಶಾಸಕರು ಕ್ಷೇತ್ರದಲ್ಲಿ ಉತ್ತಮ ಸಂಬಂಧ ಇಟ್ಟುಕೊಂಡರೆ ಸಮಸ್ಯೆ ಆಗುವುದಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ₹1 ಲಕ್ಷ ಕೋಟಿಗೂ ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ಬೇರೆ ಹಣವಿದೆ’ ಎಂದರು.

ವಿಶೇಷ ಅರ್ಥ ಬೇಡ: ‘ತುಮಕೂರಿನಲ್ಲಿ ನಡೆದ ಕಾರ್ಯಕ್ರಮದ ನಂತರ ಶಾಸಕ ಕೆ.ಎನ್. ರಾಜಣ್ಣ ಅವರ ನಿವಾಸಕ್ಕೆ ಮುಖ್ಯಮಂತ್ರಿ ಭೇಟಿ ನೀಡಿರುವುದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ’ ಎಂದರು.

‘ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನದ ವಿಚಾರದಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಿರ್ಧರಿಸುತ್ತಾರೆ. ಮುಖ್ಯಮಂತ್ರಿ ಸೂಚನೆ ನೀಡಿದ ನಂತರ ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು’ ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Factory

ಕಾಯಿಲ್ ವೈಂಡಿಂಗ್ ಮೆಷಿನ್‌ಗೆ ಆಪರೇಟರ್ಸ್ ಗೆ ಅನುಭವಿಗಳು ಅಥವಾ ಫ್ರೆಶರ್‌ಗಳು ಬೇಕಾಗಿದ್ದಾರೆ. ಕರೆ ಮಾಡಿ 9880882122

Wanted

ಫೀಲ್ಡ್ ಆಫೀಸರ್ ಮತ್ತು ಸೆಕ್ಯುರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದರೆ ಸ್ಥಳ: ಮೈಸೂರು ರೋಡ್ , ಕುಂಬಳಗೂಡು, ಬಿಡದಿ. ಸಂಪರ್ಕಿಸಿ:7259511666/ 9611248555/ 9611630666

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Mangaluru

530 ACRES AGRICULTURE LAND SALE NEAR MANGALORE, INCOME 8cr./ YEAR. PRICE: 13L/ Acre. Call: 9980577227.

ವಾಹನ

Four Wheelers Selling

General Motors/ Chevrolet

MG ELECTRIC Vehicle Model: 2S EV EXCLUSIVE 2022, SINGLE HANDED DRIVEN, INTERESTED PARTY CONTACT: 9019731793

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಭವಿಷ್ಯ

Astrology

ಶಿವಶಕ್ತಿ ಜ್ಯೋತಿಷ್ಯಂ (ಪ್ರೇಮಭವಿಷ್ಯ) ಪ್ರೀತಿಸಿದವರನ್ನು ಮರಳಿ ಸ್ತ್ರೀಪುರುಷ ವಶೀಕರಣ ಮಾಡಿಕೊಡುತ್ತಾರೆ. ಶತ್ರುನಾಶ ಗಂಡಹೆಂಡತಿ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 28.03.2026,11.05.2026 21ದಿನಗಳು, 12.04.2026 12ದಿನಗಳು. ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ ಅರುಣಾಚಲ,ಮೇಘಾಲಯ ಮಣಿಪುರ,ತ್ರಿಪುರ,ನಾಗಲ್ಯಾಂಡ್ ಮಿಝೋರಾಂ. 22.02/03/04/05 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಂಚಲಿಂಗ್ 01.03.2026,22.03.2026, 22.04.2026 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ) ಅಯೋಧ್ಯೆ 28.02.2026,28.03.2026 8ದಿನಗಳು ಕಾಶಿ,ನೈಮಿಷಾರಣ್ಯಾ ಅಯೋಧ್ಯೆ,ಪ್ರಯಾಗ್,ಗಯಾ ದೇವಘರ್.8073824856 9206979202 9606032154

09.01.2026 05.03.2026 04.04.2026 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.03.2026 06.04.2026 ದುಬೈ,ಅಬುದಾಬಿ 5 ದಿನಗಳು. 16.02.2026 10.03.2026 ಶ್ರೀಲಂಕಾ 7 ದಿನಗಳು. 06.02.2026 09.03.2026 04.04.2026 ಭೂತಾನ್ 8 ದಿನಗಳು. 18.02.2026 20.03.2026 04.04.2026 ಅಸ್ಸಾಂ,ಮೇಘಾಲಯ 9 ದಿನಗಳು. 13.03.2026 ಕಾಶಿ,ಗಯಾ,ಅಯೋಧ್ಯೆ 7 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248 7022547922

11.02.2026 ರಿಂದ 9 ದಿನಗಳು ಕಾಶಿ,ಗಯಾ ಅಲಹಾಬಾದ್ ವೈದ್ಯನಾಥ ಜ್ಯೋತಿರ್ಲಿಂಗ. 11.02.2026 ರಿಂದ 3 ದಿನಗಳು. ಕೋನಾರ್ಕ್ ಭುವನೇಶ್ವರ್ ಪುರಿ,ಶಕ್ತಿಪೀಠ ಬೇಡಿಹನುಮಾನ್ ಲಿಂಗರಾಜ್ ದೇವಸ್ಥಾನ. 27.03.2026 ರಿಂದ 12 ದಿನಗಳು ಕುಲುಮನಾಲಿ ಜ್ವಾಲಾಮುಖಿ ಚಾಮುಂಡ ವೈಷ್ಣೋದೇವಿ. 06.04.2026 ರಿಂದ 16 ದಿನಗಳು ಅಷ್ಟಜ್ಯೋತಿರ್ಲಿಂಗ ಭೀಮಾಶಂಕರ್ ಉಜ್ಜಯಿನಿ ಮಹಾಕಾಳೇಶ್ವರ ಸೋಮನಾಥ್ ಓಂಕಾರೇಶ್ವರ. 06.04.2026 ರಿಂದ 5 ದಿನಗಳು ಕಾಶಿ,ಗಯಾ ಅಲಹಾಬಾದ್ ಅಯೋಧ್ಯ. 06.04.2026 ರಿಂದ 10 ದಿನಗಳು ಸಿಕ್ಕಿಂ,ಡಾರ್ಜಲಿಂಗ್ ಹರ್ಭಜನ್ ಮಂದಿರ್ ಗೊಹಾಟಿ ಕಾಮಾಕ್ಯದೇವಿ ಶಕ್ತಿಪೀಠ. 23.04.2026 ರಿಂದ 14 ದಿನಗಳು ದೆಹಲಿ ಹರಿದ್ವಾರ್ ಗಂಗೋತ್ರಿ ಯಮುನೋತ್ರಿ ಬದರಿನಾಥ್ ಕೇದಾರನಾಥ್. 26.06.2026 ರಿಂದ 13 ದಿನಗಳು ವೈಷ್ಣೋದೇವಿ ಅಮರನಾಥ್ ಕಾಶ್ಮೀರ್ ಸಂಪರ್ಕಿಸಿ. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು. 9342287551 9986624447 9986254573

★ಶ್ರೇಯಸ್ ಟೂರ್ಸ್★ 16.01.2026 6ದಿನಗಳು ಸಂಪೂರ್ಣ ಅಹೋಬಲಂ ಶ್ರೀಶೈಲಂ,ಮಹಾನಂದಿ ಮಂತ್ರಾಲಯ,ಇತರೆ. 22.01.2026,22.02.2026 10ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯಪ್ರವಾಸ ವಿಜಯವಾಡ,ಪಂಚರಾಮ ಅನ್ನಾವರಂ,ಪೀಠಾಪುರಂ,ಅರಕು ವಿಶಾಖಪಟ್ಟಣಂ,ಶ್ರೀಕೂರ್ಮಂ ಭದ್ರಾಚಲಂ,ಯಾದಗಿರಿಗುಟ್ಟ ಇತರೆ.01.02.2026 10ದಿನಗಳು ಅಖಂಡ ಉತ್ತರ ಕರ್ನಾಟಕ,ದಾಂಡೇಲಿ,ಸಿರ್ಸಿ ಇತರೆ.12.02.2026 9ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.22.02.2026 10ದಿನಗಳು ಅಖಂಡ ರಾಜಸ್ಥಾನ ರಾಜ್ಯಪ್ರವಾಸ.12.02.2026 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.8073824856 9206979202 9606032154

‘ಇಂದೋರ್ ನೀರಿನ ದುರಂತಕ್ಕೆ ಸರ್ಕಾರ ಹೊಣೆ’

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿಕೆ • ಸಂತ್ರಸ್ತರ ಪ್ರತಿ ಕುಟುಂಬಕ್ಕೆ ಕಾಂಗ್ರೆಸ್‌ನಿಂದ ತಲಾ ₹1 ಲಕ್ಷ

ಇಂದೋರ್ (ಪಿಟಿಐ): ‘ದೇಶದ ಅತ್ಯಂತ ಸ್ವಚ್ಛ ನಗರವೆಂದು ಖ್ಯಾತಿ ಪಡೆದ ಇಂದೋರ್‌ನಲ್ಲಿ ಕಲುಷಿತ ನೀರು ಕುಡಿದು ಜನರು ಸಾಯಲು ಸರ್ಕಾರವೇ ಕಾರಣ. ಇದರಿಂದ ಮಾದರಿ ನಗರಗಳ ಕುರಿತಂತೆ ಅನುಮಾನ ಹುಟ್ಟುಹಾಕಿದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಇಂದೋರ್‌ನ ಭಾಗೀರಥಿಪುರದಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟ ಕುಟುಂಬಸ್ಥರ ಮನೆಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಭೇಟಿ ನೀಡಿ ಸಾಂತ್ವನ ಹೇಳಿದರು —ಪಿಟಿಐ ಚಿತ್ರ

ಇಲ್ಲಿನ ಭಾಗೀರಥಿಪುರದಲ್ಲಿ ಕಲುಷಿತ ನೀರು ಕುಡಿದು ವಾಂತಿ ಹಾಗೂ ಭೇದಿಯಿಂದಾಗಿ ಮೃತಪಟ್ಟ ಕುಟುಂಬದ ಸದಸ್ಯರನ್ನು ಶನಿವಾರ ಭೇಟಿಯಾಗಿ ಸಾಂತ್ವನ ತಿಳಿಸಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಶುದ್ಧ ನೀರು ಸಾರ್ವಜನಿಕರ ಹಕ್ಕು’ ಎಂದು ಪ್ರತಿಪಾದಿಸಿದ್ದಾರೆ.

‘ಇಂದೋರ್ ಅನ್ನು ಕೇಂದ್ರ ಸರ್ಕಾರವು ‘ಮಾದರಿ ಸ್ಮಾರ್ಟ್ ನಗರ’ ಎಂದು ಕರೆದಿದೆ. ಆದರೆ, ಇಲ್ಲಿ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ. ಜನರು ಕೂಡ ಭಯಭೀತರಾಗಿದ್ದಾರೆ’ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಧ್ಯಪ್ರದೇಶದ ಕಾಂಗ್ರೆಸ್ ಘಟಕದ ಅಧ್ಯಕ್ಷ ಜೀತು ಪಟವಾರಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಉಮಂಗ್ ಸಿಂಘಾರ್ ಜೊತೆಗೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕುಟುಂಬದ ಸದಸ್ಯರನ್ನು ಭೇಟಿಯಾಗಿ ಮಾಹಿತಿ ಪಡೆದುಕೊಂಡರು. ಇದಾದ ಬಳಿಕ ಸಮಸ್ಯೆ ಸೃಷ್ಟಿಯಾಗಿದ್ದ ಭಾಗೀರಥಿಪುರಕ್ಕೆ ತೆರಳಿ, ದುರಂತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿ, ಸಾಂತ್ವನ ಹೇಳಿದರು.

‘ಶುದ್ಧ ಕುಡಿಯುವ ನೀರು ಒದಗಿಸುವುದು ಹಾಗೂ ಮಾಲಿನ್ಯ ನಿಯಂತ್ರಣ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದರೆ, ಸರ್ಕಾರವು ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ’ ಎಂದು ಆರೋಪಿಸಿದ್ದಾರೆ.

‘ಇದುವೇ ನಗರ ಮಾದರಿಯಾಗಿದೆ. ಇದು ಕೇವಲ ಇಂದೋರ್‌ಗಷ್ಟೇ ಸೀಮಿತವಲ್ಲ. ಇಡೀ ದೇಶದಾದ್ಯಂತ ಇಂತಹ ಸಮಸ್ಯೆ ಇರುವುದನ್ನು ಕಾಣಬಹುದಾಗಿದೆ’ ಎಂದು ಹೇಳಿದ್ದಾರೆ.

‘ಇಂದೋರ್ ದುರಂತದ ಕುರಿತು ಸರ್ಕಾರದ ಯಾರಾದರೂ ಒಬ್ಬರು ಜವಾಬ್ದಾರಿ ಹೊರಬೇಕು. ಸರ್ಕಾರದ ನಿರ್ಲಕ್ಷ್ಯದಿಂದಲೇ ಜನರು ಅಶುದ್ಧ ನೀರು ಕುಡಿದು ಮೃತಪಟ್ಟಿದ್ದಾರೆ. ಸರ್ಕಾರವು ಸಂತ್ರಸ್ತರಿಗೆ ಎಲ್ಲ ರೀತಿಯ ನೆರವು ನೀಡುವುದರ ಜೊತೆಗೆ ಸೂಕ್ತ ಪರಿಹಾರ ನೀಡಬೇಕು’ ಎಂದು ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ.

‘ದುರಂತದಿಂದ ಜನರು ಮೃತಪಡುತ್ತಿದ್ದರೆ, ಬಿಜೆಪಿ ನಾಯಕರು ತಮ್ಮ ಜವಾಬ್ದಾರಿಯಿಂದ ನುಣುಚಿ ಕೊಳ್ಳಲು ಯತ್ನಿಸುತ್ತಿದ್ದಾರೆ. ಸರ್ಕಾರವು ಅಸೂಕ್ಷ್ಮವಾಗಿ ವರ್ತಿಸುತ್ತಿದ್ದು, ಇದನ್ನು ಸಹಿಸಲು ಸಾಧ್ಯವಿಲ್ಲ. ಸಂತ್ರಸ್ತರ ಜೊತೆಗೆ ನಾವು ನಿಲ್ಲಲಿದ್ದೇವೆ. ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸಿ, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಒದಗಿಸಲು ಹೋರಾಟ ಮಾಡಲಾಗುವುದು’ ಎಂದು ಭರವಸೆ ನೀಡಿದ್ದಾರೆ.

ಅನಿಲ ದುರಂತ ಆರೋಪಿ ಪರಾರಿಯಾಗಲು ‘ಕೈ’ ನೆರವು: ಯಾದವ್

ಮೋಹನ್ ಯಾದವ್

ಭೋಪಾಲ್ (ಪಿಟಿಐ): ‘1984ರಲ್ಲಿ ಭೋಪಾಲ್‌ನ ಯೂನಿಯನ್ ಕಾರ್ಬೈಡ್ ಕಾರ್ಪೊರೇಷನ್ ಕೇಂದ್ರದಿಂದ ಅನಿಲ ದುರಂತ ಸಂಭವಿಸಿ ಸಾವಿರಾರು ಮಂದಿ ಮೃತಪಟ್ಟಿದ್ದರೂ ಆ ಕಂಪನಿಯ ಮಾಲೀಕ ವಾರನ್ ಆ್ಯಂಡರ್ಸನ್‌ಗೆ ಭಾರತ ಬಿಟ್ಟು ಪರಾರಿಯಾಗಲು ಕಾಂಗ್ರೆಸ್ ಪಕ್ಷವೇ ಅವಕಾಶ ಮಾಡಿಕೊಟ್ಟಿತ್ತು’ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಆರೋಪಿಸಿದ್ದಾರೆ.

ಭಾಗೀರಥಿಪುರ ಸಂತ್ರಸ್ತರನ್ನು ರಾಹುಲ್ ಗಾಂಧಿ ಭೇಟಿಯಾಗಲು ಇಂದೋರ್‌ಗೆ ಬಂದಿಳಿದ ಬೆನ್ನಲ್ಲೇ ಅವರು ತಿರುಗೇಟು ನೀಡಿದ್ದಾರೆ.

‘194ರ ಡಿಸೆಂಬರ್ 2 ಹಾಗೂ 3ರಂದು ಸಂಭವಿಸಿದ ಅನಿಲ ದುರಂತದಲ್ಲಿ ಸಾವಿವಾರು ಮಂದಿ ಮೃತಪಟ್ಟಿದ್ದರೂ ರಾಜ್ಯ ಹಾಗೂ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿತ್ತು. ಇದರಿಂದ ಲಕ್ಷಾಂತರ ಮಂದಿ ಜೀವನಪೂರ್ತಿ ಕಾಯಿಲೆಯಿಂದ ನರಳುವಂತಾಯಿತು. ಜಗತ್ತಿನಲ್ಲಿಯೇ ಅತ್ಯಂತ ಕೆಟ್ಟ ಕೈಗಾರಿಕ ದುರಂತದ ಬಳಿಕ ಸಂಸ್ಥೆಯ ಮಾಲೀಕ ಆ್ಯಂಡರ್ಸನ್ ಭಾರತಕ್ಕೆ ಭೇಟಿ ನೀಡಿದ್ದರು. ಆದರೆ, ಇಲ್ಲಿನ ಸರ್ಕಾರದ ನೆರವಿನಿಂದ ಮರಳಿ ಅಮೆರಿಕಕ್ಕೆ ತೆರಳಿದ್ದರು. ವಿಚಾರಣೆಗೂ ಹಾಜರಾಗಿರಲಿಲ್ಲ. 92ರ ವಯಸ್ಸಿನಲ್ಲಿ ಅವರು ಕೊನೆಯುಸಿರೆಳೆದರು’ ಎಂದು ನೆನಪಿಸಿದ್ದಾರೆ.

‘ಆ್ಯಂಡರ್ಸನ್ ಪರಾರಿಯಾಗಲು ನೆರವಾಗುವ ಮೂಲಕ ಕಾಂಗ್ರೆಸ್ ದೊಡ್ಡ ಪಾಪದ ಕೆಲಸ ಮಾಡಿತ್ತು. ಅವರು ಪರಾರಿಯಾಗುವಲ್ಲಿ ಕಾಂಗ್ರೆಸ್ ನಾಯಕರ ಪಾತ್ರವೇ ಪ್ರಮುಖವಾಗಿತ್ತು. ಅವರ ಅಜ್ಜಿ ಹಾಗೂ ತಂದೆ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ನಡೆದ ದುರಂತದ ಕುರಿತು ರಾಹುಲ್ ಗಾಂಧಿ ಅವರು ಕ್ಷಮೆಯಾಚಿಸಿ, ಸಂಪೂರ್ಣ ಜವಾಬ್ದಾರಿ ಹೊರಬೇಕು’ ಎಂದು ಇದೇ ವೇಳೆ ಆಗ್ರಹಿಸಿದ್ದಾರೆ.

> ಶುದ್ಧ ಕುಡಿಯುವ ನೀರು ಜನರ ಹಕ್ಕು. ವಿಷಾದವೆಂದರೆ, ಬಿಜೆಪಿ ಸರ್ಕಾರಕ್ಕೆ ಅದನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

‘ತಾರತಮ್ಯ ನಿವಾರಣಾ ಕಾಯ್ದೆ ಅಗತ್ಯ’

ನವದೆಹಲಿ (ಪಿಟಿಐ): ಭಾರತದಲ್ಲಿ ಶಾಲಾ ಪ್ರವೇಶದ ವೇಳೆ ಈಗಲೂ ಜಾತಿಯೇ ಪ್ರಮುಖ ನಮೂನೆ ಆಗುತ್ತಿದೆ. ಶಿಕ್ಷಣ ಸಂಸ್ಥೆಗಳ ಆವರಣಗಳಲ್ಲಿ ದಲಿತ ಯುವ ಸಮುದಾಯಗಳ ವಾಸ್ತವ ಸ್ಥಿತಿ ಬದಲಾಗಿಲ್ಲ. ಸದ್ಯ ದೇಶಕ್ಕೆ ಜಾತಿ ತಾರತಮ್ಯ ನಿವಾರಣಾ ಕಾಯ್ದೆಯ (ರೋಹಿತ್ ವೇಮುಲ ಕಾಯ್ದೆ) ಅಗತ್ಯ ವಿದೆ ಎಂದು ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ದಲಿತ ವಿದ್ಯಾರ್ಥಿ ರೋಹಿತ್ ವೇಮುಲ ಅವರ 10ನೇ ವರ್ಷದ ಸ್ಮರಣೆ ಅಂಗವಾಗಿ ರಾಹುಲ್ ಗಾಂಧಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ರೋಹಿತ್ ವೇಮುಲ ನಮ್ಮನಗಲಿ 10 ವರ್ಷ ಕಳೆದಿವೆ. ಆದರೆ ಅವರು ಅಂದು ‘ಈ ದೇಶದಲ್ಲಿ ಎಲ್ಲರೂ ಕನಸು ಕಾಣಲು ಸಮಾನ ಹಕ್ಕು ಹೊಂದಿದ್ದಾರೆಯೇ?’ ಎಂದು ಕೇಳಿದ್ದ ಪ್ರಶ್ನೆ ನಮ್ಮ ಹೃದಯದಲ್ಲಿ ಇವತ್ತಿಗೂ ಪ್ರತಿಧ್ವನಿಸುತ್ತಿದೆ’ ಎಂದಿದ್ದಾರೆ.

‘ಇಂದು ದಲಿತ ಯುವಕರ ವಾಸ್ತವ ಸ್ಥಿತಿ ಬದಲಾಗಿದೆಯೇ? ಶಿಕ್ಷಣ ಸಂಸ್ಥೆಗಳಲ್ಲಿ ಅದೇ ನಿಂದನೆ, ಹಾಸ್ಟೆಲ್‌ಗಳಲ್ಲಿ ಅದೇ ಪ್ರತ್ಯೇಕತೆ, ತರಗತಿಗಳಲ್ಲಿ ಅದೇ ಕೀಳರಿಮೆ, ಅದೇ ಹಿಂಸೆ, ಕೆಲವೊಮ್ಮೆ ಅಂಥದ್ದೇ ಸಾವು ಕಾಣುತ್ತಿದ್ದೇವೆ. ದೇಶದಲ್ಲಿ ಜಾತಿಯೇ ದೊಡ್ಡ ಪ್ರವೇಶ ಪತ್ರವಾಗಿರುವುದು ಇದಕ್ಕೆ ಕಾರಣ’ ಎಂದರು.

ಈ ಕಾರಣಕ್ಕಾಗಿಯೇ ರೋಹಿತ್ ವೇಮುಲ ಕಾಯ್ದೆ (ತಾರತಮ್ಯ ನಿವಾರಣಾ ಕಾಯ್ದೆ– ಜಾತಿ ಹಾಗೂ ಗುರುತು ಆಧಾರಿತ ತಾರತಮ್ಯ ನಿರ್ಬಂಧ) ಅಗತ್ಯವಿದೆ. ಇದು ಘೋಷಣೆಯಲ್ಲ, ಇವತ್ತಿನ ಜರೂರು ಎಂದು ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ.

> ಕರ್ನಾಟಕ, ತೆಲಂಗಾಣದ ಕಾಂಗ್ರೆಸ್ ಸರ್ಕಾರಗಳು ರೋಹಿತ್ ವೇಮುಲ ಕಾಯ್ದೆಯನ್ನು ಶೀಘ್ರ ಜಾರಿಗೆ ತರಲಿವೆ
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

ತರಗತಿ ಬಹಿಷ್ಕರಿಸಿದ ವಿದ್ಯಾರ್ಥಿಗಳು

ಹೈದರಾಬಾದ್ (ಪಿಟಿಐ): ರೋಹಿತ್ ವೇಮುಲ ಆತ್ಮಹತ್ಯೆ ಮಾಡಿಕೊಂಡು ಶನಿವಾರಕ್ಕೆ (ಜ.17) 10 ವರ್ಷವಾಗಿದ್ದು, ಇದಕ್ಕಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ, ಕ್ಯಾಂಪಸ್‌ನಲ್ಲಿ ಮೆರವಣಿಗೆ ನಡೆಸಿದರು. ಬಳಿಕ, ಕ್ಯಾಂಪಸ್‌ನ ‘ವೆಲಿವಾಡಾ’ದಲ್ಲಿ ಸೇರಿದರು. ‘ಇಷ್ಟು ವರ್ಷಗಳಾದರೂ ವೇಮುಲ ಅವರಿಗೆ ನ್ಯಾಯ ದೊರಕಿಲ್ಲ’ ಎಂದು ವಿ.ವಿಯ ಅಂಬೇಡ್ಕರ್ ವಿದ್ಯಾರ್ಥಿಗಳ ಸಂಘಟನೆಯ ಉಪಾಧ್ಯಕ್ಷ ದುಷ್ಯಂತ್ ಹೇಳಿದರು.

ಈ ವೇಳೆ, ರೋಹಿತ್ ಅವರ ತಾಯಿ ರಾಧಿಕಾ ವೇಮುಲ, ಕಾಂಗ್ರೆಸ್ ಶಾಸಕ ಗುಜರಾತ್‌ನ ಜಿಗ್ನೇಶ್ ಮೇವಾನಿ ಮತ್ತು ವಿದ್ಯಾರ್ಥಿಗಳು ವೆಲಿವಾಡಾದಲ್ಲಿರುವ ರೋಹಿತ್ ಅವರ ಪುತ್ಥಳಿಗೆ ಹಾರ ಹಾಕಿದರು.

ಚಿಟಿಕೆ ಸುದ್ದಿ

ರಾಷ್ಟ್ರಪತಿ ಭವನ 21ರಿಂದ 29ರವರೆಗೆ ಪ್ರವೇಶ ನಿಷಿದ್ಧ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಮತ್ತು ‘ಬೀಟಿಂಗ್ ರಿಟ್ರೀಟ್’ ಕಾರ್ಯಕ್ರಮದ ಅಂಗವಾಗಿ ರಾಷ್ಟ್ರಪತಿ ಭವನಕ್ಕೆ (ಸರ್ಕ್ಯೂಟ್–1) ಜನವರಿ 21ರಿಂದ 29ರವರೆಗೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದು ರಾಷ್ಟ್ರಪತಿಗಳ ಸಚಿವಾಲಯ ಶನಿವಾರ ತಿಳಿಸಿದೆ.

ಗಣರಾಜ್ಯೋತ್ಸವದ ವಾರ್ಷಿಕ ಮೆರವಣಿಗೆಯನ್ನು ಕರ್ತವ್ಯ ಪಥದಲ್ಲಿ ನಡೆಸಲಾಗುತ್ತದೆ. ಗಣರಾಜ್ಯೋತ್ಸವ ಕಾರ್ಯಕ್ರಮಗಳ ಸಮಾರೋಪದ ಅಂಗವಾಗಿ ವಿಜಯ್ ಚೌಕ್‌ನಲ್ಲಿ ಜ.29ರಂದು ‘ಬೀಟಿಂಗ್ ರಿಟ್ರೀಟ್’ ಕಾರ್ಯಕ್ರಮ ನಡೆಯಲಿದೆ.

ಛತ್ತೀಸಗಢ: ನಾಲ್ವರು ನಕ್ಸಲರ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆ ಮತ್ತು ನಕ್ಸಲರ ನಡುವಿನ ಗುಂಡಿನ ಚಕಮಕಿಯಲ್ಲಿ ದಿಲೀಪ್ ಬೆಡ್ಜಾ ಸೇರಿದಂತೆ ನಾಲ್ವರು ನಕ್ಸಲರು ಮೃತಪಟ್ಟಿದ್ದಾರೆ.

ಬೆಡ್ಜಾ, ಮಾವೋವಾದಿಗಳ ನ್ಯಾಷನಲ್ ಪಾರ್ಕ್ ಪ್ರದೇಶ ಸಮಿತಿಯ ಸಕ್ರಿಯ ಸದಸ್ಯನಾಗಿದ್ದ. ಅನೇಕ ದಾಳಿಗಳಲ್ಲಿ ಭಾಗಿಯಾಗಿದ್ದ. ಮಹಿಳೆ ಸೇರಿದಂತೆ ಮೃತಪಟ್ಟ ಮೂವರು ಅದೇ ಪ್ರದೇಶದವರಾಗಿದ್ದು, ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ. ಘಟನಾ ಸ್ಥಳದಿಂದ ನಕ್ಸಲರ ಮೃತದೇಹ ಮತ್ತು ಬಂದೂಕು ಸೇರಿದಂತೆ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿ ಭದ್ರತಾ ಪಡೆಯ ಜಂಟಿ ತಂಡಗಳು ನಕ್ಸಲ್ ವಿರೋಧಿ ಕಾರ್ಯಾಚರಣೆಯನ್ನು ನಡೆಸಿದ್ದವು ಎಂದು ಅವರು ತಿಳಿಸಿದ್ದಾರೆ.

ಜೈಪುರ ಸಾಹಿತ್ಯ ಉತ್ಸವದ ಮೂರನೇ ದಿನ ಕನ್ನಡ ಸಾಹಿತಿಗಳ ಕಲರವ

ಸುಧಾಮೂರ್ತಿ ಕಥಾ ಮೀಮಾಂಸೆ

• ಶ್ರೀನಾಥ್ ಬಿ.ವಿ.

ಸುಧಾಮೂರ್ತಿ

ವಿವೇಕ ಶಾನಭಾಗ

ಜೈಪುರ: ಜೈಪುರ ಸಾಹಿತ್ಯ ಉತ್ಸವದ 19ನೇ ಆವೃತ್ತಿಯ ಮೂರನೇ ದಿನ ಮೊದಲ ಅವಧಿಯಲ್ಲೇ ಇಬ್ಬರು ಕನ್ನಡ ಲೇಖಕರು ಪ್ರತ್ಯೇಕ ಗೋಷ್ಠಿಗಳಲ್ಲಿ ಗಮನ ಸೆಳೆದದ್ದು ವಿಶೇಷವಾಗಿತ್ತು. ಸುಧಾಮೂರ್ತಿ ಅವರು ಮಕ್ಕಳಿಗಾಗಿ ತಾವು ಬರೆದ ಕಾದಂಬರಿಯ ಬಗ್ಗೆ ವಿಸ್ತೃತವಾಗಿ ಮಾತನಾಡಿದರೆ, ವಿವೇಕ ಶಾನಭಾಗ ಅವರು ಭಾಷಾಂತರದ ಮಹತ್ವದ ಬಗ್ಗೆ ತಮ್ಮ ಒಳನೋಟಗಳನ್ನು ಪ್ರಸ್ತುತಪಡಿಸಿದರು.

ಲಂಡನ್‌ನಲ್ಲಿರುವ ಮೊಮ್ಮಗಳು ನೂನಿಗೆ ಕಥೆ ಹೇಳುವ ಸಲುವಾಗಿಯೇ ತಾವು ‘ಮ್ಯಾಜಿಕ್ ಆಫ್ ದ ಲಾಸ್ಟ್ ಇಯರ್ ರಿಂಗ್ಸ್’ ಕಾದಂಬರಿ ಬರೆದದ್ದಾಗಿ ಸುಧಾಮೂರ್ತಿ ವಿವರಿಸಿದರು. ಮಕ್ಕಳಿಗೆ ಚರಿತ್ರೆಯನ್ನು ಕಥೆಗಳ ರೂಪದಲ್ಲಿ ತಿಳಿಸಬೇಕು. ತಮ್ಮ ಅಳಿಯ ರಿಷಿ ಸುನಕ್ ಅವರ ಪೋಷಕರಿಂದ ಪ್ರೇರಣೆಗೊಂಡು ದೇಶ ವಿಭಜನೆಯ ವಸ್ತುವನ್ನು ಕಥಾವಸ್ತುವಾಗಿ ಆಯ್ಕೆ ಮಾಡಿಕೊಂಡಿದ್ದಾಗಿ ಹೇಳಿದರು. ಮಕ್ಕಳಿಗೆ ತಮ್ಮ ನೆಲ, ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ, ಹೆಮ್ಮೆ ಮೂಡುವಂಥ ಕಥೆಗಳನ್ನು ಹೇಳಬೇಕು ಎಂದು ಪ್ರತಿಪಾದಿಸಿದರು.

‘ನನ್ನ ಕಾದಂಬರಿಗಳಲ್ಲಿ ಮೂರನೇ ಒಂದು ಭಾಗದಷ್ಟು ವಾಸ್ತವಾಂಶಗಳು ಇರುತ್ತವೆ’ ಎಂದ ಅವರು, ‘ಅದಕ್ಕಾಗಿ ಓಡಾಟ, ಸಂಶೋಧನೆ ಮಾಡುತ್ತೇನೆ. ಆದರೆ, ಕಾದಂಬರಿಯಲ್ಲಿ ಯಾವುದು ವಾಸ್ತವ, ಯಾವುದು ಕಲ್ಪನೆ ಎನ್ನುವುದು ಓದುಗರಿಗೆ ತಿಳಿಯದಂತೆ ಬರವಣಿಗೆ ಇರಬೇಕು’ ಎಂದು ತಮ್ಮ ಕಥಾ ಮೀಮಾಂಸೆ ಪ್ರಸ್ತುತಪಡಿಸಿದರು.

‘ಆರಂಭದಲ್ಲಿ ಕನ್ನಡದಲ್ಲಿ ಬರವಣಿಗೆ ಆರಂಭಿಸಿದರೂ, ನಂತರ ಟಿಜೆಎಸ್ ಜಾರ್ಜ್ ಅವರ ಸಲಹೆಯಂತೆ ಇಂಗ್ಲಿಷ್‌ನಲ್ಲಿ ಬರೆಯಲು ಆರಂಭಿಸಿದೆ. ಇಂದು ನೂರು ರೂಪಾಯಿ ನೋಟಿನ ಮೇಲೆ ಎಷ್ಟು ಭಾಷೆಗಳಿವೆಯೋ, ಅಷ್ಟೂ ಭಾಷೆಗಳಿಗೆ ನನ್ನ ಕೃತಿಗಳು ತರ್ಜುಮೆಗೊಂಡಿವೆ’ ಎಂದರು. ತಾವು 50 ಕೃತಿಗಳನ್ನು ರಚಿಸಿದ್ದು, ಅವುಗಳಲ್ಲಿ 25 ಮಕ್ಕಳ ಪುಸ್ತಕಗಳು ಎಂದು ಹೇಳಿದರು.

ಅನುವಾದದ ಸಾಧ್ಯತೆ ಮತ್ತು ಸವಾಲು: ‘ಹೈಪನೇಟೆಡ್ ವರ್ಲ್ಡ್’ ಗೋಷ್ಠಿಯಲ್ಲಿ ವಿವೇಕ ಶಾನಭಾಗ ಅವರೊಂದಿಗೆ ಅನುವಾದಕರಾದ ರೀಟಾ ಕೊಠಾರಿ ಮತ್ತು ಅರುಣವ ಸಿನ್ಹಾ ಭಾಗವಹಿಸಿದ್ದರು.

‘ಕಳೆದ ನಾಲ್ಕು ವರ್ಷಗಳಲ್ಲಿ ಎರಡು ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಗಳನ್ನು ಪಡೆದಿದ್ದು, ಜಗತ್ತಿನಲ್ಲಿ ಎರಡು ಪ್ರಶಸ್ತಿ ಪಡೆದ ಏಕೈಕ ರಾಷ್ಟ್ರ ನಮ್ಮದಾಗಿದೆ. ದೇಶದಲ್ಲಿ ಭಾಷಾಂತರ ಕ್ಷೇತ್ರವು ಪ್ರವರ್ಧಮಾನಕ್ಕೆ ಬರುತ್ತಿದೆ. ಆದರೆ, ತರ್ಜುಮೆಯಲ್ಲಿನ ತೊಡಕುಗಳ ಬಗ್ಗೆ ಮತ್ತು ಭಾಷಾ ರಾಜಕಾರಣದ ಬಗ್ಗೆ ಮತ್ತಷ್ಟು ಗಮನ ನೀಡಬೇಕಿದೆ’ ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ಭಾರತೀಯ ಭಾಷೆಗಳನ್ನು ಜೊತೆಯಾಗಿಸುವ ಸುಸಂಬದ್ಧ ನಿರೂಪಣೆ ಅಥವಾ ಚೌಕಟ್ಟಿನ ಅಗತ್ಯವಿದೆ. ಪ್ರಕಾಶಕರಲ್ಲಿ ವ್ಯವಸ್ಥಿತ ಕಾರ್ಯತಂತ್ರದ ಗೈರು, ಕಾಲಮಿತಿ, ಮಾರುಕಟ್ಟೆ ಆಧಾರಿತ ತೀರ್ಮಾನಗಳಂಥ ಸವಾಲುಗಳಿವೆ ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ಅಂತರಭಾಷಾ ಸಂವಾದಗಳು, ಸಾಂಸ್ಕೃತಿಕ ಕೊಡುಕೊಳ್ಳುವಿಕೆ, ನಿರ್ದಿಷ್ಟ ಭಾಷೆ, ಪ್ರದೇಶದ ರಾಜಕೀಯಕ್ಕೆ ಹೊರತಾದ ವಿನಿಮಯ ಹೆಚ್ಚಾಗಬೇಕು ಎಂದು ಸಂವಾದದಲ್ಲಿ ಭಾಗವಹಿಸಿದ್ದವರು ಅಭಿಪ್ರಾಯಪಟ್ಟರು.

ಗಾಂಧಿ, ಜಿನ್ನಾ, ಸಾವರ್ಕರ್: ಮಹಾತ್ಮ ಗಾಂಧಿ, ಮುಹಮ್ಮದ್ ಅಲಿ ಜಿನ್ನಾ ಮತ್ತು ಸಾವರ್ಕರ್ ಕುರಿತ ಗೋಷ್ಠಿಯಲ್ಲಿ ಲೇಖಕರಾದ ಮಾರ್ಕಂಡ್ ಪರಾಂಜಪೆ, ಅಲೆಕ್ಸ್ ವಾನ್ ಟುಂಜೆಲ್ಮನ್, ಕಿಶ್ವರ್ ದೇಸಾಯಿ ಭಾಗವಹಿಸಿದ್ದರು.

ಗಾಂಧಿ, ಜಿನ್ನಾ ಇಬ್ಬರೂ ಗುಜರಾತ್‌ನವರು. ಇಬ್ಬರೂ ವಕೀಲರು. ಇಬ್ಬರೂ ಕಾನೂನು ಓದಲು ಲಂಡನ್‌ಗೆ ಹೋಗಿದ್ದರು. ಗಾಂಧಿ ಧಾರ್ಮಿಕ ಮನೋಭಾವದವರಾಗಿದ್ದರು. ಗಾಂಧಿ, ಜಿನ್ನಾ, ಸಾವರ್ಕರ್ ಮೂವರೂ ಒಂದೇ ಸಮಯದಲ್ಲಿ ಲಂಡನ್‌ನಲ್ಲಿದ್ದರು. ನಾಸ್ತಿಕರಾಗಿದ್ದ ಸಾವರ್ಕರ್ ಯಾವುದೇ ಧಾರ್ಮಿಕ ಆಚರಣೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಜಿನ್ನಾ ಅವರನ್ನು ಹಿಂದೂ, ಮುಸ್ಲಿಂ ಏಕತೆಯ ಸಂಕೇತ ಎನ್ನುವಂತೆ ಕಾಣಲಾಗುತ್ತಿತ್ತು. ಆದರೆ, ಮುಂದೆ ಸಾವರ್ಕರ್ ಮತ್ತು ಜಿನ್ನಾ ಭಿನ್ನ ಹಾದಿ ತುಳಿದರು ಎನ್ನುವ ವಿಶ್ಲೇಷಣೆ ಸಂವಾದದಲ್ಲಿ ಕೇಳಿಬಂತು.

ಪುಸ್ತಕ ಮಾರಾಟದಲ್ಲಿ ಕರ್ನಾಟಕ ಮುಂದೆ

ದೊಡ್ಡ ಪ್ರಕಾಶನ ಸಂಸ್ಥೆಗಳ ಭವಿಷ್ಯ ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಪ್ರಕಾಶಕ ಅನಂತ ಪದ್ಮನಾಭನ್, ಅತಿ ಹೆಚ್ಚು ಪುಸ್ತಕಗಳು ಮಾರಾಟವಾಗುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು ಎಂದರು.

ಎಐನಂಥ ತಂತ್ರಜ್ಞಾನಗಳಿಂದ ಪುಸ್ತಕೋದ್ಯಮಕ್ಕೆ ಹಲವು ಅನುಕೂಲಗಳಿವೆ. ಜನರ ಆಸಕ್ತಿ, ಅಭಿರುಚಿ ಅರಿಯಬಹುದು, ಮಾರುಕಟ್ಟೆಗೂ ಬಳಸಬಹುದು. ಅದರಿಂದ ಕೆಲವು ಅನನುಕೂಲಗಳೂ ಇವೆ. ಆದರೆ, ಪುಸ್ತಕೋದ್ಯಮವೇ ಕಾಲಕಾಲಕ್ಕೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಲೇ ಮುಂದೆ ಸಾಗುತ್ತಿದೆ. ಈಗಲೂ 10 ಪುಸ್ತಕಗಳ ಪೈಕಿ ಐದು ಪುಸ್ತಕಗಳನ್ನು ಓದುಗರು ಅಂಗಡಿಗಳಿಂದಲೇ ಕೊಳ್ಳುತ್ತಿದ್ದು, ಭವಿಷ್ಯದಲ್ಲಿಯೂ ಪುಸ್ತಕ ಅಂಗಡಿಗಳು ಇರುತ್ತವೆ ಎಂದು ಹೇಳಿದರು.

ಮೇಯರ್ ಪಟ್ಟ ಯಾರಿಗೆ?

ಚರ್ಚೆ ಹುಟ್ಟುಹಾಕಿದ ಶಿವಸೇನಾ ನಾಯಕ ಉದ್ಧವ್ ಹೇಳಿಕೆ


ಉದ್ಧವ್ ಠಾಕ್ರೆ

ಮುಂಬೈ (ಪಿಟಿಐ): ‘ಮುಂಬೈನಲ್ಲಿ ಶಿವಸೇನಾ (ಯುಬಿಟಿ) ಮೇಯರ್ ಪಟ್ಟಕ್ಕೇರಬೇಕು ಎನ್ನುವುದು ನನ್ನ ಕನಸು. ದೇವರು ಸಹಕಾರ ನೀಡಿದರೆ ಈ ಕನಸು ನನಸಾಗುತ್ತದೆ’ ಎಂದು ಶಿವಸೇನಾ (ಯುಬಿಟಿ) ಮುಖಂಡ ಉದ್ಧವ್ ಠಾಕ್ರೆ ಹೇಳಿದ್ದಾರೆ.

ಶನಿವಾರ ಪಕ್ಷದ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ ಅವರು, ‘ದೇವರು ಬಯಸಿದರೆ ಬೃಹನ್ ಮುಂಬೈ ಮಹಾನಗರ ಪಾಲಿಕೆಯ (ಬಿಎಂಸಿ) ಮೇಯರ್ ಪಟ್ಟವನ್ನು ಶಿವಸೇನಾ (ಯುಬಿಟಿ) ಅಲಂಕರಿಸಲಿದೆ’ ಎಂದರು.

ಬಿಎಂಸಿಯಲ್ಲಿ ತನ್ನ ಮೇಯರ್ ಹೊಂದಬೇಕು ಎಂಬ ಬಿಜೆಪಿಯ ದೀರ್ಘ ಕಾಲದ ಕನಸು ನನಸಾಗುವ ಗಳಿಗೆ ಕೂಡಿಬಂದಿರುವ ಬೆನ್ನಲ್ಲೇ, ಠಾಕ್ರೆ ಹೇಳಿಕೆಯು ಹೊಸ ಸಂಚಲನ ಸೃಷ್ಟಿಸಿದೆ. ಮುಂಬೈನ ಮೇಯರ್ ಬಿಜೆಪಿಯೊ ಅಥವಾ ಶಿವಸೇನಾ ಶಿಂದೆ ಬಣದ ಅಭ್ಯರ್ಥಿಯೋ ಎಂಬ ಚರ್ಚೆಯನ್ನೂ ಇದು ಮುನ್ನೆಲೆಗೆ ತಂದಿದೆ.

‘ಶಿವಸೇನಾ ಮುಗಿಸಲು ಸಾಧ್ಯವಿಲ್ಲ’: ‘ಶಿವಸೇನಾವನ್ನು (ಯುಬಿಟಿ) ಮುಗಿಸಿಬಿಟ್ಟೆ ಎಂದು ಬಿಜೆಪಿ ಭಾವಿಸುತ್ತಿದೆ. ಆದರೆ, ವಾಸ್ತವದಲ್ಲಿ ಇದು ಸಾಧ್ಯವಿಲ್ಲ. ಶಿವಸೇನಾವನ್ನು ಮುಗಿಸಲು ಬಿಜೆಪಿ ಎಲ್ಲ ರೀತಿಯಿಂದ ಪ್ರಯತ್ನಿಸಿದರೂ, ‘ನಿಷ್ಠೆ’ಯನ್ನು ಖರೀದಿಸಲು ಆಗಿಲ್ಲ’ ಎಂದು ಠಾಕ್ರೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಬಿಜೆಪಿಯವರು ಮುಂಬೈಯನ್ನು ಒತ್ತೆ ಇಟ್ಟು ದ್ರೋಹದ ಮೂಲಕ ಗೆಲುವು ಗಳಿಸಿದ್ದಾರೆ. ಮರಾಠಿಗರು ಈ ಪಾಪವನ್ನು ಎಂದೂ ಕ್ಷಮಿಸುವುದಿಲ್ಲ. ಯುದ್ಧ ಮುಗಿದಿಲ್ಲ, ಈಗಷ್ಟೇ ಆರಂಭವಾಗಿದೆ’ ಎಂದು ಅವರು ಹೇಳಿದರು.

ದೇಶದ್ರೋಹಿಗಳು (ಬಿಜೆಪಿ–ಏಕನಾಥ ಶಿಂದೆ) ತಾವು ಎಂಥ ಪಾಪ ಮಾಡಿದ್ದೇವೆ ಎನ್ನುವುದನ್ನು ಯೋಚಿಸಬೇಕು’ ಎಂದು ಠಾಕ್ರೆ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನನ್ನದು ಸೋತವನ ಮನಃಸ್ಥಿತಿ ಅಲ್ಲ. ನಾವು ಅವರಿಗೆ ತಕ್ಕ ಉತ್ತರ ನೀಡಿದ್ದೇವೆ’ ಎಂದ ಠಾಕ್ರೆ, ‘ಮುಂಬೈ ಅನ್ನು ಹೇಗೆ ಲೂಟಿ ಮಾಡಲಾಯಿತು ಎನ್ನುವುದನ್ನು ಮುಂದೆ ಶಿವಸೇನಾ (ಯುಬಿಟಿ) ಎಂಎನ್‌ಎಸ್ ಮತ್ತು ಎನ್‌ಸಿಪಿ (ಎಸ್‌ಪಿ) ಕಾರ್ಪೊರೇಟರ್‌ಗಳು ಬಹಿರಂಗಪಡಿಸಲಿದ್ದಾರೆ ಎಂದರು.

ಒಟ್ಟು 227 ಸದಸ್ಯ ಬಲದ ಬಿಎಂಸಿಯಲ್ಲಿ ಶಿವಸೇನಾ ಶಿಂದೆ ಬಣ 29 ಸ್ಥಾನಗಳನ್ನು ಗೆದ್ದಿದ್ದರೆ, ಶಿವಸೇನಾ ಯುಬಿಟಿ 65 ಸ್ಥಾನಗಳನ್ನು ಗೆದ್ದಿದೆ.

ಶಿಂದೆ ಬಣದ ಕಾರ್ಪೊರೇಟರ್‌ಗಳು ಹೋಟೆಲ್‌ಗೆ ಸ್ಥಳಾಂತರ

ಮುಂಬೈ ಮೇಯರ್ ಪಟ್ಟಕ್ಕೆ ಪೈಪೋಟಿ ಬಿರುಸುಗೊಂಡ ಬೆನ್ನಲ್ಲೇ, ಶಿವಸೇನಾ ಶಿಂದೆ ಬಣವು ನೂತನ ಕಾರ್ಪೊರೇಟರ್‌ಗಳನ್ನು ಹೋಟೆಲ್‌ಗೆ ಸ್ಥಳಾಂತರಿಸುವ ನಿರ್ಧಾರ ಕೈಗೊಂಡಿದೆ. ಬಿಎಂಸಿ ಮೇಯರ್ ಆಯ್ಕೆಯಲ್ಲಿ ಬಿಜೆಪಿಗೆ ಶಿಂದೆ ಬಣದ 28 ಕಾರ್ಪೊರೇಟರ್‌ಗಳು ನಿರ್ಣಾಯಕರಾಗಿದ್ದಾರೆ.

ಶಿಂದೆ ಬಣವು ಮುಂಬೈ ಪಾಲಿಕೆಯ 90 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. 29ರಲ್ಲಿ ಜಯಗಳಿಸಿದೆ.

‘ಚುನಾವಣಾ ಗೆಲುವಿನ ಬೆನ್ನಲ್ಲೇ, ಮನೋಲ್ಲಾಸಕ್ಕಾಗಿ ಹೊಸ ಕಾರ್ಪೊರೇಟರ್‌ಗಳನ್ನು ಬಾಂದ್ರಾದ ಐಷಾರಾಮಿ ಹೋಟೆಲ್‌ಗೆ ಸ್ಥಳಾಂತರಿಸಲಾಗಿದೆ’ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ. ಆದರೆ, ಕಾರ್ಪೊರೇಟರ್‌ಗಳು ಎಷ್ಟು ದಿನ ಹೋಟೆಲ್‌ನಲ್ಲಿ ಉಳಿಯಲಿದ್ದಾರೆ, ಈ ಸ್ಥಳಾಂತರದ ಹಿಂದಿನ ಉದ್ದೇಶವೇನು ಎನ್ನುವುದನ್ನು ಅವರು ಖಚಿತಪಡಿಸಿಲ್ಲ.

ಮುಖ್ಯಾಂಶಗಳು

- ಮುಂಬೈಯನ್ನು ಒತ್ತೆ ಇಟ್ಟು ದ್ರೋಹದಿಂದ ಗೆದ್ದ ಬಿಜೆಪಿ: ಆರೋಪ
- ಈ ಪಾಪವನ್ನು ಮರಾಠಿಗರು ಎಂದೂ ಕ್ಷಮಿಸರು: ಯುಬಿಟಿ
- ‘ಯುದ್ಧ ಈಗಷ್ಟೇ ಆರಂಭ’

‘ಅತ್ಯಾಚಾರದಿಂದ ತೀರ್ಥಯಾತ್ರೆಯ ಫಲ’

ಫೂಲ್ ಸಿಂಹ ಬರೈಯಾ

ಭೋಪಾಲ್ (ಪಿಟಿಐ): ‘ಅತ್ಯಾಚಾರ ನಡೆಯಲು ಮಹಿಳೆಯರ ಸೌಂದರ್ಯವೇ ಕಾರಣ’ ಎಂದು ಮಧ್ಯಪ್ರದೇಶದ ಭಂಡೇರ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಫೂಲ್ ಸಿಂಹ ಬರೈಯಾ ಹೇಳಿಕೆ ನೀಡಿದ್ದು, ಭಾರಿ ವಿವಾದ ಸೃಷ್ಟಿಸಿದೆ.

‘ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗದ ಸಮುದಾಯಗಳ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಎಸಗಿದರೆ, ತೀರ್ಥಯಾತ್ರೆ ಮಾಡಿದ ಫಲ ಸಿಗುತ್ತದೆ ಎಂದು ಧರ್ಮ ಗ್ರಂಥದಲ್ಲಿ ಉಲ್ಲೇಖಿಸಿರುವುದರಿಂದ ಆ ರೀತಿ ಅತ್ಯಾಚಾರವೆಸಗಲಾಗುತ್ತಿದೆ’ ಎಂದು ತಮ್ಮ ಹೇಳಿಕೆಗೆ ಸಮರ್ಥನೆ ನೀಡಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇಂದೋರ್‌ಗೆ ಭೇಟಿ ನೀಡಿದ ಸಂದರ್ಭದಲ್ಲೇ ಫೂಲ್ ಸಿಂಹ ಅವರು ನೀಡಿದ ಹೇಳಿಕೆಯು ಮುನ್ನೆಲೆಗೆ ಬಂದಿದೆ. ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು ಈ ಹೇಳಿಕೆ ನೀಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಮುಖ್ಯಮಂತ್ರಿ ಖಂಡನೆ: ‘ರಾಹುಲ್ ಗಾಂಧಿ ಅವರು ಇಂದೋರ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿಯೇ ಕಾಂಗ್ರೆಸ್ ಶಾಸಕರೊಬ್ಬರು ಸಮಾಜದಲ್ಲಿ ದ್ವೇಷ ಹರಡುತ್ತಿದ್ದಾರೆ’ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ತಿಳಿಸಿದ್ದಾರೆ.

‘ಶಾಸಕ ಫೂಲ್ ಸಿಂಹ ಅವರನ್ನು ಪಕ್ಷದಿಂದ ಹೊರಹಾಕುತ್ತಾರೆ ಎಂದು ಭಾವಿಸುತ್ತೇನೆ. ಆಗ ಮಾತ್ರ ಸಮಾಜದಲ್ಲಿರುವ ಎಲ್ಲ ಸಮುದಾಯಗಳ ಬಗ್ಗೆ ಅವರಿಗೆ ಗೌರವವಿದೆ ಎಂದು ನಂಬುತ್ತೇನೆ’ ಎಂದು ಹೇಳಿದ್ದಾರೆ.

ವಾರಾಣಸಿಯಲ್ಲಿ ದೇಗುಲ ಕೆಡವಿಲ್ಲ: ಯೋಗಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಯೋಗಿ ಆದಿತ್ಯನಾಥ್

ಲಖನೌ: ‘ವಾರಾಣಸಿಯಲ್ಲಿ (ಕಾಶಿ) ಯಾವುದೇ ದೇಗುಲವನ್ನು ಕೆಡವಿಲ್ಲ’ ಎಂದು ಸ್ಪಷ್ಟಪಡಿಸಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ‘ಜನರ ಭಾವನೆಗಳನ್ನು ಕೆರಳಿಸಲು ಕೃತಕ ಬುದ್ಧಿಮತ್ತೆಯಿಂದ(ಎಐ) ಸೃಷ್ಟಿಸಿರುವ ವಿಡಿಯೊಗಳನ್ನು ಬಳಸಲಾಗುತ್ತಿದೆ’ ಎಂದು ಆರೋಪಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಐ ವಿಡಿಯೊ ಗಳ ಮೂಲಕ ತಪ್ಪು ಮಾಹಿತಿ ಹಂಚ ಲಾಗುತ್ತಿದೆ. ದೇವಾಲಯವನ್ನು ಧ್ವಂಸಗೊಳಿಸಿರುವಂತೆ ಸೃಷ್ಟಿಸಿರುವ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದರಿಂದ, ಇದು ವದಂತಿ ಎಂದು ಹೇಳಲು ನಾನು ವಾರಾಣಸಿಗೆ ಬರಬೇಕಾಯಿತು’ ಎಂದರು.

‘ದೇವಾಲಯಗಳನ್ನು ಕೆಡವಲಾಗಿದೆ ಎಂಬುದಕ್ಕಿಂತ ದೊಡ್ಡ ಸುಳ್ಳು ಇನ್ನೊಂದಿಲ್ಲ. ದೇವಾಲಯವನ್ನು ಕೆಡವಿಲ್ಲ. ಅಹಲ್ಯಾಬಾಯಿ ಹೋಳ್ಕರ್ ಅವರ ಪ್ರತಿಮೆಯನ್ನು ಸಂರಕ್ಷಿಸಲಾಗಿದೆ. ಆದರೆ, ಕಾಂಗ್ರೆಸ್ ತಪ್ಪು ಮಾಹಿತಿ ಮೂಲಕ ಜನರನ್ನು ದಾರಿ ತಪ್ಪಿಸುತ್ತಿದೆ’ ಎಂದು ದೂರಿದರು.

‘ಕಾಶಿಯ ಪರಂಪರೆಯನ್ನು ರಕ್ಷಿಸಲು ಪ್ರಯತ್ನಗಳು ನಡೆಯುತ್ತಿವೆ. ದೇಶದ ನಂಬಿಕೆ ಯನ್ನು ಕೀಳಾಗಿ ಕಾಣಲು ಕಾಂಗ್ರೆಸ್ ಯತ್ನಿಸುತ್ತದೆ. ಮಠಗಳು ಮತ್ತು ದೇವಾಲಯ ಗಳ ಕುರಿತು ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಹಾಗೂ ಮಾತಾ ಅಹಲ್ಯಾಬಾಯಿ ಅವರ ಪರಂಪರೆಯನ್ನು ದೂಷಿಸುವ ಮೂಲಕ ಜನರನ್ನು ದಾರಿ ತಪ್ಪಿಸಲು ಮುಂದಾಗಿದೆ’ ಎಂದು ಅವರು ಆರೋಪಿಸಿದರು.

‘ಮಣಿಕರ್ಣಿಕಾ ಘಾಟ್‌ನ ನವೀಕರಣ ಕಾರ್ಯವನ್ನು ಸಿಎಸ್‌ಆರ್ ನಿಧಿಯಿಂದ ಕೈಗೊಳ್ಳಲಾಗುತ್ತಿದ್ದು, ಅಲ್ಲಿ ಯಾವುದೇ ಸಮಸ್ಯೆಯಿಲ್ಲದೆ ಆಚರಣೆಗಳನ್ನು ನಡೆಸಬಹುದು’ ಎಂದು ಆದಿತ್ಯನಾಥ್ ವಿವರಿಸಿದರು.

ಶನಿವಾರ ವಾರಾಣಸಿಗೆ ಆಗಮಿಸಿದ ಯೋಗಿ ಆದಿತ್ಯನಾಥ್ ಮೊದಲು ಕಾಶಿ ವಿಶ್ವನಾಥ ಮತ್ತು ಭೈರವನಾಥ ದೇಗುಲಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಆದರೆ, ವಿವಾದ ಸೃಷ್ಟಿಯಾಗಿದ್ದ ಮಣಿಕರ್ಣಿಕಾ ಘಾಟ್‌ಗೆ ಭೇಟಿ ನೀಡಲಿಲ್ಲ.

ಚೆನ್ನೈ ಅಂತರರಾಷ್ಟ್ರೀಯ ಪುಸ್ತಕ ಮೇಳದಲ್ಲಿ ಕವಯಿತ್ರಿ ಪ್ರತಿಭಾ ನಂದಕುಮಾರ್ ಅಭಿಮತ

‘ಡಿಜಿಟಲೀಕರಣದಿಂದ ಭಾಷೆಗೆ ಸಾವಿಲ್ಲ’

• ಮಂಜುಶ್ರೀ ಎಂ. ಕಡಕೋಳ

ಚೆನ್ನೈ: ‘ಡಿಜಿಟಲೀಕರಣದಿಂದ ಭಾಷೆಗೆ ಭವಿಷ್ಯವಿದೆಯೇ, ಎಐ ಬಂದಮೇಲೆ ಸಾಹಿತ್ಯ ಸೃಷ್ಟಿಯೂ ಸರಳವಾಗುವುದೇ, ಲೇಖಕರು ತಮ್ಮ ಅನುಭವವನ್ನು ತಮ್ಮ ಭಾಷೆಯಲ್ಲಿ ಬರೆಯಬೇಕೇ ಅಥವಾ ಇಂಗ್ಲಿಷಿನಲ್ಲಿ ಬರೆದರೆ ಜಾಗತಿಕ ಮನ್ನಣೆ ಪಡೆಯಬಹುದೇ? ದ್ರಾವಿಡ ಭಾಷೆಗಳದ್ದು ಪಿಸುಮಾತೋ, ಗಟ್ಟಿ ಧ್ವನಿಯೋ...?

–ಹೀಗೆ ಹತ್ತು ಹಲವು ಚರ್ಚೆ, ಪ್ರಶ್ನೋತ್ತರಗಳಿಗೆ ಚೆನ್ನೈನ ಅಂತರ ರಾಷ್ಟ್ರೀಯ ಪುಸ್ತಕ ಮೇಳದ ಶನಿವಾರದ ‘ಫೋರ್ ಲಾಂಗ್ವೇಜಸ್: ಒನ್ ಥಂಡರ್’ ಗೋಷ್ಠಿ ಸಾಕ್ಷಿಯಾಯಿತು.

ಚೆನ್ನೈನಲ್ಲಿ ಶನಿವಾರ ನಡೆದ ಚೆನ್ನೈ ಅಂತರರಾಷ್ಟ್ರೀಯ ಪುಸ್ತಕ ಮೇಳ2026ರ ಭಾಷಾ ಗೋಷ್ಠಿಯಲ್ಲಿ ಕವಯಿತ್ರಿ ಪ್ರತಿಭಾ ನಂದಕುಮಾರ್ ಮಾತನಾಡಿದರು. ಹೈದರಾಬಾದ್‌ನ ಪ್ರಾಧ್ಯಾಪಕ ರಾಜೇಂದ್ರ ಪ್ರಸಾದ್, ಕೇರಳದ ಲೇಖಕ ಎ.ಜಿ. ಥಾಮಸ್ ಮತ್ತು ಲೇಖಕಿ ಡಾ.ಎಚ್.ಎಸ್. ಅನುಪಮಾ ಉಪಸ್ಥಿತರಿದ್ದರು

ಡಿಜಿಟಲೀಕರಣದಿಂದ ಕನ್ನಡ ಸೇರಿದಂತೆ ಯಾವುದೇ ಭಾಷೆ ಅಳಿವಿನಂಚಿಗೆ ಸರಿಯುವ ಸಾಧ್ಯತೆ ಇದೆಯೇ ಅನ್ನುವ ಪ್ರಶ್ನೆಗೆ ಉತ್ತರಿಸಿದ ಕನ್ನಡದ ಕವಯಿತ್ರಿ ಪ್ರತಿಭಾ ನಂದಕುಮಾರ್, ‘ಜಗತ್ತು ಡಿಜಿಟಲೀಕರಣವಾದ ತಕ್ಷಣ ಯಾವುದೇ ಭಾಷೆ ಸಾಯುವುದಿಲ್ಲ. ಬದಲಿಗೆ ಅದು ತಂತ್ರಜ್ಞಾನದ ನೆರವಿನಿಂದ ಮತ್ತಷ್ಟು ಜೀವಂತವಾಗಿರಲು ಸಾಧ್ಯ. ಹಿಂದೆ ಟೈಪ್‌ರೈಟರ್, ಕಂಪ್ಯೂಟರ್ ಬಂದಾಗಲೂ ಕನ್ನಡ ಭಾಷೆಗೆ ಅಳಿವುಂಟಾಗುತ್ತದೆ ಎಂದೇ ಭಾವಿಸಲಾಗಿತ್ತು. ಆದರೆ, ಕನ್ನಡದಲ್ಲೇ ಟೈಪ್‌ರೈಟರ್ ಬಂತು, ಕಂಪ್ಯೂಟರ್‌ನಲ್ಲೂ ಒಂದಲ್ಲ ಹಲವು ಕನ್ನಡ ಸಾಫ್ಟ್‌ವೇರ್, ಆ್ಯಪ್‌ಗಳು ಬಂದವು. ಹಾಗಾಗಿ, ತಂತ್ರಜ್ಞಾನದ ಬೆಳವಣಿಗೆಯ ಜತೆಗೇ ಭಾಷೆಯೂ ಬೆಳವಣಿಗೆ ಸಾಧಿಸುತ್ತಿದೆ. ಡಿಜಿಟಲ್ ವೇದಿಕೆಗಳಲ್ಲೇ ಭಾಷೆಗೆ ಹೆಚ್ಚು ಭವಿಷ್ಯವಿದೆ’ ಎಂದರು.

ಪ್ರಾದೇಶಿಕ ಭಾಷೆಗಳು ಬರೀ ಪಿಸುಮಾತಾಗಿವೆಯೋ ಅಥವಾ ಜಾಗತಿಕ ಧ್ವನಿಯಾಗಿವೆಯೋ ಎಂಬ ಚರ್ಚೆಗೆ ಪ್ರತಿಕ್ರಿಯಿಸಿದ ಹೈದರಾಬಾದ್‌ನ ಪ್ರಾಧ್ಯಾಪಕ ರಾಜೇಂದ್ರ ಪ್ರಸಾದ್, ‘ಲೇಖಕರು ತಮ್ಮ ಅನುಭವಗಳನ್ನು ತಮ್ಮದೇ ಭಾಷೆಯಲ್ಲಿ ಬರೆಯಬೇಕು. ಪ್ರಾದೇಶಿಕ ಭಾಷೆಯಲ್ಲಿ ಬರೆದಾಕ್ಷಣ ಅದು ಪಿಸುಮಾತಾಗುವುದಿಲ್ಲ, ನಮ್ಮ ಭಾಷೆಯೂ ಗಟ್ಟಿ ಧ್ವನಿಯಾಗಿ ರೂಪುಗೊಂಡಿದೆ. ವಸಾಹತುಶಾಹಿ ವ್ಯವಸ್ಥೆ ನಮ್ಮ ಭಾಷೆಗಳನ್ನು ಪಿಸುಮಾತನ್ನಾಗಿ ಮಾಡಿವೆ ಅಷ್ಟೇ. ವಾಸ್ತವವಾಗಿ ಸಂಗಮಂ ಕಾಲದಿಂದಲೂ ದಕ್ಷಿಣದ ಪ್ರಾದೇಶಿಕ ಭಾಷೆಗಳು ಪ್ರಗತಿಪರವಾಗಿ ಮತ್ತು ಗಟ್ಟಿ ಧ್ವನಿಯಲ್ಲಿ ತಮ್ಮ ಅನುಭವವನ್ನು ದಾಖಲಿಸಿವೆ. ರಷ್ಯನ್, ಜರ್ಮನ್, ಫ್ರೆಂಚ್ ಲೇಖಕರು ತಮ್ಮ ಭಾಷೆಯ ಮೂಲಕವೇ ಜಗತ್ತನ್ನು ತಲುಪಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ’ ಎಂದರು.

ಇದಕ್ಕೆ ದನಿಗೂಡಿದ ಪ್ರತಿಭಾ, ‘ಕನ್ನಡಕ್ಕೆ ಬುಕರ್ ಪ್ರಶಸ್ತಿ ಬಂದಾಕ್ಷಣ ಲೇಖಕರು ಜಾಗತಿಕ ಮಟ್ಟಕ್ಕೇರಲು ಇಂಗ್ಲಿಷಿನಲ್ಲಿ ಬರೆಯಬೇಕು ಎಂದು ಭಾವಿಸತೊಡಗಿದ್ದಾರೆ. ಆದರೆ, ಯಾವುದೇ ಲೇಖಕ ತನ್ನ ಭಾಷೆಯ ಜನರಿಗಾಗಿಯೇ ಅವರ ಭಾಷೆಯಲ್ಲೇ ಬರೆಯುತ್ತಾನೆಯೋ ಹೊರತು, ಜಾಗತಿಕ ಓದುಗರಿಗಾಗಿ ಅಲ್ಲ’ ಎಂದರು.

ಅನುವಾದಕ ಎ.ಜೆ. ಥಾಮಸ್, ‘ಪದಶಃ ಅನುವಾದ ಮಾಡುವ ಬದಲು ಭಾವಾನುವಾದದ ಮಾಡಬೇಕು. ಅನುವಾದಕನಿಗೂ ಸ್ವಾತಂತ್ರ್ಯದ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

ಲೇಖಕಿ ಡಾ.ಎಚ್.ಎಸ್. ಅನುಪಮಾ ಗೋಷ್ಠಿಯನ್ನು ನಿರ್ವಹಿಸಿದರು.

‘ಹೆಣ್ಣು ಅಳಿವಿನಂಚಿನ ಪ್ರಭೇದವಲ್ಲ’

ಭಾಷೆ, ಮಹಿಳೆ ಮತ್ತು ಪ್ರಕೃತಿಯನ್ನು ರಕ್ಷಿಸಬೇಕು ಅನ್ನುವ ವಾದವಿದೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಪ್ರತಿಭಾ ನಂದಕುಮಾರ್, ‘ಭಾಷೆ, ಪ್ರಕೃತಿಗೆ ಸರಿಸಮಾನಾರ್ಥದಲ್ಲಿ ಮಹಿಳೆಯರನ್ನು ರಕ್ಷಿಸಬೇಕು ಅನ್ನುವುದೇ ಸರಿಯಲ್ಲ. ಮಹಿಳೆಯನ್ನು ಸಂರಕ್ಷಿಸಬೇಕು ಅನ್ನುವುದಕ್ಕೆ ಆಕೆ ಯಾವತ್ತೂ ಅಳಿವಿನಂಚಿನ ಪ್ರಭೇದವಲ್ಲ’ ಎಂದರು.

‘ಮಹಿಳಾ ಸಾಹಿತ್ಯದ ಕುರಿತ ಪ್ರಶ್ನೆಗೆ ಹಿಂದೆ ಮಹಿಳೆಯರು ಬರೆದದ್ದನ್ನು ಅವರ ವೈಯಕ್ತಿಕ ಅನುಭವ, ಬದುಕಿಗೆ ಥಳಕು ಹಾಕಿ ನೋಡಲಾಗುತ್ತಿತ್ತು. ಆದರೆ, ಅದು ಈಗೀಗ ಬದಲಾಗಿದೆ. ಯಾರು ಏನೇ ಅಂದರೂ ಅದಕ್ಕೆ ತಲೆಕೆಡಿಸಿಕೊಳ್ಳದೇ ನಮಗೆ ಏನನ್ನು ಬರೆಯಬೇಕು ಅನಿಸುವುದೋ ಅದನ್ನು ಬರೆಯುತ್ತಿದ್ದೇವೆ. ಅದನ್ನೇ ಮುಂದುವರಿಸುತ್ತೇವೆ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ತಮಿಳುನಾಡು ಶಿಕ್ಷಣ ಇಲಾಖೆ ಮುಖ್ಯ ಆಯುಕ್ತ ಡಾ. ಕೆ. ಚಂದ್ರಮೋಹನ್ ಅವರು ಕನ್ನಡದ ಕವಿ ಜಿ.ಎಸ್. ಶಿವರುದ್ರಪ್ಪ ಅವರ ‘ಎದೆ ತುಂಬಿ ಹಾಡಿದೆನು ಅಂದು ನಾನು’ ಕವಿತೆ ವಾಚಿಸಿದರು.

‘ಪೊಲೀಸ್ ಪರಿಶೀಲನೆಯಿಲ್ಲದೆ ವೈದ್ಯರ ನೇಮಕ’

ನವದೆಹಲಿ (ಪಿಟಿಐ): ಫರೀದಾಬಾದ್ ಮೂಲದ ಅಲ್ ಫಲಾಹ್ ವಿಶ್ವವಿದ್ಯಾಲಯವು ಭಯೋತ್ಪಾದನಾ ನಂಟಿರುವ ಮೂವರು ವೈದ್ಯರು ಸೇರಿದಂತೆ ಇತರ ಅನೇಕ ವೈದ್ಯರನ್ನು ಪೊಲೀಸರ ಪರಿಶೀಲನೆಯಿಲ್ಲದೆ ನೇಮಿಸಿಕೊಂಡಿತ್ತು ಎಂದು ಜಾರಿ ನಿರ್ದೇಶನಾಲಯ (ಇಡಿ) ಹೇಳಿದೆ.

ನೇಮಿಸಿಕೊಂಡಿರುವ ವೈದ್ಯರಲ್ಲಿ ಇಬ್ಬರನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಂಧಿಸಿದ್ದು, ಮೂರನೇ ವೈದ್ಯ 2025ರ ನವೆಂಬರ್‌ನಲ್ಲಿ ಕೆಂಪು ಕೋಟೆ ಸ್ಫೋಟದ ಆಪಾದಿತ ಆತ್ಮಹತ್ಯಾ ಬಾಂಬರ್ ಎಂದು ಹೇಳಲಾಗಿದೆ.

ವಿಶ್ವವಿದ್ಯಾಲಯದ ಪ್ರವರ್ತಕ ಜವಾದ್ ಅಹ್ಮದ್ ಸಿದ್ದೀಕಿ ವಿರುದ್ಧದ ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ, ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳು ಮತ್ತು ಪ್ರಾಧ್ಯಾಪಕರು ನೀಡಿದ ಹೇಳಿಕೆಗಳಿರುವ ಆರೋಪ ಪಟ್ಟಿಯನ್ನು ದೆಹಲಿ ನ್ಯಾಯಾಲಯಕ್ಕೆ ಇ.ಡಿ ಶುಕ್ರವಾರ ಸಲ್ಲಿಸಿದೆ.

ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಿಂದ ಅಕ್ರಮವಾಗಿ ಹಣ ಗಳಿಸಿದ ಆರೋಪ ಸಿದ್ದೀಕಿ ಮತ್ತು ಅವರ ಅಲ್ ಫಲಾಹ್ ಚಾರಿಟೇಬಲ್ ಟ್ರಸ್ಟ್ ಮೇಲಿದೆ. ಆದಾಗ್ಯೂ, 260 ಪುಟಗಳ ಆರೋಪಪಟ್ಟಿಯನ್ನು ನ್ಯಾಯಾಲಯ ಇನ್ನೂ ಪರಿಗಣಿಸಿಲ್ಲ.

ಶುಕ್ರವಾರ ಇ.ಡಿ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ, ಫರೀದಾಬಾದ್‌ನ ಧೌಜ್ ಪ್ರದೇಶದಲ್ಲಿರುವ ಸುಮಾರು ₹140 ಕೋಟಿ ಮೌಲ್ಯದ ವಿಶ್ವವಿದ್ಯಾಲಯದ ಭೂಮಿ ಮತ್ತು ಕಟ್ಟಡವನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ ಎಂದು ತಿಳಿಸಿದೆ.

ದಾಖಲೆಗಳಲ್ಲಿ ಮಾತ್ರವೇ ನೇಮಕಾತಿ

‘ವಿಶ್ವವಿದ್ಯಾಲಯವು ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ (ಎನ್‌ಎಂಸಿ) ಅನುಮೋದನೆ ಪಡೆಯಲು ‘ದಾಖಲೆ’ಗಳಲ್ಲಿ ಮಾತ್ರವೇ ವೈದ್ಯರನ್ನು ನೇಮಿಸಿಕೊಂಡಿತ್ತು. ಈ ವೈದ್ಯರು ನಿಯಮಿತವಾಗಿ ಕಾಲೇಜಿಗೆ ಹಾಜರಾಗಿ ತರಗತಿಗಳನ್ನೂ ತೆಗೆದುಕೊಳ್ಳಲಿಲ್ಲ ಮತ್ತು ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆಯೂ ನೀಡಲಿಲ್ಲ’ ಎಂದು ಇ.ಡಿ ಹೇಳಿದೆ.

‘ಎನ್‌ಎಂಸಿ ತಪಾಸಣೆಯ ಸಮಯದಲ್ಲಿ ಹಲವಾರು ವೈದ್ಯರನ್ನು ತಾತ್ಕಾಲಿಕ ಆಧಾರದಲ್ಲಿ ನೇಮಿಸಲಾಗಿತ್ತು. ಎನ್‌ಎಂಸಿ ತಪಾಸಣೆಗೆ ಬರುವ 3 ವಾರಗಳ ಹಿಂದೆ ಆಸ್ಪತ್ರೆಯಲ್ಲಿ ಯಾವುದೇ ರೋಗಿಗಳು, ಸಿಬ್ಬಂದಿ ಅಥವಾ ವೈದ್ಯರು ಇರಲಿಲ್ಲ. ಇಡೀ ಆಸ್ಪತ್ರೆ ಕಾರ್ಯನಿರತವಾಗಿರಲಿಲ್ಲ’ ಎಂದು .ಇಡಿ ಆರೋಪಿಸಿದೆ.

2025ರ ಜೂನ್‌ನಲ್ಲಿ ವೈದ್ಯಕೀಯ ಆಸ್ಪತ್ರೆ ಕಾಲೇಜಿನ ತಪಾಸಣೆಯ ವೇಳೆಯು ವಂಚನೆ ನಡೆದಿದ್ದು, ಅದರ ನಂತರ ಕಾಲೇಜಿನ ಎಂಬಿಬಿಎಸ್‌ನ ಸೀಟುಗಳನ್ನು 150ರಿಂದ 200ಕ್ಕೆ ಹೆಚ್ಚಿಸಲು ಅನುಮತಿ ನೀಡಲಾಗಿತ್ತು.

ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಮತ್ತೆ ಅಶಾಂತ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಶನಿವಾರ ಮತ್ತೆ ಅಶಾಂತ ಸ್ಥಿತಿ ನಿರ್ಮಾಣವಾಯಿತು. ಪ್ರತಿಭಟನಕಾರರು ರಾಷ್ಟ್ರೀಯ ಹೆದ್ದಾರಿ ತಡೆದರು ಮತ್ತು ಬೆಲ್ಡಾಂಗದಲ್ಲಿ ರೈಲು ತಡೆದು ಆಕ್ರೋಶ ಹೊರಹಾಕಿದರು.

ವಲಸೆ ಕಾರ್ಮಿಕರೊಬ್ಬರ ಸಾವು ಹಿನ್ನೆಲೆಯಲ್ಲಿ ಶುಕ್ರವಾರ ಪಶ್ಚಿಮ ಬಂಗಾಳದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಪ್ರತಿಭಟನೆಗಳು ನಡೆದಿದ್ದವು.

ಬರುವಾದ ರಾಷ್ಟ್ರೀಯ ಹೆದ್ದಾರಿಯಲ್ಲಿ ನೂರಾರು ಪ್ರತಿಭಟನಕಾರರು ಜಮಾಯಿಸಿದ್ದರು. ಇದರಿಂದ ಕಿಲೋ ಮೀಟರ್ ದೂರ ವಾಹನಗಳು ಸಾಲು ನಿಂತಿದ್ದವು. ಬಿಹಾರದಲ್ಲಿ ಇನ್ನೊಬ್ಬ ವಲಸೆ ಕಾರ್ಮಿಕನ ಮೇಲೆ ಹಲ್ಲೆ ನಡೆದಿದೆ ಎಂಬ ಮಾಹಿತಿ ಹರಡಿದ್ದರಿಂದ ಶನಿವಾರ ಪ್ರತಿಭಟನೆ ತೀವ್ರಗೊಂಡಿತು.

ಗುಂಪು ಚದುರಿಸಲು ಪೊಲೀಸರು ಕೆಲವೆಡೆ ಲಾಠಿ ಪ್ರಯೋಗ ಮಾಡಿದರು ಎಂದು ಪ್ರತಿಭಟನಕಾರರು ಆರೋಪಿಸಿದ್ದಾರೆ.

ಮನಮೋಹಕ ಬ್ಲೆಡ್ ಸರೋವರ
ಸ್ಲೊವೇನಿಯಾದ ರತ್ನ ಎಂದೇ ಖ್ಯಾತಿ ಪಡೆದಿರುವ ಬ್ಲೆಡ್ ಸರೋವರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲೊಂದು ಸುತ್ತು... 13

ಟಗರು ಕಾಳಗದ ರೋಚಕ ಕಥನ

ರಾಜ್ಯದಲ್ಲಿ ಸುಗ್ಗಿಯ ನಂತರದ ಬಿಡುವಿನಲ್ಲಿ ಸಾಲು ಸಾಲು ಜಾನುವಾರು ಜಾತ್ರೆಗಳು ನಡೆಯುತ್ತವೆ. ಈ ಸಂದರ್ಭದಲ್ಲೇ ಹಲವು ಕಡೆ ಪ್ರತಿಷ್ಠಿತ ಕಣಗಳಲ್ಲಿ ಟಗರುಗಳ ಗುದ್ದಾಟದ ಸದ್ದು ಜೋರಾಗಿ ಕೇಳಿಸುತ್ತದೆ. ಮೈನವಿರೇಳಿಸುವ ಕಾಳಗಗಳಲ್ಲಿ ಭಾಗವಹಿಸುವ ಟಗರುಗಳ ಕಥನ ಇಲ್ಲಿದೆ.

ಮುಗಿಯದ ಕದನ ಕುತೂಹಲ....

ಚಿತ್ರ: ಸತೀಶ ಬಡಿಗೇರ್

• ಸ್ವರೂಪ್ ಕೊಟ್ಟೂರು

ಅದು ಬೆಳಗಿನ ಜಾವ. ಮಂಜು, ಚುಮು ಚುಮು ಚಳಿ ಮಧ್ಯೆಯೇ ಕೂಡ್ಲಿಗಿ ಕೆರೆ ಏರಿ ಮೇಲೆ ವಾಕಿಂಗ್ ಹೊರಟಿದ್ದೆ. ಕಣ್ಣಳತೆ ದೂರದಲ್ಲಿ ಬೈಕ್‌ನಲ್ಲಿ ನನ್ನತ್ತಲೇ ಬರುತ್ತಿದ್ದ ದೇವರಮನಿ ಹನುಮಂತಪ್ಪ ಪದೇ ಪದೇ ಹಿಂದಕ್ಕೆ ತಿರುಗಿ ನೋಡುತ್ತಾ ಬೈಕ್ ವೇಗವನ್ನು ಹೆಚ್ಚಿಸುತ್ತಿದ್ದರು. ಕಣ್ಣು ಕೀಲಿಸಿ, ಮಂಜು ಸೀಳಿ ಅವರ ಬೈಕ್ ಹಿಂದಕ್ಕೆ ದೃಷ್ಟಿ ಹಾಯಿಸಿದರೆ ಕಡುಕಪ್ಪು, ಹಾಗೆ ಬಲಿಷ್ಠವಾದ ಪ್ರಾಣಿ ಅವರನ್ನು ಅದೇ ವೇಗದಲ್ಲಿ ಹಿಂಬಾಲಿಸಿತ್ತು. ಅದು ಪಕ್ಕಾ ಕರಡಿಯೇ ಎಂದು ಅಂದಾಜಿಸಿ ನಡುಗುವ ಚಳಿಯಲ್ಲಿಯೇ ಬೆವತು ಬಿಟ್ಟೆ. ಇನ್ನೇನು ಜೀವ ಉಳಿಸಿಕೊಳ್ಳಲು ಆಯಕಟ್ಟಿನ ಸ್ಥಳ ಹುಡುಕಬೇಕು ಎನ್ನುವಷ್ಟರಲ್ಲಿ ಅವರ ಮಗ ವಿಶ್ವನಾಥ ಬೈಕ್‌ನಿಂದ ಇಳಿದು ಆ ಪ್ರಾಣಿಯನ್ನು ಹಿಡಿದು ನಿಲ್ಲಿಸಿದರು! ಸಾವರಿಸಿಕೊಂಡು ಹತ್ತಿರ ಹೋಗಿ ನೋಡಿದರೆ ಅದು ಕರಡಿ ಅಲ್ಲ ಟಗರು.

ಇದು ಕಾಳಗಕ್ಕಾಗಿ ಟಗರನ್ನು ಅಣಿಗೊಳಿಸುವ ಒಂದು ದೃಶ್ಯವಷ್ಟೆ. ಇಂತಹ ಹತ್ತಾರು ಚಿತ್ರಣಗಳು ಇಲ್ಲಿವೆ.

ಕಾಳಗಕ್ಕೆಂದೇ ಟಗರು ಸಾಕುವುದು ರೂಢಿ. ಗ್ರಾಮೀಣ ಕ್ರೀಡೆಯಾಗಿ ಬೆಳೆದು ಬಂದಿರುವ ಈ ಕಾಳಗವು ವಿಶೇಷವಾಗಿ ಕಳೆದ ಎರಡು ದಶಕಗಳಿಂದ ಹೆಚ್ಚು ಜನಪ್ರಿಯವಾಗುತ್ತಿದೆ. ಈ ಕಾರಣಕ್ಕೆ ಕಾದಾಟಕ್ಕೆಂದೇ ಜವಾರಿ ಟಗರುಗಳನ್ನು ಸಾಕುವ ಟ್ರೆಂಡ್, ಕ್ರೇಜ್ ಹೆಚ್ಚುತ್ತಿದೆ. ವಿಜಯನಗರ, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ಬೆಳಗಾವಿ, ಹಾವೇರಿ, ಹುಬ್ಬಳ್ಳಿ ಇಲ್ಲೆಲ್ಲ ಜವಾರಿ ಟಗರುಗಳನ್ನು ಸಾಕುತ್ತಾರೆ. ಕೆಲವರು ಮರಿಗಳನ್ನು ಸಾಕಿ, ಸ್ಪರ್ಧೆಗೆ ತಯಾರಿ ಮಾಡಿ ಮಾರುತ್ತಾರೆ. ಮತ್ತೆ ಕೆಲವರು ಖುಷಿಗೆ, ಗರ್ವಕ್ಕೆ, ಟಗರಿನ ಧೈರ್ಯ, ತಾಕತ್ತು ಪರೀಕ್ಷಿಸಲು, ಸ್ಪರ್ಧೆಯಲ್ಲಿ ಗೆಲ್ಲಲು ಸಾಕುತ್ತಾರೆ.

ಮರಿಗಳ ಆಯ್ಕೆ ಗುಟ್ಟು

ಕಾಳಗದ ಮರಿಗಳ ಆಯ್ಕೆ ಸವಾಲಿನದ್ದು. ಒಬ್ಬೊಬ್ಬರದ್ದು ಒಂದೊಂದು ವಿಧಾನ. ಮರಿಯನ್ನು ಅಡಿಯಿಂದ ಮುಡಿಯವರೆಗೂ ಪರೀಕ್ಷಿಸಲಾಗುತ್ತದೆ. ಬಹುತೇಕರು ಮೊದಲು ನೋಡುವುದು ಬೀಜವನ್ನು. ಅದು ಮಜಬೂತ್ ಆಗಿರಬೇಕು. ಅದರ ಕೊಂಬು ದಪ್ಪವೂ, ಬಿರುಸು ಇರಬೇಕು. ಎದೆ ಅಗಲವಾಗಿರಬೇಕು. ಎತ್ತರ ಹಾಗೆ ಉದ್ದದಲ್ಲೂ ಮನಸ್ಸಿಗೆ ಹಿಡಿಸಬೇಕು. ಮುಸುಡಿ ಮುಂದೆ ಸುಳಿ ಇದ್ದರೆ ಅದು ಮತ್ತು ಕೊಂಬಿನ ಹಿಂಭಾಗವು ವೃತ್ತಾಕಾರದಲ್ಲಿ ಇರಬೇಕು. ಮುಖದಲ್ಲಿ ರೋಷ, ಕಿಚ್ಚು ಎದ್ದು ಕಾಣುತ್ತಿರಬೇಕು. ಸಂತೆಯಲ್ಲೂ ಇಂತಹ ಗುಣಗಳನ್ನೇ ಹೋಲುವ ಮರಿಗಳನ್ನು ಖರೀದಿಸುತ್ತಾರೆ. ಟಗರಿನ ಶಕ್ತಿ ಸಾಮರ್ಥ್ಯದ ಜೊತೆಗೆ ಕೊಂಬಿನ ಗಾತ್ರ ಮತ್ತು ಆಕಾರ ಅದರ ಸೋಲು-ಗೆಲುವನ್ನು ನಿರ್ಣಯಿಸುತ್ತದೆ. ಕೊಂಬುಗಳು ಗೆಲುವನ್ನೂ, ಚದುರಿದ ಕೊಂಬುಗಳು ಸೋಲಿನ ರುಚಿಯನ್ನೂ ಉಣಿಸುತ್ತವೆ ಎನ್ನುತ್ತಾರೆ ಅನುಭವಿಗಳು.

ಮರಿಯು 3 ರಿಂದ 6 ತಿಂಗಳ ಪ್ರಾಯದಲ್ಲಿ ಇರುವಾಗಲೇ ಅದರ ಕೊಂಬುಗಳನ್ನು ಕೀಳಲಾಗುತ್ತದೆ. ನಂತರ ಗಾಯದ ನಿವಾರಣೆಗೆ ಔಷಧೋಪಚಾರದ ಜೊತೆಗೆ ಆ ಸ್ಥಳಕ್ಕೆ ಬೂದಿ, ಅರಿಸಿನ, ಜಾಜು ಹಚ್ಚುತ್ತಾರೆ. ಹೊಸ ಕೊಂಬು ಮೂಡುವಾಗ್ಗೆ ಕಡಿತ ಬರುವ ಕಾರಣಕ್ಕೆ ಗೋಡೆ, ಕಲ್ಲು, ಗೂಟಕ್ಕೆ ಅಂಟಿಕೊಂಡು ಮರಿಯನ್ನು ಕಟ್ಟುವುದಿಲ್ಲ. ಮೂಡುವ ಕೊಂಬು ದಪ್ಪ ಬೆಳೆಯುತ್ತವೆ.



ಹುಟ್ಟುಹಬ್ಬ, ಸಮಾಧಿ ಇತ್ಯಾದಿ...

ಹಣ, ಕೀರ್ತಿ ತಂದ ಟಗರುಗಳನ್ನಂತೂ ಒಂದು ಗುಂಜಿ ಹೆಚ್ಚೇ ಅಕ್ಕರೆಯಿಂದ ಸಾಕುತ್ತಾರೆ. ಅವುಗಳ ಜನ್ಮದಿನ, ಖರೀದಿಸಿದ ದಿನವನ್ನು ಹಬ್ಬದಂತೆ ಆಚರಿಸಿ ಸಂಭ್ರಮಿಸುತ್ತಾರೆ. ಅವು ಕಣ ಗೆದ್ದಾಗ ಇಲ್ಲವೇ ಮೃತಪಟ್ಟಾಗ ಊರು ತುಂಬ ಮೆರವಣಿಗೆ ಮಾಡುತ್ತಾರೆ. ಸಮಾಧಿ ಕಟ್ಟಿಸುತ್ತಾರೆ, ದೇವರ ಕೋಣೆಯಲ್ಲಿ ಫೋಟೊ ಇಟ್ಟು ಪೂಜಿಸುತ್ತಾರೆ. ಮನೆಯ ಮೇಲೆ ಅವುಗಳ ಕಲಾಕೃತಿ ನಿರ್ಮಿಸುತ್ತಾರೆ.

ಮೇಯಿಸುವುದೇ ಸೊಗಸು..

ಟಗರು ಪ್ರಾಯಕ್ಕೆ ಬರುತ್ತಿದ್ದಂತೆ ಮೇಯಿಸುವ ರೀತಿಯೇ ಬದಲಾಗುತ್ತದೆ. ಮೇವಿನ ಜೊತೆಗೆ ಕುಚ್ಚಿದ ಅಥವಾ ನೆನೆಸಿಟ್ಟ ಹುರುಳಿ, ಹಸಿ ಹಾಲು, ಮೊಟ್ಟೆ, ಒಣ ಕೊಬ್ಬರಿ, ಉತ್ತತ್ತಿ, ಗೋಡಂಬಿ, ಬಾದಾಮಿ, ಅಳಿವೆ ಬೀಜ... ಹೀಗೆ ತರೇಹವಾರಿ ಪೌಷ್ಟಿಕ ಆಹಾರ ಕೊಡುತ್ತಾರೆ. ತಿನ್ನದಿದ್ದರೆ ಬಾಯಿಗೆ ಹೆಬ್ಬೆರಳಿಟ್ಟು ಆಹಾರ ಇಡುತ್ತಾರೆ. ಸಹಜವಾಗಿ ಟಗರು ಕೊಬ್ಬಿ, ಬಲಿಷ್ಠವಾಗಿ ಬೆಳೆಯುತ್ತದೆ. ತಲೆ ಗಾತ್ರ ಹಿಗ್ಗುತ್ತದೆ. ಇಂತಹ ಟಗರಿಗೆ ಉತ್ತಮ ಗಾಳಿ ಬೆಳಕು ಇರುವ ಜಾಗದಲ್ಲಿ ಕಟ್ಟುತ್ತಾರೆ. ನಿತ್ಯವೂ ಮಸಾಜ್ ಮಾಡುತ್ತಾರೆ. ಕಣದಲ್ಲಿ ಕಾದಾಡಿ ಬಂದ ಮೇಲೆ ನಿತ್ರಾಣಗೊಂಡಿದ್ದರೆ ಮೊದಲು ಎಳನೀರು, ನೋವು ನಿವಾರಕ ಕೊಡುತ್ತಾರೆ. ಚೇತರಿಸಿಕೊಳ್ಳುವವರೆಗೆ ಒತ್ತಾಯ ಪೂರ್ವಕವಾಗಿ ಆಹಾರ ಕೊಡುವುದಿಲ್ಲ.

ಪೈಲ್ವಾನ್ ರೀತಿ ಟಗರನ್ನು ಅಣಿಗೊಳಿಸುತ್ತಾರೆ. ಕಟ್ಟುಮಸ್ತಾಗಿ ಬೆಳೆಯಲು ತುಸು ಹೆಚ್ಚೇ ತಿನ್ನಿಸುವ ಕಾರಣಕ್ಕೆ ಆಹಾರ ಜೀರ್ಣವಾಗಲಿಕ್ಕೆ, ನೆಣ ಹೆಚ್ಚಾಗದಂತೆ ರಾತ್ರಿ ಮತ್ತು ಬೆಳಗಿನ ಜಾವ ನಿಯಮಿತವಾಗಿ ವಾಕಿಂಗ್, ರನ್ನಿಂಗ್ ಮಾಡಿಸುತ್ತಾರೆ. ಕೆರೆ ಕಟ್ಟೆಗಳಲ್ಲಿ ಈಜು ಆಡಿಸುತ್ತಾರೆ. ಆ ಮೂಲಕ ದಮ್ಮು ಕಟ್ಟಿಸುತ್ತಾರೆ. ಅದರ ಕೊಂಬಿಗೆ ಬಣ್ಣ ಹಚ್ಚಿ, ಉಣ್ಣೆ ತೆಗೆದು ಆಕರ್ಷಕವಾಗಿ ಕಾಣಲು ಮೈಮೇಲೆ ಬಿಟ್ಟ ಅಲ್ಪ ಕೂದಲಿಗೆ ಬಣ್ಣ ಹಚ್ಚಿ ಚೆಂದಗಾಣಿಸುತ್ತಾರೆ.

ಹೆಸರಾದ ಕಣ (ಅಖಾಡ)ಗಳಲ್ಲಿ ನಡೆಯುವ ಕಾಳಗಕ್ಕೆ ನೂರಾರು ಟಗರುಗಳು ಬರುತ್ತವೆ. ಎಲ್ಲರಿಗೂ ತಮ್ಮ ಟಗರೇ ಗೆಲ್ಲಬೇಕೆಂಬ ಹಟ. ಹೀಗಾಗಿ ಕೆಲವರು ಮೋಸದಾಟಕ್ಕೆ ಇಳಿಯುತ್ತಾರೆ. ಟಗರಿಗೆ ತೋಳ ಅಥವಾ ಚಿರತೆಯ ನೆಣ ಹಚ್ಚಿ ಎದುರಾಳಿ ಟಗರು ಆ ವಾಸನೆಗೆ ಅಲ್ಲಿಂದ ಕಾಲ್ಕೀಳುವಂತೆ ಮಾಡುವುದು, ಹಾನಿಯಾದ ಕೊಂಬಿನ ಒಳಗೆ ಕಬ್ಬಿಣದ ಚೂರು ಅಥವಾ ಕಬ್ಬಿಣದ ಪುಡಿಯನ್ನು ಎಂ-ಸೀಲ್‌ನೊಂದಿಗೆ ಬೆರೆಸಿ ತುಂಬಿ ಮೂಲ ಕೊಂಬಿಗೆ ಹೋಲುವ ರೂಪ ಕೊಟ್ಟು ಎದುರಾಳಿ ಟಗರಿಗೆ ಹಾನಿ ಮಾಡುವುದು, ಟಗರಿನ ದಪ್ಪ ಹಲ್ಲನ್ನು ಅರದಿಂದ ತಿಕ್ಕಿ ಅಸಲಿ ವಯಸ್ಸನ್ನು ಮರೆ ಮಾಚುವುದು, ಉದ್ದೀಪನ ಮದ್ದು ಕೊಡುವುದು, ತಮ್ಮದೇ ಟಗರು ಗೆಲ್ಲಬೇಕೆಂಬ ಆಸೆಯಿಂದ ಕೆಲವು ಕಡೆ ಕಮಿಟಿಯವರು ಡಬ್ಬದಲ್ಲಿ ಚೀಟಿ ಹಾಕದೇ ಹಿಡಿದು ಆಡಿಸುತ್ತಾರೆ ಇತ್ಯಾದಿ ಆಪಾದನೆಗಳೂ ಇವೆ.

ಒಡೆಯನ ಜೀವ ಉಳಿಸಿದ 'ಬೆಟ್ಟದ ಹುಲಿ'!

ನಾಗರಮುನ್ನೋಳ್ಳಿಯ 'ಬೆಟ್ಟದ ಹುಲಿ' ಟಗರು ತನ್ನ ಒಡೆಯನ ಹೃದಯ ಶಸ್ತ್ರಚಿಕಿತ್ಸೆಗೆ ಬೇಕಾದ ಹಣವನ್ನು ಸರಣಿ ಗೆಲುವಿನ ಮೂಲಕ ಗಳಿಸಿ ಜೀವ ಉಳಿಸಿದ ಕೀರ್ತಿಗೆ ಪಾತ್ರವಾಗಿದೆ.

ಬೆಳ್ಳೂಡಿ 'ಕಾಳಿ'ಯೂ ಸೋಲಿಲ್ಲದ ಸರದಾರ ಎಂದು ಹೆಸರಾಗಿತ್ತು. ಇದರ ಅಂತಿಮ ಯಾತ್ರೆಯಲ್ಲಿ ಸಾವಿರಾರು ಜನರು ಸೇರಿದ್ದರು. ಹೀಗೆ ಜನಮನ ಗೆದ್ದ ಕಾಳಿಗೆ ಗುಡಿ ಕಟ್ಟಿಸಿ ಪೂಜೆ ಸಲ್ಲಿಸಲಾಗುತ್ತಿದೆ.

ಇವುಗಳಂತೆ ಮುಂಗಾರು ಮಳೆ ನೀಲ, ಅಜಯ್ ಸೀಟಿ ಪಟ್ಲಿ, ಏಕಲವ್ಯ, ಜಲಸ, ವಾಲ್ಮೀಕಿ, ಮಯೂರ, ಮದಕರಿ ಬಾಬು, ಕೇಶಾಪುರ ಗಿಡ್ಡ, ಚಿಗಡೋಳಿ ವಿಕ್ಕಿ 8999, ಅಲಗವಾಡಿಯ ಜೀವ, ಅಂಡಬಂಡು, ಕರ್ನಾಟಕದ ಸುಪುತ್ರ ಮುಂತಾದವು ಕಾಳಗದಲ್ಲಿ ತಮ್ಮದೇ ಹವಾ ಎಬ್ಬಿಸಿ ದಾಖಲೆ ಬರೆದು ಭೌತಿಕವಾಗಿ ಇಲ್ಲವಾಗಿದ್ದರೂ ಜನಮಾನಸದಲ್ಲಿ ಜೀವಂತವಾಗಿವೆ.

ಕಣ ಕುತೂಹಲ

ಸ್ಪರ್ಧೆಯಲ್ಲಿ ಜವಾರಿ ತಳಿಗಳಿಗೆ ಮಾತ್ರ ಪ್ರವೇಶ. ದೇಸಿ ತಳಿಯ ಟಗರುಗಳನ್ನು ಸಾಕಲು ಪ್ರೋತ್ಸಾಹಿಸಬೇಕು.

11ನೇ ಪುಟಕ್ಕೆ...

ಅದಿತಿಯ ಅನನ್ಯ ಮಾತು...

ಆಟಿಸಂ ನರ ಬೆಳವಣಿಗೆಗೆ ಸಂಬಂಧಿಸಿದ ವಿಕಲತೆ. ಇದು ಸಂವಹನಕ್ಕೆ ದೊಡ್ಡ ಕಂಟಕ. ಆದರೆ, ಇಪ್ಪತ್ತು ವರ್ಷದ ಅದಿತಿ ಸೌಮ್ಯ ನಾರಾಯಣನ್ ತಾಯಿಯ ಬೆಂಬಲದೊಂದಿಗೆ ಆಟಿಸಂ ಅನ್ನು ಮೆಟ್ಟುನಿಂತು ಪ್ರೇರಕಶಕ್ತಿಯಾಗಿದ್ದಾರೆ.

ಅಮ್ಮನೊಂದಿಗೆ ಕಲಿಕೆಯ ಕ್ಷಣ

• ಶಶಿಕಲಾ ಎಂ.ಎಸ್.

ಒಂದಕ್ಷರವನ್ನು ಉಚ್ಚರಿಸಲು ಕಷ್ಟಪಡುತ್ತಿದ್ದ ಹೆಣ್ಣುಮಗಳೊಬ್ಬರು ತನ್ನ ಕಲ್ಪನಾ ಸಾಮರ್ಥ್ಯದಿಂದಲೇ ನರ ಬೆಳವಣಿಗೆಗೆ ಸಂಬಂಧಿಸಿದ ವಿಕಲತೆಯನ್ನು ಮೆಟ್ಟಿ ನಿಂತು, ಆಟಿಸಂ ಬಾಧಿತರಿಗೆಲ್ಲ ದೊಡ್ಡ ಪ್ರೇರಕಶಕ್ತಿಯಾಗಿದ್ದಾರೆ.

ಅದಿತಿ ಸೌಮ್ಯ ನಾರಾಯಣನ್ ಎಂಬ ಸುಕೋಮಲೆ ಬರವಣಿಗೆಯಷ್ಟೆ ಅಲ್ಲದೇ, ಸಂವಹನದಲ್ಲಿಯೂ ಹಾಸ್ಯವನ್ನೇ ಪ್ರಧಾನವಾಗಿಸಿಕೊಂಡಿದ್ದಾರೆ. ಅಳೆದು ತೂಗಿ ಮಾಡಿದ ನವಿರೆಳೆಯ ನೇಯ್ಗೆಯಂತೆ ಸಹಜವಾಗಿ ಸಂವಹನಕ್ಕೆ ಇಳಿಯುವ ಅವರು ತಾವೊಬ್ಬ ಲೇಖಕಿ, ಕಥೆಗಾರ್ತಿಯೆಂದು ಹೆಮ್ಮೆಯಿಂದ ಹೇಳಿಕೊಳ್ಳಲು ಇಷ್ಟಪಡುತ್ತಾರೆ.

'ಆಟಿಸಂ ಎಂಬುದು ಸಂವಹನಕ್ಕೆ ದೊಡ್ಡ ಕಂಟಕವಲ್ಲವೇ' ಎಂಬ ಪ್ರಶ್ನೆ ಕೇಳುವ ಮುನ್ನವೇ, ತಮ್ಮ ಮನಸ್ಸಿನೊಳಗೆ ಹಲವು ವರ್ಷಗಳಿಂದ ಕಟ್ಟಿಕೊಂಡಿರುವ ಅನೂಹ್ಯ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ ಬೆಂಗಳೂರಿನ 20 ವರ್ಷದ ಅದಿತಿ.

ದೃಢ ಮನಸ್ಸು ಇದ್ದರೆ, ಕಲ್ಪನಾ ಸಾಮರ್ಥ್ಯವನ್ನು ಬೆಳೆಸಿಕೊಂಡರೆ, ಸಹನಶೀಲತೆಯನ್ನು ರೂಢಿಸಿಕೊಂಡು ಬಿಟ್ಟರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಅದಿತಿ ಚಂದದ ಉದಾಹರಣೆ. ಅಕ್ಷರಗಳನ್ನು ಪ್ರೀತಿಸುತ್ತಲೇ ನ್ಯೂರೋಡೈವರ್ಸಿಟಿ ಕ್ಷೇತ್ರದಲ್ಲಿ ಪ್ರಮುಖ ಧ್ವನಿಯಾಗಿಯೂ ತಮ್ಮನ್ನು ರೂಪಿಸಿಕೊಂಡಿರುವುದು ಅವರ ವ್ಯಕ್ತಿತ್ವದ ವಿಶೇಷ.

'ಬಾಲ್ಯ ಹೇಗಿತ್ತು' ಎಂಬ ಪ್ರಶ್ನೆಗೆ ಸಹಜವಾಗಿ 'ಸಂತೋಷಕರ'ವಾಗಿತ್ತು ಎಂಬ ಉತ್ತರವನ್ನೇ ನೀಡುತ್ತಾರೆ. ಚಿಕ್ಕ ವಯಸ್ಸಿನಲ್ಲಿ ತಮ್ಮ ಸುತ್ತಲಿನ ಮಕ್ಕಳಿಗಿಂತ ತಾನು ವಿಭಿನ್ನ ಎಂಬ ಅರಿವು ಅವರಿಗೆ ಇತ್ತು. ಬೇರೆ ಮಕ್ಕಳಿಗೆ ಪದಗಳು ಸಹಜವಾಗಿ ಹರಿದುಬಂದರೆ, ತಮಗೆ ಒಂದು ಅಕ್ಷರವನ್ನು ಹೊರಹಾಕಲು ಕಷ್ಟವಾಗುತ್ತಿದ್ದ ಅನುಭವಗಳನ್ನು ಈಗ ಸಶಕ್ತವಾಗಿ ಹೇಳಬಲ್ಲರು. ಚಿಕ್ಕವರಿದ್ದಾಗಲೇ ಅವರ ಕಿವಿ ಮೇಲೆ ಪದೇ ಪದೇ ಬೀಳುತ್ತಿದ್ದ ಪದ 'ಆಟಿಸಂ'. ಸುಮಾರು ಎಂಟು ವರ್ಷವಿದ್ದಾಗ ತಾನೊಬ್ಬ ಆಟಿಸ್ಟಿಕ್ ಎಂಬುದನ್ನು ಅಧಿಕೃತವಾಗಿ ಹೇಳಲಾಯಿತು ಎಂಬುದನ್ನೂ ಅವರು ಮರೆತಿಲ್ಲ.

'ಕೆಲವೊಮ್ಮೆ ಈ ಆಟಿಸಂ ಇರದೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತೇನೋ ಎಂದು ಅನಿಸಿದ್ದು ಇದೆ. ಆದರೆ, ನನ್ನ ಕುಟುಂಬ, ಅದರಲ್ಲಿಯೂ ನನ್ನ ಅಮ್ಮ ಶ್ವೇತಾ ಶ್ರೀವತ್ಸನ್ ಈ ವಿಚಾರದಲ್ಲಿ ನನ್ನನ್ನು ಕೈಬಿಡಲಿಲ್ಲ. ನಾನು ಸೋತಂತೆ ಕಂಡಾಗೆಲ್ಲ, ನೀನು ಸೋತಿಲ್ಲ, ಸೋಲುವುದೂ ಇಲ್ಲ. ಸೋಲುವುದಕ್ಕೆ ಬಿಡುವುದೂ ಇಲ್ಲ ಎಂಬಂತೆ ನನ್ನನ್ನು ಹುರಿದುಂಬಿಸಿದ್ದಾರೆ. ಅವರು ನನ್ನಲ್ಲಿ ತುಂಬಿದ ಉತ್ಸಾಹದಿಂದ ನಾನು ವಿಭಿನ್ನವಾಗಿರುವುದಕ್ಕೇ ವಿಶಿಷ್ಟವಾಗಿದ್ದೇನೆ ಎಂಬ ಅರಿವನ್ನೂ ಗಳಿಸಿದ್ದೇನೆ' ಎಂದು ಬಹಳ ಹೆಮ್ಮೆ ಬೆರೆತ ಖುಷಿಯನ್ನು ವ್ಯಕ್ತಪಡಿಸುತ್ತಾರೆ ಅದಿತಿ.

ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ASD) ಎಂಬುದು ಒಂದು ನರ ಬೆಳವಣಿಗೆಯಲ್ಲಿ ಆಗುವ ತೊಂದರೆ. ಇದನ್ನು ಅನುಭವಿಸುವವರಿಗೆ ಸಾಮಾಜಿಕ ಸಂವಹನ ಅಷ್ಟು ಸುಲಭದ ಮಾತಾಗಿರುವುದಿಲ್ಲ. ಇದು ಒಟ್ಟಾರೆ ದೈನಂದಿನ ಚಟುವಟಿಕೆಗಳ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಅದಿತಿಯ ಆರಂಭಿಕ ಜೀವನ ಬಹುಬೇಗ ಮಾತುಗಳೇ ಇರದ ನಿಶ್ಯಬ್ದ ಪಥದಲ್ಲಿಯೇ ಸಾಗಿತು. ಆದರೆ, ಸೂಕ್ಷ್ಮಗ್ರಾಹಿ ಅದಿತಿ ಎಲ್ಲವನ್ನೂ ಗಮನಿಸುತ್ತಾ, ಆದರೆ, ಏನನ್ನೂ ಸರಿಯಾಗಿ ವ್ಯಕ್ತಪಡಿಸಲು ಆಗದೇ ಸಂಕಟಪಟ್ಟರು. ಈ ಸಂಕಟವನ್ನೆಲ್ಲ ಹೀರಿಕೊಂಡ ಅವರ ಆಂತರಿಕ ಲೋಕ ಸೃಜನಶೀಲ ಶಕ್ತಿಯ ಮೂಲವಾಯಿತು. ಇದೇ ಮುಂದೆ ಅವರ ಬದುಕನ್ನು ರೂಪಿಸುತ್ತಾ ಹೋಯಿತು.

'ಶಾಲಾ ದಿನಗಳು ಹೇಗಿದ್ದವು?' ಎಂಬುದಕ್ಕೆ 'ಅಲ್ಲಿಯೂ ಸಂತೋಷ ಹಾಗೂ ಪೂರ್ವಗ್ರಹದಿಂದ ನೋಡುವ ಮನಸ್ಸುಗಳು ಇದ್ದವು' ಎಂಬ ಮಿಶ್ರ ಭಾವವನ್ನು ವ್ಯಕ್ತಪಡಿಸುತ್ತಾರೆ. ಮೊದಲ ಬಾರಿಗೆ ಶಾಲೆಯ ವೇದಿಕೆಯಲ್ಲಿ ಪ್ರದರ್ಶನ ನೀಡಿದ ಕ್ಷಣ, ಶಾಲೆ ಕೈಗೊಂಡ ಪ್ರವಾಸದಲ್ಲಿ ಭಾಗಿಯಾಗಿದ್ದು ಇವೆಲ್ಲವೂ ನೆನಪಿನಲ್ಲಿ ಇಟ್ಟುಕೊಳ್ಳುವಂತಾದರೆ, ಅವರ ಕಲಿಕಾ ಸಾಮರ್ಥ್ಯವನ್ನು ಓರೆನೋಟದಿಂದ ನೋಡಿದ ದೃಷ್ಟಿಗಳನ್ನು ಅವರು ಇನ್ನು ಮರೆತಿಲ್ಲ.

'ನಾನು ಬೇರೆಯವರ ನಿರೀಕ್ಷೆಗೆ ತಕ್ಕಂತೆ ನನ್ನ ಕಲಿಕಾ ಸಾಮರ್ಥ್ಯವನ್ನು ತೋರಿಸಲು ಅಶಕ್ತಳಾಗಿದ್ದೆ. ಆಗ ನನ್ನ ಓರಗೆಯವರು ಇವಳಿಗೆ ಇದು ಅರ್ಥವಾಗುವುದಿಲ್ಲವೆಂದೇ ಊಹಿಸುತ್ತಿದ್ದರು' ಎಂಬುದನ್ನು ಹೇಳಲು ಅವರು ಮರೆಯಲಿಲ್ಲ.

ಮಹತ್ವದ ತಿರುವು

ಈಶಾನ್ಯ ಇಂಡಿಯಾ ಫೌಂಡೇಷನ್ ಒದಗಿಸಿದ ತಂತ್ರಜ್ಞಾನವು ಅದಿತಿ ಅವರ ಬದುಕಿನಲ್ಲಿ ಮಹತ್ವದ ತಿರುವನ್ನು ತಂದಿತು. 'ಅವಾಜ್'ನಂಥ ಆಗ್ಮೆಂಟೇಟಿವ್ ಮತ್ತು ಆಲ್ಟರ್ನೇಟಿವ್ ಕಮ್ಯುನಿಕೇಶನ್ (AAC) ಸಾಧನಗಳು ಅವರ ಸಂವಹನ ಕಲೆಯನ್ನು ಓರಗೆ ಹಚ್ಚಿದವು. ಟೈಪಿಂಗ್ ಕಲಿಯಲು ನೆರವಾಯಿತು. ಇದು ಜಗತ್ತಿನೊಂದಿಗೆ ಸಂಪರ್ಕವನ್ನು ಸಾಧಿಸುವ ದಾರಿಯನ್ನು ಸುಗಮವಾಗಿ ತೆರೆಯಿತು. ಅದಿತಿ ಅವರ ಮನಸ್ಸಿನೊಳಗಿದ್ದ ಒಂದೊಂದೇ ಪಾತ್ರಗಳು ಕಾಗದದ ಮೇಲೆ ಜೀವಂತಗೊಂಡವು.

ತನ್ನ ತಾಯಿ ಪ್ರತಿ ಕ್ಷಣವೂ ನೀಡಿದ ಬೆಂಬಲವೇ ಈ ಮಟ್ಟಕ್ಕೆ ತನ್ನನ್ನು ನಿಲ್ಲಿಸಿರುವುದಾಗಿ ಹೇಳಿಕೊಳ್ಳುವ ಅವರು, ತಮ್ಮ ಮೇಲೆ ಅಪಾರ ನಂಬಿಕೆ ಇಟ್ಟು, ತಮ್ಮ ಮಿತಿಗಳನ್ನು ಮೃದುವಾಗಿ ಅರ್ಥೈಸಿ, ಆ ಮಿತಿಗಳನ್ನು ಮೀರುವುದು ಹೇಗೆ ಎಂದು ಕಲಿಸಿಕೊಟ್ಟ ಶಿಕ್ಷಕರಾದ ಶಾಹೇಲಿ ಮುಖರ್ಜಿ ಮತ್ತು ವರ್ಷಾ ರಾಮದಾಸ್ ಅವರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

ಅದಿತಿ ಅವರ ಕಾರ್ಯಚಟುವಟಿಕೆಗಳು ಅವರ ಮಿತಿಯನ್ನು ಮೀರಲು ದೊಡ್ಡ ಬುನಾದಿ ಹಾಕಿರುವುದಲ್ಲದೇ ಆಟಿಸಂನಿಂದ ಬಳಲುತ್ತಿರುವ ಇತರರನ್ನು ಚಟುವಟಿಕೆಯತ್ತ ತರಲು ಪ್ರೇರೇಪಿಸಿವೆ. 'ಅವಾಜ್', 'ಸೋಲ್ಸ್ ಆರ್ಕ್' ಮತ್ತು 'ಇಂಡಿಯಾ ಆಟಿಸಂ' ಸೆಂಟರ್‌ಗಳ ಬ್ಲಾಗ್‌ಗಳಿಗೆ ನಿಯಮಿತವಾಗಿ ಬರೆಯುತ್ತಾರೆ. ಆಟಿಸಂ ಕುರಿತು ವೆಬಿನಾರ್‌ಗಳನ್ನು ನಡೆಸುತ್ತಾರೆ. ಇದಲ್ಲದೇ ಇನ್‌ಸ್ಟಿಟ್ಯೂಟ್ ಆಫ್ ನ್ಯೂರೋಡೈವರ್ಸಿಟಿಯ ಗ್ಲೋಬಲ್ ಸ್ಟೀರಿಂಗ್ ಸಮಿತಿಯ ಸದಸ್ಯೆಯೂ ಆಗಿದ್ದಾರೆ.

ಅದಿತಿಯನ್ನು ಹಲವು ವರ್ಷಗಳಿಂದ ಬಲ್ಲ ಆಲ್ ಇನ್‌ಕ್ಲೂಸಿವ್ ಫೌಂಡೇಷನ್ ಸಂಸ್ಥೆಯ ಸಹ–ಸ್ಥಾಪಕಿ ಚಿತ್ರಾ ಪಾಲ್ ಹೇಳುವಂತೆ, 'ಆಟಿಸಂ ಕುರಿತ ಪೂರ್ವನಿರ್ಧರಿತ ಯೋಚನೆಗಳ ಬಗ್ಗೆ ಮರುಚಿಂತಿಸುವಂತೆ ಮಾಡುವಲ್ಲಿ ಅದಿತಿ ಅವರ ಕೊಡುಗೆ ಇದೆ. ಆಟಿಸಂ ಅನ್ನು ಈವರೆಗೆ ಸಂಪೂರ್ಣವಾಗಿ ಅರ್ಥೈಸಲು ಆಗಿಲ್ಲ. ಮಾತನಾಡದೇ ಇರುವುದೇ ಬೌದ್ಧಿಕ ಅಸಮರ್ಥತೆ ಎಂಬ ಕಲ್ಪನೆಗೆ ಅದಿತಿಯಂಥ ಯುವ ಮನಸ್ಸು ಪೆಟ್ಟು ಕೊಟ್ಟಿದೆ'.

ಚಿತ್ರಾ ಪಾಲ್ ಅವರು ಸಂಪಾದಿಸಿರುವ 'ಟಾಕಿಂಗ್ ಫಿಂಗರ್ಸ್' ಪುಸ್ತಕದಲ್ಲಿ ಅದಿತಿ ಅವರ ಬರಹವೂ ಇದೆ. ಈ ಪುಸ್ತಕದಲ್ಲಿ ಮಾತನಾಡದ ಹದಿನಾರು ಲೇಖಕರು, 20 ಪ್ರಶ್ನೆಗಳಿಗೆ ಉತ್ತರ ನೀಡುವ ಮೂಲಕ ಜಗತ್ತನ್ನು ತಾವು ಕಂಡ ಬಗೆಯನ್ನು ಚಿತ್ರಿಸಿರುವ ಸಂಕಲನವಿದು. ಈ ಎಲ್ಲದರ ನಡುವೆಯೂ ಅದಿತಿ ತಮ್ಮ ಮುಂದಿನ ಕಾದಂಬರಿಗಳಾದ 'ಫೀಟ್ ಆನ್ ಗ್ರೌಂಡ್', 'ಹೆಡ್ ಇನ್ ದಿ ಏರ್' ಹೊರತರುತ್ತಿದ್ದಾರೆ. ಈಗಾಗಲೇ ಇವರೆಡೂ ಕಾದಂಬರಿಗಳು ಪ್ರಕಾಶಕರ ಸುಪರ್ದಿಯಲ್ಲಿವೆ.

ದಿನಚರಿ ಹೀಗಿರುತ್ತದೆ

ಅದಿತಿಯ ದಿನಚರಿ ಬೆಳಿಗ್ಗೆ ನಡಿಗೆಯಿಂದ ಆರಂಭಗೊಳ್ಳುತ್ತದೆ. ನಂತರ ಬರವಣಿಗೆ ಮತ್ತು ಸಂಸ್ಥೆಗಳ ಚಟುವಟಿಕೆಗಳು. ಮಧ್ಯಾಹ್ನ ಮೇಲೆ ಶಿಕ್ಷಕರೊಂದಿಗೆ ಅಧ್ಯಯನ. ಸಾಮಾಜಿಕ ಆತಂಕವನ್ನು ನಿಭಾಯಿಸಲು ವಾರಕ್ಕೆ ಒಮ್ಮೆ ಸಂವೇದಿ ವರ್ತನಾ ಚಿಕಿತ್ಸೆಗೆ (CBT) ಹಾಜರಾಗುತ್ತಾರೆ. AAC ತಂತ್ರಜ್ಞಾನ ಬಳಸಿ ಅವರು ಆನ್‌ಲೈನ್‌ನಲ್ಲಿ ಆರ್ಡರ್ ಮಾಡುವಷ್ಟು ನಿಪುಣರಾಗಿದ್ದಾರೆ.

'ಶ್ರದ್ಧೆ ವಹಿಸಿ ಮಿತಿಗಳನ್ನು ಮೀರಲು ಪ್ರಯತ್ನಿಸಿದರೆ, ಮುಂದೆ ಫಲ ನೀಡುತ್ತದೆ. ಸ್ವಾವಲಂಬನೆಯೆಂಬುದು ಹಂತ ಹಂತವಾಗಿ ನಿರ್ಮಾಣವಾಗುತ್ತದೆ' ಎಂದು ಹೊಸ ಹೊಳಹನ್ನು ತೆರೆದಿಡುತ್ತಾರೆ ಅದಿತಿ.

ರೋಗದಿಂದ ವ್ಯಕ್ತಿಯ ಸಾಮರ್ಥ್ಯವನ್ನು ನಿರ್ಣಯಿಸಬೇಡಿ. ಮಿತಿಗಳಿರುವ ಮನುಷ್ಯನೆಡೆಗೆ ಸದಾ ತೆರೆದ ಮನಸ್ಸು ಇಟ್ಟುಕೊಳ್ಳಿ. ಇಂಥ ವ್ಯಕ್ತಿಗಳಿಗಿರುವ ಸವಾಲುಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಎದುರಿಸಲು ಸೂಕ್ತ ವಾತಾವರಣವನ್ನು ರೂಪಿಸಲು ಸಹಾಯ ಮಾಡಿ.

12ನೇ ಪುಟಕ್ಕೆ...

ಅದಿತಿ ಸೌಮ್ಯ ನಾರಾಯಣನ್

ತಿಮ್ಮಕ್ಕನೇ ಸ್ಫೂರ್ತಿ ಇವರಿಗೆ ಬಂತು ಕೀರ್ತಿ

• ಆರ್.ಬಿ. ಗುರುಬಸವರಾಜ

ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರೊಬ್ಬರು ಪರಿಸರ ಜಾಗೃತಿ ಕುರಿತು ಪಾಠ ಮಾಡುತ್ತಿದ್ದರು. ಆಗ ಸಾಂದರ್ಭಿಕವಾಗಿ ಸಾಲುಮರದ ತಿಮ್ಮಕ್ಕ ಅವರ ಬಗ್ಗೆ ತಿಳಿಸಿದರು. ಕುತೂಹಲಗೊಂಡ ಒಬ್ಬ ವಿದ್ಯಾರ್ಥಿ ಸಾಲುಮರದ ತಿಮ್ಮಕ್ಕ ಅವರ ಬಗೆಗಿನ ಸಾಕ್ಷ್ಯಚಿತ್ರವನ್ನು ನೋಡಿದ. ಅದರಿಂದ ಪ್ರೇರೇಪಿತನಾಗಿ ದೊಡ್ಡವನಾದ ಮೇಲೆ ತಾನೂ ಗಿಡಗಳನ್ನು ಬೆಳೆಸಬೇಕೆಂದುಕೊಂಡ. ಆತ ತನ್ನ ಮಾತು ಉಳಿಸಿಕೊಂಡ. ಅದರ ಫಲವಾಗಿ ಈಗ ಸಾವಿರಾರು ಮರಗಳು ನೆರಳು ಹಾಗೂ ಫಲ ನೀಡುವ ಜೊತೆಗೆ ಪ್ರಾಣಿ-ಪಕ್ಷಿಗಳಿಗೆ ಆಶ್ರಯ ತಾಣವಾಗಿವೆ. ಅಂದಹಾಗೆ ಈ ಪರಿಸರ ಪ್ರೇಮಿ ಸಿಂಧನೂರಿನ ಅಮರೇಗೌಡ ಮಲ್ಲಾಪುರ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ ಅವರದು ಕೃಷಿಕ ಕುಟುಂಬ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಈತ ಕಲಿಕೆಯಲ್ಲಿ ಚುರುಕಾಗಿದ್ದ. ಆದರೆ ಆರ್ಥಿಕ ಪರಿಸ್ಥಿತಿ ಸರಿ ಇರದ ಕಾರಣ ಏಳನೇ ತರಗತಿಗೆ ಓದುವುದನ್ನು ನಿಲ್ಲಿಸಿ ಅಣ್ಣಂದಿರ ಜೊತೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ.

2014ರಲ್ಲಿ ಅಮರೇಗೌಡ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡರು. ಅಪಾರವಾಗಿ ಪ್ರೀತಿಸುತ್ತಿದ್ದ ಎರಡೂ ಜೀವಗಳು ತಮ್ಮಿಂದ ದೂರವಾದವು ಎಂಬುದನ್ನು ಅವರಿಗೆ ಅರಗಿಸಿಕೊಳ್ಳಲು ಕಷ್ಟವಾಯಿತು. ತಂದೆ–ತಾಯಿಯ ಸವಿನೆನಪು ಸದಾಕಾಲ ಉಳಿಯಬೇಕಾದರೆ ಅವರ ಹೆಸರಿನಲ್ಲಿ ಗಿಡಗಳನ್ನು ಬೆಳೆಸಬೇಕೆಂದು ತೀರ್ಮಾನಿಸಿದರು. ಅದೇ ವರ್ಷ ನೂರು ಗಿಡಗಳನ್ನು ನೆಟ್ಟರು. ಹೀಗೆ ಪ್ರಾರಂಭವಾದ ಹವ್ಯಾಸ ಈಗ ಚಳವಳಿಯಾಗಿ ರೂಪುಗೊಂಡಿದೆ. ಗಿಡಗಳನ್ನು ನೆಟ್ಟು ಪೋಷಿಸುವುದೇ ಅವರ ಬದುಕಾಗಿದೆ.

'ಕಲ್ಯಾಣ ಕರ್ನಾಟಕ ಭಾಗವನ್ನು ಹಸಿರುನಾಡನ್ನಾಗಿ ಪರಿವರ್ತಿಸುವ ಉದ್ದೇಶದಿಂದ 'ವನಸಿರಿ ಫೌಂಡೇಶನ್' ಪ್ರಾರಂಭಿಸಿದ್ದೇನೆ. ಇದರಲ್ಲಿ 40ಕ್ಕೂ ಹೆಚ್ಚು ಸ್ವಯಂ ಸೇವಕರಿದ್ದಾರೆ. ಫೌಂಡೇಶನ್ ವತಿಯಿಂದ 40 ಸಾವಿರಕ್ಕೂ ಅಧಿಕ ಗಿಡಗಳನ್ನು ಬೆಳೆಸಿದ್ದೇನೆ. ಅರವತ್ತು ಸಾವಿರಕ್ಕೂ ಹೆಚ್ಚಿನ ಗಿಡಗಳನ್ನು ಇತರರಿಗೆ ವಿತರಿಸಿದ್ದೇನೆ. ಸಿಂಧನೂರು, ಮಾನ್ವಿ, ಕಾರಟಗಿ, ಲಿಂಗಸೂಗೂರು, ಮಸ್ಕಿ, ರಾಯಚೂರು, ದೇವದುರ್ಗ, ಸಿರಗುಪ್ಪ, ಬಳ್ಳಾರಿ, ಗಂಗಾವತಿ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳ ಶಾಲೆ-ಕಾಲೇಜು, ಹಾಸ್ಟೆಲ್, ಪೊಲೀಸ್ ಠಾಣೆ, ಸ್ಮಶಾನ, ರಸ್ತೆಬದಿ–ಹೀಗೆ ಎಲ್ಲೆಲ್ಲಿ ಖಾಲಿ ಜಾಗ ಇರುತ್ತದೆಯೋ ಅಲ್ಲೆಲ್ಲಾ ಗಿಡಗಳನ್ನು ನೆಡುವ ಕಾಯಕದಲ್ಲಿ ನಿರತನಾಗಿದ್ದೇನೆ' ಎನ್ನುತ್ತಾರೆ ಅಮರೇಗೌಡ.

ಬೇವು, ಹೊಂಗೆ, ಅರಳಿ, ನೇರಳೆ, ಹಲಸು, ಸಿಹಿಹುಣಸೆ, ಮಹಾಘನಿ, ಹೆಬ್ಬೇವು ಮುಂತಾದ ಸ್ಥಳೀಯ ಜಾತಿಯ ಗಿಡಗಳನ್ನು ಬೆಳೆಸಿದ್ದಾರೆ. ಕೇವಲ ಗಿಡಗಳನ್ನು ನೆಡುವುದಷ್ಟೇ ಅಲ್ಲ, ಅವುಗಳನ್ನು ಪೋಷಿಸುವ, ನೀರುಣಿಸುವ ಹಾಗೂ ಕಾಲಕಾಲಕ್ಕೆ ಟೊಂಗೆಗಳನ್ನು ಕತ್ತರಿಸಿ ಅವು ನೇರವಾಗಿ ಬೆಳೆಯುವಂತೆ ಮಾಡುವ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.

ಪ್ರತಿ ವರ್ಷ ಇವರು 'ರಕ್ಷಾಬಂಧನ'ವನ್ನು 'ವೃಕ್ಷಬಂಧನ'ವನ್ನಾಗಿ ಆಚರಿಸುತ್ತಾರೆ. ಸುತ್ತಮುತ್ತಲಿನ ಗಿಡಗಳಿಗೆ ರಕ್ಷೆ ನೀಡುವ ಮೂಲಕ ವೃಕ್ಷಾಬಂಧನವಾಗಿಸುತ್ತಾರೆ.

11ನೇ ಪುಟಕ್ಕೆ...



ಪ್ರಾಣಿ–ಪಕ್ಷಿಗಳಿಗೆ ಆಹಾರ

ಬೇಸಿಗೆಯಲ್ಲಿ ಪ್ರಾಣಿ ಪಕ್ಷಿಗಳಿಗೆ ನೀರಿನ ದಾಹ ತಣಿಸಲು ಮಡಿಕೆಗಳು, ಮಣ್ಣಿನ ತಟ್ಟೆಗಳು ಅಥವಾ ಖಾಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಅಳವಡಿಸಿ ನೀರುಣಿಸುತ್ತಾರೆ. ಖಾಲಿ ಡಬ್ಬಗಳನ್ನು ಕತ್ತರಿಸಿ ಅವುಗಳಲ್ಲಿ ಜೋಳ, ಅಕ್ಕಿ, ರಾಗಿಯಂತಹ ಧಾನ್ಯಗಳನ್ನು ಇರಿಸಿ ಪಕ್ಷಿಗಳಿಗೆ ಆಹಾರದ ವ್ಯವಸ್ಥೆ ಮಾಡುತ್ತಾರೆ.

ಹಸಿರ ದಾರಿಯಲ್ಲಿ ಅಮರೇಗೌಡ ಮಲ್ಲಾಪುರ

ಮೈಸೂರು, ಮಾ ಸಾಹೇಬ್ ಮತ್ತು ಮಾಹೇಶ್ವರಿ ಸೀರೆ..

• ಡಾ. ಕೆ.ಎಸ್.ಚೈತ್ರಾ

ಇಂದೋರ್ ಬೀದಿಯಲ್ಲಿ ಸಾಲು ಸಾಲು ಸೀರೆ ಅಂಗಡಿಗಳು ಸಿಗುತ್ತವೆ. ಎಲ್ಲ ಮಳಿಗೆಗಳಲ್ಲಿಯೂ ಅಲ್ಲಿನ ರಾಣಿ ಮಾ ಸಾಹೇಬ್ ಅವರ ಒಂದು ಸಾಮಾನ್ಯ ಭಾವಚಿತ್ರ ಕಾಣಸಿಗುತ್ತದೆ. ಮೈಸೂರು ರಾಜ್ಯದಲ್ಲಿ ಕ್ಷಾಮ ಬಂದು ನೇಕಾರರಿಗೆ ಕೆಲಸವಿಲ್ಲವಾಗಿತ್ತು. ಆಗ ಇವರನ್ನು ಮಾಹೇಶ್ವರಕ್ಕೆ ಕರೆಸಿ ಆಶ್ರಯ ನೀಡಿದ್ದು ಇದೇ ರಾಣಿ...

ಭಾರತದ ಅತ್ಯಂತ ಸ್ವಚ್ಛ ನಗರ ಖ್ಯಾತಿಯ ಮಧ್ಯಪ್ರದೇಶದ ಇಂದೋರ್‌ಗೆ ಪ್ರವಾಸ ಕೈಗೊಂಡಿದ್ದೆವು. ಮುಸ್ಸಂಜೆಯಲ್ಲಿ ಸುಮ್ಮನೇ ನಗರ ಸಂಚಾರ ಹೊರಟಾಗ ಬೀದಿಗಳಲ್ಲಿ ಎಲ್ಲಿಯಾದರೂ ಕಸ ಇದೆಯೇ ಎಂಬ ಕುತೂಹಲ. ಆದರೆ ಕಾಣಿಸಿದ್ದು ಸಾಲು ಸಾಲು ಸೀರೆಗಳ ಅಂಗಡಿಗಳು! ಕುತೂಹಲಕ್ಕಾಗಿ ಅಂಗಡಿಯೊಂದನ್ನು ಪ್ರವೇಶಿಸಿದ್ದಾಯ್ತು. ಅಲ್ಲಿ ಮೊದಲು ಕಂಡಿದ್ದು ಗೋಡೆಯ ಮೇಲಿದ್ದ ಚಿತ್ರ. ಕೈಯಲ್ಲಿ ಶಿವಲಿಂಗವನ್ನು ಹಿಡಿದು, ಬಿಳಿಸೀರೆಯನ್ನು ತಲೆಯ ಮೇಲೆ ಹೊದ್ದ ತೇಜಸ್ವಿ ಮಹಿಳೆ. 'ಯಾರಿವರು, ನಿಮ್ಮ ತಾಯಿಯೇ' ಎಂದದ್ದಕ್ಕೆ, 'ಅವರು ನಮ್ಮೆಲ್ಲರ ತಾಯಿ, ಲೋಕಮಾತಾ..ಮಾ ಸಾಹೇಬ್' ಎಂಬ ಉತ್ತರ ಸಿಕ್ಕಿತು.

ಆಸಕ್ತಿ ಹೆಚ್ಚಾಯಿತು. ಅಂಗಡಿ ಮಾಲೀಕರನ್ನು ಮಾತಿಗೆಳದಾಗ ಗೊತ್ತಾಗಿದ್ದು ಇಷ್ಟು.

ಮಾ ಸಾಹೇಬ್, 18ನೆಯ ಶತಮಾನದಲ್ಲಿದ್ದ ದೇವಿ ಅಹಿಲ್ಯಾಬಾಯಿ ಹೋಳ್ಕರ್. ಮರಾಠರ ಪೇಶ್ವಾ ಮನೆತನದವಳಾಗಿದ್ದು, ಎಂಟು ವರ್ಷಕ್ಕೆ ಮದುವೆಯಾಗಿ ಇಂದೋರ್ ಗೆ ಬಂದವಳು. ಚಿಕ್ಕ ವಯಸ್ಸಿಗೆ ಎರಡು ಮಕ್ಕಳು, 29 ರಲ್ಲಿ ವಿಧವೆ, ನಂತರ ಇಬ್ಬರೂ ಮಕ್ಕಳ ಸಾವು.. ಇದಿಷ್ಟು ವೈಯಕ್ತಿಕ ಬದುಕು. ಸತಿಯಾಗ ಹೊರಟವಳು ಸುಭದ್ರ ಮಾಳ್ವ ಸಾಮ್ರಾಜ್ಯ ಕಟ್ಟಿ ತನ್ನ ಜನಪರ ಕಾರ್ಯದಕ್ಷತೆಯ ಆಡಳಿತದಿಂದ ಇಂದಿಗೂ ಜನಮಾನಸದಲ್ಲಿ ಲೋಕಮಾತೆಯಾಗಿ ಬೇರೂರಿದ್ದಾಳೆ.

ನರ್ಮದಾ ನದಿಯ ತಟದಲ್ಲಿರುವ ಮಾಹೇಶ್ವರವು ಶತಮಾನಗಳಿಂದ ಸಂಸ್ಕೃತಿ, ಅಧ್ಯಾತ್ಮ ಮತ್ತು ಕೈಗಾರಿಕೆಯ ಪ್ರಮುಖ ಕೇಂದ್ರವಾಗಿತ್ತು. ಇದನ್ನು ಮಾಳ್ವ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಮಾಡಿ ಸಮರ್ಥ ರಾಜ್ಯಭಾರ ನಡೆಸಿದ್ದರ ಜತೆ ನ್ಯಾಯಪರ ಆಡಳಿತಕ್ಕೆ ಹೆಸರಾದವಳು ಅಹಿಲ್ಯಾಬಾಯಿ. ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ಅವಳ ಮುಖ್ಯ ಕೊಡುಗೆ ಮಾಹೇಶ್ವರಿ ಸೀರೆಗಳು. ಸ್ಥಳೀಯ ಸಮುದಾಯಗಳಿಗೆ ಆರ್ಥಿಕ ಬಲವನ್ನು ಒದಗಿಸುವ ಜತೆಗೇ ಪಾರಂಪರಿಕ ಕೌಶಲ್ಯಗಳನ್ನು ಸಂರಕ್ಷಿಸುವ ಉದ್ದೇಶ ಹೊಂದಿದ್ದ ರಾಣಿಗೆ ಇದಕ್ಕೆ ಸೂಕ್ತವೆನಿಸಿದ್ದು ಕೈಮಗ್ಗದ ಬಟ್ಟೆ. ಸ್ವತಃ ನೇಯ್ಗೆ ಮತ್ತು ವಿನ್ಯಾಸದಲ್ಲಿ ಆಸಕ್ತಿ ಇದ್ದುದ್ದರಿಂದ ಅಹಿಲ್ಯಾಬಾಯಿ 1760 ರಲ್ಲಿ ಸುತ್ತಮುತ್ತಲಿನ ಪ್ರದೇಶದಿಂದ ಕುಶಲ ನೇಕಾರರನ್ನು ತನ್ನ ರಾಜ್ಯಕ್ಕೆ ಕರೆಸಿಕೊಂಡು ಬೇಕಾದ ಸೌಲಭ್ಯ ನೀಡಿ ಈ ಯೋಜನೆ ಆರಂಭಿಸಿದಳು.

ಮೊದಲು ತಯಾರಾಗಿದ್ದು 9 ಗಜದ ನವಾರಿ ಸೀರೆಗಳು ಮತ್ತು ತಲೆಗೆ ಸುತ್ತುವ ರುಮಾಲು. ಆರಂಭದಲ್ಲಿ ರಾಜಮನೆತನದವರು ಮಾತ್ರ ಇದನ್ನು ಬಳಸುತ್ತಿದ್ದರು. ಆದರೆ ಇವುಗಳನ್ನು ಜನಪ್ರಿಯಗೊಳಿಸಲು ಮಾಹೇಶ್ವರಕ್ಕೆ ಆಗಮಿಸುತ್ತಿದ್ದ ಪ್ರತಿಷ್ಠಿತ ಗಣ್ಯರು-ಅತಿಥಿಗಳಿಗೆ ಉಡುಗೊರೆಯಾಗಿ ನೀಡುವ ಪದ್ಧತಿ ಆರಂಭವಾಯಿತು. ಉತ್ತಮ ಗುಣಮಟ್ಟದ ಜತೆ ನಮ್ಮ ಸಂಸ್ಕೃತಿಯ ಪ್ರತೀಕವಾಗಿರಬೇಕು ಎಂದು ನಿರ್ಧರಿಸಿ ಅದಕ್ಕೆ ತಕ್ಕಂತೆ ವಿನ್ಯಾಸ ರೂಪಿಸಲಾಯ್ತು. ಕಾಲಕ್ರಮೇಣ ಈ ಸೀರೆಗಳ ಉತ್ಪಾದನೆ ಮತ್ತು ಜನಪ್ರಿಯತೆ ಹೆಚ್ಚಿದಂತೆ ಜನಸಾಮಾನ್ಯರೂ ಇದರತ್ತ ಆಕರ್ಷಿತರಾದರು. ಹೀಗೆ ಇವು ಭಾರತದೆಲ್ಲೆಡೆ ಹಾಗೂ ವಿದೇಶಗಳಲ್ಲಿಯೂ ಪ್ರಸಿದ್ಧಿ ಪಡೆದವು. ರಾಣಿಯ ದೂರದರ್ಶಿತ್ವದ ಫಲದಿಂದ ನೇಕಾರಿಕೆ ವೃತ್ತಿ ಲಾಭದಾಯಕವಾಗಿ ಸಾವಿರಾರು ಜನರಿಗೆ ಬದುಕುವ ಮಾರ್ಗವಾಯಿತು; ಮಾಹೇಶ್ವರದ ಹೆಮ್ಮೆಯ ಗುರುತಾಗಿ ಪರಿಣಮಿಸಿತು.

ಮಾಹೇಶ್ವರಿ ಸೀರೆ

ಲೋಕಮಾತಾ ಮಾ ಸಾಹೇಬ್

ಮಾಹೇಶ್ವರಿ ಸೀರೆಯ ವೈಶಿಷ್ಟ್ಯ

ರೇಷ್ಮೆ ಮತ್ತು ಹತ್ತಿ ಎಳೆಗಳನ್ನು ಉಪಯೋಗಿಸಿ ಮಗ್ಗದಲ್ಲಿ ನೇಯಲಾಗುವ ಈ ಸೀರೆಗಳು ತಮ್ಮ ಚೆಲುವು, ಆಕರ್ಷಕ ಬಣ್ಣ, ವಿನ್ಯಾಸದ ಜತೆ ನುಣುಪಾಗಿ ಹಗುರವಾಗಿದ್ದು ಉಡಲು ಅನುಕೂಲವಾಗಿವೆ. ಆರಂಭದಲ್ಲಿ ಇವುಗಳನ್ನು 'ಗರ್ಭ ರೇಷ್ಮೆ' ಸೀರೆಗಳೆಂದು ಕರೆಯಲಾಗುತ್ತಿತ್ತು. ಇದರಲ್ಲಿ ಗರ್ಭ ರೇಷ್ಮೆ ಅಂದರೆ ನಿರ್ದಿಷ್ಟ ರೇಷ್ಮೆಹುಳುಗಳ ಜಾತಿಯ ಮೊಟ್ಟೆಗಳಿಂದ ತೆಗೆದ ಅತ್ಯುತ್ತಮ ದರ್ಜೆಯ ರೇಷ್ಮೆ ಎಳೆಗಳಿಗೆ ನೈಸರ್ಗಿಕ ಬಣ್ಣಗಳನ್ನೇ ಹಾಕಿ ನೇಯ್ದ ಬಟ್ಟೆ. ದಿನ ಕಳೆದಂತೆ ಇವು ತಯಾರಾಗುತ್ತಿದ್ದ ಮಾಹೇಶ್ವರದ ಹೆಸರಿನಿಂದ ಮಾಹೇಶ್ವರಿ ಸೀರೆಗಳೆಂದೇ ಪ್ರಸಿದ್ಧವಾಯಿತು.

ಈ ಸೀರೆಗಳಲ್ಲಿ ಕಂಡುಬರುವ ರೇಖೆಗಳು, ತ್ರಿಕೋನ, ಚೌಕಾಕಾರದ ವಿನ್ಯಾಸಗಳಿಗೆ ಮಾಹೇಶ್ವರ ಕೋಟೆಯ ಕಿಟಕಿಗಳು, ಮೆಟ್ಟಿಲುಗಳೇ ಸ್ಫೂರ್ತಿ. ಹಾಗೆಯೇ ಸುತ್ತಮುತ್ತಲೂ ಕಾಣುವ ಮಲ್ಲಿಗೆ-ಹತ್ತಿಯ ಹೂವು, ನರ್ಮದಾ ನದಿ, ಕಮಲ, ಹಂಸ, ನವಿಲು ಇವೆಲ್ಲವೂ ಸೀರೆಯ ಮೇಲಿನ ಪ್ರಮುಖ ಚಿತ್ತಾರಗಳು. ಏಳು ಹಂತಗಳಲ್ಲಿ ತಯಾರಾಗುವ ಒಂದು ಸಾಮಾನ್ಯ ಮಾಹೇಶ್ವರಿ ಸೀರೆಯ ನೇಯ್ಗೆಗೆ 4-10 ದಿನ ಬೇಕು. ಬೆಲೆ ₹2 ರಿಂದ ₹20 ಸಾವಿರದವರೆಗಿದೆ. ರಾಣಿಯ ದೂರದೃಷ್ಟಿ -ಸೃಜನಶೀಲತೆ ಫಲವಾಗಿ ರೂಪಗೊಂಡ ಈ ಸೀರೆಗಳು ಕಾಲ ಕಳೆದಂತೆ ಅನೇಕ ಬದಲಾವಣೆಗಳನ್ನು ಹೊಂದಿವೆ. ಈಗ ಸೀರೆ ರುಮಾಲು ಅಲ್ಲದೆ ಚೂಡಿದಾರ್, ಶರ್ಟ್,ಕರ್ಟನ್, ದಿಂಬಿನ ಕವರ್, ಹೀಗೆ ಎಲ್ಲದರಲ್ಲಿಯೂ ಮಾಹೇಶ್ವರಿ ಬಟ್ಟೆಯನ್ನು ಬಳಸಲಾಗುತ್ತಿದೆ.

ಜನರಿಗಾಗಿಯೇ ಅವರು ಬದುಕಿದರು. ಅಂದು ಅವರು ಮಾಡಿದ ಕೆಲಸದಿಂದ ಲಕ್ಷಾಂತರ ಕುಟುಂಬಗಳು ಸ್ವಾಭಿಮಾನದಿಂದ ಬಾಳುತ್ತಿವೆ. ಹಾಗಾಗಿ ಅವರು ಲೋಕಮಾತಾ. ಪವರ್ ಲೂಮ್ ಬಂದಂತೆ ಮಾಹೇಶ್ವರಿ ಸೀರೆಗಳ ಬೇಡಿಕೆ ಕುಗ್ಗಿತ್ತು. ಆದರೆ ರಾಣಿಯ ಮನೆತನದವರು ಈ ಸೀರೆಗಳನ್ನು ಮತ್ತೆ ಪುನರುಜ್ಜೀವನಗೊಳಿಸಿದ್ದಾರೆ ಎಂದು ಅಂಗಡಿ ಮಾಲೀಕ ಗೌರವದಿಂದ ಕೈ ಮುಗಿದರು.

ಮೈಸೂರಿನ ನಂಟು

ಮರುದಿನ ಅಹಿಲ್ಯಾಬಾಯಿ ವಾಸಿಸುತ್ತಿದ್ದ ಇಂದೋರ್‌ನ ರಾಜವಾಡೆಗೆ ಭೇಟಿ ನೀಡಿದೆವು. ಅದರ ಹಿಂದಿರುವ ಮ್ಯೂಸಿಯಂನಲ್ಲಿ ಗೊಂಬೆಗಳ ಮೂಲಕ ಆಕೆಯ ಜೀವನ ಕಥೆಯನ್ನು ತೆರೆದಿಡಲಾಗಿದೆ. ಹಾಗೆ ನೋಡುವಾಗ ಗಾಜಿನ ಪೆಟ್ಟಿಗೆಯಲ್ಲಿದ್ದ ಕೈಮಗ್ಗದ ಮುಂದಿದ್ದ ಟಿಪ್ಪಣಿಯಲ್ಲಿ ಮೈಸೂರು ಎಂದು ಕಂಡಿತು! 'ಮೈಸೂರು ರಾಜ್ಯದಲ್ಲಿ ಕ್ಷಾಮ ಬಂದು ನೇಕಾರರಿಗೆ ಕೆಲಸವಿಲ್ಲವಾಗಿತ್ತು. ಆಗ ಇವರನ್ನು ಮಾಹೇಶ್ವರಕ್ಕೆ ಕರೆಸಿ ಆಶ್ರಯ ನೀಡಿದ್ದು ರಾಣಿ. ಅದರ ಫಲವಾಗಿ ಹುಟ್ಟಿದ್ದು ಮಾಹೇಶ್ವರಿ ಸೀರೆ' ಎಂದು ಬರೆಯಲಾಗಿತ್ತು. ಹಿಂದಿನ ದಿನ ಸೀರೆ ಖರೀದಿಸುವಾಗ ಮನಸ್ಸಿನಲ್ಲಿ ನಮ್ಮ ಮೈಸೂರು ಸಿಲ್ಕ್ ಸೀರೆಗಳ ನೆನಪಾಗಿತ್ತು. ಅಲ್ಲಿನ ವಿವರದ ಪ್ರಕಾರ ಮೈಸೂರಿನವರು ಇಲ್ಲಿಗೆ ಬಂದು ಮಾಹೇಶ್ವರಿ ಸೀರೆಗಳ ನೇಯ್ಗೆಗೆ ಕಾರಣವಾಗಿದ್ದನ್ನು ಕೇಳಿ ಬಹಳ ಹೆಮ್ಮೆ ಮತ್ತು ಖುಷಿಯಾಯಿತು. ಮೈಸೂರು, ಮಾ ಸಾಹೇಬ್ ಮತ್ತು ಮಾಹೇಶ್ವರಿ ಸೀರೆ...ಎಲ್ಲಿಯ ನಂಟು!

ಅಂತೂ ಇಂದೋರ್ ಪ್ರವಾಸದಲ್ಲಿ ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಪಾರ್ಕ್‌ಗಳಿಗೆ ರಾಣಿಯ ಹೆಸರು, ಅಲ್ಲಲ್ಲಿ ಪ್ರತಿಮೆಗಳನ್ನು ನೋಡಿದೆವು. ಮರಳಿ ಬರುವಾಗ ಗಮನಿಸಿದ್ದು ವಿಮಾನ ನಿಲ್ದಾಣದ ಹೆಸರೂ ದೇವಿ ಅಹಿಲ್ಯಾಬಾಯಿ ಹೋಳ್ಕರ್ ಎಂದೇ! ಅಲ್ಲಿರುವ ರಾಣಿಯ ದೊಡ್ಡ ಪ್ರತಿಮೆಯನ್ನು ಕಂಡಾಗ ಒಂದು ಕ್ಷಣ ನಿಂತು, ತಲೆ ಬಗ್ಗಿಸಿ 'ಮಾ ಸಾಹೇಬ್' ಗೆ ಗೌರವ ಸಲ್ಲಿಸಿದ್ದೆವು.

ತಿಮ್ಮಕ್ಕನೇ ಸ್ಫೂರ್ತಿ

10ನೇ ಪುಟದಿಂದ..

ಗಣೇಶನ ಹಬ್ಬದಲ್ಲಿ 200ಕ್ಕೂ ಹೆಚ್ಚು ಬೀಜದ ಗಣೇಶನ ಮೂರ್ತಿಗಳನ್ನು ತಯಾರಿಸಿ ಉಚಿತವಾಗಿ ನೀಡುವ ಮೂಲಕ ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆಗೆ ಒತ್ತು ನೀಡುತ್ತಾರೆ.

ವೃಕ್ಷಗಳ ರಕ್ಷಣೆ ಮಾಡಲು 'ವೃಕ್ಷ ರಥ' ವಾಹನ ಪ್ರಾರಂಭಿಸುವ ಮೂಲಕ ಗಿಡಮರಗಳ ರಕ್ಷಣೆಗೆ ಮುಂದಾಗಿದ್ದಾರೆ. ತಮ್ಮದೇ ಟ್ಯಾಂಕರ್ ಹೊಂದಿದ್ದು, ಬೇಸಿಗೆಯಲ್ಲಿ ಗಿಡಗಳಿಗೆ ನೀರುಣಿಸುತ್ತಾರೆ. ಸಸಿಗಳು ಸೇರಿದಂತೆ ಗಿಡ ನೆಡಲು ಬೇಕಾದ ಗುದ್ದಲಿ, ಸನಿಕೆ, ಹಾರೆ, ಮುಂತಾದ ಪರಿಕರಗಳು ವೃಕ್ಷರಥದಲ್ಲಿ ಸದಾ ಸಿದ್ಧವಿರುತ್ತವೆ. ವೃಕ್ಷರಥ ಮತ್ತು ಟ್ಯಾಂಕರ್‌ಗೆ ದಾನಿಗಳ ಅಲ್ಪ ನೆರವಿದ್ದು ಉಳಿದಂತೆ ಎಲ್ಲವನ್ನೂ ತಾವೇ ಭರಿಸಿದ್ದಾರೆ.

ಮದುವೆ, ನಾಮಕರಣ, ಜನ್ಮದಿನ, ವಾರ್ಷಿಕೋತ್ಸವ ಮುಂತಾದ ಶುಭ ಸಮಾರಂಭಗಳಲ್ಲಿ ಸಸಿಗಳನ್ನು ನೀಡುವ ಮೂಲಕ ವೃಕ್ಷ ಸಂಸ್ಕತಿಯನ್ನು ಹುಟ್ಟು ಹಾಕಿದ್ದಾರೆ. ಪ್ರತಿ ವರ್ಷ ಐದು ಸಾವಿರ ಸಸಿಗಳನ್ನು ಅರಣ್ಯ ಇಲಾಖೆಯಿಂದ ಖರೀದಿಸಿ ಇತರರಿಗೆ ವಿತರಿಸುತ್ತಾರೆ. ಮಳೆಗಾಲ ಪ್ರಾರಂಭವಾಗುವ ವೇಳೆಗೆ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳ ಸಹಾಯದಿಂದ ಬೀಜದುಂಡೆ ತಯಾರಿಸುತ್ತಾರೆ. ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಗುಡ್ಡ-ಬೆಟ್ಟ, ಬಯಲು, ಹಳ್ಳ-ಕೊಳ್ಳಗಳ ಬಯಲು, ಮುಂತಾದ ಕಡೆಗಳಲ್ಲಿ ಬೀಜದುಂಡೆಗಳನ್ನು ಎಸೆದು ಸಸ್ಯಗಳು ಬೆಳೆಸಲು ಶ್ರಮಿಸುತ್ತಾರೆ. ಸಸಿಗಳ ಖರೀದಿ, ವೃಕ್ಷರಥ ಖರೀದಿ, ಟ್ಯಾಂಕರ್ ಖರೀದಿ, ಸಸಿಗಳ ರಕ್ಷಣೆ... ಹೀಗೆ ಇತರೆ ಕೆಲಸಗಾಗಿ ಬಳಕೆಯಾದ ಹಣವನ್ನು ಹೊಂದಿಸಲಾಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದೂ ಇದೆ.

ವಿದ್ಯಾರ್ಥಿಗಳೊಂದಿಗೆ ಅಮರೇಗೌಡ

ವೃಕ್ಷ ಸಂಸ್ಕೃತಿಯೇ ನಿತ್ಯ ಕಾಯಕ

ಅಮರೇಗೌಡರಿಗೆ ಗಿಡಗಳನ್ನು ಬೆಳೆಸುವುದೇ ನಿತ್ಯದ ಕಾಯಕ. ಬೆಳಿಗ್ಗೆ ಹಾಸಿಗೆಯಿಂದ ಏಳುವ ಮೊದಲೇ ಅವರ ಅಂದಿನ ದಿನದ ಕಾರ್ಯ ನಿರ್ಧಾರವಾಗುತ್ತದೆ. ಅಂದು ಎಲ್ಲೆಲ್ಲಿ ಹೊಸ ಸಸಿಗಳನ್ನು ನೆಡಬೇಕು. ಎಲ್ಲೆಲ್ಲಿ ಸಸಿಗಳಿಗೆ ನೀರುಣಿಸಬೇಕು, ಎಲ್ಲೆಲ್ಲ ಸಸಿಗಳನ್ನು ಪೋಷಣೆ ಮಾಡಬೇಕು ಪಟ್ಟಿ ಮಾಡಿಕೊಳ್ಳುತ್ತಾರೆ. ಅದರಂತೆಯೇ ಕೆಲಸ ಮಾಡುತ್ತಾರೆ. ಅಂದಿನ ಕಾರ್ಯಗಳ ಅವಲೋಕನ ಮಾಡುತ್ತಾ ರಾತ್ರಿ ಹಾಸಿಗೆಗೆ ಒರಗುತ್ತಾರೆ. ಇದು ಅವರ ನಿತ್ಯದ ಕಾಯಕ.

ಇವರ ಅವಿರತ ಹಾಗೂ ನಿಸ್ವಾರ್ಥ ಸೇವೆಯನ್ನು ಗಮನಿಸಿದ ಕರ್ನಾಟಕ ಸರ್ಕಾರ 2022-23ನೇ ಸಾಲಿನ 'ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ' ನೀಡಿ ಗೌರವಿಸಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ 50ನೇ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಇವರಿಗೆ 'ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ' ನೀಡಿದೆ. 2019ರಲ್ಲಿ ಇವರಿಗೆ ಅಬ್ದುಲ್ ಕಲಾಂ ವರ್ಲ್ಡ್ ರೆಕಾರ್ಡ್ ನೀಡುವ 'ಕಲಾಂ ಗೋಲ್ಡನ್ ಪ್ರಶಸ್ತಿ'ಯೂ ಲಭಿಸಿದೆ. ಫಲಭರಿತ ಮರ ಬಾಗುವಂತೆ, ಅಮರೇಗೌಡ ಯಾರೊಂದಿಗೂ ಬೀಗದೇ ಎಲ್ಲರೊಂದಿಗೂ ಬಾಗುತ್ತಲೇ ತನ್ನ ಸೇವಾ ಕಾರ್ಯ ಮುಂದುವರೆಸಿದ್ದಾರೆ.

ಬಾಲ್ಯದಲ್ಲೇ ಮಕ್ಕಳ ಮನಸ್ಸಿನಲ್ಲಿ ಕನಸಿನ ಬೀಜಗಳನ್ನು ಬಿತ್ತಿದರೆ ಸಾಕು. ಅವರು ಬೆಳೆಯುವಂತೆ, ಕನಸುಗಳು ಬೆಳೆಯುತ್ತವೆ, ಮುಂದೆ ಸಾಕಾರಗೊಳ್ಳುತ್ತವೆ.

ಟಗರು ಕಾಳಗದ ರೋಚಕ ಕಥನ

10ನೇ ಪುಟದಿಂದ..

ಆ ಮೂಲಕ ಆ ತಳಿಯನ್ನು ಸಂರಕ್ಷಿಸಬೇಕು ಎನ್ನುವ ಕಾಳಜಿ ಇದರ ಹಿಂದಿದೆ. ಈ ಕಾರಣಕ್ಕೆ ಇಲಾಯಿತಿ, ರಾಂಪುರಿ ತಳಿಗಳು ಸ್ಪರ್ಧೆಯಲ್ಲಿ ನಿಷಿದ್ಧ. ಕೇವಲ ಕರಿ ಮರಿಗಳು, ಏಳಗ (ಬಿಳಿ), ಮೌಳಿ ಜಾತಿ ಟಗರುಗಳಿಗೆ ಅಖಾಡದಲ್ಲಿ ಅವಕಾಶ.

ಎಲ್ಲಾದರೂ ಸ್ಪರ್ಧೆ ಘೋಷಣೆ ಆಗುತ್ತಿದ್ದಂತೆ ಇಂತಹ ಟಗರು ಸಾಕುವವರಲ್ಲಿ ಉರುಪು ಬರುತ್ತದೆ. ಪಂದ್ಯಕ್ಕೆ ಟಗರನ್ನು ಅಣಿಗೊಳಿಸಲು ಅದರ ದೇಖ್ ರೇಖ್ ಹಾಗೆ ತಾಲೀಮು ತೀವ್ರವಾಗುತ್ತದೆ. ಕಣದಲ್ಲಿ ಟಗರುಗಳನ್ನು ಕಾದಾಡಿಸಲು, ಈ ರೋಚಕ ದೃಶ್ಯವನ್ನು ಕಣ್ಣು ತುಂಬಿಕೊಳ್ಳಲು ರಾಜ್ಯ, ಹೊರ ರಾಜ್ಯಗಳಿಂದ ಆಸಕ್ತರು ಬರುತ್ತಾರೆ. ಇಲ್ಲಿಯ ಟಗರುಗಳನ್ನು ಹೊರ ರಾಜ್ಯದಲ್ಲಿ ನಡೆಯುವ ಸ್ಪರ್ಧೆಗೂ ಕರೆದೊಯ್ಯುತ್ತಾರೆ. ಮರಿ ಟಗರು, 2, 4, 6, 8 ಹಲ್ಲುಗಳ ಟಗರುಗಳು ತಮ್ಮ ಸಮ ವಯಸ್ಸಿನ ಟಗರುಗಳೊಂದಿಗೆ ಕಾದಾಡುತ್ತವೆ. ಇಲ್ಲಿ ಎರಡೂ ಟಗರುಗಳು ಬಲಿಷ್ಠವಾಗಿದ್ದರೆ ಅವುಗಳ ಕದನ ಮೈನವಿರೇಳಿಸುತ್ತದೆ. ಉಸಿರು ಬಿಗಿ ಹಿಡಿದು ಪ್ರೇಕ್ಷಕರು ಆ ಗುದ್ದಾಟ ಆನಂದಿಸುತ್ತಾರೆ. ಕೆಲವೊಂದು ಟಗರುಗಳು ಗಂಟೆಗಟ್ಟಲೆ, 80-100 ಸುತ್ತು ಕಾದಾಡಿದ ದಾಖಲೆಗಳಿವೆ!

ಬಹುಮಾನಗಳದ್ದೇ ದಾಖಲೆ

ಆಟ ನಡೆಸುವ ಕಮಿಟಿಗಳ ಮೇಲೆ ಬಹುಮಾನಗಳು ನಿಗದಿಯಾಗುತ್ತವೆ. ಕೆಲವೊಂದು ಕಣಗಳು ಗೆದ್ದ ಹಾಗೆ ರನ್ನರ್ ಅಪ್ ಆದ ಮೊದಲ ಹತ್ತು ಟಗರುಗಳಿಗೆ ಬಹುಮಾನ ನೀಡುತ್ತವೆ. ಬಂಗಾರ, ಬೆಳ್ಳಿ ಕಡಗ, ಟ್ರ್ಯಾಕ್ಟರ್, ಕಾರು, ಬುಲೆಟ್, ಬೈಕ್, ವಾಷಿಂಗ್ ಮಷಿನ್, ರೆಫ್ರಿಜರೇಟರ್, ಲಕ್ಷ ಲಕ್ಷ ನಗದು ಬಹುಮಾನ ಇಟ್ಟಿರುತ್ತಾರೆ. ಸ್ಪರ್ಧೆಯಲ್ಲಿ ಸಮರ್ಥವಾಗಿ ಕಾದಾಡಿ ಗೆದ್ದ ಟಗರುಗಳಿಗೆ ಮತ್ತು ಅದರ ಮಾಲೀಕನಿಗೆ ಬಹುಮಾನದ ಜೊತೆಗೆ ಸನ್ಮಾನಗಳು, ಟಗರು ಪ್ರೇಮಿಗಳಿಂದ ಅಭಿನಂದನೆಗಳ ಸುರಿಮಳೆ ಸಿಗುತ್ತದೆ. ಅಂತಹ ಟಗರುಗಳಿಗೆ ಫ್ಯಾನ್ಸ್, ಫಾಲೋವರ್ಸ್ ಹೆಚ್ಚಾಗುತ್ತಾರೆ. ಹೀಗೆ ಟಗರುಗಳು ತನ್ನ ಒಡೆಯನಿಗೆ ಸಮಾಜದಲ್ಲಿ ಹೆಸರು, ಅಸ್ತಿತ್ವ ಹಾಗೆಯೇ ಹಣವನ್ನು ತಂದು ಕೊಡುವುದಲ್ಲದೇ ಸಾಕಷ್ಟು ಬೇಡಿಕೆ ಸೃಷ್ಟಿಸಿಕೊಳ್ಳುತ್ತದೆ.

ಕಾಳಗಕ್ಕೆ ಸಜ್ಜಾಗಿರುವ ಟಗರುಗಳು

ಜನಪ್ರಿಯ ಕಣಗಳು

ಗ್ರಾಮ ಜಾತ್ರೆ, ಉತ್ಸವ, ಸಂಕ್ರಾತಿ, ದೀಪಾವಳಿಗಳಲ್ಲಿ ಇಲ್ಲವೇ ದಾನಿಗಳು ಮುಂದೆ ಬಂದು ಆಸಕ್ತಿ ತೋರಿಸಿದರೆ ಟಗರು ಕಾಳಗ ಸ್ಪರ್ಧೆ ಸ್ಥಳೀಯ ಆಡಳಿತದ ಅನುಮತಿಯೊಂದಿಗೆ ಜರುಗುತ್ತವೆ. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕೊಣ್ಣೂರ ಕಣ ರಾಜ್ಯದಲ್ಲಿಯೇ ಹೆಸರುವಾಸಿ. ಉಳಿದಂತೆ ದಾವಣಗೆರೆ ದುಗ್ಗಮ್ಮ, ಹೊನ್ನಾಳ್ಳಿ ಕೇಸರಿ, ಬೀಳಗಿ, ಮುಧೋಳ, ಬಾಗಲಕೋಟೆಯ ಜಾಲಿಹಾಳ, ದಾವಣಗೆರೆ, ಶಿವಮೊಗ್ಗ, ಹರಿಹರ ಇಂತಹ ಒಂದಿಷ್ಟು ಕಣಗಳಲ್ಲಿ ನಡೆಯುವ ಸ್ಪರ್ಧೆ ಕೂತೂಹಲ ಕೆರಳಿಸುತ್ತವೆ. ಇಲ್ಲಿ ಗೆಲ್ಲಲ್ಲಿಕ್ಕೆ ರಾಜ್ಯದಿಂದ ಮಾತ್ರವಲ್ಲದೇ ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಂದಲೂ ಟಗರುಗಳು ಅಖಾಡಕ್ಕೆ ಇಳಿಯುತ್ತವೆ. 2-3 ದಿನ ಹಗಲಿರುಳು ಸ್ಪರ್ಧೆ ನಡೆಯುತ್ತದೆ. ಇಂತಹ ರೋಚಕ ಸ್ಪರ್ಧೆಯನ್ನು ಕಣ್ಣು ತುಂಬಿಕೊಳ್ಳಲು ಜನ ಸಾಗರವೇ ಹರಿದು ಬರುತ್ತದೆ.

ಟ್ರೆಂಡಿ ಟಗರುಗಳು..

ಕೂಡ್ಲಿಗಿಯ ಜಾಲ, ಹಟವಾದಿ, ಜೀವ ಅಲಿಯಾಸ್ ಅಭಿಮನ್ಯು, ದಾವಣಗೆರೆಯ ಇಂಡಿಯನ್ ಆರ್ಮಿ, ಗೋಕಾಕ್ ನ ಸಿಂಧಿ ಕುರುಬೆಟ್ಟ, ಶಿವಮೊಗ್ಗದ ಪಾಯಿಸನ್ ಕರಿಯ, ಗದ್ದನಕೇರಿ ವರದ, ಮನೆ ಮಗ ಮಲ್ಲ, ಚಿಂದು ಕುರುಬರೇಟ್, ಆಂಟಿ ಲವ್ವರ್, ಮೆಂಟಲ್ ಮಂಜ, ವನ್ಯಧಾಮ ಪುಣ್ಯಕೋಟಿ, ರೋಲೆಕ್ಸ್..ಹೀಗೆ ಒಂದಿಷ್ಟು ಟಗರುಗಳು ಈಗ ಟ್ರೆಂಡ್‌ನಲ್ಲಿವೆ.

ಪಂದ್ಯ ಗೆಲ್ಲುವ ದುರಾಸೆಯಿಂದ ಟಗರಿನ ಆರೋಗ್ಯ, ಸುರಕ್ಷತೆಯನ್ನೂ ಲೆಕ್ಕಿಸದಿದ್ದಾಗ ಅದರ ಜೀವಕ್ಕೆ ಹಾನಿ ಆಗುತ್ತದೆ. ಕಾಳಗಕ್ಕೆಂದೇ ಸಾಕುವ ಟಗರು ಮೊದಲೇ ವೆಚ್ಚದಾಯಕ. ಆರಂಭದಲ್ಲೇ ಅಂತಹ ಟಗರುಗಳಿಗೆ ಹಿನ್ನಡೆಯಾದರೆ, ಅಸಹಜ ಸಾವಿಗೆ ತುತ್ತಾದರೆ, ಜಿದ್ದಿಗೆ ಬಿದ್ದು ಟಗರಿನಿಂದಲೇ ಹಣ, ಹೆಸರು ಮಾಡಬೇಕೆಂಬ ಹಪಾಹಪಿಯಿದ್ದರೆ ಆರ್ಥಿಕ ನಷ್ಟ ಕಟ್ಟಿಟ್ಟ ಬುತ್ತಿ.

ದೇಶಿ ತಳಿಗಳನ್ನು ಸಂರಕ್ಷಿಸಬೇಕು. ಅವುಗಳನ್ನು ರೈತರು ಸಾಕಲು ಪ್ರೇರೇಪಿಸಬೇಕು ಎನ್ನುವ ಸದಾಶಯ ಈ ಟಗರು ಕಾಳಗದ ಹಿಂದಿದೆ. ಇದು ಜೂಜಾಟವಾಗದೇ, ದೇಶಿಯ ಕ್ರೀಡೆಯಾಗಿಯೇ ಉಳಿಯಲಿ.

ಮುನ್ನೋಟ 18-01-2026 ರಿಂದ 24-01-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮದೇ ಮಾತು ನಡೆಯಬೇಕೆನ್ನುವ ಹಟ ನಿಮ್ಮಲ್ಲಿರುತ್ತದೆ. ವೃತ್ತಿಯಿಂದ ಆದಾಯ ಹೆಚ್ಚಾಗುವ ಸಂಭವವಿದೆ. ಮೂಳೆ ಮತ್ತು ಪಾದ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಕಚೇರಿಯಲ್ಲಿ ನಿಮ್ಮ ಸ್ಥಾನದ ಜವಾಬ್ದಾರಿಯನ್ನು ಅರಿತು ನಡೆಯಿರಿ. ಎತ್ತರದ ಸ್ಥಳಗಳಲ್ಲಿ ಕೆಲಸ ಮಾಡುವವರು ಜಾಗ್ರತೆ ವಹಿಸಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಹಿರಿಯರ ಬಗ್ಗೆ ಹೆಚ್ಚು ಗೌರವ ತೋರುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನಿಮ್ಮ ಮೇಲೆ ಮಹಿಳೆಯರ ಕೋಪವಿರುತ್ತದೆ. ಕೃಷಿಭೂಮಿಯನ್ನು ಅಭಿವೃದ್ಧಿಪಡಿಸಬಹುದು. ಧಾರ್ಮಿಕ ಕಾರ್ಯಗಳನ್ನು ಮಾಡುವವರಿಗೆ ಸಮಾಜದ ಸಹಕಾರ ದೊರೆಯುತ್ತದೆ. ಅತಿ ಉಷ್ಣ ಕೆಲವರನ್ನು ಕಾಡಬಹುದು. ಸಿನಿಮಾ ನಟರುಗಳಿಗೆ ಉತ್ತಮ ಅವಕಾಶ ಸಿಗುವ ಸಾಧ್ಯತೆಗಳಿವೆ.ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಲಕ್ಷಣಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸಮಾಜ ಸೇವೆ ಮಾಡುವವರಿಗೆ ಗೌರವ ದೊರೆಯುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಲಾಭವಿದೆ. ವಿದ್ಯಾರ್ಥಿಗಳು ಶ್ರಮಪಟ್ಟಲ್ಲಿ ಉತ್ತಮ ಫಲಿತಾಂಶ ಪಡೆಯಬಹುದು. ಉಷ್ಣಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಹಿಡಿತ ಸಾಧಿಸುವಿರಿ. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಕೆಲಸದ ಒತ್ತಡ ಹೆಚ್ಚಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಶೀತ ಬಾಧೆ ನಿಮ್ಮನ್ನು ಕಾಡುತ್ತದೆ. ಆದಾಯವು ಕಡಿಮೆ ಇರುತ್ತದೆ. ಗಟ್ಟಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗದೆ ಒದ್ದಾಡುವಿರಿ. ಸಿದ್ಧ ಉಡುಪುಗಳನ್ನು ತಯಾರಿಸುವವರಿಗೆ ಲಾಭವಿದೆ. ಸಂಸಾರದಲ್ಲಿನ ಜವಾಬ್ದಾರಿ ಹೆಚ್ಚಾಗಲಿದೆ. ಗೃಹ ಸಾಮಗ್ರಿಗಳ ಖರ್ಚು ಹೆಚ್ಚಾಗುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚುವ ಸಾಧ್ಯತೆ ಇದೆ. ವಿವಾದಗಳಿಂದ ದೂರ ಉಳಿದು ನಿಮ್ಮ ಗೌರವವನ್ನು ಕಾಪಾಡಿಕೊಳ್ಳಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಗೌರವ ದೊರೆಯುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೆಲವರಿಗೆ ರಾಜಕೀಯ ಪ್ರವೇಶ ದೊರೆಯುವ ಸಾಧ್ಯತೆಗಳಿವೆ. ನಿಮ್ಮ ವ್ಯವಹಾರಗಳಲ್ಲಿ ಆತ್ಮೀಯರ ಸಲಹೆಗಳನ್ನು ಪರಿಗಣಿಸುವುದು ಬಹಳ ಉತ್ತಮ. ದೈವದ ಹರಕೆ ತೀರಿಸಲು ಈಗ ಕುಟುಂಬ ಸಮೇತ ಹೋಗುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆಲಸ್ಯ ಮೈದುಂಬಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಒಡಹುಟ್ಟಿದವರಿಂದ ಸಹಕಾರ ಪಡೆಯುವಿರಿ. ಆಭರಣ ಕೊಳ್ಳುವಾಗ ಮೋಸ ಹೋಗುವ ಸಾಧ್ಯತೆಗಳಿವೆ ಎಚ್ಚರವಹಿಸಿ. ಕೆಲವು ದುಂದು ವೆಚ್ಚಗಳಿಂದ ಸಂಸಾರ ನಿರ್ವಹಣೆಯ ವೆಚ್ಚಗಳು ಹೆಚ್ಚಾಗುತ್ತವೆ. ಚಿನ್ನದ ಕುಸುರಿ ಕೆಲಸ ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವ್ಯಕ್ತಿಗತ ಸೌಂದರ್ಯದ ಬಗ್ಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸಗಳಿಗೆ ಹಿರಿಯರ ಸಹಕಾರವನ್ನು ಪಡೆಯಲು ಪ್ರಯತ್ನಪಡುವಿರಿ. ಬರಹಗಾರರಿಗೆ ಹೆಚ್ಚು ಪ್ರಾಮುಖ್ಯ ದೊರೆಯುತ್ತದೆ. ಸಂಶೋಧಕರಿಗೆ ಅಗತ್ಯವಿದ್ದ ಮಾಹಿತಿಯ ಪುಸ್ತಕ ದೊರೆಯುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ಬದಲಾಗುವ ನಿಮ್ಮ ಗುಣ ಕೆಲವರಿಗೆ ಬೇಸರ ತರಿಸಬಹುದು. ಮನಸ್ತಾಪಗಳು ಬರುವ ಸಂಭವವಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಚುರುಕಾದ ನಡವಳಿಕೆ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ವಿದೇಶದಲ್ಲಿರುವವರು ಸ್ವದೇಶದಲ್ಲಿ ಆಸ್ತಿ ಮಾಡಬಹುದು. ವಿದ್ಯಾರ್ಥಿಗಳಿಗೆ ಫಲಿತಾಂಶ ಉತ್ತಮವಾಗಿರುವುದಿಲ್ಲ. ಯಾವುದೇ ಅಪೇಕ್ಷೆ ಇಲ್ಲದೆ ಮಾಡುವ ಕೆಲಸಗಳಿಗೆ ಉತ್ತಮ ಫಲ ದೊರೆಯುತ್ತದೆ. ಶತ್ರುಗಳನ್ನು ಪತ್ತೆ ಮಾಡಲು ಹಲವಾರು ತಂತ್ರಗಳನ್ನು ಬಳಸುವಿರಿ. ರಾಜಕೀಯ ವ್ಯಕ್ತಿಗಳಿಗೆ ಕೆಲವು ಸನ್ನಿವೇಶಗಳು ಅನುಕೂಲಕರವಾಗಿ ಒದಗಿ ಬರುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಮನಸ್ಸಿನಲ್ಲಿ ಏನೋ ಒಂದು ಸಾಧಿಸಿದ ಸಂತೋಷ ಇರುತ್ತದೆ. ಆದಾಯವು ಏರಿಕೆ ಕಾಣುತ್ತದೆ. ನಿಮ್ಮ ಕಾರ್ಯ ಒತ್ತಡದ ನಡುವೆ ಕುಟುಂಬದ ಕಡೆಗೂ ಗಮನಹರಿಸಿರಿ. ಮನೆಯ ತಾಪತ್ರಯಗಳೆಲ್ಲ ಈಗ ನಿಧಾನವಾಗಿ ಕಡಿಮೆಯಾಗುತ್ತದೆ. ರಾಜಕೀಯದಲ್ಲಿರುವ ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯ ದೊರೆಯುತ್ತದೆ. ಆಹಾರ ಪದಾರ್ಥಗಳನ್ನು ಸ್ವತಃ ತಯಾರಿಸಿ ಮಾರುವವರಿಗೆ ಆದಾಯವು ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಕಾರ್ಯ ಶ್ರದ್ಧೆ ನಿಮ್ಮನ್ನು ಗೌರವಿಸುವಂತೆ ಮಾಡುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಆಶೀರ್ವಾದ ಇರುತ್ತದೆ. ಈಗ ಆದಾಯ ತಕ್ಕಮಟ್ಟಿಗೆ ಇರುತ್ತದೆ. ಆಸ್ತಿ ಮಾಡುವ ಆಲೋಚನೆಗೆ ಚಾಲನೆ ಸಿಗುತ್ತದೆ. ದೂರ ಪ್ರಯಾಣದ ಕೆಲಸಗಳಲ್ಲಿ ನಿಮಗೆ ಲಾಭವಿರುತ್ತದೆ. ಸೂಕ್ಷ್ಮ ವಿಚಾರಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಹೆಚ್ಚು ಎಚ್ಚರವಹಿಸಿ. ಸಹೋದ್ಯೋಗಿಗಳು ನಿಮ್ಮ ಬಗ್ಗೆ ಈಗ ಕಾಳಜಿ ತೋರುವರು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹೊಸ ಸ್ಥಳದಲ್ಲಿ ಶಿಕ್ಷಕ ವೃತ್ತಿ ಆರಂಭಿಸುವವರಿಗೆ ಸೂಕ್ತ ಅನೂಕೂಲಗಳಿರುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ವಿದ್ಯಾರ್ಥಿಗಳಿಗೆ ಅತಿಹೆಚ್ಚು ಯಶಸ್ಸು ದೊರೆಯುತ್ತದೆ. ಬಟ್ಟೆ ತಯಾರಿಸುವವರಿಗೆ ಹೆಚ್ಚು ತಯಾರಿಕಾ ಆದೇಶಗಳು ಬರುವ ಸಾಧ್ಯತೆಗಳಿವೆ. ಕೆಲವರು ನಿಮ್ಮ ಹೆಸರನ್ನು ಬಳಸಿಕೊಂಡು ಅವರ ಕಾರ್ಯಸಾಧನೆ ಮಾಡಿಕೊಳ್ಳುವರು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಅಪಹಾಸ್ಯಕ್ಕೆ ಒಳಗಾಗುವ ಸಂದರ್ಭವಿದೆ ಎಚ್ಚರವಾಗಿರಿ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಸರ್ಕಾರಿ ಅನುದಾನಗಳು ಸರಾಗವಾಗಿ ಬರುತ್ತವೆ. ಇಚ್ಛೆಪಟ್ಟ ಆಸ್ತಿಯನ್ನು ಕೊಳ್ಳುವ ಅವಕಾಶವಿದೆ. ಅದಿರು ಮಾರಾಟಗಾರರಿಗೆ ವ್ಯವಹಾರ ವಿಸ್ತರಣೆಯಾಗುವ ಸಂದರ್ಭವಿದೆ. ಸಹೋದ್ಯೋಗಿಗಳ ನಡುವೆ ಕಿರಿಕಿರಿ ವಾತಾವರಣ ಇರುತ್ತದೆ.

ಪದಬಂಧ 2927

ಮೇಲಿನಿಂದ ಕೆಳಕ್ಕೆ

1.ಸಾಮಾಜಿಕ ಗುಂಪಿನ ಬೌದ್ಧ ಗೆಳೆಯ	4
2. ಶ್ರೇಷ್ಠನಾದ ಶ್ರೀನಿವಾಸ ಏಳು ಬೆಟ್ಟದೊಡೆಯ	6
3. ಬೀದಿಯಲ್ಲಿ ಮಾಡುವ ಜಗಳದ ಆಟದಿಂದ ಪಾಠ ಕಲಿಯಬಹುದೆ	3
4. ದೇವತೆಯ ಗಂಡ ತಲೆಕೆಳಗು	3
6. ತಲೆಕೆಳಕಾದ ಕೊರವಂಜಿ ಕತೆ	2
8. ಸಂಬಂಧಿಸಿದ ಪದಗಳ ಗುಂಪು	4
9. ಮೇಧಾಶಕ್ತಿ ಪ್ರವಹಿಸುವ ಕಡಲು	4
10. ಪುಟ್ಟ ಬಂಗಾರಿಗೆ ಮುದ್ದಿನ ಲಲ್ಲೆ	3
12. 'ಪುಚ್ಛ'ದಲ್ಲಿ ಸೇರಿರುವ ಹೂಗೊಂಚಲು	4
13. ಬಯಸಿದ್ದನ್ನು ಕೊಡುವ ದೇವಲೋಕದ ಗೋವು	4
15. ರಾಜ್ಯಗಳ ಕೂಟವನ್ನು ಸಂಭ್ರಮಿಸುವ ರಾಷ್ಟ್ರೀಯ ಆಚರಣೆ	6
16. ಹೇಳದೆ ಕೇಳದೆ ಓಡಿಹೋಗಿದ್ದಾನೆ	3
18. ಮನಸ್ಸಿನ ಆಳದಲ್ಲಾಗುವ ನೊವು-ನಲಿವು ಹಾಡಾಗಿದೆ	4
19. ನಾಟಕದಲ್ಲಿ ತನ್ನಷ್ಟಕ್ಕೆ ತಾನು ಹೇಳಿಕೊಳ್ಳುವ ಮಾತು	3
20. ಅಪಹರಿಸಲು ಹಣದಲ್ಲಿ ಈಶ್ವರ ಸೇರುತ್ತಾನೆ	3
21. ಕೆಳಗಿನಿಂದ ಮೇಲಕ್ಕೆ ನಡುಪಾಂಡವ	2

ಎಡದಿಂದ ಬಲಕ್ಕೆ

1. ದಕ್ಷಿಣದಿಂದ ಉತ್ತರಕ್ಕೆ ಸೂರ್ಯ ಚಲನೆಯಿಂದಾಗುವ ಸಂಪೂರ್ಣ ಬದಲಾವಣೆ	3
3. ಬಾಬುಕೋಡಿ ಕಾರಂತರ ನಾಟಕ ಪ್ರದರ್ಶನ ವೇದಿಕೆ	4
5. ಎಂದೆಂದೂ ಋಣಿಯಾದ ಕೃಷ್ಣಸತಿ	3
7. ಮೋಸ ತಟವಟ	3
9. ವೀರ ಶೂರರಂತೆ ಪರಾಕ್ರಮಿ	2
10. ಇದು ಚಿತ್ತಾರದ ಸಿನಿ ಪ್ರಪಂಚ	4
11. ಶತ್ರು ವಿನಾಶಮಾಡಿದವ ದೀರ್ಘನಾದ	5
14. ಕಾವ್ಯಭಾಷೆಯಲ್ಲಿ ಪ್ರಪಂಚದ ಅಧಿಪತಿ	5
17. ರಾಜನ ಪರವಾಗಿ ಭಾರಿ ಸಂಧಾನ ಮಾಡುವವ	4
19. ಮಲಿನರಹಿತ, ಶುಭ್ರ	2
20 ಕನ್ನಡಿಗರಿಗೆ ಅಚ್ಚುಮೆಚ್ಚಿನ ರಾಮಧೂತ	3
22. ಷಡ್ರಸಗಳಲ್ಲಿ ಭಯಂಕರವಾದದ್ದು	3
23. ತ್ರಿಗುಣಗಳಲ್ಲಿ ನಿರಾಸಕ್ತಿ ಆಲಸ್ಯವನ್ನು ಪ್ರತಿನಿಧಿಸುವ ಸ್ವಭಾವ	4
24. ಗೌರವಾನ್ವಿತ ಮಹಿಳೆ	3



ಪದಬಂಧ ಉತ್ತರ -2926

ಮೇಲಿಂದ ಕೆಳಕ್ಕೆ

1.ಅನುಭವಿ 2.ತೆಗಳಿಕೆ 3.ಗುರುದ್ವಾರ 5.ಮತ 7.ರತ್ನತಿಲಕ 9.ಸದರಿ 10.ಚುರುಕುಮಾತು 13.ವೈಖರಿ 17.ನವಜನ 18.ಕೆರೆಬಾವಿ 19.ಕಾರ್ಟೂ 20.ರವಿಕುಲ

ಎಡದಿಂದ ಬಲಕ್ಕೆ

1.ಅಸಹಾಯಕತೆ 4.ಗಡಿಪಾರು 5.ಮರಳಿ 6.ವಿರಚಿತ 8.ಕೆಸರೆರಚು 11.ರುದ್ರ 12.ತಿರುಪ್ಪಾವೈ 14.ರಿಮರಿಕು 15.ಹೊಲ 16.ಕನವರಿಕೆ 19.ಕಾಮಾತುರ 21.ರೆಸಾರ್ಟು 22.ಜಗದಂಬಾ 23.ವಿಹಂಗಮನೋಟ

ಮಂಗೋಲಿಯಾದಿಂದ ಮಾಗಡಿ ಕೆರೆಗೆ...

ಪಟ್ಟೆತಲೆ ಹೆಬ್ಬಾತು

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಸಾಂಪ್ರದಾಯಿಕ ಬೆಳೆಗಳಿಗೆ ಒಗ್ಗಿಕೊಂಡಿರುವ ಹೆಬ್ಬಾತುಗಳಿಗೆ ಆಹಾರ ಬೆಳೆ ಬದಲಾವಣೆಯಿಂದ ಹೊಸ ಆಹಾರ ಹುಡುಕುವುದು ಕಷ್ಟಸಾಧ್ಯ. ಹೀಗಾಗಿ, ಅವು ಮತ್ತೆ ಮತ್ತೆ ತವರಿಗೆ ಹಿಂದಿರುಗುತ್ತವೆ. ಇದರಿಂದಾಗಿ ಗದಗದ ಮಾಗಡಿ ಕೆರೆ ಸದ್ಯ ಈ ಪಕ್ಷಿಗಳ ಆಶ್ರಯತಾಣವಾಗಿದೆ...

ಪಟ್ಟೆತಲೆ ಹೆಬ್ಬಾತು (ಬಾರ್ ಹೆಡೆಡ್ ಗೂಸ್)ಗಳ ವಲಸೆಗೆ ಸಾಂಸ್ಕೃತಿಕ ಹಿನ್ನೆಲೆ ಇದೆ. ಈ ನೆಲೆಯಲ್ಲಿ ರೈತರ ಚಟುವಟಿಕೆಗಳೇನು? ಚಳಿಗಾಲಕ್ಕೆ ಹೊಲ ಗದ್ದೆಗಳಲ್ಲಿ ತುಂಬಿರುವ ಫಸಲುಗಳಾವುವು? ಅವುಗಳಲ್ಲಿ ತಮ್ಮ ಆಹಾರ ಯಾವುದು? ಎಲ್ಲಿ? ಯಾವಾಗ ಎಂಬ ಖಚಿತವಾದ ತಿಳಿವಳಿಕೆ ಅವುಗಳಿಗೆ ಇರುತ್ತದೆ.

ಈ ಜ್ಞಾನವನ್ನು ಅವು ತಮ್ಮ ಪೂರ್ವಿಕರಿಂದ ಪಡೆದುಕೊಂಡಿವೆ. ಅವುಗಳಲ್ಲಿ ಅನುವಂಶಿಕವಾಗಿ ಇದು ಹರಿದು ಸಾಗಿರುತ್ತದೆ. ಹಾಗಾಗಿ, ಅವು ಮತ್ತೆ ಮತ್ತೆ ಮಾಗಡಿ ಕೆರೆ ಬಂದು, ಮತ್ತೆ ತವರಿಗೆ ಹಿಂದಿರುಗುತ್ತವೆ. ಆದರೆ, ಬದಲಾಗುತ್ತಿರುವ ಪರಿಸರ, ಜಾಗತಿಕಗೊಂಡ ಆರ್ಥಿಕ ಚಟುವಟಿಕೆಗಳು ಇವುಗಳ ಬದುಕಿನ ಮೇಲೆ ಮತ್ತು ಭವಿಷ್ಯದ ಮೇಲೆ ಪರಿಣಾಮ ಬೀರುತ್ತಿವೆ.

ಕಡಲೆ, ಶೇಂಗಾ ಇವೆಲ್ಲವೂ ಆ ಸಮಯಕ್ಕೇ ಬರುವ ಬೆಳೆಗಳು. ಈಗಿನ ಉದಾರೀಕರಣ ನೀತಿಯಿಂದ ಆರ್ಥಿಕತೆ ಪ್ರಾಮುಖ್ಯತೆ ಪಡೆದುಕೊಂಡಿದ್ದು, ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಇರುವ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇದರಿಂದಾಗಿ, ಋತುಮಾನ ಆಧರಿಸಿದ ಸಾಂಪ್ರದಾಯಿಕ ಬೆಳೆಗಳು ಮೂಲೆಗುಂಪಾಗುತ್ತಿವೆ.

ಹೆಬ್ಬಾತುಗಳು ಕಾಲಾಂತರದಿಂದಲೂ ಸಾಂಪ್ರದಾಯಿಕ ಬೆಳೆಗಳಿಗೆ ಅಭ್ಯಾಸವಾಗಿವೆ. ಆಹಾರ ಬೆಳೆ ಬದಲಾವಣೆಯಿಂದ ಅವು ಹೊಸ ಆಹಾರ ಹುಡುಕುವುದು ಕಷ್ಟಸಾಧ್ಯ. ಅಭಿವೃದ್ಧಿ ಹೆಸರಿನಲ್ಲಿ ಕೆರೆ ಮಧ್ಯದಲ್ಲಿ ನೆಡುತೋಪುಗಳನ್ನು ಮಾಡುವುದು ವಿನಾಶಕಾರಿ. ಕೆರೆಗಳೆಂದರೆ ಕಾಂಕ್ರಿಟ್ ಕಟ್ಟೆ ಕಟ್ಟಿಸಿ, ನೀರಿಟ್ಟುಕೊಳ್ಳುವುದಲ್ಲ.

–ಹೀಗೆ ವನ್ಯಜೀವಿ ಸಾಕ್ಷ್ಯಚಿತ್ರ ನಿರ್ಮಾಪಕರಾದ ಕೃಪಾಕರ–ಸೇನಾನಿ ಮಾತನಾಡುತ್ತಲೇ ಇದ್ದರು.

ಇದಕ್ಕೆ ಕಾರಣವಿದೆ. ಗದಗದಿಂದ 26 ಕಿಲೋಮೀಟರ್ ದೂರದಲ್ಲಿರುವ ಮಾಗಡಿ ಕೆರೆಗೆ ಪಟ್ಟೆತಲೆ ಹೆಬ್ಬಾತುಗಳು ಬರುವ ಸಂಖ್ಯೆ ಇಳಿಮುಖವಾಗಿದೆ.

ಮಂಗೋಲಿಯಾ ಮತ್ತು ಉತ್ತರ ಚೀನಾ ಮೂಲದ ಇವು ಇಲ್ಲಿಗೆ ಚಳಿಗಾಲದ ಅತಿಥಿಗಳು. ನವೆಂಬರ್ ಮೊದಲ ವಾರ ಕಳೆಯುತ್ತಿದ್ದಂತೆ ಆ ಪ್ರದೇಶದಲ್ಲಿ ಮೈನಸ್ 20 ಡಿಗ್ರಿಯಷ್ಟು ಚಳಿ ಇರುತ್ತದೆ. ಕೆರೆಗಳೆಲ್ಲವೂ ಹೆಪ್ಪುಗಟ್ಟುತ್ತವೆ. ಆಹಾರವೂ ಸಿಗುವುದಿಲ್ಲ. ಅದೇ ಸಮಯದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ 10 ರಿಂದ 15 ಡಿಗ್ರಿ ಉಷ್ಣಾಂಶ ಇರುತ್ತದೆ. ಈ ವ್ಯತ್ಯಾಸವನ್ನು ತಜ್ಞರು ದಾಖಲಿಸಿದ್ದಾರೆ. ಹೀಗಾಗಿ, ಹೆಬ್ಬಾತುಗಳು ಮಂಗೋಲಿಯಾ ಮತ್ತು ಚೀನಾದಿಂದ ಟಿಬೆಟ್, ಹಿಮಾಲಯ ಪರ್ವತ ಶ್ರೇಣಿಗಳನ್ನು ದಾಟಿಕೊಂಡು ಭಾರತಕ್ಕೆ ಬರುತ್ತವೆ. ನವೆಂಬರ್‌ನಿಂದ ಮಾರ್ಚ್‌ವರೆಗೆ ಇಲ್ಲೇ ವಿಶ್ರಾಂತಿ ಪಡೆದು ಮತ್ತೆ ಹಿಂದಿರುಗುತ್ತವೆ.

ಮಂಗೋಲಿಯಾದಿಂದ ದಕ್ಷಿಣ ಭಾರತದತ್ತ ಬರುವ ಹೆಬ್ಬಾತುಗಳಿಗೆಲ್ಲ ಈ ಕೆರೆಯೇ ಅಚ್ಚುಮೆಚ್ಚು. ಈ ಜಾಗ ಹೊರತುಪಡಿಸಿ ಬೇರೆಲ್ಲೂ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹೆಬ್ಬಾತುಗಳನ್ನು ಒಂದೇ ಕಡೆ ಸಿಗುವುದಿಲ್ಲ. ಕೆಲವು ವರ್ಷಗಳ ಹಿಂದೆ 10 ರಿಂದ 11 ಸಾವಿರದಷ್ಟು ಹೆಬ್ಬಾತುಗಳು ಬಂದಿರುವುದನ್ನು ಪಕ್ಷಿಪ್ರೇಮಿಗಳು ಗುರುತಿಸಿದ್ದಾರೆ. ಈಗ ಮಾಗಡಿಗೆ ಬರುವ ಹೆಬ್ಬಾತುಗಳ ಸಂಖ್ಯೆ ಆರೇಳು ಸಾವಿರಕ್ಕೆ ಕುಸಿದಿದೆ.

ನವೆಂಬರ್‌ನ ಕೊನೆ ವಾರದಲ್ಲಿ ಕೆರೆಯಲ್ಲಿ ಅಂದಾಜು 6 ರಿಂದ 7 ಸಾವಿರದಷ್ಟು ಹೆಬ್ಬಾತುಗಳಿದ್ದವು. ಜನವರಿ 14 ರ ವೇಳೆಗೆ ಈ ಸಂಖ್ಯೆ 3 ಸಾವಿರಕ್ಕೆ ಇಳಿಯಿತು. ಇಲ್ಲಿಗೆ ಬಂದಿದ್ದ ಇನ್ನೂ 4 ಸಾವಿರದಷ್ಟು ಬಾತುಗಳು ಸ್ಥಳ ಬದಲಿಸಿದವು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹೆಬ್ಬಾತುಗಳು ಸ್ಥಳ ಬದಲಿಸಲು ಏನು ಕಾರಣ ಇರಬಹುದು ಎಂಬುದಕ್ಕೆ ತಜ್ಞರು ಉತ್ತರ ಹುಡುಕುವ ಪ್ರಯತ್ನ ಮಾಡುತ್ತಿದ್ದಾರೆ.

‘ಪಟ್ಟೆತಲೆ ಹೆಬ್ಬಾತುಗಳ ಮೊದಲ ಆಯ್ಕೆ ಮಾಗಡಿ ಕೆರೆ. ಅದನ್ನು ಹೊರತುಪಡಿಸಿ ಲಕ್ಷ್ಮೇಶ್ವರ ತಾಲ್ಲೂಕಿನ ಶೆಟ್ಟಿಕೆರೆ, ದಾವಣಗೆರೆ ಜಿಲ್ಲೆಯ ಕೊಂಡಜ್ಜಿ ಕೆರೆ, ನಂಜನಗೂಡಿನ ಹದಿನಾರು ಕೆರೆ, ಕಬಿನಿ ಹಿನ್ನೀರು, ಹಗರಿಬೊಮ್ಮನಹಳ್ಳಿಯ ತುಂಗಭದ್ರಾ ಹಿನ್ನೀರು, ಬಾಗಲಕೋಟೆ ಆಲಮಟ್ಟಿ ಹಿನ್ನೀರಿನಲ್ಲಿ ಹೆಚ್ಚು ಕಾಣಿಸುತ್ತವೆ’ ಎನ್ನುತ್ತಾರೆ ದಾವಣಗೆರೆಯ ಪಕ್ಷಿಗಳ ಪ್ರೇಮಿ ಶಿಶುಪಾಲ.

ಜಾಗತಿಕ ಪರಿಸರದಲ್ಲಾಗುತ್ತಿರುವ ಬದಲಾವಣೆಗಳು ಕೂಡ ವಲಸೆ ಮೇಲೆ ಪರಿಣಾಮ ಬೀರುತ್ತಿದೆ. ಅದು ಒಳ್ಳೆಯ ಪರಿಣಾಮವೋ; ಕೆಟ್ಟದ್ದೋ ಎಂಬುದನ್ನು ಈಗಲೇ ಹೇಳಲು ಸಾಧ್ಯವಾಗುವುದಿಲ್ಲ. ಮೈಸೂರು ಜಿಲ್ಲೆಯ ಹದಿನಾರು ಕೆರೆಗೆ ವಲಸೆ ಹಕ್ಕಿಗಳು ಜನವರಿಗೆ ಬರುತ್ತಿರಲಿಲ್ಲ. ಆದರೆ, ಅಲ್ಲಿಗೆ ಅದಕ್ಕೂ ಮೊದಲೇ 250ಕ್ಕೂ ಹೆಚ್ಚು ಹಕ್ಕಿಗಳು ಬಂದಿವೆ. ದಾವಣಗೆರೆಗೆ ಜನವರಿಯಲ್ಲಿ ಬರುತ್ತಿದ್ದ ಹಕ್ಕಿಗಳು ಡಿಸೆಂಬರ್‌ನಲ್ಲೇ ಬಂದಿವೆ. ಪಕ್ಷಿ ವೀಕ್ಷಕರು ಊಹಿಸದ ಹೊಸ ಜಾಗಗಳೆಲ್ಲಾ ವಲಸೆ ಹಕ್ಕಿಗಳು ಕಂಡು ಬರುತ್ತಿವೆ. ಈ ಬಗ್ಗೆ ನಿರಂತರವಾಗಿ ವೈಜ್ಞಾನಿಕ ಅಧ್ಯಯನ ನಡೆದರೆ ನಿಖರ ಕಾರಣಗಳು ಗೊತ್ತಾಗಲಿವೆ ಎನ್ನುತ್ತಾರೆ ತಜ್ಞರು.

ಈ ಕೆರೆ ಬರುವ ಹೆಬ್ಬಾತುಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಅಲ್ಲದೇ ಸ್ಥಳ ಬದಲಾವಣೆಯನ್ನೂ ಮಾಡಿವೆ. ಇದಕ್ಕೆ ಕಾರಣ ಇಲ್ಲದಿಲ್ಲ. ಮುಂಚೆ ಕಡಲೆ, ಶೇಂಗಾವನ್ನು ಮಳೆ ಆಧರಿಸಿ ಬೆಳೆಯಲಾಗುತ್ತಿತ್ತು. ಈಗ ಕೊಳವೆಬಾವಿ ಸಂಸ್ಕೃತಿ ಬಂದ ನಂತರ ರೈತರು ತಮಗೆ ಅನುಕೂಲಕ್ಕೆ ತಕ್ಕಂತೆ ಯಾವ ಬೆಳೆಯನ್ನು, ಯಾವಾಗ ಬೇಕಾದರೂ ಬೆಳೆಯುತ್ತಾರೆ. ಇದು ಕೂಡ ಭವಿಷ್ಯದಲ್ಲಿ ಕಷ್ಟವಾಗಲಿದೆ. ಇಂತಹ ಬದಲಾವಣೆಗಳು ನಮಗೆ ಗೊತ್ತಿಲ್ಲದಂತೆ ಭೌಗೋಳಿಕವಾಗಿ ಬದಲಾವಣೆಗಳು ಆಗುತ್ತವೆ. ಮುಂದೆ ಹತ್ತು ವರ್ಷಗಳಲ್ಲಿ ಅವು ಬರದೇ ಹೋದಾಗ ತಿಳಿಯುತ್ತದೆ.

ರೈತನ ಬೆಳೆಯ ಆಯ್ಕೆ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿರುತ್ತದೆ. ಹಿಂದಿನಂತೆ ಸಾಂಪ್ರದಾಯ ಪದ್ಧತಿಗೆ ಅದು ವಿರುದ್ಧವಾಗಿದೆ. ಬದಲಾಗುತ್ತಿರುವ ಈ ಚಿತ್ರಣಗಳು ಹೆಬ್ಬಾತುಗಳ ಭವಿಷ್ಯಕ್ಕೆ ಕಂಟಕವಾದರೆ ಅಚ್ಚರಿ ಇಲ್ಲ. ಹಾಗಾದಲ್ಲಿ ನೂರಾರು ವರ್ಷಗಳಿಂದ ಬೆಸೆದು ಬಂದ ಹಕ್ಕಿ ಮತ್ತು ಮನುಷ್ಯ ಸಂಸ್ಕೃತಿಯ ಕೊಂಡಿ ಕಳಚಿ ಹೋಗಬಹುದು. ಹೆಬ್ಬಾತುಗಳು ಮಾಗಡಿ ಕೆರೆಗೆ ವಿದಾಯವನ್ನೂ ಹೇಳಬಹುದು. ❖

ವಲಸೆ ಅಧ್ಯಯನಕ್ಕಾಗಿ ಟ್ಯಾಗ್

ಮಂಗೋಲಿಯಾದ ವೈಲ್ಡ್‌ಲೈಫ್ ರಿಸರ್ಚ್ ಸೆಂಟರ್‌ನ ಬ್ಯಾಟ್ ಬೇಯರ್ ಮತ್ತು ಅವರ ಸಂಗಾತಿಗಳು ವಲಸೆ ಅಧ್ಯಯನಕ್ಕಾಗಿ ಹೆಬ್ಬಾತುಗಳ ಕೊರಳಿಗೆ ಟ್ಯಾಗ್ ಕಟ್ಟಿ, ನಿರಂತರ ನಿಗಾ ವಹಿಸಿದ್ದರು. ನೂರು ಹೆಬ್ಬಾತುಗಳ ಕೊರಳಿಗೆ ಟ್ಯಾಗ್ ಹಾಕಿದ್ದರು. ಪ್ರತಿಯೊಂದಕ್ಕೂ ಭಿನ್ನ ಸಂಖ್ಯೆ ನೀಡಿದ್ದರು. ಪಕ್ಷಿ ಗಂಡೋ, ಹೆಣ್ಣೋ, ಅದರ ದೇಹ ತೂಕ, ಆರೋಗ್ಯ ಸ್ಥಿತಿ ಎಲ್ಲವನ್ನೂ ದಾಖಲಿಸಿದ್ದರು. ನೀರಿನಲ್ಲಿ ನೆನೆಯದ ವೆಲ್ವೆಟ್ ಬಟ್ಟೆಯಲ್ಲಿ ನಂಬರ್ ಬರೆದು ಟ್ಯಾಗ್ ಕಟ್ಟಿದ್ದರು.

ಹೀಗೆ ಟ್ಯಾಗ್ ಇರುವ ನೂರು ಹಕ್ಕಿಗಳ ಪೈಕಿ ಹತ್ತು ಹೆಬ್ಬಾತುಗಳ ಬೆನ್ನಿನ ಮೇಲೆ ಜಿಪಿಎಸ್ ಸಿಸ್ಟಂ ಹೊಂದಿರುವ ಕ್ಯಾಮೆರಾ ಅಳವಡಿಸಿದ್ದರು. ಹೆಬ್ಬಾತುಗಳು 25 ಸಾವಿರ ಅಡಿ ಮೇಲೆ ಹಾರುತ್ತವೆ. ಮೌಂಟ್ ಎವರೆಸ್ಟ್ ದಾಟಿ ಬರುತ್ತವೆ. ಹೆಬ್ಬಾತುಗಳ ಬೆನ್ನ ಮೇಲಿಟ್ಟ ಕ್ಯಾಮೆರಾದಿಂದ ಅದರ ಜತೆಗೆ ಹಾರುವ ಹಕ್ಕಿಗಳ ಹಿಂಡು, ಹಿಮಾಲಯ ಪರ್ವತ ಶ್ರೇಣಿಯ ನೋಟ ಸೆರೆಯಾಗಿತ್ತು. ಎಕ್ಸ್-57 ಸಂಖ್ಯೆ ಹೊಂದಿರುವ ಹೆಬ್ಬಾತು ಸತತ 7ನೇ ಬಾರಿಗೆ ಮಾಗಡಿ ಕೆರೆಗೆ ವಲಸೆ ಬರುತ್ತಿದೆ.

ಕೆರೆಯಲ್ಲಿ ಪಟ್ಟೆತಲೆ ಹೆಬ್ಬಾತುಗಳು ಚಿತ್ರಗಳು/ಸತೀಶ ಬಡಿಗೇರ್

ರಂಗಪರಿಕಲ್ಪನೆ ವಿಸ್ತರಿಸುವ ‘ಕೊಡಲ್ಲ ಅಂದ್ರೆ...’

• ವಿಕ್ರಮ ವಿಸಾಜಿ

‘ಕೊಡಲ್ಲ ಅಂದ್ರೆ ಕೊಡಲ್ಲ’ ನಾಟಕವು ಜಗತ್ತಿನ ಪ್ರಖ್ಯಾತ ನಾಟಕಕಾರ ದಾರಿಯೋ ಫೋ ಬರೆದ ‘ಕಾಂಟ್ ಪೇ ವೋಂಟ್ ಪೇ’ ನಾಟಕದ ರೂಪಾಂತರ. ಪ್ರಭುತ್ವ ತಂದೊಡ್ಡುವ ಆರ್ಥಿಕ ಸಂಕಟಗಳು, ತೆರಿಗೆಯ ಭಾರಗಳು ಜನಸಾಮಾನ್ಯರನ್ನು ಹಿಂಡಿಹಿಪ್ಪೆ ಮಾಡಿರುವ ಕಥನವಿದು. ಭ್ರಷ್ಟ ವ್ಯವಸ್ಥೆಯಲ್ಲಿ ಮನುಷ್ಯರು ಮನುಷ್ಯರಲ್ಲ, ಅವರು ಕೇವಲ ತೆರಿಗೆದಾರರು. ಪ್ರಭುತ್ವದ ಬೇಟೆಯನ್ನು ತಪ್ಪಿಸಿಕೊಳ್ಳಲು ಹರಸಾಹಸ ಪಡುತ್ತಿರುವವರು. ಮೂಲ ಕಥಾ ಹಂದರವನ್ನು ಹಾಗೇ ಇಟ್ಟುಕೊಂಡು ಸಂದರ್ಭಕ್ಕೆ ತಕ್ಕ ಸಂಭಾಷಣೆಗಳನ್ನು ನಿರ್ದೇಶಕ, ನಟರು ತಾವೇ ಸಂಯೋಜಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಭಾಷೆಯನ್ನಾಡುವ ಕುಟುಂಬ, ಮಂಗಳೂರು ಕನ್ನಡವನ್ನಾಡುವ ಕುಟುಂಬ ನಾಟಕದ ಕೇಂದ್ರದಲ್ಲಿವೆ. ಆದರೆ ನಿಜಕ್ಕೂ ನಾಟಕದ ಕೇಂದ್ರದಲ್ಲಿರುವುದು ವ್ಯವಸ್ಥೆ ರೂಪಿಸಿದ ಕೃತಕ ಅಭಾವ, ಖಾಸಗಿ ಜೀವನಕ್ಕೂ ಪ್ರವೇಶಿಸಿದ ಪ್ರಭುತ್ವದ ಕಣ್ಗಾವಲು. ನಗು, ವಿಷಾದ, ಅಸಹಾಯಕತೆ, ರೊಚ್ಚು, ತಳಮಳ, ಪ್ರತಿಭಟನೆ ಏಕಕಾಲಕ್ಕೆ ಹಲವು ಬಣ್ಣಗಳಾಗಿ ರಂಗದ ಮೇಲೆ ಚೆಲ್ಲಿಕೊಂಡಿದ್ದವು. ಹೊಟ್ಟೆ ಹುಣ್ಣಾಗಿಸುವಷ್ಟು ನಗಿಸುವ ಈ ನಾಟಕ ವ್ಯವಸ್ಥೆಯ ಹುಣ್ಣುಗಳನ್ನು ಕಾಣಿಸಲು ಮರೆಯುವುದಿಲ್ಲ.

ಮನುಷ್ಯರನ್ನು ಹಣಿಯಲು ಬಯಸುವ ವ್ಯವಸ್ಥೆ, ವ್ಯವಸ್ಥೆಯನ್ನು ಹಣಿಯಲು ಹೊರಡುವ ಮನುಷ್ಯರು. ವ್ಯವಸ್ಥೆಯ ಕ್ರೂರ ತಂತ್ರಗಳು, ಸೆಡ್ಡುಹೊಡೆವ ಮನುಷ್ಯರ ಹುಂಬುತನಗಳು. ಇದು ಚರಿತ್ರೆ, ವರ್ತಮಾನ ಮತ್ತು ಭವಿಷ್ಯದಲ್ಲೂ ಮುಗಿಯದ ಆಟ. ಎಲ್ಲೆಲ್ಲೂ ಕಂಡುಬರುವ, ಕಾಣುತ್ತಿರುವ ಆಟ. ಪಡೆದೇ ಪಡೆಯುತ್ತೇವೆ ಅಂತ ವ್ಯವಸ್ಥೆ, ಕೊಡಲ್ಲ ಅಂದ್ರೆ ಕೊಡಲ್ಲ ಅಂತ ಮನುಷ್ಯರು. ಈ ಹಗ್ಗಜಗ್ಗಾಟವೇ ಇಲ್ಲಿನ ನಾಟಕ. ಇದು ಯಾರದೋ ಸೋಲು ಗೆಲುವಿನ ಪ್ರಶ್ನೆಯಲ್ಲ. ಬದುಕಿಗೆ ಒದಗಿರುವ ವಿಚಿತ್ರ ಸಂಕಟ. ಜಗ್ಗದ, ಬಗ್ಗದ ಸಮುದಾಯದ ಚಡಪಡಿಕೆ. ಬಿಡುಗಡೆಯ ಕನಸು. ಗೆದ್ದೇ ಗೆಲ್ಲುವೆವೆಂಬ ಕನಸು ಕೂಡ ಗೆಲುವಿನ ಒಂದು ಭಾಗ.

ಪ್ರಭುತ್ವ ಸೃಷ್ಟಿ ಮಾಡಿರುವ ಈ ಸಂಕಟ ಹೀನಾಯವಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ, ಆದರೆ ನಾಟಕದ ಉದ್ದೇಶ ಇದಿಷ್ಟೇ ಅಲ್ಲ. ಈ ಸಂಕಟ ಶಾಶ್ವತವೆಂದು ನಂಬುವ ಮನಸ್ಥಿತಿ ಇನ್ನೂ ಹೀನಾಯವಾದದ್ದು. ನಾಟಕದ ನಗುವಿನ ಸ್ಫೋಟವಿರುವುದು ಇಂಥ ಮನಸ್ಥಿತಿಯ ಮೇಲೆ. ಅರ್ಥವಿಲ್ಲದ ನೂರಾರು ಯೋಜನೆಗಳು, ಯೋಜನೆಗಳಿಗಿಂತ ಹೆಚ್ಚು ತೆರಿಗೆಗಳು. ಅದಕ್ಕೇನೆ ‘ಕೊಡಲ್ಲ ಅಂದ್ರೆ ಕೊಡಲ್ಲ’ ಅಂತ ರೊಚ್ಚಿಗೆದ್ದಿದ್ದಾರೆ. ಪ್ರಜಾಪ್ರಭುತ್ವದ ಸೌಂದರ್ಯವೇ ಈ ಜನಸಾಮಾನ್ಯರ ರೊಚ್ಚು. ಈ ರೊಚ್ಚು ಪ್ರಭುತ್ವದ ಬುಡಕ್ಕೆ ನೀರನ್ನೂ, ಬೆಂಕಿಯನ್ನೂ ಇಡಬಲ್ಲಷ್ಟು ತೀವ್ರವಾಗಿತ್ತು. ಸೂಪರ್ ಮಾರ್ಕೆಟ್‌ನಿಂದ ಕದ್ದು ತಂದ ದಿನಸಿಗಳನ್ನು ತಮ್ಮ ಗಂಡಂದಿರಿಗೆ ಕಾಣಿಸದಂತೆ ಹೊಟ್ಟೆಯಲ್ಲಿಟ್ಟುಕೊಂಡು ಬಸಿರೆಂದು ನಟಿಸುವ ಹೆಂಗಸರು, ಒಳಗಿರುವ ಪುಟ್ಟನಿಗೆ ಏನೂ ಆಗಬಾರದೆಂದು ಒದ್ದಾಡುವ ಗಂಡಸರು, ಕದ್ದ ಮಾಲಿನ ತಪಾಸಣೆಗೆ ಬರುವ ಪೊಲೀಸ್, ಇನ್‌ಸ್ಪೆಕ್ಟರ್ ಎಲ್ಲರೂ ಒಬ್ಬರಿಗೊಬ್ಬರು ಬೆನ್ನು ಹತ್ತಿದವರು. ದಿಕ್ಕು ತಪ್ಪಿದ ಈ ಓಟದಲ್ಲಿ ಒಬ್ಬರ ಬದುಕನ್ನು ಮತ್ತೊಬ್ಬರು ಅಡ್ಡಡ್ಡ ಹಾಯುತ್ತಿದ್ದಾರೆ. ಇವರನ್ನು ಓಡಿಸುತ್ತಲೇ ಇರುವ ವ್ಯವಸ್ಥೆ ಇನ್ನಷ್ಟು ಹೊಸ ತಂತ್ರಗಳನ್ನು ಹೆಣೆಯುತ್ತಿದೆ.

ಪ್ರೇಕ್ಷಕರನ್ನೂ ನಾಟಕ ತನ್ನ ಪ್ರಯೋಗದ ಭಾಗವಾಗಿಸಿಕೊಂಡಿದೆ. ನಾಟಕದ ಪಾತ್ರಗಳು ಮಾತ್ರವಲ್ಲ, ಪ್ರೇಕ್ಷಕರೂ ಕೂಡ ವ್ಯವಸ್ಥೆಯ ಉರಿಗೆ ಒಳಗಾದವರೆ. ಪ್ರೇಕ್ಷಕರೊಂದಿಗೆ ಮಾತನಾಡುತ್ತ, ಕದ್ದ ಮಾಲನ್ನು ಪ್ರೇಕ್ಷಕರ ಕೈಯಿಂದ ದಾಟಿಸುತ್ತ, ರಂಗದ ಮೇಲೂ, ಕೆಳಗೂ ಲವಲವಿಕೆಯ ವಾತಾವರಣ ಉಂಟುಮಾಡಲಾಗಿತ್ತು. ಬಹುತೇಕ ಪಾತ್ರಗಳ ಪ್ರವೇಶ ರಂಗದ ಬದಿಗಳಿಂದ ಅಲ್ಲ, ಪ್ರೇಕ್ಷಕರ ನಡುವಿನಿಂದಲೇ ಜರುಗಿತ್ತು. ಇದು ಹಳೆಯ ತಂತ್ರವಾದರೂ ನಾಟಕದ ವಸ್ತುವಿಗೆ, ನಾಟಕೀಯತೆಗೆ ಹೊಂದುವಂತೆ ಸಹಜ ಕಲಾತ್ಮಕತೆಯಿಂದ ರೂಪಿಸಲಾಗಿತ್ತು. ಕೆಲವು ಕಡೆ ಮಾತಿನ ವಾಚಾಳಿತನಕ್ಕೆ, ಅಶ್ಲೀಲ ಓಟಕ್ಕೆ ಕೊಂಚ ತಡೆ ಒಡ್ಡಬಹುದಿತ್ತು. ರಂಗದ ಮೇಲೆ ಸಲ್ಮಾ ದಂಡಿನ್, ಚರಿತಾ ಶಾರದಾ, ದಿನೇಶ್ ನಾಯ್ಕ್, ಚರಿತ್ ಸುವರ್ಣ ಮತ್ತು ಮಂಜುನಾಥ ಮಂಡಲಗೇರಿ ಪಾತ್ರಗಳಿಗೆ ಜೀವತುಂಬಿ ಅಭಿನಯಿಸಿದರು. ಸರಳ ರಂಗಸಜ್ಜಿಕೆ ಮತ್ತು ವಸ್ತ್ರವಿನ್ಯಾಸದಿಂದ ಗಮನಸೆಳೆದವರು ಎಚ್.ಕೆ.ಶ್ವೇತಾರಾಣಿ. ಬೆಳಕಿನ ವಿನ್ಯಾಸ, ನಿರ್ವಹಣೆ ಮಂಜುನಾಥ ಹಿರೇಮಠ ಮತ್ತು ಆಸಿಫ್ ಹೂವಿನ ಹಡಗಲಿ, ಪರಿಕರಗಳ ಸಂಯೋಜನೆ ವಿನೀತ್ ಕುಮಾರ್ ಚಿಕ್ಕಮಗಳೂರು ಅವರದು. ಯಾವುದೂ ಪ್ರಯೋಗಕ್ಕೆ ಭಾರವಾಗದಂತೆ ಸಂಯೋಜಿಸಲಾಗಿತ್ತು.

ಕನ್ನಡ ರಂಗಭೂಮಿಯಲ್ಲಿ ಹೊಸ ರಂಗಶೈಲಿ ಹುಟ್ಟುಹಾಕುತ್ತಿರುವ ಶಕೀಲ್ ಅಹ್ಮದ್‌ರ ಪರಿಕಲ್ಪನೆ, ವಿನ್ಯಾಸ ಮತ್ತು ನಿರ್ದೇಶನ ಅಚ್ಚರಿ ಪಡುವಷ್ಟು ವಿನೂತನವಾಗಿತ್ತು. ಇದು ಇತ್ತೀಚಿನ ದಿನಗಳಲ್ಲಿ ಕನ್ನಡ ರಂಗಭೂಮಿಯ ಅತ್ಯುತ್ತಮ ಪ್ರಯೋಗಕ್ಕೆ ಸಾಕ್ಷಿಯಾಗಿತ್ತು. ಅನುಪ್ ಶೆಟ್ಟಿಯ ಸಂಗೀತ ಸಂಯೋಜನೆ ನಾಟಕದ ತೀವ್ರತೆ, ತಳಮಳವನ್ನು ಯಶಸ್ವಿಯಾಗಿ ದಾಟಿಸಿತ್ತು. ಸಂಗೀತವು ನಾಟಕದ ಅಲಂಕಾರವಾಗಿ ಅಲ್ಲ, ಅದರ ಭಾಗವಾಗಿಯೇ ಬಂದಿತ್ತು. ರ್‍ಯಾಪ್ ಮಾದರಿಯ ಹಾಡುಗಾರಿಕೆ, ಸ್ವರವಿನ್ಯಾಸ ನಾಟಕದ ಭಾವಜಗತ್ತನ್ನು ವೈವಿಧ್ಯಪೂರ್ಣವಾಗಿ ರೂಪಿಸಿತ್ತು. ಅದು ನಾಟಕದ ಧ್ವನಿಯನ್ನು ಇನ್ನೂ ಗಾಢವಾಗಿಸಿತು. ‘ನಿರ್ದಿಗಂತ’ದ ಈ ಪ್ರಸ್ತುತಿ ಪ್ರೇಕ್ಷಕರ ಅಭಿರುಚಿಯನ್ನು ಪಲ್ಲಟಿಸುವಷ್ಟು ದಕ್ಷವಾಗಿದೆ. ಇಂಥ ರಂಗಪ್ರಯೋಗಗಳು ಖಂಡಿತಾ ಪ್ರೇಕ್ಷಕರ ರಂಗಪರಿಕಲ್ಪನೆಯನ್ನು ವಿಸ್ತರಿಸುತ್ತವೆ.

ಕಲಬುರಗಿಯ ರಂಗಾಯಣದಲ್ಲಿ ಪ್ರದರ್ಶನಗೊಂಡ ಈ ನಾಟಕವನ್ನು ಸಮುದಾಯ ಕಲಬುರಗಿ ಆಯೋಜಿಸಿತ್ತು. ❖

ಅದಿತಿಯ ಅನನ್ಯ ಮಾತು...

10ನೇ ಪುಟದಿಂದ..

ಅಂಗವೈಕಲ್ಯವು ಸಮೃದ್ಧ ಜೀವನಕ್ಕೆ ಎಂದೂ ತೊಂದರೆಯಾಗದು ಎಂಬ ಭರವಸೆ ಪ್ರತಿ ಆಟಿಸ್ಟಿಕ್ ವ್ಯಕ್ತಿಗಳಲ್ಲಿ ತುಂಬಿದರೆ ಅದಕ್ಕಿಂತ ದೊಡ್ಡದು ಏನೂ ಇಲ್ಲ. ಯಾವುದೇ ತೀರ್ಪಿನ ಭಯವಿಲ್ಲದೇ, ತಮ್ಮ ಮಿತಿಗಳನ್ನು ಮೀರಲು ದೊರೆಯುವ ಸಹಕಾರವೇ ಸ್ನೇಹ ಎಂದು ಹೇಳುವುದನ್ನು ಅದಿತಿ ಮರೆಯುವುದಿಲ್ಲ.

ಟಾಕಿಂಗ್ ಫಿಂಗರ್ಸ್‌ನ ಸಹಲೇಖಕ ತರುಣ್, ಆಟಿಸ್ಟಿಕ್ ಅನಿಕೇತ್ ಹಾಗೂ ಅದಿತಿ ಸೇರಿ ‘ಸೈಲೆಂಟ್ ಎಕ್ಸ್‌ಪ್ರೆಶನ್ಸ್’ ಎಂಬ ವಾಟ್ಸ್ ಆ್ಯಪ್ ಗುಂಪನ್ನು ರಚಿಸಿ, ಅಲ್ಲಿ ಆಟಿಸ್ಟಿಕ್ ಇರುವವರಿಗೆ ಸಂವಹನದ ಕಲೆಯನ್ನು ಸರಾಗವಾಗಿಸಿಕೊಳ್ಳುವ ಬಗ್ಗೆ ತರಬೇತಿ ನೀಡುತ್ತಾರೆ.

ಅನುವಾದ: ರೂಪಾ ಕೆ.ಎಂ.

ಕಥೆ
ಮಹಮ್ಮದ್ ರಫೀಕ್ ಕೊಟ್ಟೂರು ಅವರ **ಆಲೆಕುಣಿ**
prajavani.net/short-story

ಕವನ
ಚಂದ್ರಿಕಾ ಹೆಗಡೆ ಅವರ **ಮುದುಕಿ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ರಟ್ಟುಗಳ ನಡುವೆ ಏನೆಲ್ಲ!



ಎರಡು ರಟ್ಟುಗಳ ನಡುವೆ
ಕನ್ನಡಕ್ಕೆ: ಎಸ್. ದಿವಾಕರ್
ಪ್ರ: ವೀರಲೋಕ
ಸಂ: 7022122121

ಕನ್ನಡದ ಮಣ್ಣಿನಲ್ಲಿ ವಿಶ್ವ ಸಾಹಿತ್ಯದ ಅತ್ಯುತ್ತಮ ಬೀಜಗಳನ್ನು ನೆಡುವುದರಲ್ಲಿ ಅದ್ವಿತೀಯರಾದ ಎಸ್. ದಿವಾಕರ್, ಪ್ರಯೋಗಶೀಲತೆಗೂ ಇನ್ನೊಂದು ಹೆಸರು. ವೈಯಕ್ತಿಕ ಬರವಣಿಗೆ ಮಾತ್ರವಲ್ಲದೆ, ದಿವಾಕರರು ಕನ್ನಡದಲ್ಲಿ ರೂಪಿಸಿದ ಅನುವಾದಿತ ಕೃತಿಗಳಲ್ಲೂ ಆ ಪ್ರಯೋಗಶೀಲತೆ ಎದ್ದುಕಾಣಿಸುತ್ತದೆ. ಇದಕ್ಕೆ ಹೊಸ ಉದಾಹರಣೆ, ‘ಎರಡು ರಟ್ಟುಗಳ ನಡುವೆ’.

ಪುಸ್ತಕ, ಗ್ರಂಥಾಲಯ ಹಾಗೂ ಓದುಗನೇ ಕಥಾವಸ್ತುವಾಗಿರುವ ಕಥೆಗಳು ಈ ಸಂಕಲನದಲ್ಲಿವೆ. ‘ಕಥೆಗಾರರ ಕಲ್ಪನೆಯಲ್ಲಿ ಪುಸ್ತಕ, ಓದು, ಲೈಬ್ರರಿ’ ಎಂಬ ಅಡಿ ಟಿಪ್ಪಣಿಯೇ ಕಥೆಗಳ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ವಿವಿಧ ದೇಶ–ಭಾಷೆಗಳ ಹದಿಮೂರು ಕಥೆಗಳು ಸೇರಿದಂತೆ, ದಿವಾಕರ್ ಬರೆದ ಕನ್ನಡ ಕಥೆಯೂ ಸಂಕಲನದಲ್ಲಿ ಸೇರಿದೆ. ಈ ಕಥೆಗಳು ವಸ್ತುವಿನ ಕಾರಣದಿಂದಷ್ಟೇ ಅನನ್ಯವಲ್ಲ, ಕಥೆಯ ವ್ಯಾಕರಣದ ಕಾರಣದಿಂದಲೂ ಮುಖ್ಯವಾದವು. ವಸ್ತುವಿಗೆ ನಿರ್ದಿಷ್ಟ ಚೌಕಟ್ಟಿದ್ದರೂ ಒಂದು ಕಥೆಯಂತೆ ಇನ್ನೊಂದಿಲ್ಲ. ಈ ಕಥೆಗಳ ಕೇಂದ್ರದಲ್ಲಿ ಪುಸ್ತಕ, ಗ್ರಂಥಾಲಯ ಅಥವಾ ಓದುಗ ಇದ್ದರೂ, ಇವು ಪುಸ್ತಕ ಸಂಸ್ಕೃತಿಯ ನೆಪದಲ್ಲಿ ಮನುಷ್ಯನ ಅನೂಹ್ಯ ಮನೋಲೋಕವನ್ನು ಇಣುಕಿನೋಡುವ ಪ್ರಯತ್ನದಂತಿವೆ.

ಓದುವುದರಲ್ಲೇ ಜೀವನ ಕಳೆದಿರುವ ವ್ಯಕ್ತಿಯೊಬ್ಬ ಇಲ್ಲಿದ್ದಾನೆ. ಓದಲಿಕ್ಕೆ ಸಾಧ್ಯವಾಗದೆ ಹೋದರೆ ಬದುಕಿರುವುದರಲ್ಲಿ ಅರ್ಥವಿಲ್ಲ ಎಂದು ನಂಬಿರುವ ವ್ಯಕ್ತಿ ಮತ್ತೊಂದು ಕಥೆಯಲ್ಲಿದ್ದಾನೆ. ಓದು ನಮ್ಮೊಳಗೆ ಅನಾವರಣಗೊಳಿಸುವ ಬೆರಗು–ತಲ್ಲಣಗಳು ಇಲ್ಲಿನ ಕಥೆಗಳಲ್ಲಿವೆ. ವಾಸ್ತವ ಹಾಗೂ ಪ್ರತಿವಾಸ್ತವದ ಮುಖಾಮುಖಿಯಂತೆ ಕೆಲವು ಕಥೆಗಳು ಕಾಣಿಸುತ್ತವೆ. ಸಾಹಿತ್ಯದ ಆರ್ದ್ರತೆಯ ಜೊತೆಗೆ ಪ್ರತಿರೋಧದ ಮಾಧ್ಯಮವಾಗಿಯೂ ಸಾಹಿತ್ಯ ಬಳಕೆಯಾಗುವ ಸೋಜಿಗದ ರಚನೆಗಳು ಇಲ್ಲಿವೆ. ದಿವಾಕರರ ಕಥೆಯಂತೂ ಪುಸ್ತಕಗಳ ಕಥೆಯನ್ನು ಹೇಳುತ್ತಲೇ, ಅದು ಪುಸ್ತಕದಾಚೆಗೂ ಮನುಷ್ಯನ ಅನುಭವದಾಚೆಗೂ ಹಬ್ಬಿರಬಹುದಾದ ಲೋಕವೊಂದನ್ನು ಕಾಣಿಸುವ ಪ್ರಯತ್ನದಂತಿದೆ. ಓದು ಮತ್ತು ಪುಸ್ತಕದ ಸ್ವರೂಪ ಬದಲಾಗುತ್ತಿರುವ ಸಂದರ್ಭದಲ್ಲಿ ರೂಪುಗೊಂಡಿರುವ ಈ ಕೃತಿ ಪುಸ್ತಕ ಹಾಗೂ ‘ಪುಸ್ತಕ ಸಂಸ್ಕೃತಿ’ ಅವಿನಾಶಿ ಎನ್ನುವುದನ್ನು ಹೇಳುವ ಪ್ರಯತ್ನದಂತೆಯೂ ಕಾಣಿಸುತ್ತದೆ.

ಪುಟ: 128 ₹150

ಕೃತಕ ಬುದ್ಧಿಮತ್ತೆ: ಬೆಳಕು ಚೆಲ್ಲುವ ಕೃತಿ



ಕೃತಕ ಬುದ್ಧಿಮತ್ತೆ
ಲೇ: ಗುರುರಾಜ್ ಎಸ್. ದಾವಣಗೆರೆ
ಪ್ರ: ವಸಂತ ಪ್ರಕಾಶನ
ಸಂ: 78921 06719

ಭವಿಷ್ಯದ ತಂತ್ರಜ್ಞಾನ ಎಂದೇ ಬಿಂಬಿತಗೊಂಡಿರುವ ಕೃತಕ ಬುದ್ಧಿಮತ್ತೆಯು ದಿನದಿಂದ ದಿನಕ್ಕೆ ವಿಕಸನಗೊಳ್ಳುತ್ತಲೇ ಸಾಗುತ್ತಿದೆ. ಈ ತಂತ್ರಜ್ಞಾನದಿಂದ ಹಲವರು ಉದ್ಯೋಗ ಕಳೆದುಕೊಳ್ಳಲಿದ್ದಾರೆ ಎಂದೂ, ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂಬ ಮಾತುಗಳೂ ತಂತ್ರಜ್ಞಾನ ಕ್ಷೇತ್ರದಲ್ಲಿ ವ್ಯಾಪಕವಾಗಿ ಕೇಳಿ ಬರುತ್ತಿವೆ. ಈ ಬೆಳವಣಿಗೆಗಳ ಕುರಿತಂತೆ ‘ಪ್ರಜಾವಾಣಿ’ ದಿನಪತ್ರಿಕೆ ಹಾಗೂ ‘ಸುಧಾ’ ವಾರಪತ್ರಿಕೆಯಲ್ಲಿ ಬಹಳಷ್ಟು ಲೇಖನಗಳು ಪ್ರಕಟಗೊಳ್ಳುತ್ತಿವೆ. ಕೃತಕ ಬುದ್ಧಿಮತ್ತೆ ಕುರಿತು ತಾವು ಬರೆದ ಲೇಖನಗಳನ್ನು ಲೇಖಕ ಗುರುರಾಜ್ ಎಸ್. ದಾವಣಗೆರೆ ಅವರು ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ.

‘ಕೃತಕ ಬುದ್ಧಿಮತ್ತೆ– ಮನುಕುಲದ ಅಳಿವಿಗೆ ಮುನ್ನುಡಿಯೇ?’ ಎಂಬ ಶೀರ್ಷಿಕೆಯುಳ್ಳ ಈ ಕೃತಿಯಲ್ಲಿ ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್– ಎಐ) ಅಂದರೇನು?, ಡೇಟಾ ಮತ್ತು ಆಲ್ಗೋರಿದಂ ಎಂಬ ಕೃತಕ ಬುದ್ಧಿಮತ್ತೆಯ ಉಸಿರು ಹೇಗೆ ಕಾರ್ಯ ನಿರ್ವಹಿಸುತ್ತದೆ? ಮಾನವ – ವನ್ಯಜೀವಿ ಸಂಘರ್ಷಕ್ಕೆ ಕೃತಕ ಬುದ್ಧಿಮತ್ತೆ ಹೇಗೆ ಪರಿಹಾರವಾಗಬಲ್ಲದು? ಕೃತಕ ಬುದ್ಧಿಮತ್ತೆ ಕುರಿತ ಪೂರ್ವಗ್ರಹದಿಂದ ಪಾರಾಗುವುದು ಹೇಗೆ? ಎಐ ತಂತ್ರಜ್ಞಾನವು ಚುನಾವಣೆಯಲ್ಲಿ ಹೇಗೆ ನೆರವಾಗಬಲ್ಲದು? ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಹೇಗೆ ಬಳಕೆಯಾಗಬಲ್ಲದು ಎಂಬ ವಿಷಯಗಳ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ.

70 ವರ್ಷಗಳ ಹಿಂದೆಯೇ ಆವಿಷ್ಕಾರಗೊಂಡ ಕೃತಕ ಬುದ್ಧಿಮತ್ತೆ ಎಂಬ ತಂತ್ರಜ್ಞಾನ ಈಗ ಚಾಟ್‌ಬಾಟ್‌ಗಳಾಗಿ, ನಮ್ಮ ಮನೆ, ಅಡುಗೆ ಮನೆ, ಕಚೇರಿ, ಮೊಬೈಲ್, ಲ್ಯಾಪ್‌ಟಾಪ್, ರೆಫ್ರಿಜರೇಟರ್, ಟಿವಿ, ವಾಷಿಂಗ್ ಮಷಿನ್ ಒಳಗೊಂಡು ಎಲ್ಲೆಡೆ ಹೇಗೆ ವ್ಯಾಪಿಸಿದೆ. ಅದರ ಮೂಲಕ ಬದುಕು ಹೇಗೆ ಸುಂದರ ಹಾಗೂ ಸರಳವಾಗಿದೆ ಎಂಬುದನ್ನು ದೃಷ್ಟಾಂತಗಳು, ಉದಾಹರಣೆಗಳೊಂದಿಗೆ ಲೇಖಕರು ವಿಷಯವನ್ನು ಪ್ರಸ್ತುತಪಡಿಸಿದ್ದಾರೆ.

ಕಾರು ಚಾಲನೆಯಿಂದ ಹಿಡಿದು ಶಿಕ್ಷಣ, ಸಂಶೋಧನೆ, ವೈದ್ಯಕೀಯ, ಮನರಂಜನೆ, ಬ್ಯಾಂಕಿಂಗ್ ಕ್ಷೇತ್ರಗಳವರೆಗೂ, ಆಪ್ತ ಸಮಾಲೋಚನೆಯಿಂದ ಹಿಡಿದು ಲೈಂಗಿಕ ಪ್ರಚೋದನೆಯವರೆಗೂ ಕೃತಕ ಬುದ್ಧಿಮತ್ತೆ ಬದುಕಿನ ಎಲ್ಲಾ ಕ್ಷೇತ್ರಗಳಿಗೂ ಕಾಲಿಟ್ಟಿರುವುದು ಹಾಗೂ ಅದರ ಮೂಲಕ ಹಳೆಯ ಎಲ್ಲಾ ಕೆಲಸಗಳೂ ಮರೆಯಾಗಿ ಹೊಸ ಬೇಡಿಕೆ ಸೃಷ್ಟಿಯಾಗಿರುವುದನ್ನೂ ಲೇಖಕರು ಕೃತಿಯಲ್ಲಿರುವ ವಿವಿಧ ವಿಷಯಗಳ ಕುರಿತ ಲೇಖನಗಳಲ್ಲಿ ವಿವರಿಸಿದ್ದಾರೆ.

ಪುಟ: 128 ₹140

ಕನಸುಗಳನ್ನು ಬೆನ್ನಟ್ಟುವ ಕ್ಯಾಡ್ಬರೀಸ್‌ನ ಪಯಣ...



ಕ್ಯಾಡ್ಬರೀಸ್‌ನ ಕ್ಯಾಬ್ - ಡೈರೀಸ್
ಲೇ: ಪೂರ್ಣೇಶ್
ಪ್ರಕಾಶನ: ಕೆ.ಕೆ. ನರೇಟಿವ್ಸ್
ಸಂ: 99452 96542

ಕನಸುಗಳ ಬೆನ್ನಟ್ಟಿ ಹೋಗುವ ಪ್ರಶಾಂತ ಅಲಿಯಾಸ್ ಕ್ಯಾಡ್ಬರೀಸ್‌ನ ಕನಸು ಮತ್ತು ವಾಸ್ತವವೇ ಪೂರ್ಣೇಶ್ ಅವರ ‘ಕ್ಯಾಡ್ಬರೀಸ್‌ನ ಕ್ಯಾಬ್ - ಡೈರೀಸ್’ ಎನ್ನುವ ಕಿರು ಕಾದಂಬರಿ.

ಕಾದಂಬರಿಯ ಕಥಾವಸ್ತು ಕೇವಲ ಅದರ ಕಥಾನಾಯಕನ ಕಥೆಯಂತೆ ಅನಿಸದೆ, ಕನಸಿನ ಬೆನ್ನತ್ತಿರುವ ಎಲ್ಲರ ಕಥೆಯಂತೆ ಭಾಸವಾಗುತ್ತದೆ. ಹೊಸ ಶೈಲಿಯ ನಿರೂಪಣೆಯ ಜೊತೆಗೆ ಹೊಸ ಕಾಲದ ಓದುಗರಿಗೆ ಹಿತ ಎನಿಸುವ ಬರವಣಿಗೆ ಕಾದಂಬರಿಯಲ್ಲಿದೆ.

ಕನಸುಗಳು, ಅದರ ಹಿಂದೆ ಓಡುವ ಜನರು, ಆಧುನಿಕ ಜೀವನ ಶೈಲಿ, ನಗರಗಳ ಟ್ರಾಫಿಕ್, ಕಾರ್ಪೋರೇಟ್ ವ್ಯವಸ್ಥೆ, ಜೀವನದ ಭಾಗವಾಗಿರೋ ಸಿನಿಮಾ ಹಾಡುಗಳು, ಬದುಕಿನ ಭಿನ್ನ ಆಯಾಮಗಳನ್ನು ಈ ಕಾದಂಬರಿ ತೆರೆದಿಡುತ್ತದೆ.

ಕೆಲವೇ ಪಾತ್ರಗಳಿರುವ ಕಾದಂಬರಿಯಲ್ಲಿ, ಪಾತ್ರ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಭಾಷಾ ಶೈಲಿಯು ಕೂಡ ಬದಲಾಗುತ್ತದೆ. ಒಂದೇ ಗುಕ್ಕಿನಲ್ಲಿ ಓದಿ ಮುಗಿಸಬಹುದು.

ಪುಸ್ತಕದ ಬೆನ್ನುಡಿಯಲ್ಲಿ ಲೇಖಕ ಜಯರಾಮಚಾರಿ ಅವರು ‘ಈ ಕಿರು ಕಾದಂಬರಿ ಮನುಷ್ಯನ ಪ್ರೀತಿ, ಪ್ರೇಮ, ಬದುಕು, ಭಯ, ಜೀವನ ಪ್ರೀತಿ ಇಂಥದ್ದೇ ಭಾವಗಳನ್ನಿಟ್ಟುಕೊಂಡ ಬಲು ಚೆಂದವಾಗಿ ನೇಯ್ದ ಕಥೆ’ ಎಂದು ಅಭಿಪ್ರಾಯಪಟ್ಟಿದ್ದಾರೆ. ಪುಸ್ತಕ ಓದಿದ ನಂತರ ಓದುಗನಿಗೂ ಈ ಅನುಭವವಾಗುತ್ತದೆ.

ಪುಟ: 94 ₹120

ಸ್ಲೊವೇನಿಯಾದ ರತ್ನ ಬ್ಲೆಡ್ ಸರೋವರ

ಬ್ಲೆಡ್ ಸರೋವರದ ವಿಹಂಗಮ ನೋಟ

ಸುತ್ತಲೂ ಹಸಿರಿನಿಂದ ಕೂಡಿದ ಬೆಟ್ಟಗಳು. ಅದರ ತಪ್ಪಲಿನಲ್ಲಿ ಪಚ್ಚೆ-ನೀಲಿ ಬಣ್ಣದ ನೀರಿನ ಸರೋವರ. ಪಕ್ಷಿನೋಟದಲ್ಲಿ ಈ ದೃಶ್ಯವನ್ನು ನೋಡಿದರೆ ಕಲಾಕೃತಿಯೊಂದನ್ನು ನೋಡಿದ ಅನುಭವ. ಸ್ಲೊವೇನಿಯಾದ ರತ್ನ ಎಂದೇ ಖ್ಯಾತಿ ಪಡೆದಿರುವ ಈ ಸರೋವರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸುತ್ತಿ ಬಂದ ಲೇಖಕರ ಅನುಭವ ಇಲ್ಲಿದೆ.

• ಚಿತ್ರ-ಬರಹ: ಡಿ.ಜಿ. ಮಲ್ಲಿಕಾರ್ಜುನ

ಬ್ಲೆಡ್, ಸ್ಲೊವೇನಿಯಾದ ಜೂಲಿಯನ್ ಆಲ್ಪ್ಸ್ ಪ್ರದೇಶದಲ್ಲಿರುವ ಸುಂದರವಾದ ಆಲ್ಪೈನ್ ಪಟ್ಟಣ. ಇದು ತನ್ನ ಅದ್ಭುತ ಪ್ರಕೃತಿ ಸೌಂದರ್ಯದಿಂದ ಜಗತ್ ಪ್ರಸಿದ್ಧವಾಗಿದೆ. ಬ್ಲೆಡ್ ಸರೋವರ, ಅದರಲ್ಲಿನ ದ್ವೀಪ, ಸುತ್ತಲೂ ಹಸಿರು ಬೆಟ್ಟಗಳು, ಎತ್ತರದ ಬೆಟ್ಟದ ಮೇಲಿನ ಐತಿಹಾಸಿಕ ಕೋಟೆ ಇಲ್ಲಿನ ಪ್ರಮುಖ ಆಕರ್ಷಣೆ. ಪ್ರವಾಸಿಗರಿಗೆ ತನ್ನ ಪ್ರಾಕೃತಿಕ ಸೌಂದರ್ಯದಿಂದ ವಿಶೇಷ ಅನುಭೂತಿ ನೀಡುವ ಈ ಸ್ಥಳ ಸ್ಲೊವೇನಿಯಾದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

ಬ್ಲೆಡ್ ಸರೋವರ

ಹಿಮಕರಗಿ, ಶಿಲಾಪದರಗಳಿಂದ ರೂಪುಗೊಂಡ ನೈಸರ್ಗಿಕ ಅದ್ಭುತ ಸೃಷ್ಟಿ ಈ ಸುಂದರ ಸರೋವರ. ಸರೋವರದ ಹಸಿರು ಬಣ್ಣ, ಅದರಲ್ಲಿರುವ ದ್ವೀಪ, ದ್ವೀಪದಲ್ಲಿರುವ ಮಧ್ಯಕಾಲೀನ ಕೋಟೆ ಮತ್ತು ಸುತ್ತಲಿನ ಮನಸೂರೆಗೊಳ್ಳುವ ನೈಸರ್ಗಿಕ ಭೂದೃಶ್ಯಾವಳಿಗೆ ಈ ಸರೋವರ ಹೆಸರುವಾಸಿ. ಇದನ್ನು 'ಸ್ಲೊವೇನಿಯಾದ ರತ್ನ' ಎಂದು ಕರೆಯುತ್ತಾರೆ. ನಿಸರ್ಗ ಸೌಂದರ್ಯ, ಐತಿಹಾಸಿಕ ತಾಣಗಳು ಮತ್ತು ಹೊರಾಂಗಣ ಚಟುವಟಿಕೆಗಳಿಗಾಗಿ ಅನೇಕ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಹಸಿರಿನಿಂದ ಆವರಿಸಿರುವ ಸರೋವರದ ಸುತ್ತಲೂ ಸುಂದರ ಪಾದಚಾರಿ ಮಾರ್ಗವಿದೆ.

ಪಚ್ಚೆ-ನೀಲಿ ಬಣ್ಣವನ್ನು ಹೊಂದಿರುವ ಬ್ಲೆಡ್ ಸರೋವರದಲ್ಲಿರುವ ದ್ವೀಪದಲ್ಲಿ ಮೇರಿ ಮಾತೆಯ ಚರ್ಚ್ ಇದೆ. ಚರ್ಚ್‌ನ ಗಂಟೆಯನ್ನು ಬಾರಿಸಿದರೆ, ಮನಸ್ಸಿನ ಇಚ್ಛೆ ಈಡೇರುತ್ತದೆ ಎಂಬ ನಂಬಿಕೆಯಿದೆ. ಸ್ಮರಣಿಕೆಗಳ ಅಂಗಡಿಯಲ್ಲಿ ಪೋಸ್ಟ್ ಕಾರ್ಡ್ ಖರೀದಿಸಿ, ನಮ್ಮ ಊರಿಗೆ (ನನ್ನದೇ ವಿಳಾಸಕ್ಕೆ) ಇಲ್ಲಿಗೆ ಬಂದಿದ್ದ ನೆನಪಿಗಾಗಿ ಪೋಸ್ಟ್ ಮಾಡಿದೆ.

ದೋಣಿಯಲ್ಲಿ ಈ ದ್ವೀಪವನ್ನು ತಲುಪಿದ ಮೇಲೆ ಚರ್ಚ್‌ಗೆ ಹೋಗಲು 99 ಮೆಟ್ಟಿಲು ಹತ್ತಬೇಕು. ಸ್ಥಳೀಯ ಆಚರಣೆಯ ಪ್ರಕಾರ ಮದುವೆಯ ದಿನದಂದು ಸಂತೋಷ ಮತ್ತು ಸಮೃದ್ಧವಾದ ದಾಂಪತ್ಯಕ್ಕಾಗಿ ವರನು ವಧುವನ್ನು ಎತ್ತಿಕೊಂಡು ಈ 99 ಮೆಟ್ಟಿಲುಗಳನ್ನು ಹತ್ತಬೇಕು. ಈ ನಂಬಿಕೆ ಮತ್ತು ಆಚರಣೆಯಿಂದ ದ್ವೀಪದ ಮೇಲಿರುವ ಚರ್ಚ್ ಜನಪ್ರಿಯ ವಿವಾಹ ಸ್ಥಳವಾಗಿದೆ. ಈ ಸಂಪ್ರದಾಯದಲ್ಲಿ ಪಾಲ್ಗೊಳ್ಳಲು ಅನೇಕ ದಂಪತಿಗಳು ತಮ್ಮ ವಿವಾಹ ಸಮಾರಂಭಕ್ಕಾಗಿ ಬ್ಲೆಡ್ ದ್ವೀಪವನ್ನೇ ಆಯ್ಕೆ ಮಾಡುತ್ತಾರೆ.

ಪೋಸ್ಟ್ ಕಾರ್ಡ್ ಸಿದ್ಧಗೊಳ್ಳುವುದು ಇಲ್ಲೇ...

ಸರೋವರದ ಅಂಚಿನಲ್ಲೇ ಬೆಟ್ಟದ ಮೇಲಿದೆ ಕೋಟೆ

ಬ್ಲೆಡ್ ಕ್ಯಾಸಲ್

ಸರೋವರದ ಪಕ್ಕದ ಕಡಿದಾದ ಬೆಟ್ಟದ ಮೇಲಿರುವ 11ನೇ ಶತಮಾನದ ಕ್ಯಾಸಲ್ (ಕೋಟೆ) ನಲ್ಲಿ ವಸ್ತುಸಂಗ್ರಹಾಲಯ, ವೈನ್ ಮ್ಯೂಸಿಯಂ ಮತ್ತು ರೆಸ್ಟೋರೆಂಟ್ ಇದೆ. ರೆಸ್ಟೋರೆಂಟ್‌ನಲ್ಲಿ ಸ್ಥಳೀಯ ಖಾದ್ಯಗಳನ್ನು ಸೇವಿಸುವುದರ ಜೊತೆಗೆ ಇಲ್ಲಿನ ಪ್ರಸಿದ್ಧ ಬ್ಲೆಡ್ ಕ್ರೀಮ್ ಕೇಕ್ ಅನ್ನು ಸವಿಯಬಹುದು. ಹಳೆಯ ಮುದ್ರಣಾಲಯ ಇಲ್ಲಿದ್ದು, ಪ್ರವಾಸಿಗರು ತಮ್ಮ ಹೆಸರನ್ನು ಮುದ್ರಿಸಿಕೊಳ್ಳಲು ಅವಕಾಶವಿದೆ. ಇಲ್ಲಿ ನಿಂತು ದೂರದಲ್ಲಿ ಕಾಣುವ ದ್ವೀಪ, ಸುತ್ತಲಿನ ಬೆಟ್ಟಗುಡ್ಡಗಳು, ಸರೋವರದ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದು.

ಇಲ್ಲಿನ ಹಿತವಾದ ಹವಾಗುಣ, ಆರೋಗ್ಯವನ್ನು ವೃದ್ಧಿಸುವ ಅನುಭವ ನೀಡುವಂತೆ ಬೀಸುವ ಗಾಳಿ ಮತ್ತು ಸರೋವರದ ನೀರು ಪ್ರವಾಸಿಗರನ್ನು ವರ್ಷಪೂರ್ತಿ ಆಕರ್ಷಿಸುತ್ತದೆ. ರೋಯಿಂಗ್, ಈಜು, ಹೈಕಿಂಗ್, ಸೈಕ್ಲಿಂಗ್, ಚಳಿಗಾಲದ ಕ್ರೀಡೆಗಳು, ಸ್ಪಾಗಳನ್ನರಸಿ ಪ್ರವಾಸಿಗರು ಬರುವರು. ಆಲ್ಪೈನ್ ಪ್ರದೇಶದ ರಜಾ ಮತ್ತು ಆರೋಗ್ಯಧಾಮವಾಗಿ ಬ್ಲೆಡ್ ಹೆಸರಾಗಿದೆ.

ಸಿನಿಮಾ ಮೋಡಿ

ಸುಂದರವಾದ ಭೂದೃಶ್ಯ ಹೊಂದಿರುವ ಬ್ಲೆಡ್ ಅತ್ಯಂತ ಹೆಚ್ಚು ಛಾಯಾಚಿತ್ರಗಳನ್ನು ಕ್ಲಿಕ್ಕಿಸುವ ಪ್ರದೇಶವೆಂದು ಹೆಸರಾಗಿದೆ. ಛಾಯಾಗ್ರಾಹಕರ ನೆಚ್ಚಿನ ತಾಣವಿದು. ಅಂತೆಯೇ ಸಿನಿಮಾ ಮಂದಿಗೂ.

ಸ್ಲೊವೇನಿಯಾದಲ್ಲಿ ಭಾರತದ ವಿವಿಧ ಭಾಷೆಗಳ ಹಲವು ಚಲನಚಿತ್ರಗಳ ಹಾಡುಗಳನ್ನು ಚಿತ್ರೀಕರಿಸಲಾಗಿದೆ. ಈ ದೇಶದಲ್ಲಿ ನುರಿತ ತಂತ್ರಜ್ಞರು ಮತ್ತು ನಟ ನಟಿಯರೊಂದಿಗೆ ಕುಣಿಯುವ ಪ್ರತಿಭಾನ್ವಿತ ಸಹ ಕಲಾವಿದರು ಸಿಗುತ್ತಾರೆ. ನಿರ್ಮಾಣ ತಂಡವು ರಾಜಧಾನಿ ಲೂಬ್ ಲಿಯಾನ ನಗರದಲ್ಲಿದ್ದುಕೊಂಡು ಕರಾವಳಿ ಅಥವಾ ಪರ್ವತ ಪ್ರದೇಶಗಳಲ್ಲಿ ಒಂದು ದಿನದ ಚಿತ್ರೀಕರಣವನ್ನು ಸಲೀಸಾಗಿ ಮಾಡಬಹುದು. ಅದ್ಭುತವಾದ ನೈಸರ್ಗಿಕ ದೃಶ್ಯಗಳು, ಕೋಟೆಗಳು, ಅದ್ಭುತ ವಾಸ್ತುಶಿಲ್ಪದ ಕಟ್ಟಡಗಳು, ಸ್ಥಳೀಯ ಸಾಂಸ್ಕೃತಿಕ ಪರಂಪರೆಯೊಂದಿಗೆ ಸಂಯೋಜಿಸಿ ಇಲ್ಲಿ ಚಿತ್ರೀಕರಣ ನಡೆಸಲು ಸಾಧ್ಯವಿದೆ.

ತೆಲುಗು ಭಾಷೆಯ ರಾಮ್‌ಚರಣ್ ಮತ್ತು ಕಾಜಲ್ ಅಗರವಾಲ್ ನಟಿಸಿರುವ ನಾಯಕ್ (2013) ಚಲನಚಿತ್ರದ 'ಒಕ ಚೂಪುಕೆ ಪಡಿಪೋಯ..' ಹಾಡನ್ನು ಸ್ಲೊವೇನಿಯಾದ ಬ್ಲೆಡ್‌ನಲ್ಲಿ ಸುಂದರವಾಗಿ ಚಿತ್ರೀಕರಿಸಿದ್ದಾರೆ. ರಾಮ್‌ಚರಣ್ 2017ರಲ್ಲಿ ತನ್ನ ತಂದೆ ಚಿರಂಜೀವಿ ನಟನೆಯ 'ಕೈದಿ ನಂ. 150' ಚಲನಚಿತ್ರದ ನಿರ್ಮಾಪಕರಾಗಿ, ಇದೇ ಬ್ಲೆಡ್‌ನಲ್ಲಿ 'ಸುಂದರಿ..' ಎಂಬ ಹಾಡನ್ನು ಚಿತ್ರೀಕರಿಸಿದ್ದಾರೆ. ವಿಶೇಷವೆಂದರೆ, ಇದರ ಹೀರೋಯಿನ್ ಕೂಡ ಕಾಜಲ್ ಅಗರವಾಲ್. ಉಪೇಂದ್ರ ನಟಿಸಿರುವ ಸೂಪರ್ ರಂಗ (2014) ಚಲನಚಿತ್ರದ 'ನನಗೂ ನಿನಗೂ..' ಹಾಡನ್ನು ಕೂಡ ಬ್ಲೆಡ್‌ನಲ್ಲಿ ಚಿತ್ರೀಕರಿಸಿದ್ದಾರೆ.

ಈ ದೃಶ್ಯಗಳನ್ನೆಲ್ಲಾ ನೋಡುವಾಗ, ಸ್ಲೊವೇನಿಯಾದಲ್ಲಿನ ಬ್ಲೆಡ್ ಸರೋವರದಲ್ಲಿ ದೋಣಿಯಲ್ಲಿ ಕುಳಿತು ಬ್ಲೆಡ್ ಐಲ್ಯಾಂಡ್‌ಗೆ ಹೋಗುವುದು, ಎತ್ತರದ ಬೆಟ್ಟದ ಮೇಲಿರುವ ಬ್ಲೆಡ್ ಕ್ಯಾಸಲ್‌ನಲ್ಲಿ ನಿಂತು, ಕೆಳಗೆ ಕಾಣುವ ಸರೋವರದ ನಿರ್ಮಲ ಸೌಂದರ್ಯದಲ್ಲಿ ಕಳೆದುಹೋಗುವ ಆಸೆ ಮೂಡುವುದು ಸಹಜ.

ಇಂದಿರಾ ಗಾಂಧಿ ಭೇಟಿ

ಯುಗೊಸ್ಲಾವಿಯಾದ ನಾಯಕ ಜೋಸಿಪ್ ಬ್ರೋಜ್ ಟಿಟೊ, ಬ್ಲೆಡ್ ಸರೋವರದ ತೀರದಲ್ಲಿರುವ ವಿಲಾ ಬ್ಲೆಡ್ ಅನ್ನು ತನ್ನ ಮುಖ್ಯ ಬೇಸಿಗೆ ನಿವಾಸವಾಗಿ ಮಾಡಿಕೊಂಡಿದ್ದರು. 1947 ಮತ್ತು 1980ರ ಅವಧಿಯಲ್ಲಿ ಟಿಟೊ, ಇಲ್ಲಿ ಹಲವು ದೇಶಗಳ ಮುಖಂಡರನ್ನು ಕರೆಸಿ ಆತಿಥ್ಯ ನೀಡಿದ್ದರು.

ಜಪಾನ್‌ನ ಚಕ್ರವರ್ತಿ ಅಕಿಹಿಟೊ (ಆಗ ಕ್ರೌನ್ ಪ್ರಿನ್ಸ್), ರಾಣಿ ಎಲಿಜಬೆತ್, ಜೋರ್ಡಾನ್ ರಾಜ ಹುಸೇನ್, ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ, ಉತ್ತರ ಕೊರಿಯಾದ ನಾಯಕ ಕಿಮ್ ಇಲ್-ಸಂಗ್ ಮತ್ತು ಸೋವಿಯತ್ ನಾಯಕ ನಿಕಿತಾ ಕ್ರುಶ್ಚೇವ್ ಮುಂತಾದವರು ಟಿಟೊ ಯುಗದಲ್ಲಿ ಬ್ಲೆಡ್‌ಗೆ ಅತಿಥಿಗಳಾಗಿ ಆಗಮಿಸಿದ್ದರು. ಅಮೆರಿಕದ ಅಧ್ಯಕ್ಷ ಜಾರ್ಜ್ ಡಬ್ಲ್ಯೂ. ಬುಷ್ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವಿನ ಮೊದಲ ಅಧಿಕೃತ ಶೃಂಗಸಭೆಯನ್ನು ಜೂನ್ 16, 2001 ರಂದು ಬ್ಲೆಡ್‌ನಲ್ಲಿ ಆಯೋಜಿಸಲಾಗಿತ್ತು.

ಬ್ಲೆಡ್ ಸರೋವರದ ಸೌಂದರ್ಯಕ್ಕೆ ಮನಸೋಲದವರೇ ಇಲ್ಲ. ನಾನಂತೂ ಇದರ ಮೋಹದೊಳಗೆ ಸಿಲುಕಿಬಿಟ್ಟಿದ್ದೇನೆ!

ಎಲ್ಲಿದೆ ಈ ಸ್ಲೊವೇನಿಯಾ

ಯೂರೋಪಿನ ಆಗ್ನೇಯ ದಿಕ್ಕಿನಲ್ಲಿ ಪಶ್ಚಿಮ ಯುರೋಪ್ ಮತ್ತು ಬಾಲ್ಕನ್ ದೇಶಗಳ ನಡುವೆ ಇರುವ ದೇಶ ಸ್ಲೊವೇನಿಯಾ. ಯುಗೋಸ್ಲಾವಿಯಾದ ಭಾಗವಾಗಿದ್ದ ಈ ದೇಶದ ನೆರೆರಾಷ್ಟ್ರಗಳು ಆಸ್ಟ್ರಿಯಾ, ಹಂಗೆರಿ, ಇಟಲಿ ಮತ್ತು ಕ್ರೊಯೇಷಿಯಾ. ಮೆಡಿಟರೇನಿಯನ್ ಸಮುದ್ರ-ತೀರದಲ್ಲಿರುವ ಈ ದೇಶವು ಶೇಕಡ 60 ರಷ್ಟು ಹಸಿರಿನಿಂದ ಕೂಡಿದೆ. ಕ್ರಿ.ಶ 9ನೇ ಶತಮಾನದಿಂದ ಒಂದಲ್ಲ ಒಂದು ದೇಶದ ಅಧೀನದಲ್ಲಿದ್ದ ಈ ದೇಶ ಸ್ವತಂತ್ರಗೊಂಡದ್ದು 20ನೇ ಶತಮಾನದ ಆರಂಭದಲ್ಲಿ.

ಮೊದಲನೆ ಮಹಾಯುದ್ಧ ಮುಗಿದ ಮೇಲೆ 1929ರಲ್ಲಿ ಸ್ಲೊವೇನಿಯಾ, ಸರ್ಬಿಯ ಮತ್ತು ಕ್ರೊಯೇಷಿಯಾ ಜೊತೆಗೂಡಿ ಯುಗೋಸ್ಲಾವಿಯಾ ಎಂಬ ರಾಷ್ಟ್ರವನ್ನು ಸ್ಥಾಪಿಸಿಕೊಂಡವು. ಎರಡನೇ ವಿಶ್ವ ಯುದ್ಧದ ನಂತರ ಮರ್ಷಲ್ ಟೀಟೋ ನಾಯಕತ್ವದಲ್ಲಿ ಯುಗೋಸ್ಲಾವಿಯಾ ಪ್ರಗತಿ ಸಾಧಿಸಿತು. ಆತನ ನಿಧನಾನಂತರ ಯುಗೋಸ್ಲಾವಿಯಾ ಛಿದ್ರಗೊಂಡಾಗ, 1991ರಲ್ಲಿ ಸ್ಲೊವೇನಿಯಾ ಸ್ವತಂತ್ರ ರಾಷ್ಟ್ರವಾಯಿತು. 2003 ರಿಂದ ನ್ಯಾಟೊ ಮತ್ತು ಯುರೋಪಿಯನ್ ಯೂನಿಯನ್ನಿನ ಸದಸ್ಯ ರಾಷ್ಟ್ರವಾಗಿದೆ.

ಪ್ರವಾಸ

ಚಂಪಕ ಸರಸಿ ಕೊಳ

ವೆಂಕಟಪ್ಪ ನಾಯಕನ ಚಂಪಕ ಸರಸಿ

• ಗೌರಿ ಚಂದ್ರಕೇಸರಿ

ಚಂಪಕ ಸರಸಿ ಅಥವಾ ಸರಸ್ಸು ಎಂದು ಕರೆಯಲ್ಪಡುವ ಮನಮೋಹಕ ಕೊಳವೊಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಮಲಂದೂರು ಗ್ರಾಮದಲ್ಲಿದೆ. ಇದನ್ನು ಕೊಳ ಎನ್ನುವುದಕ್ಕಿಂತಲೂ ವಿಶಾಲವಾದ ಕಲ್ಯಾಣಿ ಎಂದು ಹೇಳಬಹುದು. ಈ ಹಿಂದೆ ಸಾರ್ವಜನಿಕರ ಗಮನಕ್ಕೆ ಬಾರದೇ ಇದ್ದ ಈ ಸ್ಥಳ ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಈಗಷ್ಟೇ ಜನಮನ್ನಣೆಗೆ ಪಾತ್ರವಾಗುತ್ತಿದೆ.

ಹದಿನಾರನೇ ಶತಮಾನದಲ್ಲಿ ಜನಪ್ರಿಯ ನಾಯಕ ಎನ್ನಿಸಿಕೊಂಡಿದ್ದ ಕೆಳದಿಯ ವೆಂಕಟಪ್ಪ ನಾಯಕನಿಂದ ಈ ಸುಂದರ ಕೊಳ ನಿರ್ಮಾಣವಾಯಿತು. ಕೆಳದಿಯ ಅರಸರು ನೀರಾವರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದವರು. ರಾಜ್ಯದಾದ್ಯಂತ ಸುಮಾರು 5,800 ಕೆರೆಗಳನ್ನು ನಿರ್ಮಾಣ ಮಾಡಿದರು ಎಂಬ ಉಲ್ಲೇಖವಿದೆ.

ಕೆಳದಿಯ ವೆಂಕಟಪ್ಪ ನಾಯಕ ಬೆಸ್ತರ ಕನ್ಯೆಯೊಬ್ಬಳನ್ನು ಪ್ರೇಮಿಸಿ ಮದುವೆಯಾಗುತ್ತಾನೆ. ಆದರೆ ಸಮಾಜದ ಚುಚ್ಚು ಮಾತುಗಳಿಗೆ ಮನನೊಂದು ಚಂಪಕ ಸರಸಿ ಅನ್ನಾಹಾರಗಳನ್ನು ತ್ಯಜಿಸಿ ದೇಹ ತ್ಯಾಗ ಮಾಡುತ್ತಾಳೆ. ಅವಳ ನೆನಪಿಗಾಗಿ ವೆಂಕಟಪ್ಪ ನಾಯಕ ಈ ಐತಿಹಾಸಿಕ ಕೊಳವನ್ನು ನಿರ್ಮಾಣ ಮಾಡಿದನೆಂದು ಹೇಳಲಾಗುತ್ತದೆ.

ಕೊಳದ ಸುತ್ತಲೂ ಸ್ಥಳೀಯವಾಗಿ ಸಿಗುವ ಜಂಬಿಟ್ಟಿಗೆಗಳಿಂದ ಕಟ್ಟಿರುವ 76.8 ಮೀಟರ್ ಅಗಲ ಹಾಗೂ 77.8 ಉದ್ದದ ಆವಾರವಿದೆ. ಉತ್ತರ ದಿಕ್ಕಿನಿಂದ ನೀರು ಹರಿದು ಬಂದು ಕೊಳಕ್ಕೆ ಸೇರುತ್ತದೆ. ದಕ್ಷಿಣಕ್ಕೆ ತೂಬಿನ ವ್ಯವಸ್ಥೆಯನ್ನು ಮಾಡಲಾಗಿದೆ. ಕೊಳದ ಮಧ್ಯದಲ್ಲಿ ಪುಟ್ಟದಾದ ದೇವಸ್ಥಾನವಿದ್ದು ಇದರಲ್ಲಿ ನಂದಿಯ ವಿಗ್ರಹವಿದೆ. ಈ ದೇವಸ್ಥಾನವನ್ನು ತಲುಪಲು ಕಲ್ಲಿನ ಹಲಗೆಗಳ ಒಂದು ಸೇತುವೆ ಇದೆ. ನೀಲಿಬಣ್ಣದ ನೀರಿನಿಂದ ಕೂಡಿದ ಈ ಕೊಳ ಮನಮೋಹಕವಾಗಿದ್ದು ಕೊಳದಲ್ಲಿ ಪುಟ್ಟ ಪುಟ್ಟ ಮೀನುಗಳ ರಾಶಿಯನ್ನು ಕಾಣಬಹುದು.

ಕೊಳದ ಸುತ್ತಲೂ ಇರುವ ಹಸಿರಿನ ವಾತಾವರಣವು ಮನವನ್ನು ಮುದಗೊಳಿಸುತ್ತದೆ. ಚಿತ್ರಕಾರನೊಬ್ಬ ರಚಿಸಿದ ಚಿತ್ರದಂತೆ ಈ ದೃಶ್ಯ ಭಾಸವಾಗುತ್ತದೆ. ಇತ್ತೀಚೆಗೆ ಪ್ರೀ ವೆಡ್ಡಿಂಗ್ ಶೂಟ್‌ಗೆ ಈ ಪರಿಸರ ವೇದಿಕೆಯಾಗಿದೆ. ಮದುವೆಗೂ ಮುನ್ನ ಜೋಡಿಗಳು ಇಲ್ಲಿ ಬಂದು ವಿಡಿಯೊ ಚಿತ್ರೀಕರಣ ಮಾಡಿಕೊಳ್ಳುವುದು ಸಾಮಾನ್ಯವಾಗಿದೆ.

ಶಿವಮೊಗ್ಗದಿಂದ 50 ಕಿಲೋಮೀಟರ್ ದೂರದಲ್ಲಿರುವ ಈ ಪಾರಂಪರಿಕ ತಾಣ ಆನಂದಪುರದಿಂದ 3 ಕಿಲೋಮೀಟರ್ ದೂರದಲ್ಲಿದೆ. ವಿಶ್ವ ನೀರಾವರಿ ರಚನೆಗಳ ಪಟ್ಟಿಯಲ್ಲಿ ಸೇರ್ಪಡೆಯಾಗುವಷ್ಟು ಈ ಕೊಳ ಮಹತ್ವ ಪಡೆದಿದ್ದರೂ ನಿರ್ಲಕ್ಷಕ್ಕೆ ಒಳಗಾಗಿದೆ. ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿದಲ್ಲಿ ಈ ಸ್ಥಳ ಇನ್ನೂ ಹೆಚ್ಚು ಹೆಚ್ಚು ಪ್ರವಾಸಿಗರನ್ನು ತನ್ನತ್ತ ಸೆಳೆದುಕೊಳ್ಳಬಹುದು.

ಕೊಳದ ಮಧ್ಯಭಾಗದಲ್ಲಿರುವ ದೇವಸ್ಥಾನ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಗವಿ	+	ದಡಿ	+	ವಾ	=	
2	ಮರು	+	ನಗು	+	ನ	=	
3	ಕೆಳ	+	ಅಡಿ	+	ವ	=	
4	ಆಳ	+	ಬಕ	+	ಗ್ಗ	=	
5	ಅಗೆ	+	ನೆಡು	+	ಮ	=	

ಡಣ್ಣ ಚಕ್ಕು ಕೀರ್ತಿ ಶೃಂಗದ ಕಥೆಯ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ತಿಮಿಂಗಿಲದ ಮೇಲೇರಿದ ಜೆಟ್‌ಸ್ಕಿ

ಗುಂಡ ಸಮುದ್ರ ತೀರಕ್ಕೆ ಆಡಲು ಹೋಗಿದ್ದ, ಅಲ್ಲಿ ಬೋಟ್ ರೈಡ್ ಜೊತೆ ಜೆಟ್‌ಸ್ಕಿ ಇತ್ತು. ಅದನ್ನು ಓಡಿಸಲು ಟಿಕೆಟ್ ಪಡೆದ. ಜೆಟ್‌ಸ್ಕಿ ಹತ್ತಿ ಸಮುದ್ರದಲೆಗಳ ಮೇಲೆ ಹಾರಿಸುತ್ತಾ ಸಾಗಿದ. ಕೆಲ ಹೊತ್ತಿನಲ್ಲಿ ಬೃಹತ್ ಅಲೆಯೊಂದರ ಮೇಲೆ ಹೋದ ಅನುಭವ ಗುಂಡನಿಗಾಯಿತು. ಆದರೆ ಅದು ಅಲೆಯಾಗಿರಲಿಲ್ಲ. ಬದಲಾಗಿ ತಿಮಿಂಗಿಲದ ಬೆನ್ನಿನ ಮೇಲೆ ಗುಂಡನ ಜೆಟ್‌ಸ್ಕಿ ಇತ್ತು.



ಶಬ್ದಾಟ

1.ಇಲ್ಲಿ ಕೊಟ್ಟಿರುವ ನಾಲ್ಕಕ್ಷರ ಪದಕ್ಕೆ ಇನ್ನೊಂದು ಅಕ್ಷರ ಸೇರಿಸಿ ಐದಕ್ಷರ ಪದ ಮಾಡಿ.

ಹಣ್ಣುಕದ್ದಿ + ನ =

2.ಇಲ್ಲಿ ಒಂದು ಪದದ ಸ್ವರಾಕ್ಷರಗಳನ್ನು ತೆಗೆದು ಹಾಕಲಾಗಿದೆ. ನೀವು ಆ ಸ್ವರಾಕ್ಷರ ಮರಳಿ ಸೇರಿಸಿ ಆ ಪದ ಕಂಡುಹಿಡಿಯಿರಿ.

1	D		N		S		R	S

ನೀತಿ ಶಿಕ್ಷಣ

ತಿಳಿ-ಸಾರು

1	ಹರಿಶ್ಚಂದ್ರ	ಸತ್ಯ, ನಿಷ್ಠೆ
2	ಏಕಲವ್ಯ	ಗುರುಭಕ್ತಿ
3	ಬಸವಣ್ಣ	ಜಾತ್ಯಾತೀತತೆ
4	ವಿಶ್ವೇಶ್ವರಯ್ಯ	ಪ್ರಾಮಾಣಿಕತೆ
5	ಸ್ವಾಮಿ ವಿವೇಕಾನಂದ	ಬ್ರಹ್ಮಚರ್ಯ, ದೇಶಭಕ್ತಿ
6	ಡಾ.ರಾಧಾಕೃಷ್ಣನ್	ಶೈಕ್ಷಣಿಕ ಚಿಂತನೆ
7	ಸಾಲು ಮರದ ತಿಮ್ಮಕ್ಕ	ಪರಿಸರ ಪ್ರೇಮ
8.	ಒನಕೆ ಓಬವ್ವ	ಸಮಯ ಪ್ರಜ್ಞೆ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಪದಗಳಲ್ಲಿನ ಮೊದಲಿನ ಅಕ್ಷರ ತೆಗೆದು ಕೊನೆಗಿಟ್ಟು ಬಲದಿಂದ ಓದಿದರೆ ಮೊದಲಿನ ಪದವೇ ಆಗುತ್ತದೆ.

1	BANANA
2	DRESSER
3	GRAMAR
4	POTATO

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ತಲೆ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ತ	ಲೆ		
2	ತ	ಲೆ		
3	ತ	ಲೆ		
4	ತ	ಲೆ		
5	ತ	ಲೆ		

ಅಕ್ಷರ ಪಟ್ಟಿ

ನೋ	ರ	ದೂ	ರು	ಬಾ
ಗು	ಮಾ	ಗು	ಭಾ	ವು

ಪತ್ರಿಕೆಗಳ ಹೆಸರು ಪತ್ತೆ ಮಾಡಿ

ಹೊರರಾಜ್ಯದಿಂದ ಇಲ್ಲಿಗೆ ಬಂದು ಕನ್ನಡ ಕಲಿತು ಸ್ವಂತ ಊರಿಗೆ ಮರಳಿದ ಸುಧಾ ತನ್ನ ಗೆಳತಿಗೆ ಬರೆದ ಪತ್ರವಿದು. ಇದೊಂದು ಪತ್ರದಲ್ಲಿ ಅನೇಕ ಪತ್ರಿಕೆಗಳ ಹೆಸರುಗಳಿವೆ. ಇವುಗಳನ್ನು ಪತ್ತೆಹಚ್ಚಿ.

ಗೆಳತಿ ಪ್ರಿಯಾಂಕಾಳಿಗೆ,

ಸುಧಾ ಮಾಡುವ ನಮಸ್ಕಾರಗಳು. ಇತ್ತ ಕುಶಲ. ನನ್ನ ವಿದ್ಯಾಭ್ಯಾಸವು ಚೆನ್ನಾಗಿ ನಡೆದಿದೆ. ಇಲ್ಲಿಗೆ ಬಂದು ಆಗಲೇ ಮೂರು ತಿಂಗಳು ಗತಿಸಿದವು. ಇದೇನಿದು! ಕನ್ನಡದಲ್ಲಿ ಪತ್ರ ಬರೆದಿರುವಳಲ್ಲ ಎಂದು ಹುಬ್ಬೇರಿಸಬೇಡ. ನಾನು ಕಸ್ತೂರಿಯಂತಿರುವ ಇಲ್ಲಿಯ ತಾಯಿ ನುಡಿಯಾದ ಕನ್ನಡವನ್ನು ಬರೆಯಲು ಮತ್ತು ಓದಲು ಕಲಿತಿರುವೆನೆಂದರೆ ನಿನಗೆ ಆಶ್ಚರ್ಯವಾಗಬಹುದಲ್ಲ? ನನಗೆ ಕನ್ನಡಮ್ಮನ ಅಶೀರ್ವಾದವೋ, ಇಲ್ಲವೆ ಸ್ವಯಂ ಸ್ಫೂರ್ತಿಯೋ ಬಂದ ಕೆಲವೇ ತಿಂಗಳುಗಳಲ್ಲಿ ಕನ್ನಡದ ಸೌರಭವನ್ನು ಆಸ್ವಾದಿಸಿದ್ದೇನೆ. ನಿಜವಾಗಿ ಕಣೆ, ನಾವು ಮುಂದಿನ ಜನ್ಮದಲ್ಲಾದರೂ ಕನ್ನಡ ನಾಡಿನಲ್ಲಿ ಒಟ್ಟಾಗಿ ಹುಟ್ಟಬೇಕೆನಿಸುತ್ತದೆ.

ಹಾಂ! ಇನ್ನೊಂದು ವಿಷಯ. ಮೊನ್ನೆ ನಮ್ಮ ಶಾಲೆಯಿಂದ ಬುತ್ತಿ ಕಟ್ಟಿಕೊಂಡು ವಿಶಾಲಕರ್ನಾಟಕವನ್ನು ನೋಡುವ ಸದವಕಾಶ ಒದಗಿತ್ತು. ಹತ್ತು ದಿನಗಳ ಈ ವಿಜಯಕರ್ನಾಟಕವನ್ನು ನೋಡುವ ಸೌಭಾಗ್ಯ ನನ್ನದಾಗಿತ್ತು. ಪ್ರಪಂಚದಲ್ಲಿಯೇ ಇಲ್ಲದಂತಹ ಜೋಗದ ಜಲಪಾತ ದೃಶ್ಯವನ್ನು ನೋಡಿ ಆಶ್ಚರ್ಯಚಕಿತಳಾದೆ. ಅಲ್ಲಿ ಬೀಳುವ ನೀರಿನ ಸೊಗಸು ಮನೋಹರ. ಆ ನೀರಿನ ತುಂತುರು-ತುಷಾರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಈ ಸಂಯುಕ್ತ ಕರ್ನಾಟಕದಲ್ಲಿ ಎಲ್ಲದಕ್ಕೂ ತನ್ನದೇ ಆದ ವೈಶಿಷ್ಟ್ಯವಿದೆ. ಇಲ್ಲಿ ಮುಂಜಾನೆ ಉದಯವಾಣಿಯೋ ಎಂಬಂತೆ ಕೂಗುತ್ತಿರುವ ಕೋಗಿಲೆಗಳು, ತಮ್ಮ ಇಂಚರ ಧ್ವನಿಯಿಂದ ಮಾಡುವ ಶಬ್ದ ತರಂಗಗಳು ಕುಹೂ! ಕುಹೂ! ಎಂದು ಕನ್ನಡನುಡಿಯನ್ನೇ ಕೂಗುತ್ತಿವೆಯೋ ಎಂದೆನಿಸುತ್ತದೆ. ಅಷ್ಟೇ ಏಕೆ ಇಲ್ಲಿಯ ಮಯೂರಗಳ ನೃತ್ಯ ದೃಶ್ಯವಂತೂ ಭಾರತೀಯ ನೃತ್ಯವೈವಿಧ್ಯತೆಗಳನ್ನೇ ತೋರುತ್ತವೆಯೋ ಎನ್ನುವಂತೆ ಭಾಸವಾಗುತ್ತದೆ. ಇಲ್ಲಿಯ ಮೈಸೂರು ಮಲ್ಲಿಗೆ ತನ್ನ ನಾಡಿನ ಕಂಪನ್ನೇ ದಶದಿಕ್ಕುಗಳಲ್ಲಿ ಹರಡಿದೆ. ಕನ್ನಡವೇ ರಾಜ್ಯಾಡಳಿತ ಭಾಷೆಯಾಗಬೇಕೆಂದು ಇಲ್ಲಿಯ ಪ್ರಜಾಮತ. ಇಲ್ಲಿಯ ಸಾಹಿತಿಗಳು ಕನ್ನಡ ಬರೀ ಪ್ರಜಾವಾಣಿಯಾದರಷ್ಟೇ ಸಾಲದು, ಅದು ಇಡೀ ವಿಶ್ವವಾಣಿಗಳಲ್ಲಿ ತನ್ನ ಮೇರು ಸ್ಥಾನವನ್ನು ಗಳಿಸಿಕೊಳ್ಳುವಂತೆ ಶ್ರಮಿಸಿದ್ದಾರೆ. ಒಟ್ಟಿನಲ್ಲಿ ನಾನು ಜೀವನ ಶಿಕ್ಷಣ ಕಲಿಯಲು ಈ ಕನ್ನಡ ನಾಡಿಗೆ ಬಂದದ್ದು ನನ್ನ ಪೂರ್ವಜನ್ಮದ ಋಣಾನುಬಂಧವೇ ಇರಬೇಕು. ಸೂಟಿಯಲ್ಲಿ ಊರಿಗೆ ಬಂದಾಗ ಹೆಚ್ಚಿಗೆ ತಿಳಿಸುತ್ತೇನೆ. ಹಾಗೇ ಅಣ್ಣ ಲಂಕೇಶನಿಗೆ, ತಂಗಿ ಮಂಗಳಾಳಿಗೆ ಮತ್ತು ಪುಟಾಣಿಗಳಿಗೂ ಅಲ್ಲದೇ ಬಾಲಮಿತ್ರನಾದ ಚಂದಮಾಮನಿಗೆ ಹಾಗೂ ನಿನ್ನ ಮನೆಗೆ ಇಂದು ಸಂಜೆವಾಣಿ ಬಂದರೆ ನಾನು ಕೇಳಿರುವುದಾಗಿ ತಿಳಿಸು. ಗೆಳತಿ ವರ್ಷಿಣಿಗೂ ನನ್ನ ನೆನಕೆಗಳನ್ನು ತಿಳಿಸು.

ಇತೀ ನಿನ್ನ ಗೆಳತಿ,
ಸುಧಾ.

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ವಾತಾವರಣ 2.ಪ್ರಮುಖಸುದ್ದಿ 3.ಅನುಸರಿಸು 4.ವಲಸೆತಡೆ 5.ಮಲಿನವಾಗು

ಶಬ್ದಾಟ: ದೂರದಯಾನ

ಪದಶೋಧ: ಸಿದ್ಧಲಿಂಗ ಪಟ್ಟಣಶೆಟ್ಟಿ

ವರ್ಡ್‌ಗೇಮ್: HO'ROB'OD

ಜಾಣಪದ ಆಟ: 1.ಆಯೋಗ 2.ನಿಯೋಗ 3.ಸಂಯೋಗ 4.ಪ್ರಯೋಗ 5.ಸುಯೋಗ

Take five make five:

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಬೃಂದಾ ಭಾರದ್ವಾಜ್
ಚಿಕ್ಕಮಗಳೂರು

ಸಂಸ್ಕೃತಿ ಎಂ.ಎಸ್.
ಮೈಸೂರು

ಮೊಹಮ್ಮದ್ ಅಯಾನ್
ಜಿ., ವಿಜಯನಗರ

ಹೇತ್ವಿಕ್ ಜಿ.
ತುಮಕೂರು

ಗಾಯನ ಎಲ್.ವೈ.
ಚಿತ್ರದುರ್ಗ

ಹರಿಪ್ರೀತ್ ಪಿ.
ಸಾಗರ

ಭಾರತ ತಂಡಕ್ಕೆ ಪ್ರತಿಷ್ಠೆಯ ಪ್ರಶ್ನೆ

ಏಕದಿನ ಕ್ರಿಕೆಟ್ ಸರಣಿ: ಇಂದೋರ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ನಿರ್ಣಾಯಕ ಪಂದ್ಯ ಇಂದು

ಇಂದೋರ್ (ಪಿಟಿಐ): ತವರಿನಲ್ಲಿ ಏಕದಿನ ಪಂದ್ಯಗಳಲ್ಲಿ ಭಾರತದ ಪಾರಮ್ಯಕ್ಕೆ ಈಗ ಸವಾಲು ಎದುರಾಗಿದೆ. ದೃಢಸಂಕಲ್ಪದಿಂದ ಆಡುತ್ತಿರುವ ನ್ಯೂಜಿಲೆಂಡ್ ವಿರುದ್ಧ ಮೂರನೇ ಹಾಗೂ ನಿರ್ಣಾಯಕ ಪಂದ್ಯ ಭಾನುವಾರ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಆತಿಥೇಯರಿಗೆ ಗೆಲುವು ಪ್ರತಿಷ್ಠೆಯ ಪ್ರಶ್ನೆಯಾಗಿದೆ.

ಭಾರತ ತಂಡವು 2019ರ ಮಾರ್ಚ್‌ನಿಂದ ತವರಿನಲ್ಲಿ ದ್ವಿಪಕ್ಷೀಯ ಸರಣಿ ಸೋತೇ ಇಲ್ಲ. ಏಳು ವರ್ಷಗಳ ಹಿಂದೆ ಪ್ರವಾಸಿ ಆಸ್ಟ್ರೇಲಿಯಾ ತಂಡ 0–2 ಹಿನ್ನಡೆಯಿಂದ ಚೇತರಿಸಿಕೊಂಡು ಭಾರತ ತಂಡ ವಿರುದ್ಧ 3–2 ಜಯಗಳಿಸಿತ್ತು.

ಭಾರತದಷ್ಟೇ ನ್ಯೂಜಿಲೆಂಡ್‌ಗೂ ಈ ಪಂದ್ಯ ಮಹತ್ವದ್ದು. ಏಕೆಂದರೆ ಕಿವೀಸ್ ಪಡೆ 1989ರಿಂದ ಭಾರತದಲ್ಲಿ ದ್ವಿಪಕ್ಷೀಯ ಏಕದಿನ ಸರಣಿ ಆಡುತ್ತಿದೆ. ಆದರೆ ಹಿಂದೆಂದೂ ಸರಣಿ ಗೆದ್ದಿಲ್ಲ. ಈಗ ಅದರ ಮುಂದೆ ಸುವರ್ಣಾವಕಾಶವಿದೆ.

ಇಲ್ಲಿ ಮತ್ತೊಂದು ಹಿನ್ನಡೆಯಾಗುವುದು ಕೋಚ್ ಗೌತಮ್ ಗಂಭೀರ್ ಪಾಲಿಗೆ ಬೇಕಿಲ್ಲದ ಸಂಗತಿ. ಅವರು ತರಬೇತುದಾರರಾದ ನಂತರ ಭಾರತ ತವರಿನಲ್ಲಿ ಐದು ಟೆಸ್ಟ್ ಪಂದ್ಯಗಳನ್ನು ಸೋತಿದ್ದು, ಕೆಲವು ಅನಪೇಕ್ಷಿತ ದಾಖಲೆಗಳಾಗಿವೆ. ಮೊದಲ ಬಾರಿ ಶ್ರೀಲಂಕಾದಲ್ಲಿ ಏಕದಿನ ಸರಣಿಯನ್ನೂ ಭಾರತ ಸೋತಿತ್ತು.

ರಾಜಕೋಟ್‌ನಲ್ಲಿ ಎರಡನೇ ಪಂದ್ಯದಲ್ಲಿ ಭಾರತದ ಸೋಲಿಗೆ ಡೇರಿಲ್ ಮಿಚೆಲ್ ಅವರ ಅಸಾಧಾರಣ ಶತಕದ ಆಟ ಕಾರಣವಾಯಿತು. ಮಧ್ಯಮ ಹಂತದ ಓವರುಗಳಲ್ಲಿ ಅವರು ತಂಡಕ್ಕೆ ಮೇಲುಗೈ ಒದಗಿಸಿದರು. ಸ್ಪಿನ್ ಬೌಲಿಂಗ್‌ನಲ್ಲಿ ಇತ್ತೀಚಿನ ವರ್ಷಗಳಲ್ಲಿ ಭಾರತ ಮೊನಚು ಕಳೆದುಕೊಂಡಿದ್ದು, ನ್ಯೂಜಿಲೆಂಡ್ ಇನಿಂಗ್ಸ್ ವೇಳೆ ಜಾಹೀರಾಗಿತ್ತು.

ಹೋಳ್ಕರ್ ಕ್ರೀಡಾಂಗಣದಲ್ಲಿ ಬೌಂಡರಿ ಗಡಿಗಳು ಹತ್ತಿರದಲ್ಲಿದ್ದು, ರನ್ ಹೊಳೆ ಹರಿಯುವ ನಿರೀಕ್ಷೆಯಿದೆ. ಇಲ್ಲಿನ ಪಿಚ್ ಸಹ ಬೌಲರ್‌ಸ್ನೇಹಿ-ಯಾಗಿಲ್ಲ. ಸ್ಪಿನ್ ದಾಳಿ ನಿಭಾಯಿಸುವಲ್ಲಿ ಶುಭಮನ್ ಗಿಲ್ ಬಳಗದ ಸಾಮರ್ಥ್ಯದ ಬಗ್ಗೆ ಅನುಮಾನಗಳು ಶುರುವಾಗಿವೆ. ಬ್ಯಾಟಿಂಗ್‌ನಲ್ಲಿ ಅನುಭವ ಮತ್ತು ಆಳ ಇದ್ದರೂ, ಸ್ಪಿನ್ ಎದುರಿಸುವಲ್ಲಿ ಮೊದಲಿನ ವಿಶ್ವಾಸ ಕಾಣುತ್ತಿಲ್ಲ.

ರೋ-ಕೊ ಮೇಲೆ ಗಮನ: ಅನುಭವಿ ಆರಂಭ ಆಟಗಾರ ರೋಹಿತ್ ಶರ್ಮಾ ಈ ಸರಣಿಯಲ್ಲಿ ದೊಡ್ಡ ಇನಿಂಗ್ಸ್ ಆಡಿಲ್ಲ. ಆಕ್ರಮಣದ ಆಟದಿಂದ ಭಾರತ ತಂಡಕ್ಕೆ ಬಿರುಸಿನ ಆರಂಭ ನೀಡುವ ಅವರು ಎರಡು ಪಂದ್ಯಗಳಲ್ಲಿ ಬೇಗ ನಿರ್ಗಮಿಸಿದ್ದಾರೆ. ಹೀಗಾಗಿ, ಅವರ ಮೇಲೆ ಒತ್ತಡವಿದೆ.

ಭಾರತದ ಬ್ಯಾಟಿಂಗ್ ಈಗಲೂ ವಿರಾಟ್ ಕೊಹ್ಲಿ ಆಟವನ್ನು ಅವಲಂಬಿ ಸಿದೆ. ಅವರು ಯಶಸ್ಸೂ ಗಳಿಸುತ್ತಿದ್ದಾರೆ. ಭಾರತದ ಮುಂದಿನ ಏಕದಿನ ಸರಣಿ ಜುಲೈನಲ್ಲಿ (ಇಂಗ್ಲೆಂಡ್ ಪ್ರವಾಸದ ವೇಳೆ) ಇರುವ ಕಾರಣ ಅವರಿಂದ ಅಭಿಮಾನಿ ಗಳು ಉತ್ತಮ ಇನಿಂಗ್ಸ್ ಬಯಸಿದ್ದಾರೆ.

ಐದನೇ ಕ್ರಮಾಂಕದಲ್ಲಿ ಕೆ.ಎಲ್.ರಾಹುಲ್ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ.

ಸಮತೋಲನದ ಸವಾಲು: ನಿತೀಶ್ ಕುಮಾರ್ ರೆಡ್ಡಿ ಮತ್ತು ಆಯುಷ್ ಬಡೋನಿ– ಇವರಿಬ್ಬರಲ್ಲಿ ಯಾರನ್ನು ಆಡಿಸಬೇಕೆಂಬ ತುಮುಲ ತಂಡಕ್ಕಿದೆ. ವೇಗದ ಬೌಲಿಂಗ್ ಜೊತೆಗೆ ಕೆಳಕ್ರಮಾಂಕದಲ್ಲಿ ನಿತೀಶ್ ವೇಗವಾಗಿ ಆಡಬಲ್ಲರು. ಆಯುಷ್ ಅವರು ತಾಂತ್ರಿಕವಾಗಿ ಉತ್ತಮ ಬ್ಯಾಟರ್. ಸ್ಪಿನ್ನರ್‌ಗಳನ್ನು ವಿಶ್ವಾಸದಿಂದ ಆಡುವುದರ ಜೊತೆಗೆ ಮಧ್ಯಮ ಹಂತದ ಓವರುಗಳಲ್ಲಿ ಇನಿಂಗ್ಸ್ ಕಟ್ಟಬಲ್ಲ ಆಟಗಾರ.

ಎಡಗೈ ವೇಗಿ ಅರ್ಷದೀಪ್ ಅವರನ್ನು ಆಡಿಸುವ ಸಾಧ್ಯತೆಯೂ ಇದೆ. ಸ್ವಿಂಗ್ ಜೊತೆಗೆ ಯಾರ್ಕರ್‌ಗಳನ್ನು ಎಸೆಯುವ ಅವರು ದಾಳಿಗೆ ವೈವಿಧ್ಯತೆ ನೀಡಬಲ್ಲರು. ಅವರ ಸೇರ್ಪಡೆ ಸ್ಪಿನ್ ಮೇಲಿನ ಅವಲಂಬನೆ ಕಡಿಮೆ ಮಾಡಬಹುದು.

ನ್ಯೂಜಿಲೆಂಡ್ ತಂಡವೂ ವಿಶ್ವಾಸ ದಲ್ಲಿದೆ. ಡೇರಿಲ್ ಮಿಚೆಲ್ ಆಡುತ್ತಿರುವ ರೀತಿ, ಅವರಿಗೆ ಡೆವಾನ್ ಕಾನ್ವೆ ನೀಡುತ್ತಿರುವ ಬೆಂಬಲವು ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಬೌಲರ್‌ಗಳ ವಿಭಾಗದಲ್ಲಿ ದೊಡ್ಡ ಹೆಸರು ಗಳಿಲ್ಲದಿದ್ದರೂ ವೈವಿಧ್ಯಕ್ಕೆ ಕೊರತೆಯಿಲ್ಲ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಾಟರ್ ಫಿಲ್ಟರ್ ತಂದ ಗಿಲ್!

ಇಂದೋರ್: ಕಲುಷಿತ ನೀರು ಸೇವಿಸಿ ಇಂದೋರ್‌ನಲ್ಲಿ 23 ಮಂದಿ ಮೃತಪಟ್ಟ ಬೆನ್ನಲ್ಲೇ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಮುನ್ನೆಚ್ಚರಿಕೆಯಾಗಿ ವಾಟರ್ ಫಿಲ್ಟರ್ ಅನ್ನು ಜೊತೆಗೆ ತಂದಿರುವುದು ಚರ್ಚೆಗೆ ಗ್ರಾಸವಾಗಿದೆ.

ಭಾರತ ತಂಡದ ಆಟಗಾರರಿಗೆ ಇಂದೋರ್‌ನ ಸ್ಟಾರ್ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಹೋಟೆಲ್‌ಗೆ ಗಿಲ್ ₹3 ಲಕ್ಷ ಮೌಲ್ಯದ ವಿಶೇಷ ವಾಟರ್ ಫಿಲ್ಟರ್ ಅನ್ನು ತಂದಿದ್ದಾರೆ. ಇದನ್ನು ಹೋಟೆಲ್ ಕೊಠಡಿಯಲ್ಲಿ ಅಳವಡಿಸಿ, ಆ ನೀರನ್ನೇ ಅವರು ಕುಡಿಯುತ್ತಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಆದರೆ, ತಂಡದ ಮಾಧ್ಯಮ ವ್ಯವಸ್ಥಾಪಕರು ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ.

ತಾಲೀಮು ನಡೆಸಿದ ವಿರಾಟ್ ಕೊಹ್ಲಿ (ಬಲ). ವೇಗಿ ಪ್ರಸಿದ್ಧ ಕೃಷ್ಣ ಮತ್ತು ರೋಹಿತ್ ಶರ್ಮಾ ಚಿತ್ರದಲ್ಲಿದ್ದಾರೆ — ಪಿಟಿಐ ಚಿತ್ರ

ವಿಜಯ್ ಹಜಾರೆ ಟ್ರೋಫಿ: ಫೈನಲ್ ಪಂದ್ಯ ಇಂದು

ಪ್ರಶಸ್ತಿಗೆ ಸೌರಾಷ್ಟ್ರ–ವಿದರ್ಭ ಸೆಣಸಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಮಿಫೈನಲ್ ಪಂದ್ಯಗಳನ್ನು ಅಮೋಘ ರೀತಿಯಲ್ಲಿ ಗೆದ್ದುಕೊಂಡಿರುವ ವಿದರ್ಭ ಮತ್ತು ಸೌರಾಷ್ಟ್ರ ತಂಡಗಳೆರಡೂ ಈಗ ಆತ್ಮ-ವಿಶ್ವಾಸದಿಂದ ಇವೆ. ಭಾನುವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯ ಫೈನಲ್‌ನಲ್ಲಿ ಈ ತಂಡಗಳ ನಡುವೆ ಸಮಬಲದ ಹೋರಾಟದ ನಿರೀಕ್ಷೆಯಿದೆ. ಬಿಸಿಸಿಐನ ಸೆಂಟರ್ ಆಫ್ ಎಕ್ಸಲೆನ್ಸ್ ಕ್ರೀಡಾಂಗ-ಣದಲ್ಲಿ ಕೌಶಲ ಮತ್ತು ಸಂಯಮದ ಪರೀಕ್ಷೆಯೂ ಆಗಲಿದೆ.

ಎರಡು ಬಾರಿಯ ರನ್ನರ್ ಅಪ್ ಹಾಗೂ 2025ರ ರಣಜಿ ಚಾಂಪಿಯನ್ ವಿದರ್ಭ ತಂಡವು ಮೊದಲ ಸೆಮಿಫೈನ-ಲ್‌ನಲ್ಲಿ ಹಾಲಿ ಚಾಂಪಿಯನ್ ಕರ್ನಾಟಕ ತಂಡವನ್ನು ಸೋಲಿಸಿತ್ತು. ಪ್ರತಿಭಾನ್ವಿತ ಯುವ ಆಟಗಾರ ಅಮನ್ ಮೊಖಡೆ ಅವರ ಸೊಗಸಾದ ಶತಕ (138, 122ಎ) ಇದಕ್ಕೆ ಪ್ರಮುಖ ಕಾರಣವಾಗಿತ್ತು. ಎರಡು ಬಾರಿ ಈ ಪ್ರಶಸ್ತಿ ಗೆದ್ದಿರುವ ಸೌರಾಷ್ಟ್ರ ಇನ್ನೊಂದು ಸೆಮಿಫೈನಲ್‌ನಲ್ಲಿ ವಿಶ್ವರಾಜ್ ಜಡೇಜ ಅವರ ಅಜೇಯ 165 ರನ್‌ಗಳ ನೆರವಿನಿಂದ ಪಂಜಾಬ್ ತಂಡವನ್ನು ಸೋಲಿಸಿತ್ತು.

ಸೆಮಿಫೈನಲ್‌ನಲ್ಲಿ ವೈಯಕ್ತಿಕ ಪ್ರದ-ರ್ಶನಗಳು ಎದ್ದುಕಂಡರೂ, ಸೌರಾಷ್ಟ್ರ ಮತ್ತು ವಿದರ್ಭ ತಂಡಗಳು ಉತ್ತಮ ಆಟಗಾರರನ್ನು ಹೊಂದಿದ್ದು ಸಾಂಘಿಕ ಪ್ರದರ್ಶನದ ಆಧಾರದಲ್ಲಿ ಇಲ್ಲಿಯವರೆಗೆ ತಲುಪಿವೆ. ಇದುವರೆಗಿನ ಪಂದ್ಯಗಳಲ್ಲಿ ಬೇರೆ ಬೇರೆ ಆಟಗಾರರು ಗೆಲುವಿಗೆ ಕಾರಣರಾಗಿದ್ದಾರೆ.

ಬ್ಯಾಟಿಂಗ್ ಆಗಲಿ, ಬೌಲಿಂಗ್ ಆಗಲಿ ಎರಡೂ ತಂಡಗಳು ಸಮಬಲ ಹೊಂದಿವೆ. ಯಾವ ತಂಡ ಟ್ರೋಫಿಯ ಮೇಲೆ ಕೈಇಡಬಹುದೆಂದು ಹೇಳುವುದು ಕ್ರಿಕೆಟ್ ಪಂಡಿತರಿಗೂ ಕಷ್ಟ.

ಶುಕ್ರವಾರವಷ್ಟೇ 25ನೇ ವರ್ಷಕ್ಕೆ ಕಾಲಿಟ್ಟ ಮೊಖಡೆ ಬ್ಯಾಟರ್‌ಗಳ ಪಟ್ಟಿಯಲ್ಲಿ 781 ರನ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಐದು ಶತಕಗಳು ಇದರಲ್ಲಿ ಒಳಗೊಂಡಿವೆ. ತಂಡಕ್ಕೆ ದೆಹಲಿಯ 'ಆಮದು' ಆಟಗಾರ ಧ್ರುವ್ ಶೋರೆ ಕೂಡ ಉಪಯುಕ್ತ ಆಟವಾಡಿದ್ದು 515 ರನ್ ಹೊಡೆದಿದ್ದಾರೆ. ಈ ವರ್ಷದ ಆರಂಭದಲ್ಲಿ ತಂಡ ಸೇರಿಕೊಂಡ ಕರ್ನಾಟಕದವರಾದ ಆರ್.ಸಮರ್ಥ್ ಕಾಣಿಕೆಯೂ (427 ರನ್) ಅಮೂಲ್ಯ.

ಹೊಸ ಚೆಂಡಿನ ದಾಳಿ ನಡೆಸುವ ಯಶ್ ಠಾಕೂರ್ ಮತ್ತು ನಚಿಕೇತ್ ಭೂತೆ ತಲಾ 15 ವಿಕೆಟ್‌ಗಳನ್ನು ಗಳಿಸಿದ್ದಾರೆ. ಪ್ರತಿ ಪಂದ್ಯದಲ್ಲಿ ಇಬ್ಬರಲ್ಲಿ ಒಬ್ಬರಾದರೂ ಯಶಸ್ಸು ಗಳಿಸುತ್ತಿದ್ದಾರೆ. ದರ್ಶನ್ ನಲ್ಕಂಡೆ (12 ವಿಕೆಟ್) ಹಿಂದೆಬಿದ್ದಿಲ್ಲ. ಸ್ಪಿನ್ನರ್‌ಗಳಾದ ಹರ್ಷ್ ದುಬೆ ಮತ್ತು ಯಶ್ ಕದಂ ಕ್ರಮವಾಗಿ 10 ಮತ್ತು 7 ವಿಕೆಟ್ ಗಳಿಸಿದ್ದಾರೆ.

ಸೌರಾಷ್ಟ್ರ ತಂಡದ ಯಶಸ್ಸಿಗೂ ಸಾಂಘಿಕ ಆಟ ಕಾರಣವಾಗಿದೆ. ಆರಂಭ ಆಟಗಾರರಾದ ಹರ್ವಿಕ್ ದೇಸಾಯಿ ಮತ್ತು ವಿಶ್ವರಾಜ್ ಕ್ರಮವಾಗಿ 561 ಮತ್ತು 536 ರನ್ ಗಳಿಸಿದ್ದಾರೆ. ತಲಾ ಮೂರು ಶತಕಗಳನ್ನೂ ಹೊಡೆದಿದ್ದಾರೆ.

ವಿದರ್ಭ ತಂಡದ ಅಮನ್ ಮೊಖಡೆ

ಸೌರಾಷ್ಟ್ರ ತಂಡದ ವಿಶ್ವರಾಜ್ ಜಡೇಜ

ಮಧ್ಯಮ ಕ್ರಮಾಂಕದಲ್ಲಿ ಸಮ್ಮರ್ ಗಜ್ಜರ್ (430), ಪ್ರೇರಕ್ ಮಂಕಡ್ (361) ಮತ್ತು ಚಿರಾಗ್ ಜಾನಿ (308) ಅವರು ಸಕಾಲದಲ್ಲಿ ತಂಡದ ನೆರವಿಗೆ ಧಾವಿಸಿದ್ದಾರೆ. ಬೌಲಿಂಗ್‌ನಲ್ಲಿ ಅಂಕುರ್ ಪನ್ವರ್ ಅವರು 21 ವಿಕೆಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ವೇಗದ ದಾಳಿಯಲ್ಲಿ ಅವರಿಗೆ ಹೆಗಲು ನೀಡಿರುವ ಚೇತನ್ ಸಕಾರಿಯಾ ಮತ್ತು ಚಿರಾಗ್ ಜಾನಿ ಅವರೂ 15 ಮತ್ತು 11 ವಿಕೆಟ್ ಕಬಳಿಸಿದ್ದಾರೆ. ಫೈನಲ್ ಪಂದ್ಯಕ್ಕೆ ಅನುಭವಿ ಜಯದೇವ ಉನದ್ಕತ್ ಮರಳಿರುವುದು ತಂಡಕ್ಕೆ ನೆರವಾಗಬಹುದು.

ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ನಡೆದ ಬಹಳಷ್ಟು ನಾಕೌಟ್ ಪಂದ್ಯಗಳಲ್ಲಿ ಹೆಚ್ಚಿನ ಮೊತ್ತಗಳು ದಾಖಲಾಗಿದ್ದು, ಇಲ್ಲೂ ರನ್ ಹಬ್ಬ ನಿರೀಕ್ಷಿಸಬಹುದು. ತಂಡಗಳು ಸಮಾನಬಲ ಹೊಂದಿದಂತೆ ಕಂಡರೂ ಸೌರಾಷ್ಟ್ರವು ವಿಜಯ್ ಹಜಾರೆ ಟ್ರೋಫಿಯಲ್ಲಿ ವಿದರ್ಭ ವಿರುದ್ಧ 3–0 ದಾಖಲೆ ಹೊಂದಿದೆ. ಆದರೆ, ಕರ್ನಾಟಕ ವಿರುದ್ಧ 0–4 ಸೋಲಿನ ಸರಣಿಗೆ ಸೆಮಿ-ಫೈನಲ್‌ನಲ್ಲಿ ತೆರೆಯೆಳೆದಿದ್ದ ವಿದರ್ಭ, ಫೈನಲ್‌ನಲ್ಲಿ ಸೌರಾಷ್ಟ್ರ ವಿರುದ್ಧವೂ ಇಂಥದ್ದೇ ಪ್ರದರ್ಶನದ ನಿರೀಕ್ಷೆಯಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಜಿಯೊ ಹಾಟ್‌ಸ್ಟಾರ್

ಯುವ ವಿಶ್ವಕಪ್: ಕುಸಿದ ಬಾಂಗ್ಲಾ ಭಾರತ ತಂಡಕ್ಕೆ ರೋಚಕ ಗೆಲುವು

ಬುಲಾವಯೊ (ಪಿಟಿಐ): ಆರಂಭ ಆಟಗಾರ ವೈಭವ್ ಸೂರ್ಯವಂಶಿ ಮತ್ತು ಅಭಿಜ್ಞಾನ್ ಕುಂಡು ಅವರ ಉಪಯುಕ್ತ ಅರ್ಧಶತಕಗಳ ಜೊತೆಗೆ ವಿಹಾನ್ ಮಲ್ಹೋತ್ರಾ (14ಕ್ಕೆ4) ಅವರ ದಾಳಿಯ ನೆರವಿನಿಂದ ಭಾರತ ತಂಡ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಶನಿವಾರ ಬಾಂಗ್ಲಾದೇಶ ತಂಡವನ್ನು ಡಿಎಲ್‌ಎಸ್ ಆಧಾರದಲ್ಲಿ 18 ರನ್‌ಗಳಿಂದ ಸೋಲಿಸಿತು.

ಇದು ಭಾರತ ತಂಡಕ್ಕೆ ಸತತ ಎರಡನೇ ಗೆಲುವು. ಭಾರತ ಮೊದಲು ಆಡಿ 48.4 ಓವರುಗಳಲ್ಲಿ 238 ರನ್ ಗಳಿಸಿತ್ತು. ಉತ್ತರವಾಗಿ ಬಾಂಗ್ಲಾದೇಶ 17.2 ಓವರುಗಳಲ್ಲಿ 2 ವಿಕೆಟ್‌ಗೆ 90 ರನ್ ಗಳಿಸಿದ್ದಾಗ ಮಳೆಯಿಂದಾಗಿ ಆಟಕ್ಕೆ ಅಡಚಣೆಯಾಯಿತು. ನಂತರ ಗುರಿಯನ್ನು ಪರಿಷ್ಕರಿಸಿ 29 ಓವರುಗಳಲ್ಲಿ 165 ರನ್‌ಗಳಿಗೆ ನಿಗದಿಪಡಿಸಲಾಯಿತು.

ಒಂದು ಹಂತದಲ್ಲಿ 3 ವಿಕೆಟ್‌ಗೆ 106 ರನ್ ಗಳಿಸಿ (21.2 ಓವರ್) ಉತ್ತಮ ಸ್ಥಿತಿಯಲ್ಲಿದ್ದ ಬಾಂಗ್ಲಾ ತಂಡಕ್ಕೆ ಸಾಂದರ್ಭಿಕ ಬೌಲರ್ ವಿಹಾನ್ ಮಲ್ಹೋತ್ರಾ (14ಕ್ಕೆ4) ಮತ್ತು ಖಿಲಾನ್ ಪಟೇಲ್ (35ಕ್ಕೆ2) ಅವರು ಪೆಟ್ಟು ನೀಡಿದರು. ತಂಡ 28.3 ಓವರುಗಳಲ್ಲಿ 146 ರನ್‌ಗಳಿಗೆ ಕುಸಿಯಿತು.

ಇದಕ್ಕೆ ಮೊದಲು ಹದಿಹರೆಯದ ಆಕ್ರಮಣಕಾರಿ ಆಟಗಾರ ವೈಭವ್ 67 ಎಸೆತಗಳಲ್ಲಿ ಆರು ಬೌಂಡರಿ, ಮೂರು ಸಿಕ್ಸರ್‌ಗಳಿದ್ದ 72 ರನ್ ಗಳಿಸಿದರೆ, ಅಭಿಜ್ಞಾನ್ 112 ಎಸೆತಗಳಲ್ಲಿ ನಾಲ್ಕು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಒಳಗೊಂಡ 80 ರನ್ ಹೊಡೆದರು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ ಅತ್ಯುಪಯುಕ್ತ 62 ರನ್ ಸೇರಿಸಿದರು. ತಂಡವು ನಾಯಕ ಆಯುಷ್ ಮ್ಹಾತ್ರೆ (6), ವೇದಾಂತ್ ತ್ರಿವೇದಿ (0) ಮತ್ತು ವಿಹಾನ್ ಮಲ್ಹೋತ್ರಾ ಅವರನ್ನು ಬೇಗನೇ ಕಳೆದುಕೊಂಡಿತ್ತು. 53 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ಸಂದರ್ಭದಲ್ಲಿ ಇವರಿಬ್ಬರು ಜೊತೆಯಾಗಿದ್ದರು. ಕನಿಷ್ಕ್ ಚೌಹಾನ್ 28 ರನ್ ಗಳಿಸಿದರು. ಬಾಂಗ್ಲಾ ಕಡೆ ಅಲ್ ಫಹಾದ್ ಐದು ವಿಕೆಟ್ ಗೊಂಚಲು ಪಡೆದರು.

ಭಾರತ ಇದೇ 24ರಂದು ನಡೆಯುವ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 48.4 ಓವರ್‌ಗಳಲ್ಲಿ 238 (ವೈಭವ್ ಸೂರ್ಯವಂಶಿ 72, ಅಭಿಜ್ಞಾನ್ ಕುಂಡು 80, ಕನಿಷ್ಕ್ ಚೌಹಾನ್ 28; ಅಲ್ ಫಹಾದ್ 38ಕ್ಕೆ5, ಇಕ್ಬಾಲ್ ಹುಸೇನ್ ಇಮಾನ್ 45ಕ್ಕೆ2, ಅಜೀಜುಲ್ ಹಕೀಂ 42ಕ್ಕೆ2). ಬಾಂಗ್ಲಾದೇಶ: 28.3 ಓವರ್‌ಗಳಲ್ಲಿ 146 (ಅಜೀಜುಲ್ ಹಕೀಂ 51, ರಿಫಾತ್ ಬೇಗ್ 37, ವಿಹಾನ್ ಮಲ್ಹೋತ್ರಾ 14ಕ್ಕೆ4, ಖಿಲಾನ್ ಪಟೇಲ್ 35ಕ್ಕೆ2). ಪಂದ್ಯಶ್ರೇಷ್ಠ: ವಿಹಾನ್ ಮಲ್ಹೋತ್ರಾ.

ವಿಕೆಟ್ ಪಡೆದ ವಿಹಾನ್ ಮಲ್ಹೋತ್ರಾ

ಹಸ್ತಲಾಘವ ನೀಡದ ನಾಯಕರು

ಭಾರತ ಮತ್ತು ಬಾಂಗ್ಲಾದೇಶ ನಡುವಣ ಹಳಸಿರುವ ಸಂಬಂಧ ಕ್ರಿಕೆಟ್ ಮೈದಾನದಲ್ಲೂ ಪ್ರತಿಧ್ವನಿಸಿತು. ಶನಿವಾರ ನಡೆದ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ 'ಎ' ಗುಂಪಿನ ಪಂದ್ಯದಲ್ಲಿ ಉಭಯ ತಂಡಗಳ ನಾಯಕರು ಹಸ್ತಲಾಘವಕ್ಕೆ ಮುಂದಾಗಲಿಲ್ಲ.

ಮಳೆಯಿಂದ ತಡವಾದ ಟಾಸ್‌ಗೆ ಭಾರತ ತಂಡದ ನಾಯಕ ಆಯುಷ್ ಮ್ಹಾತ್ರೆ ಮತ್ತು ಬಾಂಗ್ಲಾದೇಶ ತಂಡದ ಉಪ ನಾಯಕ ಝುವಾದ್ ಅಬ್ರಾರ್ ಹಾಜರಿದ್ದರು. ಆದರೆ ಟಾಸ್‌ಗೆ ಮೊದಲಾಗಲಿ, ನಂತರವಾಗಲಿ ಆತ್ಮೀಯತೆ ಕಾಣಲಿಲ್ಲ.

ಮುಸ್ತಫಿಝುರ್ ರೆಹಮಾನ್ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್, ಐಪಿಎಲ್ ತಂಡದಿಂದ ಕೈಬಿಟ್ಟ ಬಳಿಕ ಕ್ರಿಕೆಟ್ ಬಾಂಧವ್ಯವೂ ಹದಗೆಡುತ್ತಿದೆ. ಬಾಂಗ್ಲಾದೇಶ, ಭಾರತದಲ್ಲಿ ನಿಗದಿಯಾಗಿರುವ ತನ್ನ ಟಿ20 ವಿಶ್ವಕಪ್ ಪಂದ್ಯಗಳನ್ನು ಸ್ಥಳಾಂತರಿಸುವಂತೆ ಐಸಿಸಿಗೆ ಒತ್ತಾಯಿಸಿದೆ.

2025ರಲ್ಲಿ ಏಷ್ಯಾ ಕಪ್ ವೇಳೆ, ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವಣ ಪಂದ್ಯಗಳ ವೇಳೆಯೂ ಭಾರತದ ಆಟಗಾರರು ಹಸ್ತಲಾಘವಕ್ಕೆ ನಿರಾಕರಿಸಿದ್ದರು.

ಜಾರ್ಜಿಯಾ ಅರ್ಧಶತಕ • ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ನಿರಾಸೆ

ಮಂದಾನ ಮಿಂಚು: ಆರ್‌ಸಿಬಿ ಅಜೇಯ ಓಟ

ನವಿ ಮುಂಬೈ (ಪಿಟಿಐ): ನಾಯಕಿ ಸ್ಮೃತಿ ಮಂದಾನ (96;61ಎ, 4x13, 6x3) ಅವರು ಕೇವಲ ನಾಲ್ಕು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಆದರೆ, ಅವರ ಅಮೋಘ ಆಟದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಹಾಲಿ ಆವೃತ್ತಿಯಲ್ಲಿ ಸತತ ನಾಲ್ಕನೇ ಜಯ ಸಾಧಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಎಂಟು ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸುಲಭವಾಗಿ ಮಣಿಸಿತು. ಜೊತೆಗೆ ಅಜೇಯ ಓಟದೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರ ಮಾಡಿಕೊಂಡಿತು.

167 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿ ತಂಡವು ಮಂದಾನ ಮತ್ತು ಜಾರ್ಜಿಯಾ ವಾಲ್ (ಔಟಾಗದೇ 54;42ಎ, 4x5, 6x2) ಅವರ ಶತಕದ ಜೊತೆಯಾಟದ ಬಲದಿಂದ 10 ಎಸೆತಗಳು ಬಾಕಿ ಇರುವಂತೆ 2 ವಿಕೆಟ್‌ಗೆ 169 ರನ್ ಗಳಿಸಿ ಸಂಭ್ರಮಿಸಿತು.

ಆರ್‌ಸಿಬಿ ತಂಡದ ಆರಂಭ ಉತ್ತಮ ವಾಗಿರಲಿಲ್ಲ. ಆರಂಭ ಆಟಗಾರ್ತಿ ಗ್ರೇಸ್ ಹ್ಯಾರಿಸ್ (1) ನಿರಾಸೆ ಮೂಡಿಸಿದರು. ಆದರೆ, ಮಂದಾನ ಮತ್ತು ಜಾರ್ಜಿಯಾ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 142 (92ಎ) ಸೇರಿಸಿ ತಂಡವನ್ನು ಗೆಲುವಿನ ಸನಿಹ ತಂದರು. ಜಯಕ್ಕೆ 11 ರನ್ ಬೇಕಿದ್ದಾಗ ನಂದಿನಿ ಶರ್ಮಾ ಎಸೆತದಲ್ಲಿ ಮಂದಾನ ಡ್ರೈವ್ ಮಾಡಿದ ಚೆಂಡು ಲೂಸಿ ಹ್ಯಾಮಿಲ್ಟನ್ ಅವರ ಬೊಗಸೆಯೊಳಗೆ ಸೇರಿಕೊಂಡಿತು. ಇದರೊಂದಿಗೆ ಲೀಗ್ ಇತಿಹಾಸದಲ್ಲೇ ಮೊದಲ ಶತಕ ದಾಖಲಿಸುವ ಅವಕಾಶ ಕೈತಪ್ಪಿತು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಕ್ಯಾಪಿಟಲ್ಸ್ ತಂಡಕ್ಕೆ ಆಕ್ರಮಣಕಾರಿ ಆಟಗಾರ್ತಿ ಶಫಾಲಿ ವರ್ಮಾ (62; 41ಎ, 5x4, 6x4) ಆಸರೆಯಾದರು. ಅವರ ಅರ್ಧಶತಕದ ನೆರವಿನಿಂದ ಡೆಲ್ಲಿ ತಂಡವು 166 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು.

ಲಾರೆನ್ ಬೆಲ್ (26ಕ್ಕೆ3) ಮತ್ತು ಸಯಾಲಿ ಸಾತ್ಗರೆ (27ಕ್ಕೆ3) ಅವರ ದಾಳಿಗೆ ತತ್ತರಿಸಿದ ಡೆಲ್ಲಿ ತಂಡ ಕೇವಲ ಹತ್ತು ರನ್‌ಗಳಾಗುವಷ್ಟರಲ್ಲಿ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಬೆಲ್ ಅವರು ಹಾಕಿದ ಪಂದ್ಯದ ಮೊದಲ ಓವರಿನಲ್ಲೇ ಲಿಝೆಲ್ ಲೀ ಮತ್ತು ಲಾರಾ ವೋಲ್ವಾರ್ಟ್ ನಿರ್ಗಮಿ ಸಿದ್ದರು. ಸಯಾಲಿ ತಮ್ಮ ಮೊದಲ ಓವರಿನಲ್ಲೇ ನಾಯಕಿ ಜೆಮಿಮಾ ರಾಡ್ರಿಗಸ್ (4) ಮತ್ತು ಮರೈಝುನ್ ಕಾಪ್ (0) ಅವರ ವಿಕೆಟ್‌ಗಳನ್ನು ಪಡೆದರು. ಈ ನಾಲ್ವರೂ ಬೌಲ್ಡ್ ಆಗಿದ್ದರು.

ಆದರೆ ಶಫಾಲಿ ಪ್ರತ್ಯಾಕ್ರಮಣದ ಆಟವಾಡಿದರಲ್ಲದೇ, ಎರಡು ಜೊತೆಯಾಟಗಳ ಮೂಲಕ ತಂಡದ ಚೇತರಿಕೆಗೆ ಕಾರಣರಾದರು. ಕೊನೆಯಲ್ಲಿ ಲ್ಯೂಸಿ ಹ್ಯಾಮಿಲ್ಟನ್ (36, 19ಎಸೆತ) ಅವರ ಆಟದಿಂದ ತಂಡದ ಮೊತ್ತ 160ರ ಗಡಿ ದಾಟಿತು. ಕೊನೆಯ ಎಸೆತದಲ್ಲಿ ಡೆಲ್ಲಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರುಗಳಲ್ಲಿ 166 (ಶಫಾಲಿ ವರ್ಮಾ 62, ಸ್ನೇಹ ರಾಣಾ 22, ಲ್ಯೂಸಿ ಹ್ಯಾಮಿಲ್ಟನ್ 36; ಲಾರೆನ್ ಬೆಲ್ 26ಕ್ಕೆ2, ಸಯಾಲಿ ಸಾತ್ಗರೆ 27ಕ್ಕೆ3, ಪ್ರೇಮಾ ರಾವತ್ 16ಕ್ಕೆ2). ರಾಯಲ್ ಚಾಲೆಂಜರ್ಸ್ ಬೆಂಗಳೂರು: 18.2 ಓವರ್‌ಗಳಲ್ಲಿ 2 ವಿಕೆಟ್‌ಗೆ 169 (ಸ್ಮೃತಿ ಮಂದಾನ 96, ಜಾರ್ಜಿಯಾ ವಾಲ್ ಔಟಾಗದೇ 54; ಮರೈಝುನ್ ಕಾಪ್ 21ಕ್ಕೆ 1). ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ

ಮಹಿಳಾ ಪ್ರೀಮಿಯರ್ ಲೀಗ್ ಅಂಕಪಟ್ಟಿ

	ತಂಡಗಳು	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ರಾಯಲ್ ಚಾಲೆಂಜರ್ಸ್ ಬೆಂಗಳೂರು	4	4	0	8	1.600
2	ಮುಂಬೈ ಇಂಡಿಯನ್	5	2	3	4	0.151
3	ಗುಜರಾತ್ ಜೈಂಟ್ಸ್	4	2	2	4	-0.319
4	ಯುಪಿ ವಾರಿಯರ್ಸ್	5	2	3	4	-0.483
5	ಡೆಲ್ಲಿ ಕ್ಯಾಪಿಟಲ್ಸ್	4	1	3	2	-0.856

ಮಹಿಳಾ ಪ್ರೀಮಿಯರ್ ಲೀಗ್



ಸ್ಮೃತಿ ಮಂದಾನ — ಪಿಟಿಐ ಚಿತ್ರ

ವಾರಿಯರ್ಸ್‌ಗೆ ಮಣಿದ ಮುಂಬೈ

ನವಿ ಮುಂಬೈ (ಪಿಟಿಐ): ನಾಯಕಿ ಮೆಗ್ ಲ್ಯಾನಿಂಗ್ (70;45ಎ) ಮತ್ತು ಫೋಬಿ ಲಿಚ್‌ಫೀಲ್ಡ್ (61;37ಎ) ಅವರ ಮಿಂಚಿನ ಅರ್ಧಶತಕಗಳ ನೆರವಿನಿಂದ ಯು.ಪಿ. ವಾರಿಯರ್ಸ್ ತಂಡವು ಶನಿವಾರ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ 22 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು.

ವಾರಿಯರ್ಸ್ ತಂಡಕ್ಕೆ ಹಾಲಿ ಆವೃತ್ತಿಯಲ್ಲಿ ಮುಂಬೈ ವಿರುದ್ಧ ಸತತ ಎರಡನೇ ಗೆಲುವು ಇದಾಗಿದೆ. ಗುರುವಾರ ವಿಕೆಟ್‌ಗಳಿಂದ ಹರ್ಮನ್‌ಪ್ರೀತ್ ಕೌರ್ ಪಡೆಗೆ ಆಘಾತ ನೀಡಿತ್ತು.

ಬ್ಯಾಟಿಂಗ್‌ಗೆ ಕಳುಹಿಸಲ್ಪಟ್ಟ ವಾರಿಯರ್ಸ್ ತಂಡವು 8 ವಿಕೆಟ್‌ಗೆ 187 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ಮುಂಬೈ ತಂಡವು ಆರಂಭದಲ್ಲೇ ಆಘಾತ ಅನುಭವಿಸಿತು. 69 ರನ್ ಗಳಿಸುವಷ್ಟರಲ್ಲಿ ಅಗ್ರ ಐದು ಬ್ಯಾಟರ್‌ಗಳು ಔಟಾದರು. ನಂತರ ಅಮೆಲಿಯಾ ಕೆರ್ (ಔಟಾಗದೇ 49;28ಎ) ಮತ್ತು ಅಮನ್ಜೋತ್ ಕೌರ್ (41;24ಎ) ಹೋರಾಟ ತೋರಿದರೂ ಗೆಲುವಿಗೆ ಸಾಕಾಗಲಿಲ್ಲ. 6 ವಿಕೆಟ್‌ಗೆ 165 ರನ್ ಗಳಿಸಲಷ್ಟೇ ಶಕ್ತವಾಯಿತು.

ಇದಕ್ಕೂ ಮೊದಲು ವಾರಿಯರ್ಸ್ ಆರಂಭ ಆಟಗಾರ್ತಿ ಕಿರಣ್ ನವಗಿರೆ ಅವರ ವೈಫಲ್ಯ ಈ ಪಂದ್ಯದಲ್ಲೂ ಮುಂದುವರಿಯಿತು. ಅವರ ನಿರ್ಗಮನದ ಬಳಿಕ ಲ್ಯಾನಿಂಗ್ ಮತ್ತು ಲಿಚ್‌ಫೀಲ್ಡ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 119 (74ಎ) ರನ್ ಸೇರಿಸಿ ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ಯು.ಪಿ ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 187 (ಮೆಗ್ ಲ್ಯಾನಿಂಗ್ 70, ಫೋಬಿ ಲಿಚ್‌ಫೀಲ್ಡ್ 61, ಹರ್ಲೀನ್ ಡಿಯೋಲ್ 25; ಅಮೆಲಿಯಾ ಕೆರ್ 28ಕ್ಕೆ 3, ನಾಟ್ ಶಿವರ್ ಬ್ರಂಟ್ 22ಕ್ಕೆ 2). ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 165 (ಅಮೆಲಿಯಾ ಔಟಾಗದೇ 49, ಅಮನ್ಜೋತ್ ಕೌರ್ 41; ಶಿಖಾ ಪಾಂಡೆ 30ಕ್ಕೆ 2). ಪಂದ್ಯದ ಆಟಗಾರ್ತಿ: ಮೆಗ್ ಲ್ಯಾನಿಂಗ್.

ಮೆಗ್ ಲ್ಯಾನಿಂಗ್ — ಪಿಟಿಐ ಚಿತ್ರ

ಗುಂಪು ಪುನರ್‌ರಚನೆಗೆ ಬಾಂಗ್ಲಾ ಮನವಿ

ಢಾಕಾ (ಪಿಟಿಐ): ತಮ್ಮ ತಂಡ ಆಡುವ ಪಂದ್ಯಗಳನ್ನು ಭಾರತದಿಂದ ಶ್ರೀಲಂಕಾಕ್ಕೆ ಸ್ಥಳಾಂ-ತರಿಸುವಂತೆ ಪಟ್ಟು ಹಿಡಿದಿರುವ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು (ಬಿಸಿಬಿ), ಟಿ20 ವಿಶ್ವಕಪ್‌ನ ಗುಂಪುಗಳನ್ನು ಪುನರ್‌ರಚಿಸುವಂತೆ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ (ಐಸಿಸಿ) ಶನಿವಾರ ಮನವಿ ಮಾಡಿದೆ.

ಟಿ20 ವಿಶ್ವಕಪ್ ಸಂಬಂಧ ಉಂಟಾಗಿರುವ ಕಗ್ಗಂಟು ನಿವಾರಿಸಲು ಐಸಿಸಿ ತಂಡವು ಢಾಕಾಕ್ಕೆ ಭೇಟಿ ನೀಡಿದೆ. ಬಿಸಿಬಿಯೊಂದಿಗೆ ಐಸಿಸಿ ಅಧಿಕಾರಿಗಳು ಶನಿವಾರ ಸಭೆ ನಡೆಸಿದ್ದಾರೆ. ಸಿ ಗುಂಪಿನಲ್ಲಿರುವ ಬಾಂಗ್ಲಾ ತಂಡವನ್ನು ಹಾಗೂ ಬಿ ಗುಂಪಿನ ಐರ್ಲೆಂಡ್ ತಂಡವನ್ನು ಅದಲು ಬದಲು ಮಾಡುವಂತೆ ಬಿಸಿಬಿ ಕೋರಿದೆ. ಆದರೆ, ಈ ಮನವಿಯನ್ನು ಐಸಿಸಿ ಪುರಸ್ಕರಿಸುವುದು ಅನುಮಾನ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ಸಿ ಗುಂಪಿನಲ್ಲಿ ವೆಸ್ಟ್ ಇಂಡೀಸ್, ಬಾಂಗ್ಲಾದೇಶ, ಇಟಲಿ, ಇಂಗ್ಲೆಂಡ್ ಹಾಗೂ ನೇಪಾಳ ತಂಡಗಳು ಇವೆ. ಐರ್ಲೆಂಡ್, ಶ್ರೀಲಂಕಾ, ಆಸ್ಟ್ರೇಲಿಯಾ, ಒಮಾನ್ ಹಾಗೂ ಜಿಂಬಾಬ್ವೆ ಬಿ ಗುಂಪಿನಲ್ಲಿವೆ. ಐರ್ಲೆಂಡ್ ತಂಡವು ಗುಂಪು ಹಂತದ ಪಂದ್ಯಗಳನ್ನು ಕೊಲಂಬೊ ಹಾಗೂ ಪಲ್ಲೆಕೆಲೆಯಲ್ಲಿ ಆಡಲಿದೆ. ಬಾಂಗ್ಲಾ ತಂಡವು ಕೋಲ್ಕತ್ತ ಮತ್ತು ಮುಂಬೈನಲ್ಲಿ ಆಡಬೇಕಿದೆ.

ಭಾರತ ತಂಡಕ್ಕೆ ಮರಳಿದ ಶ್ರೇಯಾಂಕಾ

ನವದೆಹಲಿ (ಪಿಟಿಐ): ಆಫ್ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಮತ್ತು ಬ್ಯಾಟರ್ ಭಾರತಿ ಫುಲ್ಮಾಲಿ ಅವರು ಭಾರತ ಟಿ20 ಮಹಿಳಾ ತಂಡಕ್ಕೆ ಮರಳಿದ್ದಾರೆ.

ವಿಕೆಟ್ ಕೀಪರ್ ಜಿ. ಕಮಲಿನಿ ಮತ್ತು ಎಡಗೈ ಸ್ಪಿನ್ನರ್ ವೈಷ್ಣವಿ ಶರ್ಮಾ ಅವರು ಮುಂದಿನ ತಿಂಗಳು ಆಸ್ಟ್ರೇಲಿಯಾ ವಿರುದ್ಧ ನಡೆಯುವ ಏಕದಿನ ಮತ್ತು ಟಿ20 ಸರಣಿಗೆ ಭಾರತ ತಂಡದಲ್ಲಿ ಚೊಚ್ಚಲ ಅವಕಾಶ ಪಡೆದಿದ್ದಾರೆ.

15 ಆಟಗಾರ್ತಿಯರ ಏಕದಿನ ತಂಡಕ್ಕೆ ಕಶ್ವಿ ಗೌತಮ್ ಅವರನ್ನು ಸೇರಿಸಲಾಗಿದ್ದು, ವೇಗಿ ಅರುಂಧತಿ ರೆಡ್ಡಿ ಮತ್ತು ಎಡಗೈ ಸ್ಪಿನ್ನರ್ ರಾಧಾ ಯಾದವ್ ಅವರಿಗೆ ಕೊಕ್ ನೀಡಲಾಗಿದೆ.

ಎರಡೂ ತಂಡಗಳನ್ನು ಹರ್ಮನ್ ಪ್ರೀತ್ ಕೌರ್ ಮುನ್ನಡೆಸಲಿದ್ದು, ಸ್ಮೃತಿ ಮಂದಾನ ಉಪನಾಯಕಿಯಾಗಿದ್ದಾರೆ. ಫೆ.15ರಿಂದ ಮಾರ್ಚ್ 1ರವರೆಗೆ ಭಾರತ ಮೂರು ಟಿ20 ಮತ್ತು ಅಷ್ಟೇ ಏಕದಿನ ಪಂದ್ಯಗಳನ್ನು ಆಸ್ಟ್ರೇಲಿಯಾ ಪ್ರವಾಸದಲ್ಲಿ ಆಡಲಿದೆ. ಏಕೈಕ ಟೆಸ್ಟ್ ಮಾರ್ಚ್ 6ರಿಂದ 9ರವರೆಗೆ ನಡೆಯಲಿದೆ.

ಆರ್ಚರಿ: ನವ್ಯಾಗೆ ಚಿನ್ನ ಡಬಲ್

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರು ನಗರದ ಬಿಲ್ಗಾರ್ತಿ ನವ್ಯಾ ವಿನ್ಸೆಂಟ್ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಎರಡು ಚಿನ್ನದ ಪದಕಗಳಿಗೆ ಕೊರಳೊಡ್ಡಿದ್ದಾರೆ.

ಎರಡನೇ ದಿನವಾದ ಶನಿವಾರ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಕ್ರೀಡಾಪಟುಗಳು ಮೇಲುಗೈ ಸಾಧಿಸಿದ್ದಾರೆ.

ಆರ್ಚರಿ ಸ್ಪರ್ಧೆಯ ಮಹಿಳೆಯರ 30 ಮೀಟರ್ ಮತ್ತು 50 ಮೀಟರ್ ವಿಭಾಗದಲ್ಲಿ ನವ್ಯಾ ಡಬಲ್ ಚಿನ್ನದ ಸಾಧನೆ ಮೆರೆದರೆ, ಯಾದಗಿರಿಯ ದೇವಮ್ಮ ಒಂದು ಬೆಳ್ಳಿ ಮತ್ತು ಕಂಚು ಜಯಿಸಿದರು. ಫೆನ್ಸಿಂಗ್ ಫಾಯಿಲ್ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಯೇದಾ ಬಂಗಾರದ ಪದಕ ತಮ್ಮದಾಗಿಸಿಕೊಂಡರು.

ಫಲಿತಾಂಶಗಳು: ಆರ್ಚರಿ: ಮಹಿಳೆಯರ 50 ಮೀ ವಿಭಾಗ: ನವ್ಯಾ ವಿನ್ಸೆಂಟ್–1, ದೇವಮ್ಮ–2, ಅಶ್ವಿಕಾ–3. 30 ಮೀ: ನವ್ಯಾ ವಿನ್ಸೆಂಟ್–1, ಅನ್ನಪೂರ್ಣ–2, ದೇವಮ್ಮ–3. ಪುರುಷರ 30 ಮೀ: ಅಮಿತ್ ಜಯಂತ್ ಗೌಡ–1, ಮೌನಿಶ್ ಕುಮಾರ್–2, ವೀರಭದ್ರ–3. 50 ಮೀ: ದೇವರಾಜ್–1, ಅಮಿತ್ ಜಯಂತ್ ಗೌಡ–2, ಎಸ್.ವಿನಯ್‌ಕುಮಾರ್–3.

ಬ್ಯಾಡ್ಮಿಂಟನ್: ಪುರುಷರ ವಿಭಾಗ– ನಿಶ್ಚಲ್ ಎಸ್.ಗೌಡ (ಬೆಂಗಳೂರು ನಗರ)–1, ಶ್ರೇಯಸ್ ಚಂದ್ರಶೇಖರ್ (ಬೆಂಗಳೂರು ನಗರ)–2, ರೆಹಾನ್ ಆರಾಜ್ (ಬೆಂಗಳೂರು ನಗರ)–3. ಮಹಿಳೆಯರ ವಿಭಾಗ– ಅಖಿಲಾ ಆನಂದ್ (ಬೆಂಗಳೂರು ನಗರ)–1, ಹಂಸಾ ಮುರಳೀಧರ್ (ಬೆಂಗಳೂರು ನಗರ)–2, ಅಕ್ಷತಾಂಜಲಿ ವಿಜಯ್‌ರಾವ್ (ಬೆಂಗಳೂರು ನಗರ)–3

ನವ್ಯಾ ವಿನ್ಸೆಂಟ್

ಆಸ್ಟ್ರೇಲಿಯಾ ಓಪನ್ ಟೆನಿಸ್ ಇಂದಿನಿಂದ • ಕಣದಲ್ಲಿ ಸಬಲೆಂಕಾ, ಅಲ್ಕರಾಜ್

ಸಿನ್ನರ್ ಚಿತ್ತ ಹ್ಯಾಟ್ರಿಕ್ ಪ್ರಶಸ್ತಿಯತ್ತ

ಮೆಲ್ಬರ್ನ್ (ಎಪಿ/ಎಎಫ್‌ಪಿ): ಇಟಲಿಯ ಟೆನಿಸ್ ತಾರೆ ಯಾನಿಕ್ ಸಿನ್ನರ್ ಅವರು ಭಾನುವಾರ ಆರಂಭವಾಗುವ ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿ ಆಸ್ಟ್ರೇಲಿಯಾ ಓಪನ್‌ನಲ್ಲಿ ಹ್ಯಾಟ್ರಿಕ್ ಪ್ರಶಸ್ತಿಯ ವಿಶ್ವಾಸದಲ್ಲಿದ್ದಾರೆ. ವಿಶ್ವದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಇಲ್ಲಿ ಮೊದಲ ಕಿರೀಟದ ನಿರೀಕ್ಷೆಯಲ್ಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಅರಿನಾ ಸಬಲೆಂಕಾ ಅವರು ಫ್ರಾನ್ಸ್‌ನ ಚಾನ್ಸುವಾ ಕುತುಮಾಂಗ ಆಜೋನಾ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. 27 ವರ್ಷ ವಯಸ್ಸಿನ ಬೆಲಾರೂಸ್‌ನ ಆಟಗಾರ್ತಿ ಇತ್ತೀಚಿನ ಪ್ರಮುಖ ಆರು ಟೂರ್ನಿಗಳಲ್ಲಿ ಫೈನಲ್ ತಲುಪಿದ್ದು, ನಾಲ್ಕು ಟ್ರೋಫಿಗಳಿಗೆ ಮುತ್ತಿಕ್ಕಿದ್ದಾರೆ.

ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರು 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಉತ್ಸಾಹದಲ್ಲಿದ್ದಾರೆ. 'ನಾನು ಯಾರನ್ನು ಬೇಕಾದರೂ ಸೋಲಿಸಬಲ್ಲೆ' ಎಂದು ಪರೋಕ್ಷವಾಗಿ ಸಿನ್ನರ್ ಮತ್ತು ಅಲ್ಕರಾಜ್ ಅವರನ್ನು ಮಣಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಫ್ರೆಂಚ್ ಓಪನ್ ಮತ್ತು ಯುಎಸ್ ಓಪನ್ ಸಿಂಗಲ್ಸ್ ಪ್ರಶಸ್ತಿ ಉಳಿಸಿಕೊಳ್ಳುವುದಕ್ಕಿಂತಲೂ ಆಸ್ಟ್ರೇಲಿಯಾ ಓಪನ್ ಕಿರೀಟ ಗೆಲ್ಲುವುದು ತಮ್ಮ ಮುಂದಿನ ಗುರಿ ಎಂದು ಸ್ಪೇನ್‌ನ 22 ವರ್ಷ ವಯಸ್ಸಿನ ಅಲ್ಕರಾಜ್ ಕಳೆದ ನವೆಂಬರ್‌ನಲ್ಲಿ ಹೇಳಿದ್ದರು. ಅದರಂತೆ, ಅತಿ ಕಿರಿಯ ವಯಸ್ಸಿನಲ್ಲಿ ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಮ್ ಗೆದ್ದ ದಾಖಲೆಯನ್ನು ನಿರ್ಮಿಸುವ ತವಕದಲ್ಲಿದ್ದಾರೆ. ಅಮೆರಿಕದ ಡಾನ್ ಬಜ್ ಅವರು 1938ರಲ್ಲಿ ಈ ಸಾಧನೆ ಮಾಡಿದ್ದರು. ಆಗ ಅವರಿಗೆ 23 ವರ್ಷ ವಯಸ್ಸಾಗಿತ್ತು.

ಅಲ್ಕರಾಜ್ ಮೊದಲ ಸುತ್ತಿನಲ್ಲಿ ಆತಿಥೇಯ ರಾಷ್ಟ್ರದ ಆ್ಯಡಂ ವಾಲ್ಟನ್ ಅವರನ್ನು ಎದುರಿಸಲಿದ್ದಾರೆ. ಮೂರನೇ ಶ್ರೇಯಾಂಕದ ಆಟಗಾರ, ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರು ಕೆನಡಾದ ಗ್ಯಾಬ್ರಿಯಲ್ ಡಿಯಾಲ್ಲೊ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಅಮೆರಿಕದ ದಿಗ್ಗಜ ಆಟಗಾರ್ತಿ, 45 ವರ್ಷ ವಯಸ್ಸಿನ ವೀನಸ್ ವಿಲಿಯಮ್ಸ್ ಅವರು ಐದು ವರ್ಷಗಳ ನಂತರ ಟೂರ್ನಿಗೆ ಮರಳುತ್ತಿದ್ದಾರೆ. ಅದರೊಂದಿಗೆ ಟೂರ್ನಿಯ ಮುಖ್ಯ ಸುತ್ತಿನಲ್ಲಿ ಆಡಲಿರುವ 'ಅತಿ ಹಿರಿಯ ವಯಸ್ಸಿನ ಆಟಗಾರ್ತಿ' ಎಂಬ ವಿಶಿಷ್ಟ ದಾಖಲೆಗೂ ಅವರು ಪಾತ್ರರಾಗಿದ್ದಾರೆ.

ಭಾರತದ ನಿಕಿ ಪೂಣಚ್ಚ– ಥಾಯ್ಲೆಂಡ್‌ನ ಪ್ರುಚ್ಯಾ ಇಸಾರೊ ಜೋಡಿ ಪುರುಷರ ಡಬಲ್ಸ್ ಮುಖ್ಯ ಸುತ್ತಿನಲ್ಲಿ ಆಡಲು ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದೆ.



ಇಟಲಿಯ ಯಾನಿಕ್ ಸಿನ್ನರ್ ಅವರು ಮೆಲ್ಬರ್ನ್‌ನಲ್ಲಿ ಶನಿವಾರ ಅಭ್ಯಾಸ ನಡೆಸಿದರು (ಎಡ). ಬೆಲಾರೂಸ್‌ನ ಅರಿನಾ ಸಬಲೆಂಕಾ — ಎಎಫ್‌ಪಿ ಚಿತ್ರಗಳು

ZEE LABORATORIES
5 ಕೋಟಿಗಿಂತ ಅಧಿಕ ಸಂತೃಪ್ತ ಬಳಕೆದಾರರು
MYFAIR
ಬಣ್ಣವನ್ನು ಹೆಚ್ಚಿಸುತ್ತದೆ ಮತ್ತು ತ್ವಚೆಯನ್ನು ಕಾಂತಿಯುತಗೊಳಿಸುತ್ತದೆ

ಕಲೆ ಮತ್ತು ನರೆಗಳ ನಿರೋಧಕ
ಚರ್ಮದ ಮೇಲಿನ ಕಂದು ಕಲೆಗಳನ್ನು ಮಸುಕಾಗಿಸುತ್ತದೆ
ಕಲೆರಹಿತ ತ್ವಚೆ
ಕ್ರೀಮ್ • ಸಾಬೂನು • ಫೇಸ್ ವಾಷ್
www.wellncare.com
9896277535 & 9896134500
ಸೌಂದರ್ಯವರ್ಧಕಗಳ ಸಮಗ್ರ ಶ್ರೇಣಿ • ಎಲ್ಲಾ ಪ್ರಮುಖ ಕೆಮಿಸ್ಟ್ ಸ್ಟೋರ್‌ಗಳಲ್ಲಿ ಲಭ್ಯ
ಸ್ಕ್ಯಾನ್ ಮಾಡಿ ಶಾಪ್ ಮಾಡಿ

ಪ್ರತಿ ಕುಟುಂಬದ ಹೆಲ್ತ್ ಸ್ಪೆಷಲಿಸ್ಟ್
ಗ್ಯಾಸ್ ಮತ್ತು ಉರಿಯೂತದ ಅನುಭವ
ಅಜೀರ್ಣತೆ
ಹಸಿವಿನ ಕೊರತೆ
ಮಲಬದ್ಧತೆ
ಬಾಯಿ ಹುಣ್ಣು
ಶ್ವಾಸದಲ್ಲಿ ದುರ್ಗಂಧ
ಮೊಡವೆ/ಗುಳ್ಳೆ
ಕೂದಲು ಉದುರುವಿಕೆ
ನರೆ ಮತ್ತು ಕಪ್ಪು ಕಲೆ

ವೈರಲ್ ಸೋಂಕು
ಉಸಿರಾಟದ ಸಮಸ್ಯೆಗಳು
ಕೆಮ್ಮು
ಅಲರ್ಜಿ
ತ್ವಚೆಯ ಕಾಯಿಲೆಗಳು
ಏಕಾಗ್ರತೆ ಕೊರತೆ
ತಲೆಸುತ್ತು
ಅಶಕ್ತತೆ
ಜುಮ್ಮೆನಿಸುವುದು
ಕೀಲು ನೋವು ಶಮನಕ್ಕೆ ಪರಿಣಾಮಕಾರಿ
ಜಾಲಿ ತುಳಸಿ 51 ಸತ್ವವನ್ನು 5 ಮಾದರಿಯ ತುಳಸಿ ಬಳಸಿಕೊಂಡು ವಿಶೇಷ ವಿಧಾನದಲ್ಲಿ ತಯಾರಿಸಲಾಗಿದೆ. ಎಲ್ಲಾ ಅಸ್ವಸ್ಥತೆಗಳನ್ನು ಶಮನಗೊಳಿಸಲು, ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ನಿಯಮಿತವಾಗಿ 5–5 ಹನಿ ಜಾಲಿ ತುಳಸಿ 51 ಸೇವಿಸಿರಿ. ಇದು ದೇಹದಲ್ಲಿ ಕಶ್ಮಲಗಳನ್ನು ನಿವಾರಿಸಲು ನೆರವಾಗುತ್ತದೆ ಮತ್ತು ಸಮಗ್ರ ಕುಟುಂಬವನ್ನು ವಿವಿಧ ಕಾಯಿಲೆಗಳಿಂದ ರಕ್ಷಿಸಲು ಪೂರಕವಾಗಿದೆ.
JOLLY
CLINICALLY TESTED
TULSI 51 ಡ್ರಾಪ್ಸ್
ಬೆಳಗ್ಗೆ ಸಾಯಂಕಾಲ 5ಹನಿಗಳು, ಆರೋಗ್ಯ ಮತ್ತು ರೋಗರಹಿತ ಜೀವನಕ್ಕೆ ಸಹಕಾರಿ
ಜಾಲಿ ತುಳಸಿ ಐ ಡ್ರಾಪ್ಸ್ ನ ಭಾರಿ ಜನಪ್ರಿಯತೆ ಬಳಸಿಕೊಂಡು ಸಾಕಷ್ಟು ತುಳಸಿ ಡ್ರಾಪ್‌ಗಳು ಇದೇ ರೀತಿಯ ಹೆಸರಿನೊಂದಿಗೆ ಮಾರುಕಟ್ಟೆಗೆ ಬಂದಿವೆ.
ಮೆಡಿಕಲ್ಸ್‌ನಲ್ಲಿ ಇದನ್ನು ಖರೀದಿಸುವಾಗ
ಕೇವಲ ತುಳಸಿ ಡ್ರಾಪ್ಸ್ ಎನ್ನುವ ಬದಲು ಜಾಲಿ ತುಳಸಿ ಡ್ರಾಪ್ಸ್ ಎಂದು ಕೇಳಿ ಪಡೆಯಿರಿ.
Super Stockist.»Shri Rama Stores,Yellapur. M:98143-30500
visit www.jollypharma.in ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ Helpline: 97813-30500

ಪ್ರಜಾವಾಣಿ ಭಾನುವಾರ • ಜನವರಿ 18, 2026

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

"BANASHANKARI 6TH STAGE 4th Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex. Call: 9845146725/ 9741466369"

BANASHANKARI 6TH Stage 10th Block 40X60 West Facing Price. 2.34 CR. Genuine Buyers: 9148914809/ 9993959099

FOREST VIEW BANASHANKARI 6th, 2nd Block 30x40 East Facing with Borewell. Brokers Excuse. 98458-59217/ 9845609477.

BANASHANKARI 6TH Stage, 9th Block, 50x80, East opposite to School Rs. 8500/-Sqft Negotiable. Owner:- 9886052148.

Bannerghatta Road

AKSHAYANAGARA 3562 SQFT A KATHA 11000/- PANDURANGA NAGARA 40x60 NF 21000/- VIJAYABANK COLONY 40x60 15000/- Negotiable: 9449655947

Basaweshwaranagar

BASAVESHWARANAGAR 30X45 North facing site/plots Sadhashivnagar 74x45 west old house, clear titles. 9060406731.

Hosur Road

14,200 SQ ft plot for sale Basapura village south Bangalore call Ganesh 9448477152 for info

Hebbal

40X60
West Face SITE Sale
BBMP B KATHA
Nr Manyata Techpark
Near MANYATA TECHPARK Back Gate No.5(200m) P&T Layout, Rachenahalli. Ct: 9483114740/ 9962377428

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

Intl Airport Road

SALE JADE garden behind ITC airport road. 2 adjacent sites. 4700Sft each. Available each or both the sites. Clear titles. Rs.7000 per Sft. Cheque payment. Arun 9845077299.

Jakkur

JAKKUR MCECHS 1ST PHASE 40x60 west A Katha 15,500/-, ARKAVATI 20x30, 30x40, MANYATHA 30x40 9535658860

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A Katha, Full White, Direct Owner: 9845249799/ 9845088449"

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Mysore Road

"CONTACT FOR Selling/ Buying BMRDA Approved Sites Near Hejjala, Wonderla Gate, Eagelton Golf Resort. 9845178335"

Out-Station

PENUKONDA NEAR KIA Car-Factory, Madakasira Highway 50X100 (4-Nos) Sites for Sale, Residencial Converted, Gated Community, 499/-PSft. Contact: 8310681025

Peenya

"SITE FOR SALE 2260 Sqft East Facing in Peenya 2nd Stage, DC.Conversion, BBMP 'A`KHATHA Rs.7000/- Per Sqft. Contact: 9353057779"

Vijayanagar

SITE FOR SALE
60x90
RPC LAYOUT
VIJAYANAGAR
SALE: 60X90 West Facing
Only Genuine Buyers Contact:
6363250343
9845038343

Vishweshwariah Layout

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

DIRECT OWNER 30x40 BDA Site Sale VISHWESHWARAIAH LAYOUT 40ft Road, Full Developed Area, ₹11000/-. 9742681666

SITE SALE 40x60, West, BDA 40 Feet Road, Rs 14000/- Negotiable, Vishweshwaraiah Layout Contact 9611577666

20X30 BDA SITE For Sale East Facing Allottee Site Vishveshwaraiah Layout 6th Block. Contact: 9901057383

'DIRECT OWNER' 20x30 N/F Vishveswaraiah Layout 2nd Block, Near Kommagatta, Fully Developed Area: 8496030007/ 8310885235

BDA SITE SALE 40x60 EAST FACING 5TH BLOCK SMV LAYOUT RATE 3.20CR NEGOTIABLE CONTACT: 9108133156

Mangaluru

AFFORDABLE PREMIUM Residential Plots now Available in Surathkal, Mangaluru. Fast-developing neighbourhood with excellent connectivity. Flexible Pricing. Limited Availability. Call: 9035297760

AFFORDABLE RESIDENTIAL Plots for Sale in Surathkal, Mangaluru. Well-Connected prime location. Fast-developing area. Attractive pricing. Few plots left. Call: 9845607725 now

House

Bannerghatta Road

BANNERGHATTA ROAD, Vijay Bank Layout 30x42, Ground floor 2 BHK, 1st floor Duplex 3 BHK House, 3,00,00,000/- 9980761200

BANNERGHATTA ROAD, Kodichikkana Halli Near Vijay Bank Layout, 20x34 East, 30' Road, Unfinished Building, 1,20,00,000/- 9980761200.

Girinagar

SALE 20X30 S/F Duplex House 3-BHK Giri Nagar Avalahalli New BDA Layout 1.40Crore 9880270482

Jayanagar

SALE 30X40 Jayanagar 9th Block With old House Close to Metro Station Excellent Location Ct: 9844134068

J P Nagar

SALE 40X60 J.P.Nagar 2nd Phase With old House Ground Floor 3BHK and 1st Floor 3BHK Ct: 9844134068

BBMP-A/E-KHATA, 20'X30',G+2 Semi Commercial Building for Sale in JP Nagar 5th Phase, Rs.1.15Cr, Direct:9008716584

PROPERTY CORNER ಕ್ಲಾಸಿಫೈಡ್ಸ್

COMMERCIAL BUILDING AVAILABLE FOR RENT

at 80 Feet Road, Padmanabhanagar, Banashankari 3rd Stage, Bangalore-85

East and South Corner Building Basement, Ground, First, Second and Third Floor, RCC Total Builtup area 14,000 Sqft. (Each Floor 2750 Sqft.) and 4th Floor 2000 Sqft. ACP Roof Space for Workers and other use.

FACILITIES: Borewell Water, BWSSB Water, Sanitary, Lift, Generator and Parking Area in Basement.

SUITABLE For: Institutions, School, Software Office, Two Wheeler Showroom, Car Showroom and any other Commercial Purpose.

Call: 9341227474, 9731219967

FOR SALE

Residential house located in Nagarabhavi 9th Block, situated in a prime and well-connected area. The property features a spacious owner-occupied basement duplex built on a 60×40 BDA site, comprising 4 bedrooms, a kitchen, hall, and TV room.

Interested Buyers May Contact:
9663211969

WANTED COMMERCIAL BUILDING FOR RENT

1. MINIMUM BUILT UP AREA IS 15K SQFT
2. STANDALONE BUILDING
3. BESCOM & BWSSB IS MUST
4. ONLY ON MAIN ROAD OF BBMP LIMITS ONLY
5. LIFT IS MUST

CONTACT:
+91 7483233755

BASAVANAGUDI

Prime Property for Sale
No. 13/18, 4th Main,
N.R. Colony, Basavanagudi,
Site Size 44'x60'
Clean Title 'A' & 'E' Khata
G.N. PROPERTIES
98450 44179

3 BHK LUXURY FLATS FOR SALE
DREAMVILLE HOME

PROJECT BY
pm PROMAX PROPERTIES

GYM · Waking Track · Club House
Library · Kids Play area · Party Hall

SBI · ICICI Bank · AXIS BANK · HDFC BANK

BBMP APPROVED

RERA APPROVED
PRM/KA/ RERA/1251/446/PR/220622/005013

93530 84848 / 9901834205
promaxdreamvillehome.com
Kothanur, Hennur Main Road Bangalore. 77

Flat

Vidyaranyapura

INDEPENDENT 60'X40' BEL 2 Block Prime Location (4 BHK Duplex Semi Furnished) 16000/- S/F:: 9844264852

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Uttarahalli

4BHK NEW FLATS SALE Ready to`Move, A Khatha, E-swathu, Carparking, Lift, Vaasthu, Maruthi Layout. Rs.1.10.Cr. 9945224058, 6363181276.

SALE LUXURY 3BHK one Floor one apartment 2 carpark 2240sft Uttarahalli BHCS Layout. 9448063661 9611001011

Agricultural Land Converted

Out-Station

HOLALKERE, CHITRADURGA, Sale or Investment 12 Acres Converted Land with Layout Plan Sanction. Good Location: 9342822252/ 9916922211

Commercial Building

J P Nagar

RENT - JP Nagar 9th phase, 5000sft, factory Outlet / Dark Store / Warehouse. 9910022981

Commerical

General

TENANTED PROPERTY for sale in Prestige towers Residency Road, 1948 sqft. Rentals 2 Lakhs /month, Sale Rs. 4.25 Crore (Negotiable) Citilines: 9741417120

Jakkur

JAKKUR MCHES Layout Double Road Commercial Corner Site For Sale Measuring 4700 sft Call: 9341260828

Industrial & Factory

Peenya

SALE/ RENT. KIADB/ KSSIDC. Peenya..Commercial Building/ Industrial Shed and Land available. 'BRUNDANA REALESTATE' 9880434915

Residential/ Commercial

Outer Ring Road

ORR(SUMANAHALLI-LAGGARE BRIDGE) Corner Commercial Site 2,800 Sft. 'A'&'E' Khatha facing ORR at Chowdeshwarinagar Call:9980555558

Srirampura

SALE 30X100 site, 1st cross, North facing, Site, Single owner, 2 mins-metro-mantri mall, 17000/sqft PH 9739732433

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Commercial Building

Jayanagar

WANTED COMMERCIAL Building Jayanagar J.P.Nagar R.R.Nagar Budget 10 Crore to 25 Crore Call Aswath: 9845074355

Sites

Multiple Locations

WANTED BDA Sites Anjanapura- Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office)" 9036360366.

Banashankari

"WANTED 40X60 site / Old demolition house North or East only Padmanabhnagar, Banashankari 3rd-Stage, Giringar "Sri.Ganesh Estates" 9845286505"

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

ಕ್ಲಾಸಿಫೈಡ್ಸ್ ADMISSION CORNER

REGISTRATION FOR ADMISSION OPEN FOR THE ACADEMIC YEAR 2026-27

NURSERY to IX Std

PRASIDDHI SCHOOL, (situated amidst lush greenery, in the spacious premises of The Bangalore Palace) imparting quality education and a complete learning experience to enable your child to learn and grow with positive attitude and ethical values.

- A perfect school campus with safe and Green Environment, and zero pollution far away from hustle - bustle.
- Small classes with latest technology and individual attention.
- Preparing the children for the real world by nurturing their critical thinking, hands on learning and social interaction.
- Emphasis on extracurricular activities, Sports, Aerobics, Music, Dance, Arts and Bhagavad Gita classes to learn and retain our cultural values.
- GPS enabled buses, close circuit surveillance throughout the campus.
- Well qualified and trained facilitators who have been associated with the school for more than 15 years.

PRASIDDHI SCHOOL
(Recognised by the Govt. of Karnataka)
Bangalore Palace Compound,
Vasanthnagar, Bangalore - 560 052
email:prasiddhischool1991@gmail.com

Log in to www.prasiddhischool.org
FOR ONLINE APPLICATION FORM
www.prasiddhischool.org
Call 99809 99065 /080-23447687

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

WAREHOUSE AVAILABLE for Rent, Built to Suit, near STRR road Hoskote, 50000sft phone 9902599958

OFFICE/ SHOP/ ATM Space of 130 sqft. Available in Jayanagar 4th 'T' Block, Contact: 9740785589

Industrial And Factory

RENT, PEENYA, NTTF Circle. 1st and 2nd floor- 3250 sqft each, RCC. 3rd floor- 2000 sqft, 65 HP, Lift. 9480305291

House

2 BHK TO-Let, Ground Floor, Semi-Furnished, 3rd Cross, near LOGO's Babusapalya, 3 kms from Manyata. 8861598663.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds IN MAIN ISSUE

THANKSGIVING

DH DECCAN HERALD

Book your Thanksgiving Advertisement in Deccan Herald for
ANNUAL FEAST OF MOTHER OF PERPETUAL HELP ON 25th January 2026
@ 2100 with GST
(Size 4cmx5cm)
For more Details Contact:
Ph :080 - 45557163 | 164 | 9731810277

PUBLIC NOTICE

RAJYA VOKKALIGARA SANGHA ®
BANGALORE INSTITUTE OF TECHNOLOGY
(An Autonomous Institution under VTU Belagavi, Approved by AICTE, New-Delhi)
K.R.ROAD, V.V. PURA, BENGALURU – 560 004
Phone: 080-26613237, 26615865 Website: bit-bangalore.edu.in

Ref: BIT/COE/07/2025-2026 **Date:** 16-01-2026

Short Term E-Tender Notice

The Short term Tenders are invited through e-procurement portal from eligible tenderers, registered contractors*/Companies/agencies/ suppliers by the Principal, BIT, Bangalore for the works detailed in the table below under standard tender document procedure formats (The tenderers who have executed similar nature of single work costing not less than 50% of this tender amount during 2021-24 are eligible). Website: https://kppp.karnataka.gov.in

Sl. No	Name of work	Approx. Value of the works (Rs.)	EMD (Rs)	Cost of tender form (GST Included)	Period of completion
01	Supplying, Installing, Testing, Erection and Commissioning Computers.	50 Lakhs	1,00,000/-	2,360/-	30 days
02	Supplying, Installing, Testing, Erection & Commissioning Document Scanners.	15 Lakhs	30,000/-	1,180/-	30 days

Calendar of events:

Tender Documents available in E-Procurement website	From 19-01-2026 up to 31-01-2026 up to 4:00 PM
Date and Time of Pre-Bid Meeting	29-01-2026 at 11: 00 AM
Last date of receipt of tenders	31-01-2026 up to 4:00 PM
Opening of Tenders	03-02-2026 (If Possible)

01. Tender documents (Specifications, Term & Conditions) may be obtained from e-procurement website https://kppp.karnataka.gov.in
02. EMD Paid through E-Procurement in the following modes only, 1. Debit Card, 2. Credit Card, 3. NET Banking, 4. NEFT 5. RTGS only.
03. The Contractors / Agencies / Suppliers shall bear the GST on works contract, any corporation, other Local Authority & royalty due to the Government of Karnataka at the prevailing rates. R.V.Sangha / BIT is not responsible for all taxes with respect to the work.
04. Tenders may be applied to all items or tenders for individual items also accepted.
05. Right to reject any or all the tenders without assigning any reason is reserved with the R.V. Sangha /BIT authority.
06. In the event of any holiday on the notified dates, the next working day will hold good.
07. For any enquiries contact Principal Office at V.V Pura, K.R Road Bengaluru-04 during office hours.

***Company/Authorized Dealers can only apply.**

Principal BIT · Chairman BIT · Chairman Purchase Committee, RVS · Treasurer RVS · Joint Secretary RVS
General Secretary RVS · Vice President RVS · President RVS

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331